ಗುರುವಾರ, ಜೂನ್ 1, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 151 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಜಾವಾಣಿ ಕನ್ನಡ ಸಿರಿ ಸಮ್ಮಾನ 13

ಮೋದಿಗೆ ದೇವರಿಗಿಂತ ಹೆಚ್ಚು ತಿಳಿವಳಿಕೆ ಇದೆ!: ರಾಹುಲ್ 15

ಮಳೆ: ನೆಲಕಚ್ಚಿದ ಬಾಳೆ, ಮನೆಗಳಿಗೆ ಹಾನಿ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,622 ▼	18,534 ▼	₹62,100 (ಬೆಂಗಳೂರು) ▲	₹72,700 (ಬೆಂಗಳೂರು) ▼	82.75 ▼

1 ಸಂಪನ್ಮೂಲ, ಆರ್ಥಿಕ ಪರಿಸ್ಥಿತಿಯ ವರದಿ ಮಂಡಿಸಿದ ಅಧಿಕಾರಿಗಳು | 2 ಗ್ಯಾರಂಟಿಗಳ ಜಾರಿಯ ಹೆಚ್ಚುವರಿ ವೆಚ್ಚದ ಬಗ್ಗೆ ಮುಖ್ಯಕಾರ್ಯದರ್ಶಿ ವರದಿ ಸಲ್ಲಿಕೆ | 3 ಇಲಾಖಾವಾರು ಮಾಹಿತಿ ಸಲ್ಲಿಸಿದ ಸಚಿವರು | 4 ಗ್ಯಾರಂಟಿಗಳಿಗೆ ಅಂತಿಮ ಸ್ಪರ್ಶಕ್ಕೆ ಗುರುವಾರ ಮತ್ತೊಂದು ಸುತ್ತಿನ ಸಭೆ | 5 ಸಂಪುಟ ಸಭೆಯಲ್ಲಿ ನಾಳೆ ಅಂತಿಮ ತೀರ್ಮಾನ

‘ಗ್ಯಾರಂಟಿ’ಗಳಿಗೆ ಸಿಗದ ಸ್ಪಷ್ಟರೂಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆಗೆ ಮುನ್ನ ಕಾಂಗ್ರೆಸ್ ಘೋಷಿಸಿದ್ದ ಐದು ಗ್ಯಾರಂಟಿಗಳನ್ನು ಜಾರಿಗೊಳಿಸಲು ಎದುರಾಗಿರುವ ಸವಾಲುಗಳ ನಿವಾರಣೆಗೆ ಬುಧವಾರ ನಡೆದ ಸಭೆಯಲ್ಲಿ ಯಾವುದೇ ನಿರ್ಣಯಕ್ಕೆ ಬರಲಾಗಿಲ್ಲ. ಹೀಗಾಗಿ, ‘ಗ್ಯಾರಂಟಿ’ಗಳ ಅನುಷ್ಠಾನ ಹೇಗಿರುತ್ತದೆ ಎಂಬ ಸ್ಪಷ್ಟ ಚಿತ್ರಣ ಇನ್ನೂ ಹೊರಬಿದ್ದಿಲ್ಲ.

ಈ ಕುರಿತು ಚರ್ಚಿಸುವ ಸಲುವಾಗಿ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸುಮಾರು ಎರಡು ತಾಸು ಸಭೆ ನಡೆಯಿತು. ಸಭೆಯಲ್ಲಿ ಸಚಿವರು ಮತ್ತು ಅಧಿಕಾರಿಗಳು ಭಾಗಿಯಾಗಿದ್ದರು. ಐದು ಗ್ಯಾರಂಟಿಗಳನ್ನು ಜಾರಿ ಮಾಡಬೇಕಾದ ಇಲಾಖೆಗಳ ಹೊಣೆ ಹೊತ್ತಿರುವ ಸಚಿವರು, ಅನುಷ್ಠಾನಕ್ಕೆ ಬೇಕಾದ ಅಂದಾಜು ಸಂಪನ್ಮೂಲ, ಹೆಚ್ಚುವರಿ ಸಂಪನ್ಮೂಲವನ್ನು ಹೊಂದಿಸುವ ಬಗೆ, ವೆಚ್ಚ ಕಡಿತಕ್ಕೆ ತೆಗೆದುಕೊಳ್ಳಬೇಕಾದ ಕ್ರಮ ಹಾಗೂ ಅರ್ಹ ಫಲಾನುಭವಿಗಳು ಯೋಜನೆಯಿಂದ ವಂಚಿತರಾಗದಂತೆ ವಿಧಿಸಬಹುದಾದ ಷರತ್ತುಗಳ ಮಾಹಿತಿಯೊಂದಿಗೆ ಸಭೆಗೆ ಬಂದಿದ್ದರು.

ವಿವಿಧ ಗ್ಯಾರಂಟಿಗಳ ಅನುಷ್ಠಾನದ ದಾರಿ, ಗೊಂದಲ ಹಾಗೂ ಮಾರ್ಗೋಪಾಯಗಳ ಕುರಿತು ಅಧಿಕಾರಿಗಳು ಪವರ್ ಪಾಯಿಂಟ್ ಮೂಲಕ ಸಭೆಗೆ ವಿವರ ನೀಡಿದರು. ಗ್ಯಾರಂಟಿಯನ್ನು ಕಾಲಮಿತಿಯೊಳಗೆ ಜಾರಿ ಮಾಡಬೇಕು ಎಂಬ ನಿರ್ಣಯಕ್ಕೆ ಬರಲಾಯಿತಾದರೂ, ಹಣಕಾಸು ಹೊಂದಾಣಿಕೆ, ಫಲಾನುಭವಿಗಳ ಗುರುತಿಸುವಿಕೆಯನ್ನು ಸಮರ್ಪಕವಾಗಿ ಮಾಡಬೇಕಾಗಿದೆ. ಅರ್ಹರಿಗೆ ಯೋಜನೆ ತಲುಪಿಸುವುದು ಆದ್ಯತೆಯಾಗಬೇಕಿದೆ. ಹೀಗಾಗಿ, ಮತ್ತೊಂದು ಸುತ್ತಿನ ಸಭೆ ಬಳಿಕ ಸಚಿವ ಸಂಪುಟದ ಮುಂದೆ ಮಂಡಿಸುವುದು ಸೂಕ್ತ ಎಂಬ ಸಲಹೆ ಸಭೆಯಲ್ಲಿ ಬಂದಿತು ಎಂದು ಗೊತ್ತಾಗಿದೆ.

ಈ ಹಿನ್ನೆಲೆಯಲ್ಲಿ ಅಧಿಕಾರಿಗಳ ಸಭೆಯನ್ನು ಗುರುವಾರಕ್ಕೆ ಮುಂದೂಡಿದ್ದು, ಸಚಿವ ಸಂಪುಟ ಸಭೆಯನ್ನು ಶುಕ್ರವಾರ ನಿಗದಿ ಮಾಡಲಾಗಿದೆ. ಗ್ಯಾರಂಟಿ ಜಾರಿಯ ತೀರ್ಮಾನ ಸಚಿವ ಸಂಪುಟ ಸಭೆಯಲ್ಲಿ ಹೊರ ಬೀಳಲಿದೆ.

ಸಚಿವರು ಮತ್ತು ಅಧಿಕಾರಿಗಳ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಇದ್ದರು

ಗ್ಯಾರಂಟಿಗಳನ್ನು ಜಾರಿ ಮಾಡುವುದರಿಂದ ಬೊಕ್ಕಸದ ಮೇಲೆ ಆಗುವ ಹೊರೆ ಮತ್ತು ಪರಿಣಾಮಗಳ ಬಗ್ಗೆ ಹಣಕಾಸು ಇಲಾಖೆಯ ಅಧಿಕಾರಿಗಳು ಸಭೆಗೆ ವಿವರಿಸಿದರು. ಕೋವಿಡ್ ಮತ್ತು ಆರ್ಥಿಕ ಹಿಂಜರಿತದ ಬಳಿಕ ಚೇತರಿಸಿಕೊಳ್ಳುತ್ತಿರುವ ಸಂದರ್ಭದಲ್ಲೇ ಗ್ಯಾರಂಟಿಗಳ ಅನುಷ್ಠಾನದಿಂದ ರಾಜ್ಯ ಆರ್ಥಿಕ ಸ್ಥಿತಿ ಸಂಕಷ್ಟಕ್ಕೆ ಸಿಲುಕಬಹುದು ಎಂಬ ವಿಚಾರವನ್ನೂ ಸಭೆಯ ಗಮನಕ್ಕೆ ತಂದರು ಎಂದು ಮೂಲಗಳು ತಿಳಿಸಿವೆ.

ಈ ಐದು ಗ್ಯಾರಂಟಿಗಳನ್ನು ಜಾರಿಗೆ ತರಲು ಸುಮಾರು ₹52 ಸಾವಿರ ಕೋಟಿ ಬೇಕಾಗಬಹುದೆಂದು ಅಂದಾಜು ಮಾಡಲಾಗಿತ್ತು. ಆದರೆ, ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಭರವಸೆ ನೀಡಿದಂತೆ ಯಥಾವತ್ ಜಾರಿ ಮಾಡಲು ಹೊರಟರೆ ಸುಮಾರು ₹ 1 ಲಕ್ಷ ಕೋಟಿಯವರೆಗೂ ಮುಟ್ಟಬಹುದು ಎಂಬ ಮಾಹಿತಿಯನ್ನು ಅಧಿಕಾರಿಗಳು ನೀಡಿದರು.

11ನೇ ಪುಟ ನೋಡಿ

ಗ್ಯಾರಂಟಿ ಜಾರಿಗೆ ಮಾರ್ಗೋಪಾಯ

ಗೃಹ ಜ್ಯೋತಿ: 200 ಯೂನಿಟ್‌ವರೆಗಿನ ವಿದ್ಯುತ್ ಉಚಿತ. ಗ್ರಾಹಕರು ಬಿಲ್‌ನ ಮೊತ್ತವನ್ನು ಪಾವತಿಸಬೇಕು. ತಿಂಗಳಾಂತ್ಯದಲ್ಲಿ ಅವರ ಬ್ಯಾಂಕ್ ಖಾತೆಗಳಿಗೆ ನೇರ ಹಣ ವರ್ಗಾವಣೆ (ಡಿಬಿಟಿ ಮಾದರಿ)ಯಡಿ ಮರು ಪಾವತಿ. ಇತ್ತೀಚಿನ ತಿಂಗಳುಗಳಲ್ಲಿ ಒಬ್ಬ ಗ್ರಾಹಕ ಸರಾಸರಿ ಎಷ್ಟು ಯೂನಿಟ್ ಬಳಕೆ ಮಾಡಿದ್ದಾರೆ ಎಂಬುದರ ಪರಿಗಣನೆ

ಶಕ್ತಿ: ಎಲ್ಲ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ. ರಾಜ್ಯವ್ಯಾಪ್ತಿ ಹಾಗೂ 60 ಕಿ.ಮೀ ಪರಿಮಿತಿಯೊಳಗೆ ಅವಕಾಶ ಕೊಟ್ಟರೆ ಎಷ್ಟು ವೆಚ್ಚವಾಗಲಿದೆ ಎಂಬ ವಿವರ ನೀಡಲು ಸೂಚನೆ. ಹವಾನಿಯಂತ್ರಿತ(ಎಸಿ) ಹಾಗೂ ಐಷಾರಾಮಿ ಬಸ್‌ಗಳಿಗೆ ಅನ್ವಯವಾಗುವುದಿಲ್ಲ. ಫಲಾನುಭವಿಗಳ ಆಧಾರ್ ಸಂಖ್ಯೆ ಆಧರಿಸಿ ಪಾಸ್ ನೀಡುವ ಆಲೋಚನೆ

ಗೃಹ ಲಕ್ಷ್ಮಿ: ಸುಮಾರು 57 ಲಕ್ಷಕ್ಕೂ ಹೆಚ್ಚು ಮಹಿಳೆಯರು ವಿವಿಧ ರೀತಿಯ ಪಿಂಚಣಿಗಳನ್ನು ಪಡೆಯುತ್ತಿದ್ದಾರೆ. ಇಂತಹ ಮಹಿಳೆಯರ ಪಿಂಚಣಿಯನ್ನು ಗೃಹಲಕ್ಷ್ಮಿ ಯೋಜನೆಯಡಿ ವಿಲೀನಗೊಳಿಸಿ, ತಿಂಗಳಿಗೆ ₹2 ಸಾವಿರ ಸಿಗುವಂತೆ ಮಾಡುವುದು. ಪಿಂಚಣಿ ಸಿಗದ ಮನೆಯ ಯಜಮಾನಿಗೆ ಘೋಷಣೆಯನ್ವಯ ಮೊತ್ತ ಸಿಗಲಿದೆ. ಕುಟುಂಬದಲ್ಲಿ ಒಬ್ಬರಿಂದ ನಾಲ್ವರಿದ್ದರೆ ಯಜಮಾನಿ ಯಾರೆಂದು ಕುಟುಂಬಸ್ಥರೇ ನಿರ್ಣಯಿಸಬೇಕು. 16ರಿಂದ 80 ವರ್ಷದ ಫಲಾನುಭವಿಗಳಿಗೆ ಸೌಲಭ್ಯ ನೀಡಲು ಸಮ್ಮತಿ.

ಅನ್ನಭಾಗ್ಯ: ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಅರ್ಹ ಕುಟುಂಬಗಳಿಗೆ ಘೋಷಣೆಯಂತೆ ಅಕ್ಕಿಯನ್ನು ವಿತರಿಸುವುದು. ಅನರ್ಹ ಕುಟುಂಬಗಳನ್ನು ಪತ್ತೆ ಹಚ್ಚಿ ಪಟ್ಟಿಯಿಂದ ತೆಗೆಯುವ ಮೂಲಕ, ಹೊಸದಾಗಿ ಸೇರ್ಪಡೆಯಾಗಬಹುದಾದ ಅರ್ಹರಿಗೆ ಬೇಕಾದ ಅಕ್ಕಿಯನ್ನು ಹೊಂದಿಸುವುದು. ಅಕ್ಕಿ, ಗೋಧಿ, ರಾಗಿ, ಜೋಳ ಹೀಗೆ ಫಲಾನುಭವಿಗಳ ಬೇಡಿಕೆ ಆಧರಿಸಿ ಪಡಿತರ ನಿರ್ಣಯ. ರಾಜ್ಯದ ಉತ್ಪಾದನೆ ಸಾಕಾಗುತ್ತದೆಯೇ ಅಥವಾ ಅನ್ಯ ರಾಜ್ಯಗಳಿಂದ ಖರೀದಿ ಮಾಡಬೇಕೇ ಎಂಬ ಬಗ್ಗೆ ವರದಿ ಸಲ್ಲಿಸಲು ನಿರ್ದೇಶನ.

ಗ್ಯಾರಂಟಿಗಳನ್ನು ಜಾರಿಗೊಳಿಸುವ ಬಗ್ಗೆ ಶುಕ್ರವಾರದ ಸಚಿವ ಸಂಪುಟದ ಸಭೆಯಲ್ಲಿ ಚರ್ಚಿಸಲಾಗುವುದು. ಗ್ಯಾರಂಟಿ ಜಾರಿಯಿಂದಾಗಿ ಆರ್ಥಿಕ ಪರಿಣಾಮ, ಸಂಪನ್ಮೂಲ ಕ್ರೋಡೀಕರಣದ ಬಗ್ಗೆ ಅಧಿಕಾರಿಗಳು ವಿವರ ನೀಡಿದ್ದಾರೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಪ್ರಿಯಾಂಕ್ ಖರ್ಗೆ ಲೆಕ್ಕಾಚಾರ

ಫಲಾನುಭವಿಗಳನ್ನು ಗುರುತಿಸಲು ಕೆಲವು ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ಇಲ್ಲೂ ಅದು ಅನ್ವಯ ಆಗಬೇಕು ಎಂಬುದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರ ಅಭಿಪ್ರಾಯ.

ಅವರ ಪ್ರಾತ್ಯಕ್ಷಿಕೆಯ ಪ್ರಕಾರ, ₹26,692 ಕೋಟಿ ಬೇಕಾಗುತ್ತದೆ. ಇದು ಅತ್ಯಂತ ಕನಿಷ್ಠ ಅಂದಾಜು ವೆಚ್ಚ. ಅದರ ಪ್ರಕಾರ ಗೃಹಲಕ್ಷ್ಮಿ ಯೋಜನೆಯಡಿ ಒಂದು ಕುಟುಂಬದಲ್ಲಿ ಕುಟುಂಬದ ಅತಿ ಹಿರಿಯ ಮಹಿಳೆಯನ್ನು ಗುರುತಿಸುವುದು. ರಾಜ್ಯದಲ್ಲಿ ಈ ರೀತಿ 30 ಲಕ್ಷ ಹಿರಿಯ ಮಹಿಳೆಯರಿದ್ದಾರೆ. ಇಂತಹ ಮಹಿಳೆಯರು ಈಗಾಗಲೇ ₹1,000 ಪಿಂಚಣಿ ಪಡೆಯುತ್ತಿದ್ದರೆ, ಅವರಿಗೆ ಗ್ಯಾರಂಟಿಯ ₹2,000 ದಲ್ಲಿ ₹1,000 ಕಡಿತಗೊಳಿಸಿ ಪಾವತಿಸುವುದು ಈ ಲೆಕ್ಕಾಚಾರದ ಭಾಗ.

ಸಂಗ್ರಹ ಸಾಮರ್ಥ್ಯ ಎಷ್ಟು?

14.50 ಕೋಟಿ ಟನ್ ಸದ್ಯ ದೇಶದ ಆಹಾರ ಧಾನ್ಯಗಳ ಸಂಗ್ರಹ ಸಾಮರ್ಥ್ಯ

21.50 ಕೋಟಿ ಟನ್ ಐದು ವರ್ಷಗಳಲ್ಲಿ ಹೆಚ್ಚಲಿರುವ ಸಂಗ್ರಹ ಸಾಮರ್ಥ್ಯ

₹1 ಲಕ್ಷ ಕೋಟಿ ಯೋಜನೆಗೆ ಅನುಮೋದನೆ

ಧಾನ್ಯದ ದಾಸ್ತಾನಿಗಾಗಿ ದೇಶದಾದ್ಯಂತ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಆಹಾರ ಧಾನ್ಯಗಳ ಸಂಗ್ರಹ ಸಾಮರ್ಥ್ಯವನ್ನು 7 ಕೋಟಿ ಟನ್‌ಗಳಷ್ಟು ಹೆಚ್ಚಿಸುವ ಒಂದು ಲಕ್ಷ ಕೋಟಿ ರೂಪಾಯಿ ಮೊತ್ತದ ಯೋಜನೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್, ‘ಉದ್ದೇಶಿತ ಈ ಯೋಜನೆಯ ಅವಧಿ ಐದು ವರ್ಷಗಳಾಗಿದ್ದು, ಸಹಕಾರ ಕ್ಷೇತ್ರದಲ್ಲಿ ಅನುಷ್ಠಾನಗೊಳ್ಳಲಿರುವ ವಿಶ್ವದಲ್ಲಿಯೇ ಅತಿದೊಡ್ಡ ಆಹಾರ ಧಾನ್ಯ ಸಂಗ್ರಹ ಯೋಜನೆಯಾಗಿದೆ’ ಎಂದು ಹೇಳಿದರು.

‘ಈ ಯೋಜನೆಯಡಿ ಪ್ರತಿ ತಾಲ್ಲೂಕು ಮಟ್ಟದಲ್ಲಿ 2 ಸಾವಿರ ಟನ್ ಸಂಗ್ರಹ ಸಾಮರ್ಥ್ಯದ ಉಗ್ರಾಣ ನಿರ್ಮಿಸಲಾಗುವುದು’ ಎಂದು ಮಾಹಿತಿ ನೀಡಿದರು.

‘ಧಾನ್ಯಗಳನ್ನು ಸಂಗ್ರಹಿಸಿಡುವುದಕ್ಕೆ ಸಮರ್ಪಕ ಸೌಲಭ್ಯಗಳ ಕೊರತೆಯಿಂದಾಗಿ ರೈತರು ಕಡಿಮೆ ದರಕ್ಕೆ ತಮ್ಮ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡಿ ತೊಂದರೆ ಅನುಭವಿಸುವುದನ್ನು ತಪ್ಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶ. ಅಲ್ಲದೆ, ಆಹಾರ ಧಾನ್ಯಗಳ ಆಮದನ್ನು ತಗ್ಗಿಸುವುದು ಹಾಗೂ ಗ್ರಾಮೀಣ ಭಾಗದಲ್ಲಿ ಉದ್ಯೋಗ ಸೃಷ್ಟಿಯ ಗುರಿಯನ್ನೂ ಈ ಯೋಜನೆ ಹೊಂದಿದೆ’ ಎಂದು ಠಾಕೂರ್ ಅವರು ವಿವರಿಸಿದರು.

ಸಮನ್ವಯಕ್ಕೆ ಸಮಿತಿ

ಸಹಕಾರ ಕ್ಷೇತ್ರದಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ‘ಅಂತರ ಸಚಿವಾಲಯ ಸಮಿತಿ’ಯನ್ನು (ಐಎಂಸಿ) ರಚಿಸಲಾಗುವುದು. ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಸಮಿತಿ ಅಧ್ಯಕ್ಷರಾಗಿರುವರು. ಕೃಷಿ ಸಚಿವ ನರೇಂದ್ರ ತೋಮರ್ ಸಿಂಗ್, ಗ್ರಾಹಕರ ವ್ಯವಹಾರಗಳ ಸಚಿವ ಪೀಯೂಷ್ ಗೋಯೆಲ್, ಅಹಾರ ಸಂಸ್ಕರಣ ಕೈಗಾರಿಕೆಗಳ ಸಚಿವ ಪಶುಪತಿಕುಮಾರ್ ಪಾರಸ್ ಹಾಗೂ ಸಂಬಂಧಪಟ್ಟ ಸಚಿವಾಲಯಗಳ ಕಾರ್ಯದರ್ಶಿಗಳು ಸಮಿತಿ ಸದಸ್ಯರಾಗಿರಲಿದ್ದಾರೆ.

15ನೇ ಪುಟ ನೋಡಿ

19 ಕಾರ್ಮಿಕರ ರಕ್ಷಣೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಅರಸೀಕೆರೆ (ಹಾಸನ): ತಾಲ್ಲೂಕಿನ ಬಾಣಾವರ ಪೊಲೀಸ್ ಠಾಣಾ ವ್ಯಾಪ್ತಿಯ ಚೆಲುವನಹಳ್ಳಿಯಲ್ಲಿ 19 ಕಾರ್ಮಿಕರನ್ನು ರಕ್ಷಿಸಿರುವ ಪೊಲೀಸರು, ಎರಡು ತಿಂಗಳಿಂದ ಕೂಲಿ ಕೊಡದೇ ಜೀತದಾಳುಗಳಂತೆ ದುಡಿಸಿಕೊಳ್ಳುತ್ತಿದ್ದ ಇಬ್ಬರನ್ನು ಬಂಧಿಸಿದ್ದಾರೆ. ಪ್ರಮುಖ ಆರೋಪಿ ವಿರುದ್ಧ ಬಾಣಾವರ ಠಾಣೆಯಲ್ಲಿ ಜೀತ ಪದ್ಧತಿ ನಿರ್ಮೂಲನೆ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ.

ಮೇ 26ರಂದು ಉಪ ವಿಭಾಗಾಧಿಕಾರಿ ಕೃಪಾಲಿನಿ, ತಹಶೀಲ್ದಾರ್ ವಿದ್ಯಾ ವಿಭಾ ರಾಠೋಡ, ಕಂದಾಯ ಹಾಗೂ ಕಾರ್ಮಿಕ ಇಲಾಖೆ ಅಧಿಕಾರಿಗಳೊಂದಿಗೆ ದಾಳಿ ನಡೆಸಿದ ಬಾಣಾವರ ಪೊಲೀಸರು, ಜಮೀನಿನಲ್ಲಿ ಶುಂಠಿ ಕೀಳುತ್ತಿದ್ದ ಕಾರ್ಮಿಕರನ್ನು ವಿಚಾರಣೆಗೆ ಒಳಪಡಿಸಿದ್ದರು. ಆಗ, ‘ಕೂಲಿ ಕೊಡದೇ ಜೀತದಾಳುಗಳಂತೆ ದುಡಿಸಿಕೊಳ್ಳುತ್ತಿದ್ದಾರೆ’ ಎಂದು ಕಾರ್ಮಿಕರು ತಿಳಿಸಿದ್ದರು.

‘ಪ್ರಕರಣಕ್ಕೆ ಸಂಬಂಧಿಸಿ ಅರಸೀಕೆರೆಯ ಚಿತ್ರ ಸ್ಟುಡಿಯೊ ಮಾಲೀಕ ಮುನೇಶ್ ಮತ್ತು ಅನಿಲ್ ಎಂಬುವರನ್ನು ಬಂಧಿಸಲಾಗಿದೆ. ಮುನೇಶ್ ಈ ಹಿಂದೆಯೂ ಇಂಥದ್ದೇ ಪ್ರಕರಣದಲ್ಲಿ ಭಾಗಿಯಾಗಿದ್ದ’ ಎಂದು ಎಸ್‌ಪಿ ಹರಿರಾಂ ಶಂಕರ್ ತಿಳಿಸಿದ್ದಾರೆ.

ವಿವರ: ಗದಗ, ಬಳ್ಳಾರಿ, ಕಲ್ಬುರ್ಗಿ ಸೇರಿದಂತೆ ಕೆಲವು ಜಿಲ್ಲೆಗಳಿಂದ ಅರಸೀಕೆರೆಗೆ ರೈಲು ನಿಲ್ದಾಣಕ್ಕೆ ಬಂದಿದ್ದ 19 ಕಾರ್ಮಿಕರನ್ನು ಭೇಟಿ ಮಾಡಿದ್ದ ಮುನೇಶ್, ಅನಿಲ್ ಎಂಬ ವ್ಯಕ್ತಿಯ ಸಹಾಯದಿಂದ ತಮ್ಮ ಜಮೀನಿಗೆ ಕರೆದುಕೊಂಡು ಬಂದಿದ್ದ ಎಂದು ದೂರಲಾಗಿದೆ.

‘ಕುಬೇರ ಅಧಿಕಾರಿ’ಗಳ ಬಳಿ ಭಾರಿ ಆಸ್ತಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಮೇಲೆ ಬೆಸ್ಕಾಂನ ಮುಖ್ಯ ಎಂಜಿನಿಯರ್ ಹಾಗೂ ಕಾರ್ಮಿಕ ಭವನದ ಕಾರ್ಖಾನೆಗಳ ಉಪ ನಿರ್ದೇಶಕ ಸೇರಿದಂತೆ ರಾಜ್ಯದ ಒಟ್ಟು 15 ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಲೋಕಾಯುಕ್ತ ಪೊಲೀಸರು, 11 ಜಿಲ್ಲೆಗಳಲ್ಲಿ ಬುಧವಾರ ಏಕಕಾಲದಲ್ಲಿ ದಾಳಿ ನಡೆಸಿ ಅಪಾರ ಪ್ರಮಾಣದ ಅಕ್ರಮ ಆಸ್ತಿ ಪತ್ತೆ ಮಾಡಿದ್ದಾರೆ.

ಅಲ್ಲದೇ ಈ ಅಧಿಕಾರಿಗಳು ಹೊಂದಿರುವ ಆಸ್ತಿಗಳ 57 ಸ್ಥಳಗಳಲ್ಲಿ ಪ್ರತ್ಯೇಕ ತಂಡಗಳು ದಾಳಿ ನಡೆಸಿ, ಶೋಧ ನಡೆಸಿದರು.

‘ಕುಬೇರ ಅಧಿಕಾರಿಗಳ’ ಮನೆಗಳಲ್ಲಿ ಚಿನ್ನಾಭರಣ, ಆಸ್ತಿ ಖರೀದಿ ಪತ್ರಗಳು, ಅಪಾರ ಪ್ರಮಾಣದ ನಗದು, ಜಿಂಕೆ ಕೊಂಬುಗಳು, ಹಣ ಎಣಿಕೆ ಯಂತ್ರಗಳು, ಬ್ರ್ಯಾಂಡೆಡ್ ಶೂಗಳು, ಬೆಲೆಬಾಳುವ ವಾಚ್‌ಗಳು ಪತ್ತೆಯಾಗಿವೆ. ಜತೆಗೆ, ಬೇರೆ ಬೇರೆ ಸ್ಥಳಗಳಲ್ಲಿರುವ ನಿವೇಶನಗಳು, ನಿರ್ಮಾಣ ಹಂತದ ಕಟ್ಟಡ, ಕೃಷಿ ಜಮೀನು ಖರೀದಿಸಿರುವುದು ಶೋಧದ ವೇಳೆ ಗೊತ್ತಾಗಿದೆ.

ಬೆಸ್ಕಾಂ ಮುಖ್ಯ ಎಂಜಿನಿಯರ್ ಎಚ್.ಜೆ.ರಮೇಶ್‌ಗೆ ಸೇರಿದ 10 ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ. ಬಸವೇಶ್ವರ ನಗರದ ಬಿಇಎಂಎಲ್ ಲೇಔಟ್‌ನಲ್ಲಿ ನಿರ್ಮಾಣ ಹಂತದ ₹ 4.20 ಕೋಟಿ ಮೌಲ್ಯದ ಮನೆ, ₹1.4 ಕೋಟಿ ಮೌಲ್ಯದ ಚಿನ್ನಾಭರಣ, ಬೆಳ್ಳಿ ಸಾಮಗ್ರಿ, ಗೃಹೋಪಯೋಗಿ ಉಪಕರಣಗಳು, ಷೇರು, 1 ದ್ವಿಚಕ್ರ ವಾಹನ, 1 ಕಾರು ಅವರ ಬಳಿ ಇದೆ. ದೇವನಹಳ್ಳಿಯ ಹೈಟೆಕ್ ಡಿಫೆನ್ಸ್ ಪಾರ್ಕ್ ಇಂಡಸ್ಟ್ರಿಯಲ್ ಪ್ರದೇಶದಲ್ಲಿ 1 ನಿವೇಶನ, ದಾಬಸ್‌ಪೇಟೆಯ ಸೋಂಪುರದ 2ನೇ ಹಂತದಲ್ಲಿ ಇವರ ಹೆಸರಿನಲ್ಲಿರುವ ಅಪಾರ್ಟ್‌ಮೆಂಟ್ ಪತ್ತೆಯಾಗಿದೆ. ಇದರ ಒಟ್ಟು ಮೌಲ್ಯ ₹ 5.6 ಕೋಟಿ ಎಂದು ಅಂದಾಜಿಸಲಾಗಿದೆ.

11ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 11

ಎನ್‌ಐಎಯಿಂದ 16 ಕಡೆ ಶೋಧ

ಪುತ್ತೂರು/ಬಂಟ್ವಾಳ: ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಮತ್ತು ಬಂಟ್ವಾಳ ತಾಲ್ಲೂಕುಗಳಲ್ಲಿ ಒಟ್ಟು 16 ಕಡೆ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಅಧಿಕಾರಿಗಳು ಸ್ಥಳೀಯ ಪೊಲೀಸರ ನೆರವಿನಿಂದ ಬುಧವಾರ ಶೋಧ ಕಾರ್ಯ ನಡೆಸಿದರು.

‘ಬಿಹಾರದ ಪಾಟ್ನಾದಲ್ಲಿ ಪ್ರಧಾನಿ ಮೋದಿ ಮೇಲೆ ದಾಳಿಗೆ ಸಂಚು ರೂಪಿಸಿದ್ದ ಪ್ರಕರಣದ ತನಿಖೆ ನಡೆಸುತ್ತಿರುವ ಎನ್‌ಐಎ ಅಧಿಕಾರಿಗಳ ತಂಡ ಜಿಲ್ಲೆಗೆ ಭೇಟಿ ನೀಡಿದೆ. ಈ ಪ್ರಕರಣದ ತನಿಖೆಯ ಅಂಗವಾಗಿ ಜಿಲ್ಲೆಯಲ್ಲೂ ಕೆಲವು ಮನೆಗಳು, ಕಚೇರಿಗಳು ಹಾಗೂ ಆಸ್ಪತ್ರೆಯಲ್ಲಿ ತಪಾಸಣಾ ಕಾರ್ಯ ಕೈಗೊಳ್ಳಲಾಗಿದೆ.

11ನೇ ಪುಟ ನೋಡಿ

‘ಶವಸಂಭೋಗ ಅಪರಾಧ’ ಘೋಷಣೆಗೆ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೃತದೇಹಗಳ ಜೊತೆ ಸಂಭೋಗ ನಡೆಸುವವರಿಗೆ ಅತ್ಯಾಚಾರ ಅಪರಾಧದ ಅಡಿಯಲ್ಲಿ ಶಿಕ್ಷೆ ವಿಧಿಸುವ ಅವಕಾಶ ಇಲ್ಲದಿರುವ ಕಾರಣ, ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 377ಕ್ಕೆ (ಅಸ್ವಾಭಾವಿಕ ಲೈಂಗಿಕ ಅಪರಾಧಗಳು) ತಿದ್ದುಪಡಿ ತರಬೇಕು ಅಥವಾ ಈ ನಿಟ್ಟಿನಲ್ಲಿ ಹೊಸ ನಿಬಂಧನೆಗಳನ್ನು ರೂಪಿಸಬೇಕು’ ಎಂದು ಹೈಕೋರ್ಟ್, ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಯುವತಿಯೊಬ್ಬಳನ್ನು ಹತ್ಯೆಗೈದು, ಆಕೆಯ ಮೃತದೇಹದ ಜೊತೆ ಸಂಭೋಗ ನಡೆಸಿದ ಆರೋಪದಡಿ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಶಿಕ್ಷೆಯನ್ನು ಪ್ರಶ್ನಿಸಿ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಗುಳಿಗೇನಹಳ್ಳಿಯ ರಂಗರಾಜು ಅಲಿಯಾಸ್ ವಾಜಪೇಯಿ ಎಂಬ ಯುವಕ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ವೀರಪ್ಪ ಮತ್ತು ಟಿ. ವೆಂಕಟೇಶ್ ನಾಯಕ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ತೀರ್ಪು ನೀಡಿದೆ.

ಕೊಲೆ ಅಪರಾಧಕ್ಕೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಕಾಯಂಗೊಳಿಸಿರುವ ನ್ಯಾಯಪೀಠ, ‘ಶವದ ಜೊತೆ ಸಂಭೋಗ ನಡೆಸಿದ್ದಾನೆ’ ಎಂಬ ಆರೋಪದಿಂದ ಮುಕ್ತಗೊಳಿಸುವ ಮೂಲಕ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದೆ.

ಅಂತೆಯೇ, ಅತ್ಯಾಚಾರ ಅಪರಾಧಕ್ಕೆ ಐಪಿಸಿ ಕಲಂ 376ರ ಅಡಿ ವಿಧಿಸಿದ್ದ 10 ವರ್ಷಗಳ ಜೈಲು ಶಿಕ್ಷೆಯನ್ನು ರದ್ದುಪಡಿಸಿದೆ.

‘ಮೃತದೇಹದ ಜೊತೆ ಸಂಭೋಗ ನಡೆಸಿದಂತಹ ಪ್ರಕರಣದಲ್ಲಿ ಅತ್ಯಾಚಾರ ಆರೋಪದಡಿ ಅಪರಾಧಿಗೆ ಶಿಕ್ಷೆ ವಿಧಿಸಲು ಯಾವುದೇ ನಿಯಮಗಳು ಇಲ್ಲವಾಗಿವೆ’ ಎಂದು ಪೀಠ ಹೇಳಿದೆ.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಜಿಡಿಪಿ ಬೆಳವಣಿಗೆ ಆಶಾದಾಯಕ ಚಿತ್ರಣ

ನವದೆಹಲಿ (ಪಿಟಿಐ): ದೇಶದ ಅರ್ಥವ್ಯವಸ್ಥೆಯು ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಶೇಕಡ 6.1ರಷ್ಟು ಬೆಳವಣಿಗೆ ಕಂಡಿದೆ. ಇದರಿಂದಾಗಿ 2022–23ನೆಯ ಹಣಕಾಸು ವರ್ಷದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆಯು ಶೇ 7.2ರಷ್ಟು ಆದಂತಾಗಿದೆ.

ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಅರ್ಥ ವ್ಯವಸ್ಥೆ ತನ್ನದು ಎಂಬ ಹೆಗ್ಗಳಿಕೆಯನ್ನು ಭಾರತ ಉಳಿಸಿಕೊಂಡಿದೆ. ಕೃಷಿ, ತಯಾರಿಕೆ, ಗಣಿಗಾರಿಕೆ, ನಿರ್ಮಾಣ ವಲಯಗಳಲ್ಲಿನ ಉತ್ತಮ ಬೆಳವಣಿಗೆಯು ಒಟ್ಟು ಜಿಡಿಪಿ ಬೆಳವಣಿಗೆಯು ನಿರೀಕ್ಷೆ ಮಟ್ಟ ಮೀರಿದೆ.

14

FREE ENTRY

dab

ಡಿ - ಆರ್ಕ್ ಬಿಲ್ಡ್

Design | Architecture | Building and Construction

EXPO 2023

Powered By

MARMO® SOLUTIONS
Marble & Tile Solution Products

Celebrating Architecture: And all its Dimensions

EXPERIENCE A SAGA OF INNOVATIONS IN DESIGN ARCHITECTURE AND BUILDING & CONSTRUCTION MATERIAL

VISIT US: HALL NO: 1

02.03.04 JUNE

B I E C , B E N G A L U R U

Timing: 10:00 AM to 06:00 PM | Hall No: 1

EXHIBITION ORGANIZER
ZION EXHIBITIONS
Reinventing Exhibitions

+91 96503 80303, 99998 44747
www.darcbuild.com | info@darcbuild.com

Click here to visit our Website

Scan the QR Code to Register

ವಿಶ್ವ ತಂಬಾಕು ರಹಿತ ದಿನದ ಪ್ರಯುಕ್ತ ನಗರದ ವಿವಿಧೆಡೆ ವೈದ್ಯಕೀಯ ಸಂಸ್ಥೆ, ಸಂಘಟನೆಗಳಿಂದ ಜಾಥಾ

ತಂಬಾಕು ಉತ್ಪನ್ನ: ದುಷ್ಪರಿಣಾಮದ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ತಂಬಾಕು ರಹಿತ ದಿನದ ಪ್ರಯುಕ್ತ ನಗರದ ವಿವಿಧೆಡೆ ವೈದ್ಯಕೀಯ ಸಂಸ್ಥೆಗಳು ಹಾಗೂ ಸಂಘಟನೆಗಳು ಜಾಥಾ ನಡೆಸಿ, ತಂಬಾಕು ಉತ್ಪನ್ನಗಳ ದುಷ್ಪರಿಣಾಮದ ಬಗ್ಗೆ ಜಾಗೃತಿ ಮೂಡಿಸಿದವು.

ಆರೋಗ್ಯ ಇಲಾಖೆಯ ರಾಜ್ಯ ತಂಬಾಕು ನಿಯಂತ್ರಣ ಘಟಕದ ನೇತೃತ್ವದಲ್ಲಿ ಮಾಗಡಿ ರಸ್ತೆಯಲ್ಲಿರುವ ಆರೋಗ್ಯಸೌಧದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಸೈಕಲ್ ಜಾಥಾ ನಡೆಸಲಾಯಿತು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೇರಿ ನೂರಕ್ಕೂ ಅಧಿಕ ಮಂದಿ ಸೈಕಲ್ ಮೂಲಕ ಸಾಗಿದರು. ಮಾರ್ಗದುದ್ದಕ್ಕೂ 'ತಂಬಾಕು ಉತ್ಪನ್ನಗಳ ಸೇವನೆ ಕ್ಯಾನ್ಸರ್‌ನಂತಹ ಕಾಯಿಲೆಗೆ ಆಹ್ವಾನ ನೀಡಲಿದೆ' ಎಂದು ಸಾರಲಾಯಿತು.

ತಂಬಾಕು ಮುಕ್ತ ಕರ್ನಾಟಕ ಒಕ್ಕೂಟ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಸೇರಿ ವಿವಿಧ ಸಂಸ್ಥೆಗಳು ಸ್ವಾತಂತ್ರ್ಯ ಉದ್ಯಾನದಲ್ಲಿ ಜಂಟಿಯಾಗಿ ಜಾಗೃತಿ ಮೂಡಿಸಿದವು. ಸುಡುತ್ತಿರುವ ಸಿಗರೇಟ್ ಮಾದರಿ, ಧೂಮಪಾನದ ಹೊಗೆಯಿಂದ ಹಾನಿಗೊಳಗಾದ ಶ್ವಾಸಕೋಶ ಸೇರಿ ವಿವಿಧ ಮಾದರಿಗಳ ಮೂಲಕ ವೈದ್ಯಕೀಯ ವಿದ್ಯಾರ್ಥಿಗಳು ಅರಿವು ಮೂಡಿಸುವ ಪ್ರಯತ್ನ ಮಾಡಿದರು.

ಸರ್ಕಾರದಿಂದ ಕ್ರಮ: ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್, 'ದುಶ್ಚಟ ಮತ್ತು ದ್ವೇಷ ಮುಕ್ತ ಸಮಾಜ ನಿರ್ಮಾಣವಾದಾಗ ಮಾತ್ರ ರಾಷ್ಟ್ರ ಬಲಿಷ್ಠವಾಗಲು ಸಾಧ್ಯ. ತಂಬಾಕು ನಿಷೇಧಕ್ಕೆ ಜನಸಾಮಾನ್ಯರ ಸಂಪೂರ್ಣ ಬೆಂಬಲ ಅಗತ್ಯ. ನಾನು ಆರೋಗ್ಯ ಸಚಿವನಾಗಿದ್ದಾಗ ಶಾಲಾ-ಕಾಲೇಜು ಸುತ್ತಮುತ್ತ ತಂಬಾಕು ಉತ್ಪನ್ನಗಳ ಮಾರಾಟವನ್ನು ನಿಷೇಧಿಸಲಾಯಿತು. ಸಿಗರೇಟ್ ಪ್ಯಾಕ್‌ಗಳ ಮೇಲೆ 'ಆರೋಗ್ಯಕ್ಕೆ ಹಾನಿಕರ' ಎಂಬ ಸಾಲಿನ ಜತೆಗೆ, ಕ್ಯಾನ್ಸರ್ ಪೀಡಿತ ರೋಗಿಯ ಫೋಟೊ ಹಾಕಲು ಆದೇಶಿಸಲಾಯಿತು. ಸರ್ಕಾರ ಕೈಗೊಳ್ಳುವ ಕ್ರಮಗಳಿಗೆ ಜನರ ಸಹಕಾರ ಅತ್ಯಗತ್ಯ' ಎಂದು ಹೇಳಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ಸಾಮಾನ್ಯವಾಗಿ ಚಿಕ್ಕ ವಯಸ್ಸಿನಲ್ಲಿಯೇ ತಂಬಾಕು ಉತ್ಪನ್ನಗಳ ಸೇವನೆ ಅಭ್ಯಾಸವಾಗುತ್ತದೆ. ಇದರಿಂದಾಗಿ ಜೀವನಪೂರ್ತಿ ಅನಾರೋಗ್ಯದಿಂದ ಬಳಲಬೇಕಾಗುತ್ತದೆ. ಆದ್ದರಿಂದ ಸುತ್ತಮುತ್ತಲಿನವರು ಸಿಗರೇಟ್ ಸೇರಿದಂತೆ ವಿವಿಧ ತಂಬಾಕು ಉತ್ಪನ್ನಗಳನ್ನು ಬಳಸುತ್ತಿದ್ದರೆ ಅವರಿಗೆ ತಂಬಾಕು ಸೇವನೆಯಿಂದಾಗುವ ಪರಿಣಾಮಗಳ ಕುರಿತು ಅರಿವು ಮೂಡಿಸಬೇಕು' ಎಂದು ತಿಳಿಸಿದರು.

ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವ ಬಿ. ನಾಗೇಂದ್ರ, 'ಒಂದು ಸಿಗರೇಟ್ ನಮ್ಮ 10 ದಿನಗಳ ಆಯಸ್ಸನ್ನು ಕಡಿಮೆಗೊಳಿಸುತ್ತದೆ. ಇದರಿಂದ ಜೀವನ ಪೂರ್ತಿ ಅನಾರೋಗ್ಯ ಸಮಸ್ಯೆ ಅನುಭವಿಸಬೇಕಾಗುತ್ತದೆ. ಆದ್ದರಿಂದ ಇದಕ್ಕೆ ಕಡಿವಾಣ ಹಾಕಲು ಸರ್ಕಾರದ ಮಟ್ಟದಲ್ಲಿ ಚರ್ಚೆ ಮಾಡಲಾಗುತ್ತದೆ. ಒಂದು ಸಿಗರೇಟ್ ಹಣಕ್ಕೆ ಮೊಟ್ಟೆ ಅಥವಾ ಪೌಷ್ಟಿಕ ಆಹಾರ ಪದಾರ್ಥಗಳನ್ನು ಸೇವಿಸುವ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು' ಎಂದರು. ಯುವಜನ ಮತ್ತು ಕ್ರೀಡಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಡಾ. ರಮೇಶ್ ಕೃಷ್ಣ, ತಂಬಾಕು ನಿಯಂತ್ರಣ ಸಮಿತಿ ಸದಸ್ಯ ಡಾ. ವಿಶಾಲ್ ರಾವ್ ಇದ್ದರು.

ಕಿದ್ವಾಯಿ ಸೇರಿ ವಿವಿಧ ವೈದ್ಯಕೀಯ ಸಂಸ್ಥೆ ಹಾಗೂ ಆಸ್ಪತ್ರೆಗಳಲ್ಲಿಯೂ ತಂಬಾಕು ಉತ್ಪನ್ನದ ದುಷ್ಪರಿಣಾಮದ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಆರೋಗ್ಯ ಇಲಾಖೆ ಹಮ್ಮಿಕೊಂಡಿದ್ದ ಸೈಕಲ್ ಜಾಥಾದಲ್ಲಿ ಸಚಿವ ದಿನೇಶ್ ಗುಂಡೂರಾವ್ ಮತ್ತಿತರರು ಆರೋಗ್ಯ ಸೌಧದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಜಾಗೃತಿ ಮೂಡಿಸಿದರು (ಎಡಚಿತ್ರ) ವಿಶ್ವ ತಂಬಾಕು ರಹಿತ ದಿನದ ಕಾರ್ಯಕ್ರಮದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳು ತಂಬಾಕಿನ ಅಪಾಯದ ಬಗ್ಗೆ ಅರಿವು ಮೂಡಿಸಿದರು –ಪ್ರಜಾವಾಣಿ ಚಿತ್ರಗಳು

ತಂಬಾಕಿಗೆ ಪರ್ಯಾಯ ಬೆಳೆ ಬೆಳೆಯಲು ಪ್ರೋತ್ಸಾಹ: ಡಾ.ಎಸ್.ವಿ. ಸುರೇಶ್

ಬೆಂಗಳೂರು: 'ರಾಜ್ಯದಲ್ಲಿ ತಂಬಾಕು ಬೆಳೆಯುತ್ತಿರುವ ಸುಮಾರು 10 ಸಾವಿರ ರೈತರಿಗೆ ಪರ್ಯಾಯ ವಾಣಿಜ್ಯ ಬೆಳೆ ಬೆಳೆಯುವಂತೆ ಪ್ರೋತ್ಸಾಹಿಸುವ ಗುರಿ ಹೊಂದಲಾಗಿದೆ. ಪರ್ಯಾಯ ಬೆಳೆ ಆಯ್ಕೆ ಮಾಡಿಕೊಂಡವರಿಗೆ ಪ್ರೋತ್ಸಾಹಧನ ನೀಡುವಂತಾಗಬೇಕು' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿ. ಸುರೇಶ್ ತಿಳಿಸಿದರು.

ವಿಶ್ವ ತಂಬಾಕು ರಹಿತ ದಿನದ ಪ್ರಯುಕ್ತ ತಂಬಾಕು ಮುಕ್ತ ಕರ್ನಾಟಕ ಒಕ್ಕೂಟ ಹಾಗೂ ಕೃಷಿ ವಿಶ್ವವಿದ್ಯಾಲಯ ಜಂಟಿಯಾಗಿ ನಗರದಲ್ಲಿ ಬುಧವಾರ ಹಮ್ಮಿಕೊಂಡ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

'ತಂಬಾಕು ಸೇವನೆ ಪ್ರೋತ್ಸಾಹಿಸುವ ಕೆಲಸ ಮಾಡಬಾರದು. ವಿವೇಚನೆ ರಹಿತ ಪ್ರದೇಶಕ್ಕೆ ಅನುಗುಣವಲ್ಲದ ಬೆಳೆಗಳನ್ನು ಅವೈಜ್ಞಾನಿಕವಾಗಿ ಬೆಳೆಯುತ್ತಿರುವುದರಿಂದ ರೈತರ ಆರ್ಥಿಕ ಮಟ್ಟ ಕುಸಿದು, ಕೃಷಿ ಲಾಭದಾಯಕವಲ್ಲ ಎಂಬ ಭಾವನೆ ಮೂಡುತ್ತಿದೆ. ಮಲೆನಾಡಿನಲ್ಲಿ ಬೆಳೆಯುತ್ತಿರುವ ಅಡಿಕೆ ಇಂದು ಬಯಲು ಸೀಮೆಯಲ್ಲಿ ಹೆಚ್ಚಾಗಿ ಬೆಳೆಯುತ್ತಿರುವುದು ಇದಕ್ಕೆ ಉತ್ತಮ ಉದಾಹರಣೆ. ಧೂಮಪಾನ ಮತ್ತು ಮದ್ಯಪಾನದಂತಹ ದುಶ್ಚಟಗಳು ಮನುಷ್ಯರ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮಗಳನ್ನು ಬೀರುತ್ತವೆ' ಎಂದು ಹೇಳಿದರು.

ಚಲನಚಿತ್ರ ನಿರ್ದೇಶಕ ಸುರೇಶ್ ಹೆಬ್ಳೀಕರ್, 'ಮನುಷ್ಯನ ಅತಿಯಾದ ಆಸೆಯಿಂದ ಹವಾಮಾನ ವೈಪರಿತ್ಯದಂತಹ ದುಷ್ಪರಿಣಾಮಗಳನ್ನು ಎದುರಿಸುತ್ತಿದ್ದೇವೆ. ವಿಜ್ಞಾನ ಮತ್ತು ತಂತ್ರಜ್ಞಾನಗಳು ಬೆಳೆದಂತೆ ಅವುಗಳ ದುಷ್ಪರಿಣಾಮಗಳೂ ಹೆಚ್ಚುತ್ತಾ ಹೋಗುತ್ತವೆ. ಸುಮಾರು 2 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 800 ಮಿಲಿಯನ್ ಟನ್‌ನಷ್ಟು ತಂಬಾಕನ್ನು ಬೆಳೆದು, ₹1,200 ಕೋಟಿಯಷ್ಟು ಲಾಭವನ್ನು ಖಾಸಗಿ ಕಂಪನಿಗಳು ಗಳಿಸುತ್ತಿರುವುದು ವಿಪರ್ಯಾಸ. ತಂಬಾಕಿನ ದುಷ್ಪರಿಣಾಮಗಳ ಬಗ್ಗೆ ಯುವಜನರಲ್ಲಿ ಅರಿವು ಮೂಡಿಸಿ, ಬಳಕೆ ಕಡಿಮೆ ಮಾಡಬೇಕು' ಎಂದು ಆಗ್ರಹಿಸಿದರು.

60 ತರಹದ ಕಾಯಿಲೆ: ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, 'ತಂಬಾಕು ಉತ್ಪನ್ನಗಳ ಸೇವನೆಯಿಂದ 60 ತರಹದ ಕಾಯಿಲೆಗಳು ಮನುಷ್ಯನನ್ನು ಭಾದಿಸುತ್ತವೆ. ಅದರಲ್ಲೂ ಮುಖ್ಯವಾಗಿ ಕ್ಯಾನ್ಸರ್, ಹೃದಯ, ಸಕ್ಕರೆ ಹಾಗೂ ಲೈಂಗಿಕ ಸಂಬಂಧಿ ಕಾಯಿಲೆಗಳು ಹೆಚ್ಚಾಗಿ ಕಾಡುತ್ತವೆ. 5 ವರ್ಷಗಳಲ್ಲಿ ಶೇ 15ರಷ್ಟು, ಕೋವಿಡ್ ಸಮಯದಲ್ಲಿ ಶೇ 40ರಷ್ಟು ಜನ ತಂಬಾಕು ಸೇವನೆ ತ್ಯಜಿಸಿದ್ದಾರೆ. ಇದು ಇತ್ತೀಚಿನ ದಿನಗಳಲ್ಲಿ ಆರೋಗ್ಯದ ಬಗ್ಗೆ ಅರಿವು ಮೂಡಿರುವುದಕ್ಕೆ ಸಾಕ್ಷಿ' ಎಂದರು.

'ಒಂದು ಸಿಗರೇಟ್ 400 ತರಹದ ರಾಸಾಯನಿಕಗಳನ್ನು ಒಳಗೊಂಡಿರಲಿದ್ದು, ತಾತ್ಕಾಲಿಕವಾಗಿ ಮನುಷ್ಯನ ಒತ್ತಡವನ್ನು ಕಡಿಮೆಗೊಳಿಸುತ್ತದೆ. ಇವು ಕ್ರಮೇಣ ಚಟವಾಗಿ ಪರಿಣಮಿಸಿ ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತವೆ. ಆದ್ದರಿಂದ ಮನುಷ್ಯನ ಮನಸ್ಥಿತಿ ಬದಲಾಗಬೇಕು' ಎಂದರು.



ವಿಶ್ವಕ್ಷೀರ ದಿನಾಚರಣೆ

ನಗರದಲ್ಲಿ ಇಂದು

ಶೈಕ್ಷಣಿಕ ವರ್ಷದ ಉದ್ಘಾಟನೆ: ಅತಿಥಿ: ಸ್ವಾಮಿ ನಿತ್ಯಾಸ್ಥನಂದ ಮಹಾರಾಜ, ಅಧ್ಯಕ್ಷತೆ: ಬಿ. ಗುರಪ್ಪ ನಾಯ್ಡು, ಆಯೋಜನೆ ಮತ್ತು ಸ್ಥಳ: ಬಿ.ಜಿ.ಎಸ್ ಬ್ಲೂಮ್‌ಫೀಲ್ಡ್ ಹೈ, ಬಸವನಗಡಿ, ಬೆಳಿಗ್ಗೆ 9.30

'ಮಾರ್ಸ್ ರೋವರ್ ಆಪರ್ಚುನಿಟಿ' ಉದ್ಘಾಟನೆ: ಎಂ. ಶಂಕರನ್, ಉಪಸ್ಥಿತಿ: ಮಾರಿಸಾ ಲಾಗೋ, ಜುಡಿತ್ ರವಿನ್, ಆಯೋಜನೆ: ಕೇಂದ್ರ ಸಾಂಸ್ಕೃತಿಕ ಸಚಿವಾಲಯ, ಸ್ಥಳ: ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ಕಸ್ತೂರಬಾ ರಸ್ತೆ, ಬೆಳಿಗ್ಗೆ 11

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 28ನೇ ಸಂಸ್ಥಾಪನಾ ದಿನಾಚರಣೆ: ಉದ್ಘಾಟನೆ: ಡಾ. ಶರಣ ಪ್ರಕಾಶ್ ಪಾಟೀಲ್, ಅತಿಥಿಗಳು: ಡಾ.ದೇವ್‌ಪೂಜಾರಿ ಜಯಂತ್ ಯಶವಂತ್, ಡಾ.ಎಸ್. ಕಾಂತಾ, ಡಾ. ಶಿವರತ್ನ ಸಿ.ಸಾವಡಿ, ಅಧ್ಯಕ್ಷತೆ: ಡಾ.ಎಂ.ಕೆ. ರಮೇಶ್, ಆಯೋಜನೆ ಮತ್ತು ಸ್ಥಳ: ಧನ್ವಂತರಿ ಸಭಾಂಗಣ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಳಿಗ್ಗೆ 11

ಆಕೃತಿ ಕಲಾ ಸಮೂಹ ಪ್ರದರ್ಶನ: ಅತಿಥಿಗಳು: ಶ್ರೀಧರ್ ಕೊಮರವಳ್ಳಿ, ಶೇಷಗಿರಿ ಕೆ.ಎಂ., ಆಯೋಜನೆ: ಆಕೃತಿ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 4

ಬನಶಂಕರಿ ಅಮ್ಮನವರ ಕುಂಭಾಭಿಷೇಕ ಮಹೋತ್ಸವ: ಗುರುವಂದನೆ, ಗಣಪತಿ ಪ್ರಾರ್ಥನೆ, ಮೂಲದೇವರ ಅನುಜ್ಞೆ, ಮಂಟಪರಾಧನೆ, ಗಂಗೆ ಪೂಜೆ, ಕಲಶ ಸ್ಥಾಪನೆ, ಮಹಾಮಂಗಳಾರತಿ, ಆಯೋಜನೆ ಮತ್ತು ಸ್ಥಳ: ಬನಶಂಕರಿ ದೇವಸ್ಥಾನ, ಎಸ್. ಕರಿಯಪ್ಪ ರಸ್ತೆ, ಸಂಜೆ 5

ವಿಶ್ವ ಹಾಲು ದಿನಾಚರಣೆ: 'ಕ್ಷೀರ ಕ್ರಾಂತಿ' ನಾಟಕ ಪ್ರದರ್ಶನ: ರಚನೆ: ಕೆ.ಎಸ್. ರಂಗೇಗೌಡ, ನಿರ್ದೇಶನ: ಜೋಸೆಫ್ ಜಾನ್, ಸಂಗೀತ: ಪ್ರಸನ್ನ ಕುಮಾರ್ ಎಂ.ಎಸ್., ಬೆಳಕು: ಮೈಕೋ ಶಿವಶಂಕರ್, ಪ್ರಸಾದನ: ಜಯರಾಜ್ ಹೊಸ್ಕೂರ್, ಆಯೋಜನೆ: ಕರ್ನಾಟಕ ಹಾಲು ಮಹಾಮಂಡಳಿ, ಸುಸ್ಥಿರ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಪ್ರವಚನ ವಾಹಿನಿ: ಆರೋಗ್ಯ ಕಾರ್ಯಕ್ರಮ: ಡಾ.ಜಿ.ಎಂ. ಅರವಿಂದ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

VASANTDADA SUGAR INSTITUTE
VSI संशोधनेन समृद्धि:
Manjari (BK) Tal:- Haveli Dist :- Pune 412307 Maharashtra India
Ph.: 020-26902100/171/172 Mob : 9404932500
Email - registrar@vsisugar.com Website: www.vsisugar.com

ADMISSION OPEN

VSI provides an excellent opportunity to the Science and Engineering Graduates and Diploma holders for the development of their career in Sugar and allied industries through the following

Post Graduate Degree, Diploma Courses	Certificate Course
1. Sugar Technology (ST)	1. Sugar Engineering
2. Sugar Instrumentation Technology (SIT)	2. Sugar Manufacture
3. Industrial Fermentation & Alcohol Technology (IFAT)	3. Sugar Boiling
4. Sugar Engineering Diploma (SED)	
5. M.Sc. Environmental Sciences	Affiliated to Savitribai Phule Pune University
6. M.Sc. Wine, Brewing & Alcohol Technology	

*The details of admission procedure are available on Website: www.vsisugar.com
The Last date of receipt of applications is : 30th June 2023
Director General

ಬಿಎಂಟಿಸಿ: ಬಸ್‌ಪಾಸ್ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಪ್ರಯಾಣಿಸುವ ವಿದ್ಯಾರ್ಥಿಗಳ ಬಸ್ ಪಾಸ್ ಅವಧಿಯನ್ನು ವಿಸ್ತರಿಸಲಾಗಿದೆ.

ಹಳೆಯ ಬಸ್‌ಪಾಸ್ ಅನ್ನೇ ಜೂ. 15ರವರೆಗೆ ಉಪಯೋಗಿಸಬಹುದು. 12ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಇದು ಅನ್ವಯವಾಗಲಿದೆ. ಪಾಸ್ ಇಲ್ಲದ ಸಂದರ್ಭದಲ್ಲಿ ಪ್ರಸಕ್ತ ವರ್ಷದ ಶಾಲಾ ಶುಲ್ಕ ರಸೀದಿ ತೋರಿಸಿ ಪ್ರಯಾಣ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

'ಕಸಾಪ ಈಗಾಗಲೇ ಸ್ವಾಯತ್ತ ಸಂಸ್ಥೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಯಾವುದೇ ರೀತಿಯಲ್ಲಿ ಸರ್ಕಾರದ ಅಂಗ ಸಂಸ್ಥೆಯಲ್ಲ. ಇದರ ಮೇಲೆ ಸರ್ಕಾರ ನಿಯಂತ್ರಣವನ್ನೂ ಹೊಂದಿಲ್ಲ. 108 ವರ್ಷಗಳ ಇತಿಹಾಸವುಳ್ಳ ಪರಿಷತ್ತು, ಆರಂಭದಿಂದಲೂ ಸ್ವಾಯತ್ತ ಸಂಸ್ಥೆಯಾಗಿ ಬದ್ಧತೆಯಿಂದ ಕಾರ್ಯನಿರ್ವಹಿಸುತ್ತಿದೆ' ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಹೇಳಿದ್ದಾರೆ.

'ಕನ್ನಡ ಸಾಹಿತ್ಯ ಪರಿಷತ್ತಿನ ಸ್ವಾಯತ್ತತೆ ರಕ್ಷಿಸಲು ಮಸೂದೆ ಮಂಡಿಸಬೇಕು' ಎಂಬ 'ಸಮಾನ ಮನಸ್ಕರ ಒಕ್ಕೂಟ'ದ ಆಗ್ರಹಕ್ಕೆ ಸ್ಪಷ್ಟನೆ ನೀಡಿರುವ ಅವರು, 'ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಮತ್ತು ಜಿಲ್ಲಾಧ್ಯಕ್ಷರು ಕನ್ನಡಿಗರಿಂದ ನೇರವಾಗಿ ಪ್ರಜಾಸತ್ತಾತ್ಮಕ ಮಾರ್ಗದಲ್ಲಿ ಚುನಾಯಿತರಾಗುತ್ತಾರೆ. ಇಲ್ಲಿನ ಎಲ್ಲಾ ಮತದಾರರು ಕನ್ನಡ ಓದಲು ಹಾಗೂ ಬರೆಯಲು ಬರುವವರಾಗಿದ್ದಾರೆ. ಪರಿಷತ್ತು ಸರ್ಕಾರದಿಂದ ಅನುದಾನ ಪಡೆಯುತ್ತಿರುವುದು ಕನ್ನಡ ಪರ ಕೆಲಸಗಳಿಗೇ ಆಗಿದೆ. ಸರ್ಕಾರ ಕೂಡ ಈ ಅನುದಾನವನ್ನು ಕನ್ನಡಿಗರಿಂದ ಸಂಗ್ರಹಿಸಿದ ತೆರಿಗೆ ಹಣದಿಂದಲೇ ನೀಡುತ್ತಿದೆ' ಎಂದು ತಿಳಿಸಿದ್ದಾರೆ.

'ಪರಿಷತ್ತಿನ ಚುನಾವಣೆಯು ಪಕ್ಷಾತೀತವಾಗಿ ನಡೆಯುತ್ತದೆ. ಇಲ್ಲಿ ಜಾತಿ-ಧರ್ಮಗಳನ್ನು ಮೀರಿ ಸ್ಪರ್ಧಿಸಿದವರೆಲ್ಲರೂ ಕನ್ನಡ ಪಂಥದವರೇ ಆಗಿದ್ದಾರೆ. ಚುನಾವಣೆ ನಂತರ ಗೆದ್ದವರು ಮತ್ತು ಸೋತವರು ಸೇರಿಯೇ ಕನ್ನಡ ತಾಯಿಯ ರಥವನ್ನು ಎಳೆಯುತ್ತಾರೆ. ಇದು ಕನ್ನಡದ ಹಿರಿಮೆ' ಎಂದಿದ್ದಾರೆ.

ಸಂಸ್ಕೃತ ಗ್ರಂಥ ಪುರಸ್ಕಾರಕ್ಕೆ ಕೃತಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2021ನೇ ಸಾಲಿನ 'ಸಂಸ್ಕೃತ ಗ್ರಂಥ ಪುರಸ್ಕಾರ'ಕ್ಕೆ ಕೃತಿಗಳನ್ನು ಆಹ್ವಾನಿಸಿದೆ.

ಈ ಪುರಸ್ಕಾರವು ಫಲಕ ಹಾಗೂ ₹ 10 ಸಾವಿರ ನಗದು ಒಳಗೊಂಡಿದೆ. 2018ರಿಂದ ಐದು ವರ್ಷಗಳ ಅವಧಿಯಲ್ಲಿ ಪ್ರಕಟವಾದ ಕೃತಿಗಳನ್ನು ಲೇಖಕರು ಪುರಸ್ಕಾರಕ್ಕೆ ಸಲ್ಲಿಸಬಹುದು ಎಂದು ವಿಶ್ವವಿದ್ಯಾಲಯ ಹೇಳಿದೆ.

ಕಾದಂಬರಿ, ಕಥೆ, ಕಾವ್ಯ, ನಾಟಕ, ಪ್ರಬಂಧ ವಿಮರ್ಶೆ, ಅನುವಾದ ಸೇರಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ರಚಿಸಿದ ಕೃತಿಗಳನ್ನು ಕಳುಹಿಸಬಹುದಾಗಿದೆ. ಕೃತಿಗಳು 100ಕ್ಕಿಂತ ಹೆಚ್ಚಿನ ಪುಟಗಳಿರಬೇಕು. ಆಸಕ್ತರು ಕೃತಿಗಳನ್ನು ಜೂನ್ 28ರೊಳಗೆ ಉಪ ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ವಿವರಕ್ಕೆ: www.ksu.ac.in ಅಥವಾ 080 26705387, 9632079891

BANKING PARTNER: ಕೆನರಾ ಬ್ಯಾಂಕ್ Canara Bank A Government of India Undertaking Together We Can
ASSOCIATE SPONSORS: Freedom Rice Bran Oil, Prestige, INSIGHTSIAS, ಸದ್ದುರು ಆಯುರ್ವೇದ GRAMFLOUR, coloressence Color your spirit
STYLE PARTNER: BSC B.S. CHANNABASAPPA & SONS Since 1938
INDUSTRY BODIES & PARTNERS
AUDIT PARTNER: EY
TV PARTNER: Star ಸುವರ್ಣ

ಸೈಬರ್ ಅಪರಾಧ ತಗ್ಗಿಸಲು ವಿಶೇಷ ಪ್ರಯತ್ನ – ನೂತನ ಪೊಲೀಸ್ ಕಮಿಷನರ್ ಬಿ.ದಯಾನಂದ್

'ರೌಡಿ ಚಟುವಟಿಕೆ ವಿರುದ್ಧ ಕಾರ್ಯಾಚರಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿರುವ ರೌಡಿಗಳು ರಿಯಲ್ ಎಸ್ಟೇಟ್ ಉದ್ಯಮಕ್ಕೂ ಕೈಹಾಕಿದ್ದಾರೆ. ಉದ್ಯಮಿಗಳನ್ನು ಬೆದರಿಸಿ ಸುಲಿಗೆ ಮಾಡುವ ಪ್ರಕರಣಗಳು ಹೆಚ್ಚುತ್ತಿವೆ. ಇಲಾಖೆ ಸಿಬ್ಬಂದಿ ಹಾಗೂ ಅಧಿಕಾರಿಗಳ ಸಹಕಾರದಲ್ಲಿ ರೌಡಿ ಚಟುವಟಿಕೆಯನ್ನು ಸಂಪೂರ್ಣವಾಗಿ ನಿಯಂತ್ರಣಕ್ಕೆ ತರಲಾಗುವುದು' ಎಂದು ನೂತನ ಪೊಲೀಸ್ ಕಮಿಷನರ್ ಬಿ. ದಯಾನಂದ್ ಭರವಸೆ ನೀಡಿದರು.

ನಗರದಲ್ಲಿ ಬುಧವಾರ ನಿರ್ಗಮಿತ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಅವರಿಂದ ಅಧಿಕಾರ ಸ್ವೀಕರಿಸಿದ ಬಳಿಕ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

'ರೌಡಿ ಚಟುವಟಿಕೆ ಹತ್ತಿಕ್ಕಲು ಪೊಲೀಸ್ ಇಲಾಖೆ ಸನ್ನದ್ಧವಾಗಿದೆ. ರೌಡಿ ಚಟುವಟಿಕೆ ವಿರುದ್ಧದ ಕಾರ್ಯಾಚರಣೆಗೆ ಸಿಸಿಬಿ ಘಟಕವಿದೆ. ಅಲ್ಲಿಯೂ ಸಮರ್ಥ ಅಧಿಕಾರಿಗಳ ಪಡೆಯೇ ಇದ್ದು ಅವರನ್ನು ಬಳಸಿಕೊಂಡು ನಿರಂತರ ಕಾರ್ಯಾಚರಣೆ ನಡೆಸಲಾಗುವುದು' ಎಂದು ಹೇಳಿದರು.

'ಸೈಬರ್ ಅಪರಾಧ ಪ್ರಕರಣಗಳು ಹೆಚ್ಚುತ್ತಿವೆ. ಸೈಬರ್ ಅಪರಾಧ ತಡೆಗಟ್ಟಲು ಬ್ಯಾಂಕ್ ಸೇರಿದಂತೆ ವಿವಿಧ ಕ್ಷೇತ್ರಗಳ ಸಹಕಾರ ಅಗತ್ಯ. ಈ ಪ್ರಕರಣಗಳನ್ನು ತಗ್ಗಿಸಲು ವಿಶೇಷ ಪ್ರಯತ್ನ ವಹಿಸಲಾಗುವುದು' ಎಂದು ಹೇಳಿದರು.

'ನಗರದ ಸಂಚಾರ ನಿರ್ವಹಣೆಯೂ ಸವಾಲಿನಿಂದ ಕೂಡಿದೆ. ಸಂಚಾರ ದಟ್ಟಣೆ ತಗ್ಗಿಸಲು ಬರೀ ಪೊಲೀಸ್ ಇಲಾಖೆಯಿಂದ ಮಾತ್ರ ಸಾಧ್ಯವಿಲ್ಲ. ಇಲಾಖೆಯ ಜೊತೆಗೆ ಬಿಬಿಎಂಪಿ ಸೇರಿದಂತೆ ನಾಗರಿಕರ ಸಹಕಾರ ಅಗತ್ಯ' ಎಂದು ಪ್ರತಿಪಾದಿಸಿದರು.

'ಗುಪ್ತಚರ ಇಲಾಖೆ ಪೊಲೀಸ್ ವ್ಯವಸ್ಥೆ ಬೆನ್ನೆಲುಬು. ಭಯೋತ್ಪಾದನೆ, ಸೈಬರ್ ಅಪರಾಧ, ಭೂಗತ ಚಟುವಟಿಕೆ ನಿಯಂತ್ರಿಸುವುದರಲ್ಲಿ ಗುಪ್ತಚರ ಇಲಾಖೆ ಪಾತ್ರ ದೊಡ್ಡದಿದೆ. ನಗರದಲ್ಲಿ ಭಯೋತ್ಪಾದಕ ನಿಗ್ರಹ ದಳದ ಘಟಕ ಇದೆ. ಅದನ್ನು ಇನ್ನಷ್ಟು ಬಲಪಡಿಸುತ್ತೇವೆ' ಎಂದು ಹೇಳಿದರು.

'ಸರ್ಕಾರವು ಬೆಂಗಳೂರು ಪೊಲೀಸ್ ಕಮಿಷನರ್ ಆಗಿ ಕೆಲಸ ಮಾಡಲು ಅವಕಾಶ ಕಲ್ಪಿಸಿದೆ. ನಗರದ ಜನರೂ ಪೊಲೀಸ್ ಇಲಾಖೆ ಮೇಲೆ ಹೆಚ್ಚಿನ ವಿಶ್ವಾಸ, ನಂಬಿಕೆ ಇಟ್ಟುಕೊಂಡಿದ್ದಾರೆ. ಆ ನಂಬಿಕೆ, ವಿಶ್ವಾಸಕ್ಕೆ ಚ್ಯುತಿಯಾಗದಂತೆ ಕೆಲಸ ನಿರ್ವಹಿಸುತ್ತೇನೆ' ಎಂದು ದಯಾನಂದ್ ಹೇಳಿದರು.

ನಿರ್ಗಮಿತ ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಅವರಿಂದ ನೂತನ ಪೊಲೀಸ್ ಕಮಿಷನರ್ ಬಿ.ದಯಾನಂದ್ ಅವರು (ಎಡಬದಿ) ಅಧಿಕಾರ ಸ್ವೀಕರಿಸಿದರು – ಪ್ರಜಾವಾಣಿ ಚಿತ್ರ

'ಜನ ಸ್ನೇಹಿ ಪೊಲೀಸ್ ವ್ಯವಸ್ಥೆಯೇ ಗುರಿ'

'ಅಪರಾಧ ಪ್ರಕರಣಗಳ ಪತ್ತೆಗೆ ತಂತ್ರಜ್ಞಾನ ಬಳಕೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುವುದು. ಜತೆಗೆ, ಜನ ಸ್ನೇಹಿ ಪೊಲೀಸ್ ವ್ಯವಸ್ಥೆಗೆ ಹೆಚ್ಚಿನ ಒತ್ತು ನೀಡುತ್ತೇನೆ' ಎಂದು ಬಿ.ದಯಾನಂದ್ ಹೇಳಿದರು.

'ಬೆಂಗಳೂರು ನಗರದಲ್ಲಿಯೇ ನಾನು ಹುಟ್ಟಿ ಬೆಳೆದಿದ್ದು, ಇಲ್ಲಿನ ಸಮಸ್ಯೆಗಳ ಬಗ್ಗೆ ಹೆಚ್ಚಿನ ಅರಿವಿದೆ. ನಗರದಲ್ಲಿ ಸಾಕಷ್ಟು ಸವಾಲುಗಳಿದ್ದು, ಇವುಗಳನ್ನು ಇಲಾಖೆಯ ಸಿಬ್ಬಂದಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಬಗೆಹರಿಸುವ ಪ್ರಯತ್ನಿಸಲಾಗುವುದು' ಎಂದು ಹೇಳಿದರು.

ಸಿಐಡಿ ಡಿಜಿಪಿಯಾಗಿ ಎಂ.ಎ. ಸಲೀಂ ಅಧಿಕಾರ ಸ್ವೀಕಾರ

ಬೆಂಗಳೂರು: ಸಿಐಡಿ ಡಿಜಿಪಿಯಾಗಿ ಎಂ.ಎ.ಸಲೀಂ ಅವರು ಬುಧವಾರ ಅಧಿಕಾರ ಸ್ವೀಕರಿಸಿದರು. ಇವರು ಬೆಂಗಳೂರು ವಿಶೇಷ ಕಮಿಷನರ್ (ಸಂಚಾರ) ಆಗಿದ್ದರು. ಅವರಿಗೆ ಮಂಗಳವಾರ ಬಡ್ತಿ ನೀಡಿ ಸಿಐಡಿ ಘಟಕಕ್ಕೆ ವರ್ಗಾವಣೆ ಮಾಡಲಾಗಿತ್ತು.

ಸಂಚಾರ ವಿಭಾಗದ ಸುಧಾರಣೆಗೆ ಸಿಬ್ಬಂದಿ ಸಲಹೆ ಪಡೆದು ತೀರ್ಮಾನಿಸಲಾಗುವುದು. ಟೋಯಿಂಗ್ ಬಗ್ಗೆ ಚರ್ಚೆ ಮಾಡಿ, ತೀರ್ಮಾನಿಸುತ್ತೇವೆ.

ಬಿ.ದಯಾನಂದ್, ನಗರ ಪೊಲೀಸ್ ಕಮಿಷನರ್

ಸುದ್ದಿ 2 ನಿಮಿಷ

ನಿಗಮ ಮಂಡಳಿಯಲ್ಲಿ ಹುದ್ದೆ ಕೊಡಿಸುವುದಾಗಿ ವಂಚನೆ: ಬಂಧನ

ಬೆಂಗಳೂರು: ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನಿಗಮ ಮಂಡಳಿಯ ಅಧ್ಯಕ್ಷರ ಹುದ್ದೆ ಸೇರಿದಂತೆ ಬೇರೆ ಬೇರೆ ಪ್ರಮುಖ ಹುದ್ದೆಗಳನ್ನು ಕೊಡಿಸುವುದಾಗಿ ಹೇಳಿ ಕರೆ ಮಾಡಿ ಹಣಕ್ಕೆ ಬೇಡಿಕೆಯಿಡುತ್ತಿದ್ದ ಆರೋಪಿಯನ್ನು ಸದಾಶಿವನಗರ ಪೊಲೀಸರು ಬಂಧಿಸಿದ್ದಾರೆ.

ರಘುನಾಥ್ ಎಂಬ ವ್ಯಕ್ತಿಯನ್ನು ಬಂಧಿಸಲಾಗಿದೆ. ಇದರ ಹಿಂದೆ ಮತ್ತೆ ಯಾರಿದ್ದಾರೆ ಎಂಬುದರ ಕುರಿತೂ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಸಚಿವ ಪ್ರಿಯಾಂಕ್ ಖರ್ಗೆ ಅವರ ಆಪ್ತ ಸಹಾಯಕನೆಂದು ಹೇಳಿಕೊಂಡು ಕರೆ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

'ಸಚಿವ ಪ್ರಮಾಣ ವಚನ ಸ್ವೀಕಾರ ಸಮಾರಂಭ ಬಳಿಕ ಕಾಂಗ್ರೆಸ್ ಮುಖಂಡರ ಮೊಬೈಲ್ ಸಂಖ್ಯೆ ಪಡೆದು ಅವರಿಗೆ ಕರೆ ಮಾಡುತ್ತಿದ್ದ. ಸಚಿವರ ಆಪ್ತ ಸಹಾಯಕನೆಂದು ಪರಿಚಯಿಸಿಕೊಳ್ಳುತ್ತಿದ್ದ. ಬಳಿಕ ಕರ್ನಾಟಕ ಸರ್ಕಾರದ ಅವಧಿಯಲ್ಲಿ ತಮಗೆ ನಿಗಮ ಮಂಡಳಿಗೆ ಅಧ್ಯಕ್ಷ ಅಥವಾ ಇನ್ನಾವುದಾರೂ ಪ್ರಮುಖ ಹುದ್ದೆ ಕೊಡಿಸುವುದಾಗಿ ನಂಬಿಸುತ್ತಿದ್ದ. ಅಲ್ಲದೇ ಗೂಗಲ್ ಪೇ ಮೂಲಕ ಹಣ ಸಂದಾಯ ಮಾಡುವಂತೆಯೂ ಕೋರುತ್ತಿದ್ದ. ಹಣ ನೀಡಿದವರಿಗೆ ಹುದ್ದೆಗಳು ಖಚಿತ ಎಂದು ನಂಬಿಸುತ್ತಿದ್ದ' ಎಂದು ಮೂಲಗಳು ತಿಳಿಸಿವೆ.

'ಗೀತಾ ಶಿವರಾಂ ಎಂಬುವರಿಗೆ ಆರೋಪಿ ಕರೆ ಮಾಡಿದ್ದ. ಅವರಿಗೆ ಸಂದೇಹ ಬಂದು ಕೆಲವರನ್ನು ವಿಚಾರಿಸಿದ್ದರು. ಇದೇ ಮಾಹಿತಿ ಆಧರಿಸಿ ಮುಖಂಡ ಕೇಶವಮೂರ್ತಿ ಅವರು ಪೊಲೀಸರಿಗೆ ದೂರು ನೀಡಿದ್ದರು. ಮೊಬೈಲ್ ಲೊಕೇಶನ್ ಆಧರಿಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಮೂಲಗಳು ತಿಳಿಸಿವೆ.

ಡ್ರಗ್ ಪೆಡ್ಲರ್ ಬಂಧನ: ₹ 10.50 ಲಕ್ಷದ ಮಾದಕ ವಸ್ತು ಜಪ್ತಿ

ಬೆಂಗಳೂರು: ತಲಘಟ್ಟಪುರ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರತಿಷ್ಠಿತ ಕಾಲೇಜು ವಿದ್ಯಾರ್ಥಿಗಳು ಹಾಗೂ ಪಿ.ಜಿಗಳಿಗೆ ಮಾದಕ ವಸ್ತು ಪೂರೈಸುತ್ತಿದ್ದ ಕುಖ್ಯಾತ ಡ್ರಗ್ ಪೆಡ್ಲರ್‌ನನ್ನು ಪೊಲೀಸರು ಬಂಧಿಸಿದ್ದಾರೆ.

'ಬನಶಂಕರಿ 2ನೇ ಹಂತದ ಕಾವೇರಿನಗರದ ನಿವಾಸಿ ಫಜಾಯ್ ಪಾಷಾ ಅಲಿಯಾಸ್ ಪಿಲ್ಲು ಬಂಧಿತ ಆರೋಪಿ. ಬಂಧಿತನಿಂದ ₹ 10.50 ಲಕ್ಷ ಮೌಲ್ಯದ ಮಾದಕ ವಸ್ತುಗಳು, ₹ 2 ಸಾವಿರ ನಗದು, ಮೊಬೈಲ್, ಒಂದು ಬೈಕ್ ಜಪ್ತಿ ಮಾಡಿಕೊಳ್ಳಲಾಗಿದೆ. ಗುಬ್ಬಲಾಳ 80 ಅಡಿ ರಸ್ತೆಯ ಲಿಬರ್ಟಿ ಅಪಾರ್ಟ್‌ಮೆಂಟ್ ಬಳಿ ಖಾಲಿ ಪ್ರದೇಶದಲ್ಲಿ ಆರೋಪಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ. ಆ ಕಾರ್ಯಾಚರಣೆ ನಡೆಸಿ ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಆರೋಪಿ ವಿರುದ್ಧ ಕುಮಾರಸ್ವಾಮಿ ಲೇಔಟ್, ಬನಶಂಕರಿ, ತಲಘಟ್ಟಪುರ, ಕೋರಮಂಗಲ, ಜಯನಗರ ಠಾಣೆಗಳಲ್ಲಿ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿಶ್ವ ಪರಿಸರ ದಿನಾಚರಣೆ: ಚಿತ್ರಕಲೆ, ಪ್ರಬಂಧ ಸ್ಪರ್ಧೆ

ಬೆಂಗಳೂರು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಶಾಲಾ ಮಕ್ಕಳಿಗೆ ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆಗಳನ್ನು ಆಯೋಜಿಸಿದೆ.

ಸ್ಪರ್ಧೆಯು ಜೂನ್ 2ರಂದು ಕಬ್ಬನ್ ಉದ್ಯಾನದಲ್ಲಿರುವ ಬಾಲ ಭವನದಲ್ಲಿ ಬೆಳಿಗ್ಗೆ 10ಕ್ಕೆ ಪ್ರಾರಂಭವಾಗಲಿದೆ. 'ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರ ಹಾಗೂ ಪರಿಸರಕ್ಕಾಗಿ ಜೀವನಶೈಲಿ' ಎಂಬ ಘೋಷವ್ಯಾಕ್ಯದ ಅಡಿಯಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಗುತ್ತಿದೆ.

ಬೆಳಿಗ್ಗೆ 10.30ರಿಂದ 11.30ರ ವರೆಗೆ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಚಿತ್ರ ಕಲಾ ಸ್ಪರ್ಧೆ ನಡೆಯಲಿದೆ. ಮಧ್ಯಾಹ್ನ 12.30ರಿಂದ 1.30ರವರೆಗೆ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ.

ಸ್ಪರ್ಧೆಯು 'ಪ್ಲಾಸ್ಟಿಕ್ ಮಾಲಿನ್ಯಕ್ಕೆ ಪರಿಹಾರ ಹಾಗೂ ಪರಿಸರಕ್ಕಾಗಿ ಜೀವನ ಶೈಲಿ' ಎಂಬ ವಿಷಯದ ಬಗ್ಗೆ ನಡೆಯಲಿದೆ. ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ.

ನೋಂದಣಿ ಸ್ಥಳ: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಚೇರಿ ಬೆಂಗಳೂರು ನಗರ ದಕ್ಷಿಣ, 1ನೇ ಮಹಡಿ, ನಿಸರ್ಗ ಭವನ, 7 ನೇ 'ಡಿ' ಕ್ರಾಸ್, ಶಿವನಗರ, ಬೆಂಗಳೂರು - 560010 ಅಥವಾ ಇ-ಮೇಲ್ bngcitysouth@kspcb.gov.inನಲ್ಲಿ ನೋಂದಣಿ ಮಾಡಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

'ಪ್ರಕೃತಿ ವಿಕೋಪದ ಬಗ್ಗೆ ಎಚ್ಚರ ವಹಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಕೃತಿ ವಿಕೋಪ ಎದುರಿಸಲು ಸಜ್ಜಾಗುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಅನಾಹುತ ಸಂಭವಿಸಿದರೆ ತಕ್ಷಣ ಪರಿಹಾರ ಕ್ರಮ ತೆಗೆದುಕೊಳ್ಳುವಂತೆಯೂ ನಿರ್ದೇಶನ ನೀಡಿದ್ದೇನೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಇಲಾಖೆಯ ಅಧಿಕಾರಿಗಳ ಜೊತೆ ಬುಧವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ಜಿಲ್ಲಾಧಿಕಾರಿಗಳ ಖಾತೆಯಲ್ಲಿ ₹ 538 ಕೋಟಿ ಲಭ್ಯವಿದೆ. ಒಂದೆರಡು ಜಿಲ್ಲೆಯವರು ಹೆಚ್ಚಿನ ಹಣ ಬೇಕೆಂದು ಮನವಿ ಮಾಡಿದ್ದಾರೆ. ಕೊಡಗು, ಮಂಗಳೂರು, ಬೆಳಗಾವಿ, ರಾಯಚೂರು ಭಾಗದಲ್ಲಿ ವಿಪತ್ತು ನಿರ್ವಹಣಾ ತಂಡ ಸಜ್ಜಾಗಿರುವಂತೆ ಈಗಾಗಲೇ ಸೂಚಿಸಲಾಗಿದೆ. ಸಿಡಿಲಿನಿಂದ ಪ್ರಾಣ ಹಾನಿ ಹೆಚ್ಚುತ್ತಿದ್ದು, ಈ ಬಗ್ಗೆಯೂ ಜನರಿಗೆ ಜಾಗೃತಿ ಮೂಡಿಸಲು ಅಧಿಕಾರಿಗಳಿಗೆ ತಿಳಿಸಿದ್ದೇನೆ' ಎಂದರು.

'ಪ್ರಕೃತಿ ವಿಕೋಪದಿಂದ ಜನವರಿಯಿಂದ ಈವರೆಗೆ 65 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. 59 ಮಂದಿಗೆ ಪರಿಹಾರಧನ ನೀಡಲಾಗಿದೆ. 487 ಜಾನುವಾರುಗಳು ಮೃತಪಟ್ಟಿವೆ. ಅದಕ್ಕೂ ಪರಿಹಾರ ವಿತರಿಸುವ ಕಾರ್ಯ ನಡೆಯುತ್ತಿದೆ. 1,400 ಮನೆಗಳಿಗೆ ಹಾನಿಯಾಗಿದೆ. 20,160 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಎರಡು ದಿನದಲ್ಲಿ ಪ್ರಾಣಹಾನಿ ಪರಿಹಾರ ವಿತರಿಸಬೇಕು. ಬೆಳೆ ಹಾನಿಗೆ ರೈತರ ಖಾತೆಗೆ ಪರಿಹಾರ ಹಣ ವರ್ಗಾವಣೆ ಮಾಡಬೇಕೆಂದು ಸೂಚಿಸಿದ್ದೇನೆ. ಇನ್ನು ಎರಡು ದಿನಗಳಲ್ಲಿ ಬೆಳೆ ಹಾನಿ ಕುರಿತು ಸ್ಪಷ್ಟ ಮಾಹಿತಿ ಸಿಗಲಿದೆ' ಎಂದರು.

'ಬಗರ್ ಹುಕುಂ ಸಾಗುವಳಿದಾರರ ಅರ್ಜಿ ವಿಲೇವಾರಿಗೆ ನೇಮಿಸಿದ್ದ ಸಮಿತಿ ವಜಾಗೊಂಡಿದೆ. ಮುಂದಿನ ಒಂದು ತಿಂಗಳಿನಲ್ಲಿ ಹೊಸ ಸಮಿತಿ ರಚಿಸಲಾಗುವುದು. ಮಲೆನಾಡು, ಕರಾವಳಿ ಭಾಗದಲ್ಲಿ ಅರಣ್ಯ ಮತ್ತು ಕಂದಾಯ ಇಲಾಖೆ ಜಮೀನಿನ ಬಗ್ಗೆ ಸಾಕಷ್ಟು ಗೊಂದಲ ಇದೆ. ಅರಣ್ಯ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ, ಜಂಟಿ ಸಮೀಕ್ಷೆ ಮಾಡಿಸುವ ಪ್ರಯತ್ನ ಮಾಡುತ್ತೇನೆ' ಎಂದೂ ಅವರು ಹೇಳಿದರು.

'ಭೂ ಕಬಳಿಕೆ: ಪರಿಶೀಲಿಸಿ ಕ್ರಮ'

'ನಕಲಿ ದಾಖಲೆಗಳನ್ನು ಸೃಷ್ಟಿಸಿ ಬೆಂಗಳೂರು ಸುತ್ತಮುತ್ತ ಭೂಮಿ ಕಬಳಿಸಿರುವ ಪ್ರಕರಣಗಳು ಗಮನಕ್ಕೆ ಬಂದಿದೆ. ಯಲಹಂಕ ತಾಲ್ಲೂಕಿನಲ್ಲಿ 6–7 ಪ್ರಕರಣಗಳು ನನ್ನ ಗಮನಕ್ಕೆ ಬಂದಿವೆ. ಇಂಥ ಪ್ರಕರಣಗಳನ್ನು ಪ್ರಾದೇಶಿಕ ಆಯುಕ್ತರು ಅಥವಾ ನಿವೃತ್ತ ನ್ಯಾಯಾಧೀಶರ ಮೂಲಕ ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗು ವುದು. ಖಾಸಗಿಯವರಿಗೆ ಸರ್ಕಾರಿ ಭೂಮಿ ನೀಡಿರುವ ಬಗ್ಗೆಯೂ ಮರು ಪರಿಶೀಲಿಸುವಂತೆ ಹಿರಿಯ ಅಧಿಕಾರಿಗಳಿಂದ ಸೂಚಿಸಿದ್ದೇವೆ' ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

'ಪ್ರವಾಹ, ಭೂಕುಸಿತದ ಅಪಾಯವಿಲ್ಲ'

ಬೆಂಗಳೂರು: 'ರಾಜ್ಯದಲ್ಲಿ ಈ ಬಾರಿ ಸಾಮಾನ್ಯ ಮುಂಗಾರಿಗಿಂತಲೂ ಮಳೆಯ ಪ್ರಮಾಣ ಕಡಿಮೆ ಇರಲಿದ್ದು, ಭೂಕುಸಿತ ಹಾಗೂ ಪ್ರವಾಹದ ಆತಂಕ ಇರುವುದಿಲ್ಲ' ಎಂದು ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣ ಇಲಾಖೆಯ ನಿವೃತ್ತ ಉಪ ಮಹಾನಿರ್ದೇಶಕ ಡಾ.ಎಚ್.ಎಸ್.ಎಂ. ಪ್ರಕಾಶ್ ತಿಳಿಸಿದ್ದಾರೆ.

'ಪ್ರಸಕ್ತ ವರ್ಷದ ಮುಂಗಾರು ಅವಧಿಯ ಭೂಮಾಪನ ವಿಜ್ಞಾನದ ಅಧ್ಯಯನದ ಪ್ರಕಾರ, ಕೊಡಗು ಹಾಗೂ ಕೇರಳದಲ್ಲಿ 2018, 2019ರಲ್ಲಿ ಉಂಟಾಗಿದ್ದ ಮಳೆ ದುರಂತದ ಯಾವುದೇ ಅಪಾಯದ ಮುನ್ಸೂಚನೆ ಕಂಡುಬರುತ್ತಿಲ್ಲ' ಎಂದು ಮಾಹಿತಿ ನೀಡಿದ್ದಾರೆ.

'ಭಾರತದ ಸುತ್ತಮುತ್ತಲ ನೆಲದ ಮೇಲಿನ ಅಥವಾ ಸಮುದ್ರದ ಒಳಗಿನ ಹಲವಾರು ದೊಡ್ಡ ಜ್ವಾಲಾಮುಖಿಗಳು ನಿಷ್ಕ್ರಿಯ ಆಗಿರುವುದರಿಂದ ಅವಿಯ ಮೂಲಗಳು ಸ್ಥಗಿತವಾಗಿವೆ. ದೊಡ್ಡ ಜ್ವಾಲಾಮುಖಿಗಳು 2017, 2018 ಹಾಗೂ 2019ರಲ್ಲಿ ಸಕ್ರಿಯವಾಗಿದ್ದವು. ಹೀಗಾಗಿ, ಎರಡು ವರ್ಷ ಭಾರಿ ಮಳೆಯಾಗಿತ್ತು. ಇವುಗಳು ಈಗ ಸಕ್ರಿಯವಾಗುವ ಮುನ್ಸೂಚನೆಗಳೂ ಕಂಡು ಬರುತ್ತಿಲ್ಲ' ಎಂದು ತಿಳಿಸಿದ್ದಾರೆ.

'ಉತ್ತರ ಕರ್ನಾಟಕ, ಮಧ್ಯ ಭಾರತ ಹಾಗೂ ಉತ್ತರ ಭಾರತದಲ್ಲಿಯೂ ಕಳೆದ ವರ್ಷಗಳ ಹಾಗೆ ಪ್ರವಾಹ ಪರಿಸ್ಥಿತಿ ಉಂಟಾಗುವ ಸಾಧ್ಯತೆ ತೀರಾ ಕಡಿಮೆ ಇದೆ. ಜುಲೈ ಹಾಗೂ ಆಗಸ್ಟ್‌ನಲ್ಲಿ ಒಂದೆರಡು ಬಾರಿ ಹೆಚ್ಚಿನ ಮಳೆಯಾದರೂ ಆತಂಕದ ವಾತಾವರಣವಿಲ್ಲ' ಎಂದು ಹೇಳಿದ್ದಾರೆ.

ಈಜಲು ಹೋಗಿ ಮೂವರು ಬಾಲಕರು ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನಲ್ಲಿ ನಡೆದ ಎರಡು ಪ್ರತ್ಯೇಕ ಘಟನೆಗಳಲ್ಲಿ, ಈಜಲು ತೆರಳಿದ್ದ ಮೂವರು ಬಾಲಕರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಹೆಬ್ಬಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯ ಹುಲಿಮಂಗಲ ಸಮೀಪದ ಕಲ್ಲು ಗಣಿಯಲ್ಲಿ ನಿಂತಿದ್ದ ನೀರಿನಲ್ಲಿ ಮಂಗಳವಾರ ಸಂಜೆ ಈಜಲು ಹೋಗಿದ್ದ ಮಾರಗೊಂಡನಹಳ್ಳಿಯ ಫೈಜಲ್ ಖಾನ್ (14) ಮತ್ತು ಹಾಸನ ಮೂಲದ ತೀರ್ಥೇಶ್(12) ಎಂಬ ಬಾಲಕರಿಬ್ಬರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಹೆಬ್ಬಗೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಳ್ಳಲಾಗಿದೆ ಎಂದು ಹೆಬ್ಬಗೋಡಿ ಸರ್ಕಲ್ ಇನ್‌ಸ್ಪೆಕ್ಟರ್ ಐಯನ್ ರೆಡ್ಡಿ ತಿಳಿಸಿದರು.

ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮಂಗಳವಾರ ನಡೆದ ಮತ್ತೊಂದು ಪ್ರತ್ಯೇಕ ಘಟನೆಯಲ್ಲಿ ಮೈಲಸಂದ್ರದ ಕೆರೆಯಲ್ಲಿ ಈಜಲು ಹೋಗಿದ್ದ ಬಾಲಕನೊಬ್ಬ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ.

ಮೃತ ಬಾಲಕನನ್ನು ಜಿಶಾಂತ್ (16) ಎಂದು ಗುರುತಿಸಲಾಗಿದೆ. ಎಲೆಕ್ಟ್ರಾನಿಕ್‌ಸಿಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಇನ್‌ಸ್ಪೆಕ್ಟರ್ ನಂಜೇಗೌಡ ತಿಳಿಸಿದ್ದಾರೆ.

10 ಮೆಮು ರೈಲುಗಳ ಸಂಚಾರ 15 ದಿನ ರದ್ದು

ಬೆಂಗಳೂರು: ಪ್ರಯಾಣಿಕರ ಕೊರತೆಯಿಂದಾಗಿ 10 ಮೆಮು ರೈಲುಗಳನ್ನು 15 ದಿನ ರದ್ದು ಮಾಡಲಾಗಿದೆ ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ಜನರ ಪ್ರಯಾಣ ಶೇ 5ಕ್ಕಿಂತ ಕಡಿಮೆಯಾಗಿರುವ, ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ದೇವನಹಳ್ಳಿ, ದೇವನಹಳ್ಳಿಯಿಂದ ಯಲಹಂಕ (06533), ಯಲಹಂಕದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ (06534), ದೇವನಹಳ್ಳಿಯಿಂದ ಬೆಂಗಳೂರು ಕಂಟೋನ್ಮೆಂಟ್ (06535), ಬೆಂಗಳೂರು ಕಂಟೋನ್ಮೆಂಟ್‌ನಿಂದ ದೇವನಹಳ್ಳಿ(06536), ದೇವನಹಳ್ಳಿಯಿಂದ ಬೆಂಗಳೂರು ಕಂಟೋನ್ಮೆಂಟ್ (06537), ಬೆಂಗಳೂರು ಕಂಟೋನ್ಮೆಂಟ್‌ನಿಂದ ದೇವನಹಳ್ಳಿ (06538), ದೇವನಹಳ್ಳಿಯಿಂದ ಯಲಹಂಕ (06539), ಯಲಹಂಕದಿಂದ ದೇವನಹಳ್ಳಿ (06540) ಹಾಗೂ ದೇವನಹಳ್ಳಿಯಿಂದ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣಕ್ಕೆ (06532) ಸಂಚರಿಸುವ ಮೆಮು ರೈಲು ಜೂನ್ 1ರಿಂದ 3, 5ರಿಂದ 10 ಹಾಗೂ 12ರಿಂದ 17ರವರೆಗೆ ರದ್ದಾಗಿವೆ.

ಭಾಗಶಃ ರದ್ದು: ಜೂನ್ 1ರಿಂದ 3ರವರೆಗೆ ಡೆಮು ರೈಲುಗಳು ಭಾಗಶಃ ರದ್ದಾಗಿವೆ. ಕೋಲಾರದಿಂದ ಬೆಂಗಳೂರಿಗೆ ಚಲಿಸುವ ಡೆಮು ರೈಲು (06382) ಬೈಯಪ್ಪನಹಳ್ಳಿ–ಕಂಟೋನ್ಮೆಂಟ್ ನಡುವೆ ರದ್ದುಗೊಂಡಿದೆ. ಬದಲಾಗಿ ಬಾಣಸವಾಡಿ ಕೊನೆಯ ನಿಲ್ದಾಣವಾಗಿದೆ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ಕೋಲಾರದವರೆಗೆ ಚಲಿಸುವ ಡೆಮು ರೈಲು (06387) ಕಂಟೋನ್ಮೆಂಟ್‌ನಿಂದ ಬೈಯಪ್ಪನಹಳ್ಳಿ ನಡುವೆ ರದ್ದುಗೊಂಡಿದೆ. ಬದಲಾಗಿ ಬಾಣಸವಾಡಿಯಿಂದ ಹೊರಡಲಿದೆ.

ಕೋಲಾರದಿಂದ ಬೆಂಗಳೂರಿನ ಡೆಮು ರೈಲು (06388) ಬೈಯಪ್ಪನಹಳ್ಳಿ–ಕಂಟೋನ್ಮೆಂಟ್ ನಡುವೆ ರದ್ದುಗೊಂಡಿದೆ. ಬದಲಾಗಿ ಬಾಣಸವಾಡಿಯಲ್ಲಿ ನಿಲ್ಲಲಿದೆ. ಕಂಟೋನ್ಮೆಂಟ್ ರೈಲು ನಿಲ್ದಾಣದಿಂದ ಕೋಲಾರಕ್ಕೆ ಚಲಿಸುವ ಡೆಮು ರೈಲು (06381) ಕಂಟೋನ್ಮೆಂಟ್‌ನಿಂದ ಬೈಯಪ್ಪನಹಳ್ಳಿ ನಡುವೆ ರದ್ದುಗೊಂಡಿದ್ದು ಬಾಣಸವಾಡಿಯಿಂದ ಹೊರಡಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

AUTOMOTIVE

2 / 3 Wheelers Selling

Mobikes

ACCIDENT VEHICLE For sale. KA01-JM 5653, DOR 13/07/2021, Bajaj Pulsar 150. Contact: 9845296077.

BUSINESS

Business Offers

Finance

PRIVATE FINANCE on Property Interest 8% to 12%.pa. 20L-10Cr. Cheque Finance-Salaries/ Business 2L-10L Bengaluru. Contact:7892818780

GET OWN BUSINESS 10 LAKHS INVESTMENT MONTHLY INCOME 1L FOR GREEN HERBAL AYURVEDIC: 8892501007/ 9606701007

LOANS AVAILABLE on car/ bikes pledging and also provide loan on mortgage of Properties. 9986991597

PERSONAL

Change of Name

CHANGE OF NAME
We, **VIKRAM VEERANNA GONAL** S/o Veeranna G.V. and **Geetha Vikram Gonal** W/o. Vikram Veeranna Gonal R/a B-302, Sterling Terraces Apartment, BSK 3rd Stage, Bangalore-560085 Have Changed Our Minor Son's Name From **VIHAAN GONAL** to **VIHAAN VIKRAM GONAL** (old passport No. M5995835) vide affidavit dated 29.05.2023 before notary B.K.R. Krishnamurthy, Bangalore.

I, ABHISHEK GAURAV Residing at No D-1603, Urban Forest, A B Vajpayee Road, Kadugodi, Bangalore 560067 have changed my Minor Son's name from AARAV to AARAV PRIYADARSHI vide affidavit dated 31.05.2023 before notary Veena J, Bangalore

CHANGE OF NAME
I, **BHUVANESHWARI,** D/o Service No. 614875A Rank Sergent **K VINAYAGA MURTHY,** residing at No. 24, 5th A Cross, Bahubali Nagar, Jalahalli, Bengaluru-560013, have changed my name from **BHUVANESWARI** to **BHUVANESHWARI. V,** vide affidavit dated 19.5.2023, before Amit Kumar Singh (Consular) Embassy of India, Abu Dhabi, UAE.

CHANGE OF NAME
I, **BASAVARAJ NAIKWADI** residing at Flat No. SF08 A Block GR Lotus APT Near old manipal Hospital, Rajarajeshwari Nagar, Bengaluru-560098. have changed my name from **BASAVARAJ NAIKWADI** to **BASAVARAJ BHIMAPPA NAIKWADI** vide affidavit dated 30.05.2023 before notary R. Jyshree, Bengaluru.

I, H. Santhosh Kumar, H. Santhosh Kumar Shetty S/o. Mahabala Shetty, DOB: 16/12/1969, R/at. No. 8/4, 2nd Main, Hoysala Nagara, Sunkadakatte, Bangalore-560091 have changed my name to SANTHOSH SHETTY Affidavit dated 27/05/2023 N.Mahesha

JOB OPPORTUNITIES

Accounts & Finance

AUDITORS REQD experienced Accountants with complete knowledge of Tally, filing e-tds, GST and income tax returns, finalization of accounts, billing, collection etc. Send your CV with mobile number to bsbp1962@gmail.com

Manager

WANTED TEAM Leads for MNC. Upto 75k fixed pay + Incentives. IRDA licensed/ Financial services experience preferred. Call: 9845088345

Part-Time Jobs

RETIRED/ VRS Persons, Age Above 45 Years, Earn 50K-60K PM, Here No Retirement: 9886641282/ 7019215243

Wanted

WANTED COUNTER Sales Men/ Women Ready Made Blouse Shop in Chickpet, Bangalore CONTACT: 9448121073

Teachers/ Professors

WANTED TRAINED LADY TEACHERS to teach All Subjects in Lower Primary School and SANSKRIT in Primary and High School. Wanted Trained MALE PHYSICAL EDUCATION TEACHER for Primary and High School. Also required OFFICE ASSISTANT. Walk-in Interview on 02.06.2023, Friday between 1.00PM and 3.00PM at PRATHIBHA SHIKSHANA SAMITHI, #9, 18th Main, BSK II Stage, Bangalore-70. Ph: 080- 26710170/ 74833-77387

DH DECCAN HERALD | ಪ್ರಜಾವಾಣಿ
Classifieds
Education Special
For More Details Contact:
9731810277 | 9901641752
9845114560 | 9886213331
080- 45557163 | 45557164
Email : dhclassifieds@deccanherald.co.in
SPECIAL RATES FOR
Admission Notice
Education Success
Congratulation Ads
*conditions apply

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

'ಆಕ್ರಮಣಕಾರಿ ವರ್ತನೆ ಬಿಡಿ'

ಪ್ರಜಾವಾಣಿ ವಾರ್ತೆ

ಚೆನ್ನೈ: ಮೇಕೆದಾಟು ಯೋಜನೆಗೆ ಸಂಬಂಧಿಸಿ ಆಕ್ರಮಣಕಾರಿಯಾಗಿ ವರ್ತಿಸಬೇಡಿ ಎಂದು ಕರ್ನಾಟಕ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ತಮಿಳುನಾಡು ಸರ್ಕಾರ ಬುಧವಾರ ಹೇಳಿದೆ.

ಮೇಕೆದಾಟುವಿನಲ್ಲಿ ಕಾವೇರಿ ನದಿಗೆ ಅಣೆಕಟ್ಟು ನಿರ್ಮಿಸುವುದಾಗಿ ಡಿ.ಕೆ.ಶಿವಕುಮಾರ್ ನೀಡಿರುವ ಹೇಳಿಕೆಯನ್ನು ಖಂಡಿಸಿರುವ ಡಿಎಂಕೆ ನೇತೃತ್ವದ ಸರ್ಕಾರ, ಮೇಕೆದಾಟು ಯೋಜನೆಯನ್ನು ವಿರೋಧಿಸುವುದಾಗಿ ಪುನರುಚ್ಚರಿಸಿದೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ, ಡಿಎಂಕೆ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಜಲ ಸಂಪನ್ಮೂಲ ಸಚಿವ ದೊರೈ ಮುರುಗನ್, 'ಅಧಿಕಾರಕ್ಕೆ ಬಂದು ಕೆಲ ದಿನಗಳು ಕಳೆದಿವೆ. ಅಷ್ಟರಲ್ಲೇ, ನೆರೆಯ ರಾಜ್ಯದ ಬಗ್ಗೆ ಶಿವಕುಮಾರ್ ಅವರು ಆಕ್ರಮಣಕಾರಿಯಾಗಿ ವರ್ತಿಸುತ್ತಿರುವುದಕ್ಕೆ ಆಶ್ಚರ್ಯವಾಗಿದೆ. ಮೇಕೆದಾಟು ಯೋಜನೆ ಕುರಿತು ಅಧಿಕಾರಿಗಳು ಅವರಿಗೆ ವಿವರವಾದ ಮಾಹಿತಿ ನೀಡಿಲ್ಲ ಅನಿಸುತ್ತದೆ' ಎಂದಿದ್ದಾರೆ.

'ನಾನು ಶಿವಕುಮಾರ್ ಅವರನ್ನು ಭೇಟಿ ಮಾಡಿ, ಈ ವಿಷಯ ಕುರಿತು ವಿವರಿಸುತ್ತೇನೆ. ಅಲ್ಲಿಯವರೆಗೆ ಅವರು ತಾಳ್ಮೆಯಿಂದ ಇರುತ್ತಾರೆ ಎಂದು ಆಶಿಸುವೆ. 'ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಭಾರಿ ಗೆಲುವು ಸಾಧಿಸಿದ್ದಕ್ಕಾಗಿ ಕಾಂಗ್ರೆಸ್ ಪಕ್ಷಕ್ಕೆ ಹಾಗೂ ಶಿವಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸಲು ಅವರನ್ನು ಭೇಟಿಯಾಗಲು ಯೋಜಿಸಿದ್ದೆ. ಆದರೆ, ಈಗ ಈ ಹೇಳಿಕೆ ಮೂಲಕವೇ ಅವರಿಗೆ ಶುಭಾಶಯಗಳನ್ನು ಕೋರುತ್ತಿದ್ದೇನೆ' ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಪ್ರವಾಸಿಗನ ರಕ್ಷಣೆ

ಭಟ್ಕಳ: ಮುರುಡೇಶ್ವರಕ್ಕೆ ಪ್ರವಾಸಕ್ಕೆ ಬಂದಿದ್ದ ಪ್ರವಾಸಿಗ ಬೆಂಗಳೂರು ನಿವಾಸಿ ಉದಯ ಕುಮಾರ ಬುಧವಾರ ನೀರಿನಲ್ಲಿ ಮುಳುಗಿ ಕೊಚ್ಚಿಕೊಂಡು ಹೋಗುವಾಗ ಲೈಫ್‌ಗಾರ್ಡ್ ಸಿಬ್ಬಂದಿ ರಕ್ಷಣೆ ಮಾಡಿದ್ದಾರೆ. ಬೆಂಗಳೂರಿನಿಂದ ಪ್ರವಾಸಕ್ಕೆ ಬಂದಿದ್ದ ತಂಡದ ಸದಸ್ಯರು ಮಂಗಳವಾರ ಸಂಜೆ ನೀರಿನಲ್ಲಿ ಆಟವಾಡಲು ಸಮುದ್ರಕ್ಕೆ ಇಳಿದಾಗ ಈ ಅವಘಡ ಸಂಭವಿಸಿದೆ.

ಮತ್ತೆ 7 ಚೀತಾಗಳು ಕುನೊ ಉದ್ಯಾನಕ್ಕೆ

ನವದೆಹಲಿ (ಪಿಟಿಐ): ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಎರಡು ಹೆಣ್ಣು ಚೀತಾಗಳು ಸೇರಿ ಏಳು ಚೀತಾಗಳ ಎರಡನೇ ಬ್ಯಾಚನ್ನು ಜೂನ್ ಮೂರನೇ ವಾರದಲ್ಲಿ ತಂದು ಬಿಡಲಾಗುವುದು ಎಂದು ಚೀತಾ ಮರು ಪರಿಚಯ ಯೋಜನೆಯ ಮೇಲ್ವಿಚಾರಣೆಗೆ ನೇಮಿಸಲಾಗಿರುವ ಉನ್ನತ ಮಟ್ಟದ ಸಮಿತಿಯ ಮುಖ್ಯಸ್ಥರು ಬುಧವಾರ ತಿಳಿಸಿದರು.

ಪರಿಶಿಷ್ಟ ಜಾತಿ, ಪಂಗಡಗಳ ಭೂಪರಭಾರೆ ನಿಷೇಧ ಕಾಯ್ದೆ ಸಮಗ್ರ ತಿದ್ದುಪಡಿಗೆ ಆಗ್ರಹ

150 ದಿನ ಪೂರೈಸಿದ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂಪರಭಾರೆ ನಿಷೇಧ ಕಾಯ್ದೆ (ಪಿಟಿಸಿಎಲ್) ಸಮಗ್ರ ತಿದ್ದುಪಡಿಗೆ ಆಗ್ರಹಿಸಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸಂವಿಧಾನ ಸಂರಕ್ಷಣಾ ಮಹಾಒಕ್ಕೂಟದ ನೇತೃತ್ವದಲ್ಲಿ ನಡೆಯುತ್ತಿರುವ ಪ್ರತಿಭಟನೆ 150 ದಿನ ಪೂರೈಸಿದೆ.

ಬುಧವಾರ ಸಮಾವೇಶ ನಡೆಸಿದ ಪ್ರತಿಭಟನಕಾರರು ಕಾಯ್ದೆ ಸಮಗ್ರ ತಿದ್ದುಪಡಿಗೆ ಆಗ್ರಹಿಸಿದರು.

'1978ರ ಕಾಯ್ದೆ ಅಡಿ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಸಲ್ಲಿಸುವ ಅರ್ಜಿಗಳನ್ನು ಉಪ ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ ನ್ಯಾಯಾಲಯಗಳು ತಿರಸ್ಕರಿಸುತ್ತಿವೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರ ಭೂಮಿ ಪರರ ಪಾಲಾಗುತ್ತಿದ್ದು, ಇದನ್ನು ತಡೆಯುವ ನಿಟ್ಟಿನಲ್ಲಿ ಕಾಯ್ದೆಗೆ ತಿದ್ದುಪಡಿ ತರಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

'ಹಿಂದಿನ ಬಿಜೆಪಿ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರು ಬಜೆಟ್‌ನಲ್ಲೇ ಘೋಷಿಸಿ ಕಾರ್ಯರೂಪಕ್ಕೆ ತರಲಾಗುವುದು ಎಂದು ಭರವಸೆ ನೀಡಿದ್ದರು. ಕಂದಾಯ ಸಚಿವ ಆರ್. ಅಶೋಕ್ ಅವರೂ ತಿದ್ದಪಡಿಯ ಭರವಸೆ ನೀಡಿದ್ದರು. ದಲಿತರ ಭೂಮಿ ರಕ್ಷಿಸದೇ ನಮ್ಮನ್ನು ಬೀದಿಯಲ್ಲೇ ಬಿಟ್ಟರು' ಎಂದು ಅಳಲು ತೋಡಿಕೊಂಡರು.

ಚುನಾವಣೆಗೂ ಮೊದಲು ಪ್ರತಿಭಟನಾ ಸ್ಥಳಕ್ಕೆ ಬಂದಿದ್ದ ಕಾಂಗ್ರೆಸ್ ಮುಖಂಡರೂ ಅಧಿಕಾರಕ್ಕೆ ಬಂದರೆ ಪಿಟಿಸಿಎಲ್ ಕಾಯ್ದೆ ತಿದ್ದುಪಡಿ ಮಾಡುತ್ತೇವೆ ಎಂದು ಹೇಳಿದ್ದರು. ಚಿತ್ರದುರ್ಗದ ಎಸ್.ಸಿ, ಎಸ್.ಟಿ ಸಮಾವೇಶದಲ್ಲೂ ಘೋಷಣೆ ಮಾಡಿದ್ದರು. ಈಗ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಅದರಂತೆ ತಿದ್ದುಪಡಿ ಮಾಡಬೇಕು ಎಂದು ಆಗ್ರಹಿಸಿದರು.

ಕಂದಾಯ ಇಲಾಖೆ ಜಂಟಿ ಕಾರ್ಯದರ್ಶಿ ಕವಿತಾ ರಾಣಿ, ಉಪ ಕಾರ್ಯದರ್ಶಿ ಬಲರಾಮ್ ಅವರು ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿದರು.

ಪ್ರತಿಭಟನೆಯಲ್ಲಿ ಮಂಜುನಾಥ್, ಬಿ.ಎಂ.ವೆಂಕಟೇಶ್, ಚಿನ್ನಸ್ವಾಮಿ, ಹೆಣ್ಣೂರು ಶ್ರೀನಿವಾಸ್, ಬಸವರಾಜ್ ಕೌತಾಳ್, ಹೆಬ್ಬಾಳ್ ವೆಂಕಟೇಶ್, ವೆಂಕಟೇಶ್, ಬಸಪ್ಪ, ಕರಿಯಪ್ಪ ಗುಡಿಮನೆ, ದಾಸಪ್ಪ, ನಟರಾಜ್, ನಾಗಾರ್ಜುನ, ಗಂಗಮ್ಮ ಇದ್ದರು.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂಪರಭಾರೆ ನಿಷೇಧ ಕಾಯ್ದೆ (ಪಿಟಿಸಿಎಲ್) ಸಮಗ್ರ ತಿದ್ದುಪಡಿಗೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸಂವಿಧಾನ ಸಂರಕ್ಷಣಾ ಮಹಾಒಕ್ಕೂಟದ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ

ಹಲವೆಡೆ ಬಿರುಗಾಳಿ ಮಳೆ, ಹಾರಿ ಹೋದ ತಗಡಿನ ಶೀಟ್

ನೆಲಕಚ್ಚಿದ ಬಾಳೆ, ಮನೆಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಚಾಮರಾಜನಗರ, ಮಂಡ್ಯ, ದಕ್ಷಿಣ ಕನ್ನಡ, ಕಲಬುರಗಿ, ರಾಯಚೂರು ಜಿಲ್ಲೆಯಲ್ಲಿ ಬುಧವಾರ ಮಳೆಯಾಗಿದೆ.

ಚಾಮರಾಜನಗರ ಜಿಲ್ಲೆಯ ಹನೂರು ಪಟ್ಟಣದಲ್ಲಿ ಮಂಗಳವಾರ ರಾತ್ರಿ ಬಿರುಗಾಳಿ ಸಹಿತ ಮಳೆಗೆ ದೇವರಾಜ್ ನಾಯ್ಡು ಅವರ ಜಮೀನಿನಲ್ಲಿ ಬೆಳೆದಿದ್ದ 3 ಎಕರೆ ಪಚ್ಚಬಾಳೆ ನೆಲಕಚ್ಚಿದೆ. ಮಂಡ್ಯ ಜಿಲ್ಲೆಯ ಕಿರುಗಾವಲು ಹಾಗೂ ಕಸಬಾ ಹೋಬಳಿಯಲ್ಲಿ 30ಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಬಾಳೆ, ಟೊಮೆಟೊ, ಉದ್ದ ಬೀನ್ಸ್ ಫಸಲು ನಷ್ಟವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಭಾರಿ ಮಳೆ ಸುರಿಯಿತು. ಮಾಣಿ - ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕುಂಬ್ರ -ಕೌಡಿಚ್ಚಾರು ನಡುವಿನ ಶೇಖಮಲೆ ಸಮೀಪದ ಮಡ್ಯಂಗಳದಲ್ಲಿ ದೊಡ್ಡ ಮರ

ಮಳವಳ್ಳಿ ಪಟ್ಟಣದ ಸೋಡಮುದ್ದನಕೇರಿಯಲ್ಲಿ ಮಳೆಗೆ ಕುಸಿದು ಬಿದ್ದಿರುವ ಮನೆ.

ಹೆದ್ದಾರಿಗೆ ಅಡ್ಡವಾಗಿ ಉರುಳಿ ಬಿದ್ದಿದ್ದರಿಂದ ವಾಹನ ಸಂಚಾರ ಕೆಲ ಕಾಲ ಸ್ಥಗಿತಗೊಂಡಿತ್ತು.

ಬೆಳಗಾವಿ ತಾಲ್ಲೂಕು ಸೇರಿದಂತೆ ಜಿಲ್ಲೆಯ ಹಲವೆಡೆ ಉತ್ತಮ ಮಳೆ ಸುರಿಯಿತು. ಚಿಕ್ಕೋಡಿ ತಾಲ್ಲೂಕಿನ ಇಂಗಳಿ ಗ್ರಾಮ ಮತ್ತು ಸುತ್ತ ಮುತ್ತಲಿನ ಪರಿಸರದಲ್ಲಿ ಮಂಗಳವಾರ ರಾತ್ರಿ ಬೀಸಿದ ಬಾರಿ ಬಿರುಗಾಳಿ ಮತ್ತು ಆಲಿಕಲ್ಲು ಮಳೆಗೆ ಹತ್ತಾರು ಮನೆಗಳು ಮತ್ತು ಇಂಗಳಿ ಗ್ರಾಮದ ವಿವೇಕಾನಂದ ಪ್ರಾಥಮಿಕ ಶಾಲೆ ಚಾವಣಿಗಳು ಹಾರಿ ಹೋಗಿದ್ದು, ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ.

ಯಾದಗಿರಿ ತಾಲ್ಲೂಕಿನ ಯರಗೋಳ ಗ್ರಾಮದಲ್ಲಿ ಬಿರುಗಾಳಿ ಸಹಿತ ಬಿದ್ದ ಮಳೆಗೆ ಮರಗಳು ಉರುಳಿ ಬಿದ್ದು ಹಲವು ಕಡೆಗಳಲ್ಲಿ ರಸ್ತೆ ಸಂಪರ್ಕ ಕಡಿತವಾಯಿತು. ಮನೆ ಮೇಲಿನ ತಗಡಿನ ಶೀಟ್‌ಗಳು ಹಾರಿ ಹೋಗಿದ್ದು, ಅಲ್ಲಲ್ಲಿ ವಿದ್ಯುತ್ ಕಂಬಗಳು ನೆಲಕ್ಕುರುಳಿದವು.

ರಾಯಚೂರು ನಗರದಲ್ಲಿ ಮಳೆಯ ನೀರು ತಗ್ಗು ಪ್ರದೇಶಗಳಿಗೆ ನುಗ್ಗಿದೆ. ಕಲಬುರಗಿಯಲ್ಲಿ ನಸುಕಿನ ಜಾವ ಸಾಧಾರಣ ಮಳೆ ಆಯಿತು.

ಇಂದು ರಾಜ್ಯದ ಹಲವೆಡೆ ಭಾರಿ ಮಳೆ

ಬೆಂಗಳೂರು: ರಾಜ್ಯದ ವಿವಿಧೆಡೆ ಗುರುವಾರ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ತಿಳಿಸಿರುವ ಹವಾಮಾನ ಇಲಾಖೆ, ಏಳು ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಕೊಡಗು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಕೋಲಾರ ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ದಕ್ಷಿಣ ಒಳನಾಡಿನ ಹಲವು ಕಡೆ, ಕರಾವಳಿಯ ಕೆಲವು ಕಡೆ ಹಾಗೂ ಉತ್ತರ ಒಳನಾಡಿನ ಒಂದೆರಡು ಕಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಕರಾವಳಿ ಮತ್ತು ದಕ್ಷಿಣ ಒಳನಾಡಿನ ಒಂದೆರಡು ಕಡೆ ಬಿರುಗಾಳಿ ಸಹಿತ ಗುಡುಗು ಮಳೆಯಾಗುವ ಸಾಧ್ಯತೆಯಿದ್ದು, ಗಾಳಿಯ ವೇಗವು ಗಂಟೆಗೆ 40ರಿಂದ 50 ಕಿ.ಮೀ. ತಲುಪಬಹುದು. ಗರಿಷ್ಠ ಉಷ್ಣಾಂಶವು ಕರಾವಳಿಯ ಕೆಲವು ಕಡೆ ಸಾಮಾನ್ಯಕ್ಕಿಂತ ಮೂರು ಡಿಗ್ರಿ ಸೆಲ್ಸಿಯಸ್ ಮತ್ತು ಒಳನಾಡಿನ ಒಂದೆರಡು ಕಡೆ 2–3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗಬಹುದು ಎಂದು ತಿಳಿಸಿದೆ.

ಬುಧವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಯ ಅವಧಿಯಲ್ಲಿ ರಾಜ್ಯದ ಹಲವೆಡೆ ಮಳೆಯಾಗಿದೆ. ರಾಮನಗರ ಜಿಲ್ಲೆಯ ಮಾಗಡಿಯಲ್ಲಿ ಗರಿಷ್ಠ 8 ಸೆಂ.ಮೀ., ಬೆಂಗಳೂರು ನಗರದಲ್ಲಿ 7 ಸೆಂ.ಮೀ. ಮಳೆ ಸುರಿದಿದೆ. ಕಲಬುರಗಿಯಲ್ಲಿ ಗರಿಷ್ಠ (39.2 ಡಿಗ್ರಿ ಸೆಲ್ಸಿಯಸ್) ಉಷ್ಣಾಂಶ ದಾಖಲಾಗಿದೆ ಎಂದು ಇಲಾಖೆ ಹೇಳಿದೆ.

ಶಿಕ್ಷಕರ ವರ್ಗಾವಣೆ: ಎರಡು ದಿನಗಳಲ್ಲಿ ವೇಳಾಪಟ್ಟಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯನ್ನು ತಕ್ಷಣ ಆರಂಭಿಸಲು ಕ್ರಮ ಕೈಗೊಳ್ಳುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಅವರು ಇಲಾಖೆಯ ಆಯುಕ್ತರಿಗೆ ಸೂಚಿಸಿದ್ದು, ಎರಡು ದಿನಗಳಲ್ಲಿ ವರ್ಗಾವಣೆಯ ವೇಳಾಪಟ್ಟಿ ಬಿಡುಗಡೆ ಮಾಡಲು ಆಯುಕ್ತರ ಕಚೇರಿ ನಿರ್ಧರಿಸಿದೆ.

ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ–2020 ಜಾರಿಗೊಳಿಸಿ, ರಾಜ್ಯ ಸರ್ಕಾರ ಕಳೆದ ಡಿಸೆಂಬರ್‌ನಲ್ಲಿ ಅಧಿಸೂಚನೆ ಹೊರಡಿಸಿತ್ತು. ಹಲವು ವರ್ಷಗಳಿಂದ ಬಿಗಿಯಾದ ನೀತಿಗೆ ಒಳಪಟ್ಟಿದ್ದ ಶಿಕ್ಷಕರ ವರ್ಗಾವಣೆ ನಿಯಮಗಳು ಸರಳೀಕರಣಗೊಂಡಿದ್ದವು. ಶಿಕ್ಷಕಸ್ನೇಹಿ ವರ್ಗಾವಣೆ ಶಿಕ್ಷಕರ ವಲಯದಲ್ಲಿ ಸಂತಸ ಸೃಷ್ಟಿಸಿತ್ತು. ವರ್ಗಾವಣಾ ವೇಳಾಪಟ್ಟಿಯೂ ಬಿಡುಗಡೆಯಾಗಿತ್ತು. ಸುಮಾರು 80 ಸಾವಿರ ಶಿಕ್ಷಕರು ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿದ್ದರು.

> **ಶಿಕ್ಷಕರ ವರ್ಗಾವಣೆಗೆ ಸರ್ಕಾರ ಅನುಮತಿ ನೀಡಿದೆ. ಹೆಚ್ಚುವರಿ ಶಿಕ್ಷಕರ ಸ್ಥಳ ನಿಯುಕ್ತಿ ಸೇರಿದಂತೆ ವರ್ಗಾವಣೆಯ ವೇಳಾಪಟ್ಟಿ ಎರಡು ದಿನಗಳಲ್ಲಿ ಪ್ರಕಟಿಸಲಾಗುವುದು.**
> **ಬಿ.ಬಿ.ಕಾವೇರಿ,** ಪ್ರಭಾರ ಆಯುಕ್ತೆ. ಶಿಕ್ಷಣ ಇಲಾಖೆ

ಆದರೆ, ಮಕ್ಕಳು ಕಡಿಮೆ ಇರುವ ರಾಜ್ಯದ ಪ್ರೌಢ ಹಾಗೂ ಪ್ರಾಥಮಿಕ ಶಾಲೆಗಳಲ್ಲಿನ 10,500 ಶಿಕ್ಷಕರನ್ನು 'ಹೆಚ್ಚುವರಿ' ಎಂದು ಶಿಕ್ಷಣ ಇಲಾಖೆ ಪಟ್ಟಿ ಮಾಡಿತ್ತು. ಹೆಚ್ಚುವರಿ ಶಿಕ್ಷಕರ ಸ್ಥಳ ನಿಯೋಜನೆ ಗೊಂದಲ, ವಿಧಾನಸಭಾ ಚುನಾವಣೆಯಿಂದಾಗಿ ವರ್ಗಾವಣಾ ಪ್ರಕ್ರಿಯೆ ನನೆಗುದಿಗೆ ಬಿದ್ದಿತ್ತು.

ಹಿಂದೆ ಪರಸ್ಪರ ವರ್ಗಾವಣೆಗೆ ಒಂದು ಬಾರಿ ಮಾತ್ರ ಅವಕಾಶ ಇತ್ತು. ಇನ್ನು ಮುಂದೆ ಆ ನಿರ್ಬಂಧ ಇರುವುದಿಲ್ಲ. ಕೆಲಸಕ್ಕೆ ಸೇರಿದ ಮೊದಲ ಐದು ವರ್ಷ ಹಾಗೂ ನಿವೃತ್ತಿಗೆ ಮೊದಲಿನ ಐದು ವರ್ಷಗಳು ವರ್ಗಾವಣೆಗೆ ಅವಕಾಶ ಇರುವುದಿಲ್ಲ. ಒಮ್ಮೆ ವರ್ಗಾವಣೆಯಾದವರು ಮೂರು ವರ್ಷಗಳ ನಂತರ ಮತ್ತೆ ವರ್ಗಾವಣೆಗೆ ಕೋರಿಕೆ ಸಲ್ಲಿಸಲು ಅವಕಾಶವಿದೆ.

10ರಿಂದ 20 ವರ್ಷಗಳು ಕೆಲಸ ನಿರ್ವಹಿಸಿ ಪದೋನ್ನತಿ ಪಡೆದ ಶಿಕ್ಷಕರ ಕೋರಿಕೆಯಂತೆ ಸೇವಾ ಅಂಕಗಳನ್ನು ನೀಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ (ಸಿ ವಲಯ) ಸೇವೆ ಸಲ್ಲಿಸಿದವರಿಗೆ ಪ್ರತಿ ವರ್ಷಕ್ಕೆ 3 ಅಂಕಗಳು, ಅರೆನಗರದ (ಬಿ ವಲಯ) ಶಿಕ್ಷಕರಿಗೆ 2 ಅಂಕಗಳು ಹಾಗೂ ನಗರ ಪ್ರದೇಶಗಳ (ಎ ವಲಯ) ಶಿಕ್ಷಕರಿಗೆ ಒಂದು ಸೇವಾ ಅಂಕಗಳನ್ನು ನೀಡಲು ಸಮ್ಮತಿಸಲಾಗಿದೆ.

ಯಾವುದೇ ಒಂದು ಘಟಕ ಹಾಗೂ ವೃಂದದಲ್ಲಿ ಕನಿಷ್ಠ 10 ವರ್ಷ ಅಥವಾ ಎಲ್ಲ ವೃಂದಗಳೂ ಸೇರಿ 15 ವರ್ಷ ಕೆಲಸ ಮಾಡಿದ ಶಿಕ್ಷಕರನ್ನು ಶೇ 25ರಷ್ಟು ಮಿತಿಯ ಒಳಗೆ ಖಾಲಿ ಹುದ್ದೆಗಳಿರುವ ವಲಯಗಳಿಗೆ ವರ್ಗಾವಣೆ ಮಾಡಲು ಅವಕಾಶ ನೀಡಲಾಗಿದೆ. ಕಲ್ಯಾಣ ಕರ್ನಾಟಕದ 6 ಜಿಲ್ಲೆಗಳು (371 ಜೆ ಅನ್ವಯ), ಮಲೆನಾಡು ವಲಯ ಹಾಗೂ ನಂಜುಂಡಪ್ಪ ವರದಿಯ ಅನ್ವಯ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶ ಎಂದು ಗುರುತಿಸಲಾಗಿರುವ ತಾಲ್ಲೂಕುಗಳಿಗೆ ಹೋಗಬಯಸುವವರಿಗೆ ವಿಶೇಷ ಆದ್ಯತೆ ದೊರೆಯಲಿದೆ.

ಸ್ನೇಕ್ ನರೇಶ್ ಕುಮಾರ್ ಮನೆಯಲ್ಲಿ 79 ಹಾವು ಪತ್ತೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಸೆರೆ ಹಿಡಿದಿದ್ದ ಹಾವು ಕಚ್ಚಿ ಮೃತಪಟ್ಟ ಉರಗ ಪ್ರೇಮಿ ಸ್ನೇಕ್ ನರೇಶ್ ಕುಮಾರ್ ಮನೆಯಲ್ಲಿ 35 ಮರಿಗಳು ಸಹಿತ 79 ಹಾವುಗಳು ಪತ್ತೆಯಾಗಿವೆ.

ಸ್ನೇಕ್ ನರೇಶ್ ಕುಮಾರ್ ಅಂತ್ಯಕ್ರಿಯೆ ಬಳಿಕ ಕೆಲ ವನ್ಯಜೀವಿ ಪ್ರಿಯರು ಬಣಕಲ್‌ನ ಸ್ನೇಕ್ ಆರೀಫ್ ಎಂಬುವರೊಂದಿಗೆ ಸ್ನೇಕ್ ನರೇಶ್ ಕುಮಾರ್ ಮನೆಗೆ ತೆರಳಿದ್ದರು. ಮನೆಯಲ್ಲಿದ್ದ ಹಾವುಗಳನ್ನು ಕಾಡಿಗೆ ಬಿಡಲು ಕಾರು, ಬೈಕ್, ಮನೆ ಪರಿಶೀಲಿಸಿದಾಗ ನಾಗರಹಾವು, ಕೊಳಕುಮಂಡಲ ಸಹಿತ ವಿವಿಧ ಜಾತಿಯ ಹಾವು, ಮರಿಗಳು ಪತ್ತೆಯಾಗಿವೆ.

ಪೊಲೀಸ್, ಅರಣ್ಯ ಇಲಾಖೆ ಸಿಬ್ಬಂದಿ ನರೇಶ್ ಮನೆ ತಪಾಸಣೆ ಮಾಡಿದಾಗ ಕಾರು, ಬ್ಯಾರಲ್‌ಗಳಲ್ಲೂ ಹಾವುಗಳು ಕಂಡು ಬಂದವು. ಬ್ಯಾರಲ್‌ವೊಂದರಲ್ಲಿ ಇಟ್ಟಿದ್ದ ಹಾವು 35 ಮರಿಗಳನ್ನು ಹಾಕಿತ್ತು.

'ಸ್ನೇಕ್ ನರೇಶ್ ಕುಮಾರ್ ಅವರ ಮನೆಯಲ್ಲಿ 35 ಮರಿಗಳು ಸಹಿತ ಒಟ್ಟು 79 ಹಾವುಗಳು ಪತ್ತೆಯಾಗಿವೆ. ಕೊಳಕು ಮಂಡಲ, ಕೆರೆ

ಚಿಕ್ಕಮಗಳೂರಿನ ಸ್ನೇಕ್ ನರೇಶ್ ಮನೆ ತಪಾಸಣೆ ವೇಳೆ ಕಂಡು ಬಂದ ಹಾವಿನ ಮರಿಗಳು

ಹಾವು, ನಾಗರಹಾವುಗಳು ಸಿಕ್ಕಿವೆ' ಎಂದು ಡಿಎಫ್‌ಒ ಎನ್.ಇ.ಕ್ರಾಂತಿ 'ಪ್ರಜಾವಾಣಿ'ಗೆ ತಿಳಿಸಿದರು.

'ಹಾವುಗಳನ್ನು ಮನೆಯಲ್ಲಿ ಏಕೆ ಇಟ್ಟುಕೊಂಡಿದ್ದರು ಎಂಬ ಬಗ್ಗೆ ತನಿಖೆ ಆರಂಭಿಸಿದ್ದೇವೆ. ಅವರ ಮೊಬೈಲ್ ಫೋನ್ ಮತ್ತು ಕಂಪ್ಯೂಟರ್ ವಶಕ್ಕೆ ಪಡೆಯಲಾಗಿದೆ. ಫೋನ್ ಕರೆಗಳ ಮಾಹಿತಿಯನ್ನು ಕಲೆ ಹಾಕಲಾಗುತ್ತಿದೆ' ಎಂದು ಅವರು ತಿಳಿಸಿದರು.

ಬೈಕ್‌ನ ಬಾಕ್ಸ್‌ನೊಳಗಿನ ಚೀಲದಲ್ಲಿ ಇಟ್ಟಿದ್ದ ಹಾವು ಕಚ್ಚಿ ನರೇಶ್ ಕುಮಾರ್ ಅವರು ಮಂಗಳವಾರ ಸಾವಿಗೀಡಾಗಿದ್ದರು.

ನಟನ: ರಂಗಭೂಮಿ ಡಿಪ್ಲೊಮಾ ಕೋರ್ಸ್

ಮೈಸೂರು: ನಟನ ರಂಗಶಾಲೆಯು ಒಂದು ವರ್ಷದ ಅವಧಿಯ ಅಭಿನಯ ಮತ್ತು ರಂಗ ತರಬೇತಿ ನೀಡುತ್ತಿದ್ದು, 'ರಂಗಭೂಮಿ ಡಿಪ್ಲೊಮಾ' ಕೋರ್ಸ್‌ಗೆ ಸೇರಲು 16ರಿಂದ 30 ವರ್ಷ ವಯೋಮಿತಿಯ ಆಸಕ್ತರು ಅರ್ಜಿ ಸಲ್ಲಿಸಬಹುದು.

ಪ್ರತಿದಿನ ಸಂಜೆ 5.30ರಿಂದ ರಾತ್ರಿ 9ರವರೆಗೆ ತರಗತಿಗಳು ನಡೆಯಲಿವೆ. ಅರ್ಜಿ ಸಲ್ಲಿಸಿದವರಿಗೆ ರಂಗಶಾಲೆಯಲ್ಲಿ ಜೂನ್ 11ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ನೇರ ಸಂದರ್ಶನ ಮತ್ತು ಆಯ್ಕೆ ಪ್ರಕ್ರಿಯೆ ನಡೆಯಲಿದೆ.

ಆಸಕ್ತರು ಕಚೇರಿ ಅಥವಾ ವೆಬ್‌ಸೈಟ್ www.natanamysuru.org ಮೂಲಕ ಅರ್ಜಿ ಪಡೆದು, ನಿಗದಿತ ಶುಲ್ಕದೊಂದಿಗೆ ನೇರ ಅಥವಾ ಅಂಚೆ ಮೂಲಕ ಸಲ್ಲಿಸಬಹುದು. ಮಾಹಿತಿಗೆ; 72595 37777, 94804 68327

5 ಟಿಎಂಸಿ ಅಡಿ ನೀರು ಬಿಡುಗಡೆಗೆ ಸಿ.ಎಂ ಪತ್ರ

ಬೆಳಗಾವಿ: ಬೆಳಗಾವಿ, ಕಲಬುರಗಿ ಸೇರಿದಂತೆ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗುವ ಸಾಧ್ಯತೆಯಿದೆ. ಹಾಗಾಗಿ ಜನರು ಮತ್ತು ಜಾನುವಾರುಗಳಿಗೆ ಅನುಕೂಲವಾಗುವಂತೆ ಕೃಷ್ಣಾ ಹಾಗೂ ಭೀಮಾ ನದಿಗಳಿಗೆ 5 ಟಿಎಂಸಿ ಅಡಿ ನೀರು ಬಿಡುಗಡೆಗೊಳಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂದೆ ಅವರಿಗೆ ಬುಧವಾರ ಪತ್ರ ಬರೆದಿದ್ದಾರೆ.

ಕೃಷ್ಣಾ ಹಾಗೂ ಭೀಮಾ ನದಿಗಳಿಗೆ ತಲಾ 3 ಟಿಎಂಸಿ ಅಡಿ ನೀರು ಬಿಡುಗಡೆ ಮಾಡುವಂತೆ ಈ ಮುಂಚೆ ಪತ್ರ ಬರೆಯಲಾಗಿತ್ತು. ಅದಕ್ಕೆ ಸ್ಪಂದಿಸಿ ಮೇ ತಿಂಗಳ ಮೊದಲ ಪಾಕ್ಷಿಕ ಅವಧಿಯಲ್ಲಿ ಕೃಷ್ಣಾ ನದಿಗೆ 1 ಟಿಎಂಸಿ ಅಡಿ ನೀರು ಬಿಡುಗಡೆ ಮಾಡಲಾಗಿತ್ತು. ಈಗ ಉತ್ತರ ಕರ್ನಾಟಕದಲ್ಲಿ ಬೇಸಿಗೆ ತೀವ್ರವಾಗಿದೆ. ಹಾಗಾಗಿ ಇನ್ನೂ 5 ಟಿಎಂಸಿ ಅಡಿ ನೀರು ಬಿಡುಗಡೆಗೊಳಿಸಬೇಕು ಎಂದು ಕೋರಿದ್ದಾರೆ.

ಮಹಾರಾಷ್ಟ್ರದ ವಾರಣಾ/ಕೊಯ್ನಾ ಜಲಾಶಯಗಳಿಂದ 2 ಟಿಎಂಸಿ ಅಡಿ ನೀರನ್ನು ಕೃಷ್ಣಾ ನದಿಗೆ ಬಿಡುಗಡೆಗೊಳಿಸಬೇಕು. ಅದೇ ರೀತಿ ಉಜ್ಜನಿ ಜಲಾಶಯದಿಂದ ಭೀಮಾ ನದಿಗೆ 3 ಟಿಎಂಸಿ ಅಡಿ ನೀರು ಬಿಡುಗಡೆಗೊಳಿಸಲು ಸಂಬಂಧಿತರಿಗೆ ಸೂಚನೆ ನೀಡಬೇಕು ಎಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

'ಶವಸಂಭೋಗ ಅಪರಾಧ' ಘೋಷಣೆಗೆ ಶಿಫಾರಸು

ಒಂದನೇ ಪುಟದಿಂದ...

ಐಪಿಸಿಯ ಕಲಂ 377ರ ಅಡಿಯಲ್ಲಿ ಜೀವಂತ ಪುರುಷ, ಮಹಿಳೆ ಅಥವಾ ಪ್ರಾಣಿಗಳ ಜೊತೆಗೆ ಅಸ್ವಾಭಾವಿಕ ಲೈಂಗಿಕ ಕ್ರಿಯೆ ನಡೆಸಿದರೆ, ಗರಿಷ್ಠ 10 ವರ್ಷ ಜೈಲು ಶಿಕ್ಷೆ ವಿಧಿಸಲು ಅವಕಾಶ ವಿದೆ. ಆದ್ದರಿಂದ, ಈ ಕಲಂಗೆ ತಿದ್ದುಪಡಿ ತಂದು ಪುರುಷ, ಮಹಿಳೆ ಅಥವಾ ಪ್ರಾಣಿಗಳ ಮೃತದೇಹ ಎಂದು ಸೇರಿಸುವುದಕ್ಕೆ ಇದು ಸಕಾಲವಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಕೆನಡಾ, ಇಂಗ್ಲೆಂಡ್, ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ ಸೇರಿದಂತೆ ಹಲವು ದೇಶಗಳಲ್ಲಿ ಮಹಿಳೆಯರ ಮೃತದೇಹದ ಜೊತೆ ಎಸಗುವ ಅಪರಾಧ ಶಿಕ್ಷಾರ್ಹ ಎನಿಸಿದೆ. ಇಂತಹ ನಿಯಮಗಳನ್ನು ಭಾರತದಲ್ಲಿಯೂ ಪರಿಚಯಿಸಬೇಕಿದೆ. ಇದರಿಂದ ಮೃತದೇಹದ ಘನತೆಯನ್ನು ರಕ್ಷಣೆ ಮಾಡಿದಂತಾಗುತ್ತದೆ. ಆದ್ದರಿಂದ, ಕೇಂದ್ರ ಸರ್ಕಾರವು ಈ ದಿಸೆಯಲ್ಲಿ ಆರು ತಿಂಗಳ ಒಳಗಾಗಿ ಅಗತ್ಯ ಕ್ರಮ ಜರುಗಿಸಬೇಕು' ಎಂದು ನ್ಯಾಯಪೀಠ ಶಿಫಾರಸಿನಲ್ಲಿ ತಿಳಿಸಿದೆ.

'ತೀರ್ಪಿನ ಪ್ರತಿಯನ್ನು ಕೇಂದ್ರ ಗೃಹ ಸಚಿವಾಲಯ, ಕಾನೂನು, ನ್ಯಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ರವಾನಿಸಬೇಕು' ಎಂದು ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಅವರಿಗೆ ನಿರ್ದೇಶಿಸಿದೆ.

ಪ್ರಕರಣವೇನು?: ಗುಳಿಗೇನಹಳ್ಳಿಯ 21 ವರ್ಷದ ಯುವತಿಯನ್ನು ಅದೇ ಗ್ರಾಮದ ರಂಗರಾಜು 2015ರ ಜೂನ್ 25ರಂದು ಕತ್ತು ಸೀಳಿ ಕೊಲೆ ಮಾಡಿ ನಂತರ ಸಂತ್ರಸ್ತೆಯ ಮೃತದೇಹದ ಜೊತೆಗೆ ಸಂಭೋಗ ನಡೆಸಿದ ಆರೋಪಕ್ಕೆ ಒಳಗಾಗಿದ್ದ. ಸಂತ್ರಸ್ತೆಯ ಅಣ್ಣ ನೀಡಿದ ದೂರನ್ನು ಪರಿಗಣಿಸಿ ಘಟನೆ ನಡೆದ ಏಳು ದಿನಗಳ ಬಳಿಕ ಪೊಲೀಸರು ರಂಗರಾಜುನನ್ನು ಬಂಧಿಸಿದ್ದರು. ತನಿಖೆ ನಂತರ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ವಿಚಾರಣಾ ನಡೆಸಿದ್ದ ತುಮಕೂರು ಜಿಲ್ಲಾ ಪ್ರಧಾನ ಸೆಷನ್ಸ್ ನ್ಯಾಯಾಲಯ 2017ರ ಆಗಸ್ಟ್ 9ರಂದು ಶಿಕ್ಷೆ ವಿಧಿಸಿ ಆದೇಶಿಸಿತ್ತು. ಕೊಲೆ ಆರೋಪಕ್ಕೆ ಜೀವಾವಧಿ ಮತ್ತು ₹ 50 ಸಾವಿರ ದಂಡ, ಅತ್ಯಾಚಾರ ಆರೋಪಕ್ಕೆ 10 ವರ್ಷಗಳ ಜೈಲು ಶಿಕ್ಷೆ ಮತ್ತು ₹ 25 ಸಾವಿರ ದಂಡ ವಿಧಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ರಂಗರಾಜು ಹೈಕೋರ್ಟ್ ಮೆಟ್ಟಿಲೇರಿದ್ದ. ರಂಗರಾಜು ಪರ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ವಾದ ಮಂಡಿಸಿದ್ದರು.

ಶಿಫಾರಸಿನಲ್ಲಿ ಏನಿದೆ?

- ಆಸ್ಪತ್ರೆಯ ಶವಾಗಾರಗಳಲ್ಲಿ ಮಹಿಳೆಯರ ಅದರಲ್ಲೂ ವಿಶೇಷವಾಗಿ ವಯಸ್ಸಿಗೆ ಬಂದ ಹೆಣ್ಣುಮಕ್ಕಳ ಶವ ಇದ್ದರೆ, ಅವುಗಳ ಜೊತೆಗೆ ಅಲ್ಲಿನ ಸಿಬ್ಬಂದಿ ಅತ್ಯಾಚಾರ ನಡೆಸುತ್ತಾರೆ ಎಂಬ ಮಾಹಿತಿ ಕೋರ್ಟ್ ಗಮನಕ್ಕೆ ಬಂದಿದೆ. ಇಂತಹ ಪರಪೀಡನಾ ರತಿಕ್ರಿಯೆ (ಸ್ಯಾಡಿಸಂ) ಮತ್ತು ಶವಗಳ ಜೊತೆಗಿನ ಲೈಂಗಿಕ ಕ್ರಿಯೆಗಳನ್ನು (ನೆಕ್ರೊಫೀಲಿಯಾ) ಗಂಭೀರವಾಗಿ ಪರಿಗಣಿಸಬೇಕಿದೆ. ಹಾಗಾಗಿ, ಮಹಿಳೆಯರ ಮೃತದೇಹದ ಜೊತೆಗೆ ನಡೆಯುವ ಅಪರಾಧಗಳನ್ನು ತಡೆಯುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ಶವಾಗಾರಗಳಲ್ಲಿ ಆರು ತಿಂಗಳ ಒಳಗಾಗಿ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು. ಶವಾಗಾರಗಳಲ್ಲಿ ಶುಚಿತ್ವ ಕಾಪಾಡಬೇಕು.
- ಎಚ್‌ಐವಿಯಿಂದ ಮೃತಪಟ್ಟ ಮತ್ತು ಆತ್ಮಹತ್ಯೆ ಪ್ರಕರಣಗಳ ಮಾಹಿತಿಯನ್ನು ಗೋಪ್ಯವಾಗಿ ಹಾಗೂ ಭದ್ರವಾಗಿ ಇರಿಸಬೇಕು.
- ಶವಪರೀಕ್ಷೆ ನಡೆಸುವ ಕೋಣೆಗಳು ಸಾರ್ವಜನಿಕರ ನೇರ ದೃಷ್ಟಿಗೆ ಬೀಳುವಂತಿರಬಾರದು. ಶವಪರೀಕ್ಷಾ ಕೇಂದ್ರಗಳನ್ನು ನಿಷೇಧಿತ ಪ್ರದೇಶ ಎಂದು ನಿರ್ವಹಣೆ ಮಾಡಬೇಕು.
- ಭಾರತೀಯ ಸಾರ್ವಜನಿಕ ಪ್ರಮಾಣೀಕೃತ ಮಾನದಂಡಗಳ (ಐಎಸ್‌ಐ) ಪ್ರಕಾರ ಶವ ನಿರ್ವಹಣೆಗೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಒದಗಿಸಬೇಕು.

ಹಣಕಾಸು ಇಲಾಖೆಗೆ ಅತೀಕ್ ವರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಅವರನ್ನು ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿರುವ ಐ.ಎಸ್.ಎನ್. ಪ್ರಸಾದ್ ಅವರು ಜೂನ್ 30ರಂದು ನಿವೃತ್ತರಾಗಲಿದ್ದು, ಅದೇ ದಿನ ಅತೀಕ್ ಅವರು ಹೊಸ ಹುದ್ದೆಯನ್ನು ವಹಿಸಿಕೊಳ್ಳಲಿದ್ದಾರೆ.

2013–18ರ ಅವಧಿಯಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಅತೀಕ್ ಅವರು ಮುಖ್ಯಮಂತ್ರಿ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು. ಈಗ ಆರ್ಥಿಕ ಇಲಾಖೆಯಲ್ಲಿ ವಿಶೇಷ ಕರ್ತವ್ಯಾಧಿಕಾರಿ ಹುದ್ದೆಯನ್ನು ಸೃಷ್ಟಿಸಿ, ಬುಧವಾರದಿಂದ (ಮೇ 31) ಅನ್ವಯವಾಗುವಂತೆ ಅತೀಕ್‌ಅವರಿಗೆ ಹೆಚ್ಚುವರಿ ಹೊಣೆ ನೀಡಲಾಗಿದೆ.

ಚಿಕ್ಕಬಾಣಾವರ ಕೆರೆಯ ದುರ್ವಾಸನೆಯಿಂದ ನಾಗರಿಕರಿಗೆ ಸಂಕಷ್ಟ; ಕೊಳಕು ನೀರು ಹೊರಕ್ಕೆ

ಕೆರೆ ಕಲ್ಮಶ ತೆರವಿಗೆ ಕೊನೆಗೂ ನಿರ್ಧಾರ

• ಆರ್. ಮಂಜುನಾಥ್

ಬೆಂಗಳೂರು: ನೂರು ಎಕರೆಗೂ ಹೆಚ್ಚು ಪ್ರದೇಶದಲ್ಲಿ ಹಲವು ವರ್ಷಗಳಿಂದ ಕಲ್ಮಶದ ತಾಣವಾಗಿರುವ ಚಿಕ್ಕಬಾಣಾವರ ಕೆರೆಯನ್ನು ದುರ್ವಾಸನೆಯಿಂದ ಮುಕ್ತಗೊಳಿಸುವ ಕಾಮಗಾರಿ ಆರಂಭಿಸಲು ಪುರಸಭೆ ಮುಂದಾಗಿದೆ. ಕೊಳಕು ನೀರನ್ನು ಹೊರಹಾಕುವ ಮೂಲಕ ತಾತ್ಕಾಲಿಕ ಪರಿಹಾರ ಕಲ್ಪಿಸಲು ನಿರ್ಧರಿಸಿದೆ.

ಎಸ್. ಮುನಿರಾಜು

ಕಲ್ಮಶ, ತ್ಯಾಜ್ಯ, ಒಳಚರಂಡಿ ನೀರು ಸೇರಿದಂತೆ ಎಲ್ಲ ರೀತಿಯ ಮಾಲಿನ್ಯದಿಂದ ಕೂಡಿರುವ ಈ ಕೆರೆಯಿಂದ ಹೊರಬರುವ ದುರ್ವಾಸನೆಯಿಂದ ಸ್ಥಳೀಯ ನಿವಾಸಿಗಳು ಉಸಿರಾಡಲೂ ಕಷ್ಟಪಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಇದನ್ನು ಪರಿಹರಿಸುವಂತೆ ಐದಾರು ವರ್ಷಗಳಿಂದ ನಾಗರಿಕರು ಆಗ್ರಹಿಸುತ್ತಿದ್ದರೂ ಕೆರೆ ಶುಚಿಗೊಳಿಸುವ ಕೆಲಸ ಆಗಿರಲಿಲ್ಲ.

ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿರುವ ಚಿಕ್ಕಬಾಣಾವರ ಕೆರೆಯನ್ನು ಅಭಿವೃದ್ಧಿಪಡಿಸುವ ಹೊಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಲಾಗಿತ್ತು. ಕೆರೆಗೆ ಸಂಬಂಧಿಸಿದ ಒಂದು ಫಲಕ ಹಾಗೂ ಒಂದಷ್ಟು ಬೇಲಿ ಹಾಕಿದ್ದು ಬಿಟ್ಟರೆ ಬಿಡಿಎ ಯಾವ ಕೆಲಸವನ್ನೂ ಮಾಡಿಲ್ಲ. ಕೆರೆ ದೊಡ್ಡದಾಗಿರುವುದರಿಂದ ಹೆಚ್ಚು ವೆಚ್ಚ ಮಾಡಲು ಮುಂದಾಗಿರಲಿಲ್ಲ.

ಕಲ್ಮಶ ತುಂಬಿಕೊಂಡಿರುವ ಚಿಕ್ಕಬಾಣಾವರ ಕೆರೆ

ಹಂತ ಹಂತವಾಗಿ ಅಭಿವೃದ್ಧಿ...

ಪ್ರಜಾವಾಣಿ ವಿಶೇಷ

ಚಿಕ್ಕಬಾಣಾವರ ಕೆರೆಯ ಸಮಗ್ರ ಅಭಿವೃದ್ಧಿಗೆ ಸಾಕಷ್ಟು ಹಣ ಬೇಕಾಗುತ್ತದೆ. ಆದರೆ, ಪುರಸಭೆಯಲ್ಲಿ ಅಷ್ಟೊಂದು ಹಣ ಇಲ್ಲ. ಹೆಚ್ಚಿನ ಅನುದಾನಕ್ಕಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೇವೆ. ಅನುದಾನದ ಲಭ್ಯತೆ ಮೇರೆಗೆ ಹಂತಹಂತವಾಗಿ ಕೆರೆಯನ್ನು ಅಭಿವೃದ್ಧಿ ಮಾಡಲಾಗುತ್ತದೆ. ಕೆರೆ ತುಂಬಾ ಕಲ್ಮಶಗೊಂಡಿದ್ದು, ಸ್ಥಳೀಯರು ವಾಸಿಸಲು ಸಾಧ್ಯವಾಗದಷ್ಟು ದುರ್ವಾಸನೆ ಉಂಟಾಗಿದೆ. ಹೀಗಾಗಿ, ಪುರಸಭೆ ಮೀಸಲಿಟ್ಟಿರುವ ₹1 ಕೋಟಿ ಮೊತ್ತದಲ್ಲಿ ಮೊದಲ ಹಂತದಲ್ಲಿ ಕೊಳಚೆ ನೀರನ್ನು ಹೊರಗೆ ಹಾಕಿ, ಮತ್ತೆ ಒಳಚರಂಡಿ ನೀರು ಕೆರೆಗೆ ಹರಿಯದಂತೆ ಮಾಡುತ್ತೇವೆ. ಒತ್ತುವರಿಯನ್ನೂ ತೆರವು ಮಾಡಲಾಗುತ್ತದೆ ಎಂದು ಚಿಕ್ಕಬಾಣಾವರ ಪುರಸಭೆ ಮುಖ್ಯ ಅಧಿಕಾರಿ ಎಚ್.ಎ. ಕುಮಾರ್ ತಿಳಿಸಿದರು.

ಚಿಕ್ಕಬಾಣಾವರ, ದಾಸಪ್ಪನಪಾಳ್ಯ, ಗಾಣಿಗರಹಳ್ಳಿ, ಸೋಮಶೆಟ್ಟಿಹಳ್ಳಿ, ಕೆರೆಗುಡ್ಡದ ಹಳ್ಳಿ ಸೇರಿದಂತೆ ಹೊಸದಾಗಿ ನಿರ್ಮಾಣವಾಗಿರುವ ಹತ್ತಾರು ಬಡಾವಣೆಗಳ ಜನರಿಗೆ ಕೆರೆಯಿಂದ ದುರ್ವಾಸನೆ ಬರುತ್ತಿದ್ದು, ಸೊಳ್ಳೆ ಹಾಗೂ ಕ್ರಿಮಿಕೀಟಗಳ ಕಾಟವೂ ಹೆಚ್ಚಾಗಿದೆ.

'ಚಿಕ್ಕಬಾಣಾವರ ಕೆರೆಯಲ್ಲಿ ಕಲ್ಮಶ, ಒಳಚರಂಡಿ ನೀರು ಸೇರಿದಂತೆ ಕಸವೂ ಸೇರಿಕೊಂಡು ಅತ್ಯಂತ ದುರ್ವಾಸನೆಯುಕ್ತ ಕೊಳಕುತಾಣವಾಗಿದೆ. ಇದನ್ನು ಸ್ವಚ್ಛಗೊಳಿಸಿ ಎಂದು ಸಾಕಷ್ಟು ಬಾರಿ ಮನವಿ ಮಾಡಿಕೊಂಡಿದ್ದೇವೆ. ಆದರೆ, ಪುರಸಭೆಯವರು, ಜನಪ್ರತಿನಿಧಿಗಳು ಇತ್ತ ಗಮನಹರಿಸಿಲ್ಲ. ನಮ್ಮ ಬದುಕು ಇಲ್ಲಿ ಯಾತನದಾಯಕವಾಗಿದೆ' ಎಂದು ಕೆರೆಗುಡ್ಡದಹಳ್ಳಿಯ ರಾಮಣ್ಣ ಹೇಳಿದರು.

'ಕಂದಾಯ ಬಡಾವಣೆಗಳು ಸೇರಿದಂತೆ ಹಲವು ಪ್ರದೇಶಗಳಿಂದ ಒಳಚರಂಡಿ ನೀರು ಹರಿದುಬರುತ್ತಿದೆ. ಇದರ ಮೂಲ ಹುಡುಕುವುದು ಕಷ್ಟವಾಗಿದ್ದು, ಕಲ್ಮಶ ನೀರನ್ನು ಹೊರಹಾಕಿ ಮತ್ತೆ ಹರಿಯದಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಬಿಡಬ್ಲ್ಯುಎಸ್‌ಎಸ್‌ಬಿ ವತಿಯಿಂದ ಒಳಚರಂಡಿ ಕಾಮಗಾರಿ ನಡೆಯುತ್ತಿದ್ದು, ಅದು ಕೆರೆಗೆ ಬರದಂತೆ ಮಾರ್ಗ ಬದಲಿಸಲಾಗುತ್ತಿದೆ' ಎಂದು ದಾಸರಹಳ್ಳಿ ವಿಧಾನಸಭೆ ಕ್ಷೇತ್ರದ ಶಾಸಕ ಎಸ್. ಮುನಿರಾಜು ತಿಳಿಸಿದರು.

'ಸ್ಥಳೀಯರಿಗೆ ಸಾಕಷ್ಟು ಸಮಸ್ಯೆ ಉಂಟಾಗಿರುವುದರಿಂದ ತಕ್ಷಣದಲ್ಲಿ ಕಾಮಗಾರಿ ಆರಂಭಿಸಲಾಗುತ್ತಿದೆ. ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆಆರ್‌ಐಡಿಎಲ್) ವತಿಯಿಂದ ಕೆಲಸ ಸದ್ಯದಲ್ಲಿಯೇ ಆರಂಭವಾಗಲಿದೆ' ಎಂದು ಹೇಳಿದರು.

ಸಿಎಸ್‌ಆರ್ ಅನುದಾನಕ್ಕಾಗಿ ಮನವಿ

ಚಿಕ್ಕಬಾಣಾವರ ಕೆರೆ ನೂರು ಎಕರೆಗೂ ಹೆಚ್ಚು ವಿಸ್ತೀರ್ಣದಲ್ಲಿರುವುದರಿಂದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಹಣಕಾಸಿನ ಅಗತ್ಯವಿದೆ. ಕೆರೆಯ ಕಲ್ಮಶದಿಂದ ಜನರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಕೊಳಕು ನೀರು ಹೊರ ಹಾಕಿದ ನಂತರ, ಸಂಸದ ಸದಾನಂದಗೌಡ ಹಾಗೂ ಶಾಸಕರ ಅಭಿವೃದ್ಧಿ ನಿಧಿಯಿಂದ ತಲಾ ₹50 ಲಕ್ಷ ನೀಡಿ ಕಾಮಗಾರಿ ಕೈಗೊಳ್ಳಲಾಗುವುದು. ಜತೆಗೆ ಸಿಎಸ್‌ಆರ್ ನಿಧಿಯಡಿ ಒಂದೆರಡು ಸಂಸ್ಥೆಗಳಿಂದ ಹಣ ಪಡೆದು ಸಮಗ್ರ ಅಭಿವೃದ್ಧಿ ಕಾಮಗಾರಿ ಮಾಡಲು ಯೋಚಿಸಲಾಗಿದೆ ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಕೆರೆ ವ್ಯಾಪ್ತಿ

ಸರ್ವೆ ನಂ	ವಿಸ್ತೀರ್ಣ	ಒತ್ತುವರಿ
ಚಿಕ್ಕಬಾಣಾವರ-3	67ಎ38ಗು	39ಗು
ಕೆರೆಗುಡ್ಡದಹಳ್ಳಿ-22	26ಎ32ಗು	2ಎ6ಗು
ಸೋಮಶೆಟ್ಟಿಹಳ್ಳಿ-73	3ಎ21ಗು	4ಗು
ಗಾಣಿಗರಹಳ್ಳಿ-11	4ಎ14ಗು	7ಗು
ಗಾಣಿಗರಹಳ್ಳಿ-15	2ಎ30ಗು	9ಗು
ಒಟ್ಟು	105 ಎಕರೆ 15 ಗುಂಟೆ	3ಎಕರೆ 25ಗುಂಟೆ



ಚಿಕ್ಕಬಾಣಾವರ ಕೆರೆಯ ಒತ್ತುವರಿ (ಕೆಂಪು ಬಣ್ಣದಲ್ಲಿರುವುದು)

ಸುದ್ದಿ 2 ನಿಮಿಷ

ಜೂನ್ 30 ರವರೆಗೆ ಬಿಜೆಪಿ ಮಹಾ ಸಂಪರ್ಕ ಅಭಿಯಾನ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ 9 ವರ್ಷಗಳ ಆಡಳಿತ ಮತ್ತು ಸಾಧನೆಗಳ ಕುರಿತು ಜನರಿಗೆ ವಿವರಿಸಲು ಜೂನ್ 30ರವರೆಗೆ ಮಹಾ ಸಂಪರ್ಕ ಅಭಿಯಾನ ಹಮ್ಮಿಕೊಳ್ಳಲಾಗುವುದು ಎಂದು ಕೇಂದ್ರ ಸಚಿವ ಭಗವಂತ ಖೂಬಾ ತಿಳಿಸಿದರು.

ಈ ಸಂಬಂಧ ಪಕ್ಷದ ಕಚೇರಿಯಲ್ಲಿ ಬುಧವಾರ ರಾಜ್ಯದ ಆಯ್ದ ಲೋಕಸಭಾ ಸದಸ್ಯರ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ರಾಜ್ಯದ ಎಲ್ಲ ಲೋಕಸಭಾ ಕ್ಷೇತ್ರಗಳಲ್ಲಿ 9 ವರ್ಷಗಳಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳು, ಮೂಲಭೂತ ಸೌಕರ್ಯ ಯೋಜನೆಗಳ ಜಾರಿ, ಸಾಮಾಜಿಕ ಸುರಕ್ಷತಾ ಯೋಜನೆಗಳ ಜಾರಿ ವಿಷಯವನ್ನು ಮನೆ ಮನೆಗೆ ತಲುಪಿಸಲು ಮಹಾ ಸಂಪರ್ಕ ಅಭಿಯಾನ ಕೈಗೆತ್ತಿಕೊಳ್ಳಲಾಗಿದೆ ಎಂದರು.

ಅಭಿಯಾನದ ಸಂದರ್ಭದಲ್ಲಿ ವಿವಿಧ ಯೋಜನೆಗಳ ಫಲಾನುಭವಿಗಳ ಸಮಾವೇಶ ನಡೆಲಾಗುವುದು. ಕೇಂದ್ರದ ಅನುದಾನದಿಂದ ಲೋಕಸಭಾ ಕ್ಷೇತ್ರಗಳಲ್ಲಿ ಕೈಗೊಂಡ ಮೂಲಸೌಕರ್ಯಗಳ ವಿವರ ಕೊಡಲಾಗುವುದು. ಪ್ರಬುದ್ಧರ ಸಭೆ, ವ್ಯಾಪಾರಸ್ಥರ ಸಭೆ, ಯೋಗ ದಿನಾಚರಣೆ ಸೇರಿ ಅನೇಕ ಕಾರ್ಯಕ್ರಮಗಳನ್ನು ನಡೆಸಲಾಗುವುದು. 2024ರ ಲೋಕಸಭಾ ಚುನಾವಣಾ ತಯಾರಾಗುವುದು ಇದರ ಉದ್ದೇಶವಾಗಿದೆ ಎಂದರು.

ನೂತನ ದೇವಾಲಯ ಉದ್ಘಾಟನೆ

ಯಲಹಂಕ: ಬಳ್ಳಾರಿ ರಸ್ತೆಯ ಬ್ಯಾಟರಾಯನಪುರದಲ್ಲಿ ಗ್ರಾಮ ದೇವತೆ ದೊಡ್ಡಮ್ಮ ಮತ್ತು ಮಹೇಶ್ವರಮ್ಮನ ನೂತನ ದೇವಾಲಯದ ಉದ್ಘಾಟನಾ ಸಮಾರಂಭವು ಈಚೆಗೆ ವಿಜೃಂಭಣೆಯಿಂದ ನೆರವೇರಿತು.

ವೇದಘೋಷ, ಪ್ರಾಣಪ್ರತಿಷ್ಠಾಪನಾ ಹೋಮ, ಪೂರ್ಣಾಹುತಿ ಬಳಿಕ ಸಹಸ್ರ ಕಳಸಗಳನ್ನು ಹೊತ್ತ ಮಹಿಳೆಯರು ಗ್ರಾಮದಲ್ಲಿ ಮೆರವಣಿಗೆ ನಡೆಸಿದರು.

ಆನೆ, ಬಿಳಿ ಕುದುರೆ, ಗೋವು ಹಾಗೂ ಎತ್ತು ಸಹ ಪ್ರದಕ್ಷಿಣೆಯಲ್ಲಿ ಹೆಜ್ಜೆ ಹಾಕುವ ಮೂಲಕ ಗಮನ ಸೆಳೆದವು. ನಂತರ, ದೇವಾಲಯದ ಶಿಖರದಲ್ಲಿ ಕಳಸ ಪ್ರತಿಷ್ಠಾಪಿಸಿ, ಕುಂಬಾಭಿಷೇಕ ನೆರವೇರಿಸಲಾಯಿತು.

ಗ್ರಾಮ ದೇವತೆಯರ ವಿಗ್ರಹಕ್ಕೆ ಪ್ರಾಣಪ್ರತಿಷ್ಠಾಪನೆ ನೆರವೇರಿಸಿ, ಉತ್ಸವ ಮೂರ್ತಿಗಳಿಗೆ ವಿವಿಧ ಪೂಜಾ ಕೈಂಕರ್ಯಗಳನ್ನು ನಡೆಸಲಾಯಿತು. ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಕೋಡಿಮಠದ ಡಾ.ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ, ಕಂದಾಯ ಸಚಿವ ಕೃಷ್ಣಬೈರೇಗೌಡ, ಮಾಜಿ ಉಪಮೇಯರ್ ಎನ್. ಇಂದಿರಾ, ಬಿಜೆಪಿ ಮುಖಂಡ ಎ.ರವಿ ಉಪಸ್ಥಿತರಿದ್ದರು.

ಮಳೆ ನೀರು ಶೇಖರಣೆಯಿಂದ ಸೊಳ್ಳೆ ಉತ್ಪತ್ತಿ: ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನೆಯ ಸುತ್ತಮುತ್ತಲಿನ ಘನತ್ಯಾಜ್ಯ ವಸ್ತುಗಳಲ್ಲಿ ಮಳೆ ನೀರು ಶೇಖರಣೆಯಾಗದಂತೆ ನೋಡಿಕೊಳ್ಳಬೇಕು. ಒಂದು ವೇಳೆ ನೀರು ಶೇಖರಣೆಯಾದಲ್ಲಿ ಈಡೀಸ್ ಸೊಳ್ಳೆಗಳು ಉತ್ಪತ್ತಿಯಾಗಿ, ಡೆಂಗಿ ಜ್ವರಕ್ಕೆ ಕಾರಣವಾಗುತ್ತವೆ' ಎಂದು ಆರೋಗ್ಯ ಇಲಾಖೆ ಎಚ್ಚರಿಸಿದೆ.

ರಾಜ್ಯದಲ್ಲಿ ಈವರೆಗೆ 1,830 ಡೆಂಗಿ ಪ್ರಕರಣಗಳು ವರದಿಯಾಗಿವೆ. 20 ದಿನಗಳಲ್ಲಿ 114 ಮಂದಿ ಈ ಜ್ವರದಿಂದ ಬಳಲಿದ್ದಾರೆ. ಪ್ರತಿ ವರ್ಷ ಮುಂಗಾರು ಮಳೆ ಪ್ರಾರಂಭವಾದ ಬಳಿಕ ಪ್ರಕರಣಗಳ ಸಂಖ್ಯೆ ಏರುಗತಿ ಪಡೆಯುತ್ತಿದೆ. ಈ ವರ್ಷ ಈಗಾಗಲೇ 69 ಸಾವಿರಕ್ಕೂ ಅಧಿಕ ಡೆಂಗಿ ಶಂಕಿತರನ್ನು ತಪಾಸಣೆಗೆ ಒಳಪಡಿಸಲಾಗಿದೆ. ಅವರಲ್ಲಿ 20 ಸಾವಿರಕ್ಕೂ ಅಧಿಕ ಮಂದಿಯ ರಕ್ತದ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿವೆ.

ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 1,009 ಮಂದಿಯ ರಕ್ತದ ಮಾದರಿಯನ್ನು ಪರೀಕ್ಷೆ ಮಾಡಲಾಗಿದ್ದು, 732 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ. ಮೈಸೂರಿನಲ್ಲಿ 137, ವಿಜಯಪುರದಲ್ಲಿ 98, ಚಿತ್ರದುರ್ಗದಲ್ಲಿ 91, ಬಳ್ಳಾರಿಯಲ್ಲಿ 67, ಬೆಳಗಾವಿಯಲ್ಲಿ 62 ಹಾಗೂ ಧಾರವಾಡದಲ್ಲಿ 52 ಪ್ರಕರಣ ದೃಢಪಟ್ಟಿದೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 50ಕ್ಕಿಂತ ಕಡಿಮೆಯಿದೆ.

25 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 12 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 9 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 469 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ. ವಿಜಯಪುರ (75) ಹಾಗೂ ಮೈಸೂರಿನಲ್ಲಿ (51) ಅಧಿಕ ಪ್ರಕರಣಗಳು ವರದಿಯಾಗಿವೆ.

ಲಕ್ಷಣದ ಆಧಾರ ಚಿಕಿತ್ಸೆ: 'ಇದ್ದಕ್ಕಿದ್ದಂತೆ ತೀವ್ರ ಜ್ವರ, ವಿಪರೀತ ತಲೆನೋವು, ಕಣ್ಣಿನ ಹಿಂಭಾಗ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು, ವಾಕರಿಕೆ, ವಾಂತಿ, ಆಂತರಿಕ ರಕ್ತಸ್ರಾವ, ಒಸಡುಗಳಲ್ಲಿ ರಕ್ತಸ್ರಾವ ಡೆಂಗಿ ಜ್ವರದ ಪ್ರಮುಖ ಲಕ್ಷಣಗಳು. ಈ ಜ್ವರಕ್ಕೆ ಲಸಿಕೆ ಇಲ್ಲದಿರುವುದರಿಂದ ಲಕ್ಷಣದ ಆಧಾರದಲ್ಲಿ ಚಿಕಿತ್ಸೆ ನೀಡಲಾಗುತ್ತದೆ.

ಶಾಲೆಗಳು ಆರಂಭ; ಮೊದಲ ದಿನದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲೆಡೆ ಬುಧವಾರ ಶಾಲೆಗಳು ಪುನರಾರಂಭವಾಗಿದ್ದು, ಒಂದೂವರೆ ತಿಂಗಳ ಬೇಸಿಗೆ ರಜೆಯ ನಂತರ ಶಾಲೆಗೆ ಮರಳಿದ ಮಕ್ಕಳಲ್ಲಿ ಸಹಪಾಠಿಗಳನ್ನು ಮತ್ತೆ ಭೇಟಿ ಮಾಡಿದ ಸಂಭ್ರಮ ಮೇರೆಮೀರಿತ್ತು.

ಮಕ್ಕಳ ಸ್ವಾಗತಕ್ಕಾಗಿ ಬಾಳೆಕಂದು, ತಳಿರು ತೋರಣಗಳಿಂದ ಶಾಲೆಗಳನ್ನು ಸಿಂಗಾರಗೊಳಿಸಲಾಗಿತ್ತು. ಶಾಲೆಗಳಲ್ಲಿ ಹಬ್ಬದ ವಾತಾರಣವಿತ್ತು. ಎರಡು ದಿನಗಳಿಂದ ಶಾಲೆಗೆ ಬರುತ್ತಿರುವ ಶಿಕ್ಷಕ ವೃಂದ ಎಲ್ಲ ಸಿದ್ಧತೆ ಮಾಡಿಕೊಂಡಿತ್ತು. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಅಧ್ಯಕ್ಷರು, ಸದಸ್ಯರು ಮಕ್ಕಳಿಗೆ ಸಿಹಿ ತಿನಿಸಿ ಶಾಲೆಗಳಿಗೆ ಬರಮಾಡಿಕೊಂಡರು.

ಈಗಷ್ಟೇ ಸಚಿವ ಸ್ಥಾನ ಅಲಂಕರಿಸಿರುವ ಮಧು ಬಂಗಾರಪ್ಪ ದೇವನಹಳ್ಳಿ ತಾಲ್ಲೂಕಿನ ಅರದೇಶಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಸಿಹಿ ತಿನಿಸುವ ಮೂಲಕ ಶಾಲಾ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿದರು. ಮಕ್ಕಳಿಗೆ ಪಠ್ಯಪುಸ್ತಕ, ಸಮವಸ್ತ್ರ ವಿತರಿಸಿದರು. ನಂತರ ಬಸವನಪುರ ಹಾಗೂ ಜಾಲಿಗೆ ಶಾಲೆಗಳಿಗೆ ಭೇಟಿ ನೀಡಿದರು.

ಮೊದಲ ದಿನವೇ ಅಧಿಕ ಸಂಖ್ಯೆಯಲ್ಲಿ ಮಕ್ಕಳು ಉತ್ಸಾಹದಿಂದ ಶಾಲೆಗಳತ್ತ ಹೆಜ್ಜೆ ಹಾಕಿದರು. ಶಿಕ್ಷಕರು, ಕೆಲ ಶಾಲೆಗಳಲ್ಲಿ ಮಕ್ಕಳ ಜತೆ ಪೋಷಕರೂ ಆಗಮಿಸಿದ್ದರು. ಮಧ್ಯಾಹ್ನದ ಬಿಸಿಯೂಟದಲ್ಲೂ ಸಹಿಯ ಸವಿ ದೊರಕಿತು. ಮಕ್ಕಳಿಗೆ ಪಠ್ಯಪುಸ್ತಕ, ಸಮವಸ್ತ್ರ ವಿತರಿಸಲಾಯಿತು.

ಮೇ 31ರಿಂದ ಜೂನ್ 30ರವರೆಗೆ ಶಾಲೆಗಳಿಗೆ ಮಕ್ಕಳನ್ನು ದಾಖಲು ಮಾಡಿಕೊಳ್ಳಲಾಗುತ್ತದೆ. ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗಳಿಗೆ ಕರೆತರಲು ಅಭಿಯಾನ ಹಮ್ಮಿಕೊಳ್ಳಲಾಗಿದೆ.

ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಅಗತ್ಯ

ದೇವನಹಳ್ಳಿ: 'ಮಕ್ಕಳ ಭವಿಷ್ಯ ರೂಪಿಸಲು ಗುಣಮಟ್ಟದ ಶಿಕ್ಷಣ ಅಗತ್ಯ. ಉತ್ತಮ ಶಿಕ್ಷಣ ವ್ಯವಸ್ಥೆ ಕಲ್ಪಿಸಲು ಎಲ್ಲ ರೀತಿಯ ಸಹಕಾರ ನೀಡುವ ಮೂಲಕ ನನ್ನ ಕರ್ತವ್ಯ ನಿರ್ವಹಿಸುತ್ತೇನೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಮಧು ಬಂಗಾರಪ್ಪ ಅವರು ತಿಳಿಸಿದರು.

ದೇವನಹಳ್ಳಿ ತಾಲ್ಲೂಕಿನ ಅರದೇಶನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯಲ್ಲಿ ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷದ ಶಾಲೆ ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

ಶಾಲೆಗಳನ್ನು ಮೇಲ್ದರ್ಜೆಗೇರಿಸಲು ಹೆಚ್ಚಿನ ಒತ್ತು ನೀಡಲಾಗುವುದು, ಶಿಥಿಲಾವಸ್ಥೆಯಲ್ಲಿರುವ ಶಾಲಾ ಕಟ್ಟಡಗಳನ್ನು ಮರು ನಿರ್ಮಾಣ ಮಾಡಲು ತ್ವರಿತವಾಗಿ ಕ್ರಮ ಕೈಗೊಳ್ಳಲಾಗುವುದು. ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಯಾವುದೇ ಸಮಸ್ಯೆ, ಗೊಂದಲ ಆಗಬಾರದು ಎಂದು ಶಾಲಾ ಮಕ್ಕಳಿಗೆ ಆರಂಭದಲ್ಲೇ ಪಠ್ಯಪುಸ್ತಕ ಮತ್ತು ಸಮವಸ್ತ್ರ ವಿತರಣೆ ಮಾಡಲು ಶೀಘ್ರ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

ದೇವನಹಳ್ಳಿಯ ಕುಂದಾಣ ಹೋಬಳಿಯ ಬಸವನಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಶೈಕ್ಷಣಿಕ ವರ್ಷದ ಶಾಲೆ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಪ್ರಾಥಮಿಕ ಮತ್ತು ಪೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಮಕ್ಕಳಿಗೆ ಸಿಹಿ ಹಂಚಿ, ಸಮವಸ್ತ್ರ, ಪುಸ್ತಕ, ಹೂ ವಿತರಿಸಿ ಸ್ವಾಗತಿಸಿದರು

ಈಶ್ವರ ಖಂಡ್ರೆ ಅವರು ಬೆಳ್ಳಂದೂರು ಕೆರೆಗೆ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಕೆರೆಗೆ ಕೊಳಚೆ ನೀರು: ಕ್ರಮದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಕೊಳಚೆ ನೀರು ಸೇರ್ಪಡೆಯಿಂದ ಶಾಪಗ್ರಸ್ತವಾಗಿರುವ ಬೆಳ್ಳಂದೂರು ಕೆರೆಗೆ, ಸಂಸ್ಕರಿಸದೆ ತ್ಯಾಜ್ಯ ನೀರು ಹರಿಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು' ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಎಚ್ಚರಿಕೆ ನೀಡಿದರು.

ಬೆಳ್ಳಂದೂರು ಕೆರೆಗೆ ಬುಧವಾರ ಭೇಟಿ ನೀಡಿ ಪರಿಶೀಲಿಸಿದ ಅವರು, ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು.

'ಮಂಡಳಿಯು ಮಾಲಿನ್ಯ ತಡೆಗೆ ಸಂಬಂಧಿಸಿದಂತೆ ತನ್ನ ಪಾಲಿನ ಕರ್ತವ್ಯವನ್ನು ಯಾವುದೇ ಲೋಪಕ್ಕೆ ಆಸ್ಪದವಿಲ್ಲದಂತೆ ನಿರ್ವಹಿಸಬೇಕು. ಯಾರಾದರೂ ಕೆರೆಗೆ ತ್ಯಾಜ್ಯ ತಂದು ಸುರಿದರೆ, ರಾಸಾಯನಿಕ ಮತ್ತು ಸಂಸ್ಕರಿಸದ ತ್ಯಾಜ್ಯವನ್ನು ನೇರವಾಗಿ ಹರಿ ಬಿಟ್ಟರೆ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಬೇಕು' ಎಂದು ಸಚಿವರು ಸೂಚಿಸಿದರು.

'ಬೆಂಗಳೂರಿನ ಯಾವುದೇ ಕೆರೆಯಲ್ಲಿ ತ್ಯಾಜ್ಯ ಸುರಿಯದಂತೆ ನೋಡಿಕೊಳ್ಳಬೇಕು. ರಾತ್ರಿಯ ವೇಳೆ ಮಾತ್ರ ಕೊಳಚೆ ಸ್ಥಳಾಂತರಿಸುವುದು ಸೂಕ್ತ ಎಂಬ ಅಭಿಪ್ರಾಯವಿದೆ. ಹೀಗಾಗಿ, ಹೆಚ್ಚುವರಿ ವಾಹನ ಬಳಕೆ ಮಾಡಿ, ಕಾಮಗಾರಿಯನ್ನು ಶೀಘ್ರ ಮುಗಿಸಬೇಕು. ಕೆರೆ ಪುನಶ್ಚೇತನ ಮಾಡಿದರೆ ಒಳಿತಾಗುತ್ತದೆ' ಎಂದರು.

'ಪ್ರಸ್ತುತ 14 ತ್ಯಾಜ್ಯ ನೀರು ಸಂಸ್ಕರಣೆ ಘಟಕ (ಎಸ್.ಟಿ.ಪಿ.) ಕಾರ್ಯ ನಿರ್ವಹಿಸುತ್ತಿದ್ದು, ಇವುಗಳ ಸಾಮರ್ಥ್ಯ 560 ಎಂ.ಎಲ್.ಡಿ. ಆಗಿದೆ. 5 ಎಸ್.ಟಿ.ಪಿ. ಮೇಲ್ದರ್ಜೆಗೇರಿಸಲಾಗುತ್ತಿದೆ' ಎಂದು ಅಧಿಕಾರಿಗಳು ಸಚಿವರಿಗೆ ಮಾಹಿತಿ ನೀಡಿದರು.

'ಮುಂದಿನ 10 ವರ್ಷಗಳ ಅವಧಿಗೆ ಅಗತ್ಯವಾದ ಎಸ್.ಟಿ.ಪಿ.ಗಳ ನಿರ್ಮಾಣ ಆಗಬೇಕು. ಕೆಲಸ ಅರ್ಧಕ್ಕೆ ನಿಂತರೆ ಮಾಡಿದ ಹಣವೂ ವ್ಯರ್ಥವಾಗುತ್ತದೆ' ಎಂದು ಸಚಿವರು ಅಭಿಪ್ರಾಯಪಟ್ಟರು.

'ರಾಷ್ಟ್ರೀಯ ಹಸಿರು ಪೀಠದ (ಎನ್‌ಜಿಟಿ) ನಿರ್ದೇಶನದಂತೆ ತ್ಯಾಜ್ಯ ನೀರು ಸಂಸ್ಕರಣೆ ಘಟಕಗಳ ನಿರ್ಮಾಣ ಕಾಮಗಾರಿಯನ್ನು ತ್ವರಿತಗೊಳಿಸಬೇಕು' ಎಂದು ಖಂಡ್ರೆ ಸೂಚಿಸಿದರು.

ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಎಂ. ಶಾಂತ ತಿಮ್ಮಯ್ಯ, ಪ್ರಧಾನ ಕಾರ್ಯದರ್ಶಿ ವಿಜಯ ಮೋಹನ್ ರಾಜ್ ಇದ್ದರು.

ಚಿತ್ರಾವಳಿ

ನೋಯ್ಡಾದ ಗಾಲ್ಗೋಟಿಯಾಸ್ ವಿಶ್ವವಿದ್ಯಾಲಯದಲ್ಲಿ ನಡೆದ 'ಎಲೆಕ್ಟ್ರಿಕ್ ಸೋಲಾರ್ ವೆಹಿಕಲ್ ಚಾಂಪಿಯನ್ ಶಿಪ್'ನಲ್ಲಿ ಬೆಂಗಳೂರಿನ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದ 'ಎಲೆಕ್ಟ್ರಿಕ್ ಸೋಲಾರ್ ವೆಹಿಕಲ್‌ನ ಹೋರಸ್' ತಂಡವು ಪೀಪಲ್ಸ್ ಚಾಯ್ಸ್, ಫ್ಯೂಚರ್ ಪ್ರಶಸ್ತಿ ಪಡೆದುಕೊಂಡಿದೆ.

ಬೆಂಗಳೂರಿನ ಓಕಳಿಪುರಂ ರೈಲ್ವೆ ಅಂಡರ್‌ಪಾಸ್‌ನಲ್ಲಿ ಮಳೆ ನೀರು ಹರಿಯುವ ಚರಂಡಿಯಲ್ಲಿ ಶೇಖರಣೆಯಾಗಿದ್ದ ಹೂಳನ್ನು ನಿರ್ವಹಣಾ ಸಿಬ್ಬಂದಿ ಬುಧವಾರ ತೆರವುಗೊಳಿಸಿದರು

ನಗರದ ಆರ್‌ಎಂ.ವಿ. 2ನೇ ಹಂತದಲ್ಲಿರುವ ಸರ್ಕಾರಿ ಶಾಲೆ ಮಕ್ಕಳಿಗೆ ಪೆನ್, ಪೆನ್ಸಿಲ್ ಮತ್ತು ನೋಟ್ ಪುಸ್ತಕ, ಸಿಹಿ ವಿತರಿಸಿ ಬರ ಮಾಡಿಕೊಳ್ಳಲಾಯಿತು

–ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ದನ್

ಜ್ಞಾನವಾಪಿ: ಮಸೀದಿ ಸಮಿತಿ ಅರ್ಜಿ ತಿರಸ್ಕೃತ

ಪ್ರಯಾಗ್‌ರಾಜ್ (ಪಿಟಿಐ): ಜ್ಞಾನವಾಪಿ ಮಸೀದಿ ಆವರಣದಲ್ಲಿರುವ ಹಿಂದೂ ದೇವತೆಗಳ ಮೂರ್ತಿಗಳಿಗೆ ಪ್ರತಿದಿನ ಪೂಜೆ ಸಲ್ಲಿಸಲು ಅವಕಾಶ ಕೋರಿ ಐವರು ಹಿಂದೂ ಮಹಿಳೆಯರು ಸಲ್ಲಿಸಿದ್ದ ಅರ್ಜಿಯ ವಿಚಾರಣಾ ಯೋಗ್ಯತೆ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ಬುಧವಾರ ತಿರಸ್ಕರಿಸಿದೆ.

ಹಿಂದೂ ಮಹಿಳೆಯರು ಸಲ್ಲಿಸಿದ್ದ ಅರ್ಜಿಯ ವಿಚಾರಣಾ ಯೋಗ್ಯತೆ ಪ್ರಶ್ನಿಸಿ ಮಸೀದಿ ನಿರ್ವಹಣಾ ಸಮಿತಿಯು ಈ ಮೊದಲು ವಾರಾಣಸಿ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿತ್ತು. ಆ ಅರ್ಜಿಯನ್ನು ಜಿಲ್ಲಾ ನ್ಯಾಯಾಲಯ ತಿರಸ್ಕರಿಸಿದ ಬಳಿಕ ಸಮಿತಿಯು ಹೈಕೋರ್ಟ್ ಮೆಟ್ಟಿಲೇರಿತ್ತು.

ತನಿಖೆ ಬಳಿಕ ಬ್ರಿಜ್ ಭೂಷಣ್ ವಿರುದ್ಧ ಕ್ರಮ: ರಾಜನಾಥ್

ಅಜಂಗಡ, ಉತ್ತರ ಪ್ರದೇಶ, (ಪಿಟಿಐ): ಭಾರತೀಯ ಕುಸ್ತಿ ಫೆಡರೇಶನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಮಹಿಳಾ ಕುಸ್ತಿಪಟುಗಳು ನೀಡಿದ ದೂರಿನ ಬಗ್ಗೆ ತನಿಖೆ ನಡೆಯುತ್ತಿದ್ದು, ತನಿಖೆ ಪೂರ್ಣಗೊಂಡ ಬಳಿಕ ಕ್ರಮ ಕೈಗೊಳ್ಳಲಾಗುವುದು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಬುಧವಾರ ಹೇಳಿದ್ದಾರೆ.

'ಈ ಬಗ್ಗೆ ತನಿಖೆ ನಡೆಯುತ್ತಿದೆ. ತನಿಖೆ ಮುಗಿದ ಬಳಿಕ ಸರ್ಕಾರ ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳುತ್ತದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಬ್ರಿಜ್ ಭೂಷಣ್ ಅವರನ್ನು ಫೆಡರೇಶನ್‌ನಿಂದ ವಜಾಗೊಳಿಸಬೇಕು ಮತ್ತು ಬಂಧಿಸಬೇಕು ಎಂದು ಆಗ್ರಹಿಸಿ ದೇಶದ ಕೆಲ ಕುಸ್ತಿಪಟುಗಳು ಪ್ರತಿಭಟನೆ ನಡೆಸುತ್ತಿದ್ದಾರೆ. ದೆಹಲಿ ಪೊಲೀಸರು ಅವರ ವಿರುದ್ಧ ಎರಡು ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ.

'ಗ್ಯಾರಂಟಿಗೆ ದಲಿತರ ಅನುದಾನ ಬಳಸಿದರೆ ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಚಿತ ಗ್ಯಾರಂಟಿ ಜಾರಿಗಾಗಿ ದೀನ– ದಲಿತರ ಶಿಕ್ಷಣಕ್ಕಾಗಿ ಕೊಡುವ ಅನುದಾನವನ್ನು ಬಳಸಲು ಸರ್ಕಾರ ಉದ್ದೇಶಿಸಿದೆ ಎಂಬ ಮಾಹಿತಿ ಇದೆ. ಒಂದು ವೇಳೆ ಅನುದಾನವನ್ನು ಬಳಸಿದರೆ ದೊಡ್ಡ ಹೋರಾಟವೇ ನಡೆಯಲಿದೆ' ಎಂದು ಮಾಜಿ ಸಚಿವ ಗೋವಿಂದ ಕಾರಜೋಳ ಎಚ್ಚರಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ಯಾರಂಟಿ ಜಾರಿ ಮಾಡದಿದ್ದರೆ ನಾಡಿನ ಜನ ಕಾಂಗ್ರೆಸಿಗರನ್ನು ರಸ್ತೆಯಲ್ಲಿ ಓಡಾಡಲು ಬಿಡುವುದಿಲ್ಲ ಎಂದೂ ಹೇಳಿದರು.

ದೀನ ದಲಿತರ ವಿದ್ಯಾಭ್ಯಾಸ, ಊಟ, ವಸತಿ, ವಸತಿ ಶಾಲೆ ನಿರ್ಮಾಣ, ಹಾಸ್ಟೆಲ್‌ಗಳ ನಿರ್ಮಾಣ, ನಿಗಮಗಳ ಮೂಲಕ ಭೂಮಿ ಖರೀದಿ ಮತ್ತು ಸಾಲ– ಸೌಲಭ್ಯಗಳಿಗೆ, ಸ್ವಯಂ ಉದ್ಯೋಗಕ್ಕೆ ಸಂಬಂಧಿಸಿದ ಅನುದಾನವನ್ನು ಗ್ಯಾರಂಟಿಗಾಗಿ ಬಳಸಿ ಮೋಸ ಮಾಡಿದರೆ ಸಹಿಸುವುದಿಲ್ಲ ಎಂದು ಹೇಳಿದರು.

'10 ಕೆ.ಜಿ ಅಕ್ಕಿ ಕೊಡಿ ಕೇಂದ್ರ ಸರ್ಕಾರಕ್ಕೆ ಕೇಳುತ್ತಿದ್ದಾರೆ. ಕೇಂದ್ರಕ್ಕೆ ಯಾಕೆ ಕೇಳುತ್ತೀರಿ. ಮಾರುಕಟ್ಟೆಯಲ್ಲಿ ಬೇಕಾದಷ್ಟು ಅಕ್ಕಿ ಸಿಗುತ್ತದೆ. ಖರೀದಿಸಿ ನಾಳೆಯಿಂದಲೇ ವಿತರಣೆ ಆರಂಭಿಸಿ' ಎಂದು ಒತ್ತಾಯಿಸಿದರು.

'ವಿದ್ಯುತ್ ನನಗೂ ಫ್ರೀ, ನಿಮಗೂ ಫ್ರೀ, ಹಿಂದೆ ಕುಂತವರಿಗೂ ಫ್ರೀ, ಮುಂದೆ ಕುಳಿತವರಿಗೂ ಫ್ರೀ ಎಂದಿದ್ದರು. . ಆದ್ದರಿಂದ, ಷರತ್ತು ರಹಿತವಾಗಿ ಎಲ್ಲರಿಗೂ ಉಚಿತ ವಿದ್ಯುತ್ ನೀಡಬೇಕು. ಅದನ್ನು ತಪ್ಪಿಸಬೇಡಿ' ಎಂದರು.

ಪೂರ್ವ ಲಡಾಖ್ ವಿವಾದ: ಭಾರತ ಚೀನಾ ಮಾತುಕತೆ

ನವದೆಹಲಿ (ಪಿಟಿಐ): ಪೂರ್ವ ಲಡಾಖ್‌ನಲ್ಲಿನ ಗಡಿ ವಿವಾದ ಕುರಿತು ಭಾರತ ಮತ್ತು ಚೀನಾ ಬುಧವಾರ ರಾಜತಾಂತ್ರಿಕ ಮಾತುಕತೆ ನಡೆಸಿವೆ.

ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ನೆಮ್ಮದಿ ಮರು ಸ್ಥಾಪಿಸುವ ಉದ್ದೇಶ ಸಾಧಿಸಲು 19ನೇ ಸುತ್ತಿನ ಉನ್ನತ ಮಟ್ಟದ ಮಿಲಿಟರಿ ಮಾತುಕತೆ ನಡೆಸಲು ಎರಡೂ ಕಡೆಯವರು ಒಪ್ಪಿಕೊಂಡಿದ್ದಾರೆ ಎಂದು ವಿದೇಶಾಂಗ ಸಚಿವಾಲಯ (ಎಂಇಎ) ತಿಳಿಸಿದೆ.

ಭಾರತ-ಚೀನಾ ಗಡಿ ಪ್ರದೇಶಗಳ ಪಶ್ಚಿಮ ವಲಯದ ಎಲ್‌ಎಸಿಯ ಉದ್ದಕ್ಕೂ ಪರಿಸ್ಥಿತಿ ಬಗ್ಗೆ ಅವಲೋಕಿಸಿದರು. ಮಿಲಿಟರಿ ಮತ್ತು ರಾಜತಾಂತ್ರಿಕ ಮಾರ್ಗಗಳ ಮೂಲಕ ಚರ್ಚೆ ಮುಂದುವರಿಸಲು ಎರಡೂ ಕಡೆಯವರು ಒಪ್ಪಿಕೊಂಡಿದ್ದಾರೆ ಎಂದು ಎಂಇಎ ತಿಳಿಸಿದೆ.

ನ್ಯಾಯಮೂರ್ತಿ ಬಿ.ವೀರಪ್ಪ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಸಿ.ಎಂ ಭರವಸೆ

ವಕೀಲರ ರಕ್ಷಣಾ ಕಾಯ್ದೆ ಜಾರಿಗೆ ಬದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಕೀಲರ ರಕ್ಷಣಾ ಕಾಯ್ದೆ ಜಾರಿಗೆ ತರಲು ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬೆಂಗಳೂರು ವಕೀಲರ ಸಂಘ ಬುಧವಾರ ಆಯೋಜಿಸಿದ್ದ ನ್ಯಾಯಮೂರ್ತಿ ಬಿ.ವೀರಪ್ಪ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಕಾಯ್ದೆ ಜಾರಿಗೆ ಆಗ್ರಹಿಸಿ ವಕೀಲ ಸಮೂಹ ಪ್ರತಿಭಟನೆ ನಡೆಸಿತ್ತು. ಅಂದು ವಿರೋಧ ಪಕ್ಷದ ನಾಯಕನಾಗಿದ್ದ ನಾನು ಪ್ರತಿಭಟನೆಗೆ ಬೆಂಬಲ ಸೂಚಿಸಿದ್ದೆ. ವಿಧಾನಸಭೆಯಲ್ಲಿ ಧ್ವನಿ ಎತ್ತಿದ್ದೆ. ಈಗ ನಾವೇ ಅಧಿಕಾರಕ್ಕೆ ಬಂದಿದ್ದೇವೆ. ಹಾಗಾಗಿ, ಕಾಯ್ದೆ ಜಾರಿಗೆ ತರಲು ಕ್ರಮ ಕೈಗೊಳ್ಳಲಾಗುವುದು. ವಕೀಲರ ಸಂಘದ ಕೋರಿಕೆಯಂತೆ ವಕೀಲರ ವಿಮಾ ಯೋಜನೆಯನ್ನೂ ಜಾರಿಗೆ ತರಲಾಗುವುದು' ಎಂದು ಹೇಳಿದರು.

ಸ್ಥಾನ ಯಾವುದೇ ಇರಲಿ, ಸ್ಪಂದಿಸುವ ಗುಣ ಇಲ್ಲದಿದ್ದರೆ ಸಮಾಜದ ಕಡೆಯ ಮನುಷ್ಯನಿಗೆ ನ್ಯಾಯ ದೊರಕಿಸುವುದು ಅಸಾಧ್ಯ. ಉನ್ನತ ಅವಕಾಶಗಳು ಸಿಕ್ಕಾಗ ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಳ್ಳಬೇಕು. ಪ್ರಾಮಾಣಿಕವಾಗಿ ಜನಸೇವೆ ಮಾಡಿದರೆ ಆ ಸ್ಥಾನದ ಘನತೆ ಹೆಚ್ಚುತ್ತದೆ. ಜನರ ಸಂಕಷ್ಟಗಳ ಅರಿವಿರುವ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಉತ್ತಮ ನ್ಯಾಯದಾನದ ಮೂಲಕ ತಮ್ಮ ಬದುಕು ಹಾಗೂ ವೃತ್ತಿಯನ್ನು ಸಾರ್ಥಕಗೊಳಿಸಿದ್ದಾರೆ. ವೀರಪ್ಪ ಅವರು ದಕ್ಷತೆ, ಪ್ರಾಮಾಣಿಕತೆ ಜತೆಗೆ, ವಕೀಲ ಸಮೂಹದ ಪ್ರೀತಿಯನ್ನೂ ಗಳಿಸಿದ್ದರು ಎಂದು ಶ್ಲಾಘಿಸಿದರು.

ದುರ್ಬಲ ವರ್ಗದವರಿಗೆ ಮೇಲಿನ ನ್ಯಾಯಾಲಯಗಳಿಗೆ ಹೋಗಲು ಸಾಧ್ಯವಿಲ್ಲ. ಕೆಳ ಹಂತದಲ್ಲೇ ದುರ್ಬಲ ವರ್ಗಗಳಿಗೆ ನ್ಯಾಯ ಸಿಗುವಂತಾಗಬೇಕು. ಬಿ.ವೀರಪ್ಪ ಅವರು ಈ ದೃಷ್ಟಿಯಲ್ಲಿ ಮೌಲ್ಯಯುತವಾದ ತೀರ್ಪುಗಳನ್ನು ನೀಡಿದ್ದಾರೆ. ಅವರ ತೀರ್ಪುಗಳು ಕಿರಿಯ ವಕೀಲರಿಗೆ ಮಾದರಿಯಾಗಿವೆ ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇವೆ. ಮೂರು ಅಂಗಗಳು ಸಮನ್ವಯದಿಂದ ಕಾರ್ಯನಿರ್ವಹಿಸಿದರೆ ಜನರ ಸೇವೆ ಸಾಧ್ಯವಾಗುತ್ತದೆ ಎಂದು ಹೇಳಿದರು.

ಬೆಂಗಳೂರು ವಕೀಲರ ಸಂಘ ಬುಧವಾರ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ನ್ಯಾಯಮೂರ್ತಿ ಬಿ.ವೀರಪ್ಪ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ, ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಇದ್ದಾರೆ –ಪ್ರಜಾವಾಣಿ ಚಿತ್ರ.

‘ಬೆಂಗಳೂರು ಅರ್ಬನ್ ಫ್ಲಡ್ ವರದಿ’ಯಲ್ಲಿ ₹2,800 ಕೋಟಿ ವೆಚ್ಚದ ಅಂದಾಜು

658 ಕಿ.ಮೀ ರಾಜಕಾಲುವೆ ನಿರ್ಮಿಸಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಮಳೆಗಾಲದ ಸಂದರ್ಭದಲ್ಲಿ ಪುನರಾವರ್ತಿಸುತ್ತಿರುವ ಪ್ರವಾಹವನ್ನು ತಪ್ಪಿಸಲು ಹೆಚ್ಚುವರಿಯಾಗಿ 658 ಕಿ.ಮೀ ರಾಜಕಾಲುವೆ ನಿರ್ಮಿಸಬೇಕು ಎಂದು ಪ್ರಾಪರ್ಟಿ ಸಲಹಾ ಸಂಸ್ಥೆ ನೈಟ್ ಫ್ರಾಂಕ್ ಇಂಡಿಯಾದ ‘ಬೆಂಗಳೂರು ಅರ್ಬನ್ ಫ್ಲಡ್ ವರದಿ’ಯಲ್ಲಿ ಸಲಹೆ ನೀಡಲಾಗಿದೆ.

- 1900ರಲ್ಲಿ ಕೋರಮಂಗಲ ಕಣಿವೆಯ 113.2 ಕಿ.ಮೀ ಉದ್ದದ ರಾಜಕಾಲುವೆ 2016–17ರಲ್ಲಿ 62.8 ಕಿ.ಮೀಗೆ ಕಡಿತ
- 1900ರಲ್ಲಿ ವೃಷಭಾವತಿ ಕಣಿವೆಯಲ್ಲಿ 226.3 ಕಿ.ಮೀ. ಇದ್ದ ರಾಜಕಾಲುವೆ 2016–17ರಲ್ಲಿ 111.7 ಕಿ.ಮೀ ಮಾತ್ರ ಉಳಿದಿದೆ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ ಬೆಂಗಳೂರಿನ ಹಲವು ಭಾಗಗಳು ಜಲಾವೃತಗೊಂಡಿದ್ದವು. ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸಲು ವೈಜ್ಞಾನಿಕ ರಾಜಕಾಲುವೆಗಳ ನಿರ್ಮಾಣ ಮಾಡಬೇಕು. ಮುಂಬೈ ನಗರದಲ್ಲಿ ಅಳವಡಿಸಿಕೊಂಡಿರುವ ವೈಜ್ಞಾನಿಕ ಒಳಚರಂಡಿ ವ್ಯವಸ್ಥೆಯನ್ನು ಬೆಂಗಳೂರು ನಗರದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ.

ಹೊಸದಾಗಿ 658 ಕಿ.ಮೀ ನಿರ್ಮಾಣ ಹಾಗೂ ಅಸ್ತಿತ್ವದಲ್ಲಿರುವ ರಾಜಕಾಲುವೆಗಳ ಪುನಶ್ಚೇತನ ಮತ್ತು ನಿರ್ವಹಣೆಗೆ ₹2,000 ಕೋಟಿ ಅಗತ್ಯವಿದೆ. ಸದ್ಯ ಇರುವ ರಾಜಕಾಲುವೆ ಸೇರಿ ಕೆರೆಗಳನ್ನು ಸ್ವಚ್ಛಗೊಳಿಸಲು ಮತ್ತು ಹೂಳೆತ್ತುವುದಕ್ಕೆ ₹800 ಕೋಟಿ ಬೇಕಾಗುತ್ತದೆ ಎಂದು ವರದಿಯಲ್ಲಿ ಅಂದಾಜಿಸಲಾಗಿದೆ.

ಬೆಂಗಳೂರಿನಲ್ಲಿ ಸದ್ಯ 842 ಕಿ.ಮೀ ಉದ್ದದ ರಾಜಕಾಲುವೆ ಇದೆ. ಆದರೆ, ಇದನ್ನು 1,500 ಕಿ.ಮೀಗೆ ವಿಸ್ತರಿಸುವ ಅಗತ್ಯವಿದೆ. ಇದಕ್ಕೆ ಅಗತ್ಯವಾಗಿರುವ ಹಣವನ್ನು ವ್ಯಾಲ್ಯೂ ಕ್ಯಾಪ್ಚರ್ ಫೈನಾನ್ಸಿಂಗ್ (ವಿಸಿಎಫ್) ಮೂಲಕ ಸಂಗ್ರಹಿಸಿಕೊಳ್ಳಬಹುದು. ಅಂದರೆ, ರಾಜಕಾಲುವೆಯಲ್ಲಿ ಸುಗಮವಾಗಿ ನೀರು ಹರಿಯುವುದರಿಂದ ಭೂಮಿಗೆ ಬೆಲೆ ಬರುತ್ತದೆ ಹಾಗೂ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರ ಇಂತಹ ಕ್ಷೇತ್ರಗಳಿಂದ ಹಣ ಪಡೆಯಬಹುದು ಎಂದು ವರದಿಯಲ್ಲಿ ತಿಳಿಸಲಾಗಿದೆ.

ಎರಡು ದಶಕಗಳಲ್ಲಿ ಬೆಂಗಳೂರಿನ ಜನಸಂಖ್ಯೆ ದ್ವಿಗುಣಗೊಂಡಿದೆ. ತ್ವರಿತ ಮತ್ತು ಅವೈಜ್ಞಾನಿಕ ಅಭಿವೃದ್ಧಿಯಿಂದ ನಗರದ ನಿರ್ಮಾಣ ಪ್ರದೇಶವು ಶೇ 93.3ರಷ್ಟು ಏರಿಕೆ ಕಂಡಿದೆ. ಇದು ಬೆಂಗಳೂರಿನ ನೈಸರ್ಗಿಕ ಪರಿಸರದ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರಿದೆ. ಜೊತೆಗೆ ಕೆರೆಗಳು ಮತ್ತು ರಾಜಕಾಲುವೆಗಳ ನಡುವಿನ ಸಂಪರ್ಕ ಕಡಿತಗೊಳ್ಳಲು ಕಾರಣವಾಗಿದೆ ಎಂದು ಹೇಳಿದೆ.

ನೈಟ್ ಫ್ರಾಂಕ್ ಇಂಡಿಯಾ ಬೆಂಗಳೂರಿನ ಕಾರ್ಯನಿರ್ವಾಹಕ ನಿರ್ದೇಶಕ ಶಾಂತನು ಮಜುಂದಾರ್ ವರದಿ ಬಿಡುಗಡೆ ಮಾಡಿದರು. ‘ನಗರದ ಪರಿಸರ ವ್ಯವಸ್ಥೆಗೆ ಹಾನಿಯಾಗದಂತೆ ರಿಯಲ್ ಎಸ್ಟೇಟ್ ಮತ್ತು ಮೂಲಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಬೇಕು. ಪ್ರವಾಹ ಸಮಸ್ಯೆ ಪ್ರತಿವರ್ಷವೂ ಸಂಭವಿಸುತ್ತದೆ. ರಿಯಲ್ ಎಸ್ಟೇಟ್ ಮಾರುಕಟ್ಟೆಯ ಹೂಡಿಕೆಯ ಮೇಲೆ ಪರಿಣಾಮ ಬೀರುತ್ತಿದೆ. ಇದರಿಂದ ‘ಬ್ರ್ಯಾಂಡ್ ಬೆಂಗಳೂರಿಗೆ’ ಧಕ್ಕೆ ಆಗುತ್ತಿದೆ’ ಎಂದರು.

‘ಚೀನಾದಲ್ಲಿ ನಗರಗಳ ಪ್ರವಾಹ ಪರಿಸ್ಥಿತಿ ನಿಭಾಯಿಸಲು ಸ್ಪಾಂಜ್ ಸಿಟಿ ಪರಿಕಲ್ಪನೆ ಅನುಸರಿಸಲಾಗುತ್ತಿದೆ. ಇದರಿಂದ ಮಳೆ ನೀರಿನ ವೈಜ್ಞಾನಿಕ ಸಂಗ್ರಹ, ಮಳೆ ನೀರಿನ ಓಟಕ್ಕೆ ಕಡಿವಾಣ, ಕಾಂಕ್ರೀಟಿಕರಣ ಕಡಿಮೆ ಮಾಡಿ ಹಸಿರು ಪ್ರದೇಶಗಳ ಹೆಚ್ಚಳ, ಜೌಗು ಪ್ರದೇಶಗಳ ಅಭಿವೃದ್ಧಿ ಮಾಡುವ ಮೂಲಕ ಪ್ರವಾಹದ ಅಬ್ಬರವನ್ನು ಕಡಿಮೆ ಮಾಡಬಹುದು’ ಎಂದು ತಿಳಿಸಿದರು.

ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ರಾಜೀವ್ ವಿಜಯ್ ಮತ್ತು ಶಿಲ್ಪಾ ಶ್ರೀ ಇದ್ದರು.

ರಾಜಕಾಲುವೆ ನಿರ್ಮಾಣ: ಕಟ್ಟೆಚ್ಚರಿಕೆಗೆ ಸೂಚನೆ

ಬನ್ನೇರುಘಟ್ಟ ರೈನ್‌ಬೊ ಆಸ್ಪತ್ರೆ ಸಮೀಪ ನಡೆಯುತ್ತಿರುವ ನೀರುಗಾಲುವೆ ಕಾಮಗಾರಿಯನ್ನು ಆಯುಕ್ತ ಜಯರಾಂ ರಾಯಪುರ ಪರಿಶೀಲಿಸಿದರು

ಬೆಂಗಳೂರು: ಬೃಹತ್ ನೀರುಗಾಲುವೆ ಕಾಮಗಾರಿ ನಡೆಯುತ್ತಿರುವ ಪ್ರದೇಶದಲ್ಲಿ ಕಟ್ಟೆಚ್ಚರಿಕೆ ವಹಿಸಬೇಕು ಎಂದು ಬಿಬಿಎಂಪಿ ದಕ್ಷಿಣ ವಲಯದ ಆಯುಕ್ತ ಜಯರಾಮ ರಾಯಪುರ ಸೂಚಿಸಿದರು.

ದಕ್ಷಿಣ ವಲಯದಲ್ಲಿ ಬೃಹತ್ ನೀರುಗಾಲುವೆ (ರಾಜಕಾಲುವೆ) ಕಾಮಗಾರಿಗಳನ್ನು ಬುಧವಾರ ಅವರು ಪರಿಶೀಲಿಸಿದರು.

ಸಿಂಧೂರ್ ಕನ್ವೆನ್ಷನ್ ಹಾಲ್ ಹತ್ತಿರ ಪ್ರಗತಿಯಲ್ಲಿರುವ ಬೃಹತ್ ನೀರುಗಾಲುವೆ ಪೈಪ್ ಲೈನ್ ಕಾಮಗಾರಿಯು 17ನೇ ಕ್ರಾಸ್ ರಸ್ತೆಯವರೆಗೆ ನಡೆಯುತ್ತಿದೆ. ಈ ಸ್ಥಳದಲ್ಲಿ ಯಾವುದೇ ಅನಾಹುತ ಆಗದಂತೆ ಮುನ್ನೆಚ್ಚರಿಕೆ ನೋಡಿಕೊಳ್ಳಲು ಸಂಬಂಧಪಟ್ಟ ಎಂಜಿನಿಯರ್‌ಗೆ ಸೂಚಿಸಿದರು.

ಫ್ರ್ಯಾಂಕ್ ಪಬ್ಲಿಕ್ ಶಾಲೆ ಹತ್ತಿರ ನಡೆಯುತ್ತಿರುವ ಭೂಗತ(ಟಟಿ) ಕಾಮಗಾರಿಗೆ ಸಿಂಕಿಂಗ್ ಪಿಟ್‌ಗಳನ್ನು ನಿರ್ಮಿಸಿರುವ ಬಗ್ಗೆ ಪರಿಶೀಲಿಸಿ, ಗುತ್ತಿಗೆದಾರರಿಗೆ ತ್ವರಿತವಾಗಿ ಕಾಮಗಾರಿಯನ್ನು ಮುಕ್ತಾಯಗೊಳಿಸಲು ತಿಳಿಸಿದರು.

ಜಯನಗರದ ಡಾಲರ್ಸ್ ಕಾಲೊನಿ ವ್ಯಾಪ್ತಿಯ ವೈಷ್ಣವಿ ಟೆರೆಸ್‌ಸ್ ಹತ್ತಿರ ವಿರುವ ಬೃಹತ್ ನೀರುಗಾಲುವೆ ವೈಷ್ಣವಿ ಟೆರಸ್ ಹತ್ತಿರ 6 ಮೀಟರ್ ಅಗಲವಿದ್ದು, ತದನಂತರದಲ್ಲಿ ಮುಂದೆ ರೈನ್ ಬೋ ಆಸ್ಪತ್ರೆಯ ಸ್ಥಳದಲ್ಲಿ 3 ಮೀಟರ್ ಇದೆ. ನೀರುಗಾಲುವೆ ಅಗಲ ಕಡಿಮೆಯಾಗಿರುವುದರಿಂದ ಇದಕ್ಕೆ ಪರ್ಯಾಯ ಕಾಲುವೆ ನಿರ್ಮಿಸುತ್ತಿರುವ ಕಾಮಗಾರಿಯನ್ನು ಪರಿಶೀಲಿಸಿದರು.

ಬೊಮ್ಮನಹಳ್ಳಿ ವಿಭಾಗಕ್ಕೆ ಸೇರುವ ಬೃಹತ್ ನೀರುಗಾಲುವೆಯ ಹೂಳನ್ನು ತ್ವರಿತಗತಿಯಲ್ಲಿ ತೆರವುಗೊಳಿಸಬೇಕು. 15 ದಿನಗಳಲ್ಲಿ ನೀರುಗಾಲುವೆ ಸಂಪರ್ಕಿಸುವ ಚರಂಡಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಿದರು.

ಲೈಂಗಿಕ ಕಿರುಕುಳ: ಆರೋಪಿಗಳ ವಿರುದ್ಧ ಕ್ರಮಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಚರ್ಚ್ ಆಫ್ ಸೌತ್ ಇಂಡಿಯಾದ (ಸಿಎಸ್‌ಐ) ದಕ್ಷಿಣ ಕರ್ನಾಟಕ ಧರ್ಮಪ್ರಾಂತ್ಯದ ಮಂಗಳೂರು ಘಟಕದ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮಹಿಳೆಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ್ದಲ್ಲದೇ ಆಕೆಯನ್ನು ಕೆಲಸದಿಂದ ಕಿತ್ತು ಹಾಕಲಾಗಿದೆ. ಸಂತ್ರಸ್ತೆ ಈ ಕುರಿತು ಪೊಲೀಸರಿಗೆ ದೂರು ನೀಡಿದರೂ ಆರೋಪಿಗಳ ವಿರುದ್ಧ ಕ್ರಮವಾಗಿಲ್ಲ’ ಎಂದು ವಿವಿಧ ಸಂಘಟನೆಗಳು ಆರೋಪಿಸಿವೆ.

‘ಮಹಿಳೆಯನ್ನು ಕೆಲಸಕ್ಕೆ ಮರುನೇಮಕ ಮಾಡಿಕೊಳ್ಳಬೇಕು. ಲೈಂಗಿಕ ಕಿರುಕುಳ ಹಾಗೂ ಮಾನಸಿಕ ಹಿಂಸೆ ನೀಡಿದ್ದಾರೆ ಎನ್ನಲಾದ ಆರೋಪಿಗಳಾದ, ಧರ್ಮಪ್ರಾಂತ್ಯದ ಕಾನೂನು ಸಲಹೆಗಾರ ನೋಯಲ್ ಕರ್ಕಡ ಹಾಗೂ ಖಜಾಂಚಿ ವಿನ್ಸೆಂಟ್ ಪಾಲನ್ನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿ ನಗರದ ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ, ಮೈಸೂರಿನ ‘ಒಡನಾಡಿ’ ಸಂಸ್ಥೆ, ‘ನಾವೆದ್ದು ನಿಲ್ಲದಿದ್ದರೆ’ ಸಂಘಟನೆಗಳ ಪ್ರತಿನಿಧಿಗಳು ಇಲ್ಲಿನ ಸಿಎಸ್‌ಐ ಚರ್ಚ್ ಬಳಿ ಇರುವ ಧರ್ಮಪ್ರಾಂತ್ಯದ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿದರು.

ಒಡನಾಡಿ ಸಂಸ್ಥೆಯ ಸ್ಥಾಪಕ ಕಾರ್ಯದರ್ಶಿ ಸ್ಟ್ಯಾನ್ಲಿ, ‘ಸಂತ್ರಸ್ತೆ 10 ವರ್ಷಗಳಿಂದ ಧರ್ಮಪ್ರಾಂತ್ಯದ ಕಚೇರಿಯಲ್ಲಿ ಕಾಯಂ ಉದ್ಯೋಗಿಯಾಗಿದ್ದರು. ಒಂದೂವರೆ ವರ್ಷಗಳಿಂದ ಈ ಧರ್ಮಪ್ರಾಂತ್ಯದ ಬಿಷಪ್ ಇರಲಿಲ್ಲ. ಆ ಸಂದರ್ಭದಲ್ಲಿ ಸಂತ್ರಸ್ತೆ ಮೇಲೆ ಸುಳ್ಳು ಆರೋಪ ಹೊರಿಸಿ ಉದ್ಯೋಗದಿಂದ ಕಿತ್ತು ಹಾಕಲಾಗಿದೆ. ಆಕೆಗೆ ಲೈಂಗಿಕ ಕಿರುಕುಳವನ್ನೂ ನೀಡಲಾಗಿದೆ. ಧಾರ್ಮಿಕ ಸಂಸ್ಥೆಗಳಲ್ಲೇ ಮಹಿಳೆಗೆ ಸುರಕ್ಷತೆ ಇಲ್ಲವೆಂದರೆ ಏನರ್ಥ’ ಎಂದು ಪ್ರಶ್ನಿಸಿದರು.

‘ಲೈಂಗಿಕ ಕಿರುಕುಳದ ಬಗ್ಗೆ ದೂರು ನೀಡಿ 60 ದಿನ ಕಳೆದರೂ ಆರೋಪಿಗಳ ವಿರುದ್ಧ ಕ್ರಮ ತೆಗೆದುಕೊಂಡಿಲ್ಲ. ಹೊಸ ಸರ್ಕಾರವಾದರೂ ಮಹಿಳಾ ದೌರ್ಜನ್ಯದ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮವಾಗುವಂತೆ ನೋಡಿಕೊಳ್ಳಬೇಕು. ಈ ಬಗ್ಗೆ ಮುಖ್ಯಮಂತ್ರಿ ಹಾಗೂ ಗೃಹಸಚಿವರಿಗೂ ಮನವಿ ಸಲ್ಲಿಸುತ್ತೇವೆ’ ಎಂದರು.

ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆಯ ಮರ್ಲಿನ್ ಮಾರ್ಟಿಸ್, ‘ಈ ಧರ್ಮಪ್ರಾಂತ್ಯದ ಕಚೇರಿಯಲ್ಲಿ ಲೈಂಗಿಕ ಕಿರುಕುಳ ತಡೆ ಸಮಿತಿ ರಚಿಸಿಲ್ಲ. ಜಿಲ್ಲಾಧಿಕಾರಿ ಇದನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಬೇಕು’ ಎಂದರು.

‘ನಾವೆದ್ದು ನಿಲ್ಲದಿದ್ದರೆ’ ಸಂಘಟನೆಯ ಮಮತಾ ಮಾತನಾಡಿದರು.

ಸಾಮಾಜಿಕ ಕಾರ್ಯಕರ್ತರಾದ ವಿದ್ಯಾ ದಿನಕರ್, ಮಂಗಳೂರು ತಾಲ್ಲೂಕು ಮಹಿಳಾ ಒಕ್ಕೂಟದ ಸುಖಲಾಕ್ಷಿ ಸೇರಿದಂತೆ ಅನೇಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ತನಿಖೆಗೆ ತಡೆಯಾಜ್ಞೆ: ಲೈಂಗಿಕ ಕಿರುಕುಳ ಸಂಬಂಧ ವಿನ್ಸೆಂಟ್ ಪಾಲನ್ನ ಮತ್ತಿತರರ ವಿರುದ್ಧ ಸಂತ್ರಸ್ತೆ ಮಹಿಳಾ ಠಾಣೆಯಲ್ಲಿ ದಾಖಲಿಸಿರುವ ದೂರಿನ ತನಿಖೆಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಿಎಚ್‌.ಡಿ ಪ್ರವೇಶ ಪರೀಕ್ಷೆ ಬರೆದ ಪವಿತ್ರಾ ಲೋಕೇಶ್

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಬಹುಭಾಷಾ ನಟಿ ಪವಿತ್ರಾ ಲೋಕೇಶ್ ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್‌.ಡಿ ಪ್ರವೇಶಕ್ಕಾಗಿ ಈಚೆಗೆ ಪರೀಕ್ಷೆ ಬರೆದಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ಪಿಎಚ್‌ಡಿ ಮಾಡಲು ಬಯಸಿರುವ ಪವಿತ್ರಾ ಲೋಕೇಶ್ ಅವರು ಎರಡು ದಿನದ ಹಿಂದೆ ಪತಿ ನರೇಶ್ ಕೃಷ್ಣ ಜೊತೆಗೆ ನಗರಕ್ಕೆ ಬಂದು ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪರೀಕ್ಷೆ ಬರೆದರು. ಕನ್ನಡ ಸಿನಿಮಾಗಳಲ್ಲಿ ನಾಯಕಿಯಾಗಿ, ಪೋಷಕ ನಟಿಯಾಗಿ ಮಿಂಚಿದ್ದ ಪವಿತ್ರಾ ಅವರು ತೆಲುಗಿನಲ್ಲಿಯೂ ಹಲವಾರು ಸಿನಿಮಾಗಳಲ್ಲಿ ನಟಿಸಿದ್ದಾರೆ.

ಲೈಂಗಿಕ ಅಲ್ಪಸಂಖ್ಯಾತರಿಗೂ ಉಚಿತ ಪ್ರಯಾಣ ಕಲ್ಪಿಸಿ: ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಲೈಂಗಿಕ ಅಲ್ಪಸಂಖ್ಯಾತರಿಗೂ ಉಚಿತ ಬಸ್ ಪ್ರಯಾಣಕ್ಕೆ ಅವಕಾಶ ಕಲ್ಪಿಸಬೇಕು’ ಎಂದು ಗ್ರೀನ್‌ಪೀಸ್ ಇಂಡಿಯಾ ಮನವಿ ಮಾಡಿದೆ.

‘ಸಾರಿಗೆ ನಿಗಮಗಳಲ್ಲಿ ಹಲವು ಸುಧಾರಣೆ ಕ್ರಮ ಕೈಗೊಳ್ಳಬೇಕು. ಜತೆಗೆ, ಲೈಂಗಿಕ ಅಲ್ಪಸಂಖ್ಯಾತರಿಗೂ ಅವಕಾಶ ಸಿಗಬೇಕು’ ಎಂದು ಕೋರಿದೆ.

‘ಪಂಜಾಬ್, ತಮಿಳುನಾಡು, ದೆಹಲಿಯಲ್ಲಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ವ್ಯವಸ್ಥೆ ಇದೆ. ಆ ರಾಜ್ಯಗಳ ನೀತಿಗಳಿಂದ ಸ್ಫೂರ್ತಿ ಪಡೆದಂತೆಯೇ ಅಲ್ಲಿ ಎದುರಿಸಿದ ಸವಾಲು ಹಾಗೂ ನ್ಯೂನತೆಗಳಿಂದಲೂ ಪಾಠ ಕಲಿಯಬೇಕಿದೆ. ದೆಹಲಿಯ ಕೆಲವು ಬಸ್ ಚಾಲಕರು ಉದ್ದೇಶಪೂರ್ವಕವಾಗಿಯೇ ಮಹಿಳಾ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ನಿರಾಕರಿಸುತ್ತಿದ್ದಾರೆ. ಇದು ಆಘಾತಕಾರಿ ಘಟನೆ’ ಎಂದು ಗ್ರೀನ್‌ಪೀಸ್ ಇಂಡಿಯಾ ಹೇಳಿದೆ.

‘ಮಹಿಳೆಯರಿಗೆ ಉಚಿತ ಬಸ್‌ಗಳು ಸುಲಭವಾಗಿ ಸಿಗಬೇಕು. ಮಹಿಳೆಯರ ಜತೆಗೆ ಲೈಂಗಿಕ ಅಲ್ಪಸಂಖ್ಯಾತ ಸಮುದಾಯಕ್ಕೂ ಉಚಿತ ಬಸ್ ಸೌಲಭ್ಯ ಇರಬೇಕು. ಬಸ್‌ಗಳಲ್ಲಿ ಮಹಿಳೆಯರು ಮತ್ತು ವೃದ್ಧರಿಗೆ ಮಾತ್ರವಲ್ಲದೆ ಲೈಂಗಿಕ ಅಲ್ಪಸಂಖ್ಯಾತರಿಗೂ ಮೀಸಲು ಸೀಟುಗಳಿರಬೇಕು. ಸುರಕ್ಷತಾ ಸಹಾಯವಾಣಿ ಸಂಖ್ಯೆಗಳನ್ನು ಬಸ್ ಮತ್ತು ಬಸ್ ತಂಗುದಾಣ, ನಿಲ್ದಾಣಗಳಲ್ಲಿ ಎಲ್ಲರಿಗೂ ಕಾಣುವಂತೆ ಪ್ರದರ್ಶಿಸಬೇಕು ಎಂದು ಮನವಿ ಮಾಡಿದೆ.

‘ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರನ್ನೇ ನಿರ್ವಾಹಕರು, ಚಾಲಕರು ಹಾಗೂ ಸಿಬ್ಬಂದಿಗಳನ್ನಾಗಿ ನೇಮಿಸಿಕೊಳ್ಳಬೇಕು’ ಎಂದು ಕೋರಿದೆ.

‘ಬಸ್ ನಿಲ್ದಾಣಗಳಲ್ಲಿ ಶೌಚಾಲಯಗಳು, ಬೆಳಕಿನ ವ್ಯವಸ್ಥೆ, ಮಾಹಿತಿ ವ್ಯವಸ್ಥೆ ಮುಂತಾದ ಸೌಕರ್ಯಗಳನ್ನು ಅಳವಡಿಸಬೇಕು. ಪ್ರಯಾಣಿಕರು, ವಿಶೇಷವಾಗಿ ಮಹಿಳೆಯರು ಮತ್ತು ಲೈಂಗಿಕ ಅಲ್ಪಸಂಖ್ಯಾತರಿಗೆ ಸುರಕ್ಷಿತ ಮತ್ತು ವಿಶ್ವಾಸಾರ್ಹ ವಾತಾವರಣ ಸೃಷ್ಟಿಸುತ್ತದೆ’ ಎಂದು ಹೇಳಿದೆ.

ಸ್ಪರ್ಧಾವಾಣಿ ಓದಿರಿ

ಕುಂ.ವೀ ಗೆ ಮತ್ತೆ ಬೆದರಿಕೆ ಪತ್ರ

ಕೊಟ್ಟೂರು (ವಿಜಯನಗರ ಜಿಲ್ಲೆ): ಸಾಹಿತಿ ಕುಂ. ವೀರಭದ್ರಪ್ಪ ಅವರಿಗೆ ಈಚೆಗೆ ಮತ್ತೆ ಬೆದರಿಕೆ ಪತ್ರ ಬಂದಿದೆ. ‘ಇಂದಲ್ಲ ನಾಳೆ ಅಧರ್ಮದಿಂದ ತುಂಬಿರುವ ನಿಮ್ಮ ಜೀವ ಎಂಬ ಅಜ್ಞಾನದ ದೀಪ ಆರುವುದು ನಿಶ್ಚಿತ’ ಎಂದು ಪತ್ರದಲ್ಲಿದೆ.

‘ಕರ್ನಾಟಕ ರಾಜ್ಯದಲ್ಲಿ ಕಂಪನ ಆಡಳಿತ ಪ್ರಾರಂಭವಾಗಿದ್ದು ಹಿಂದೂ ಸಜ್ಜನರಿಗೆ ಇದು ಸಂಕಷ್ಟದ ಸರ್ಕಾರ’ ಎಂದು ಬರೆದಿರುವುದಲ್ಲದೆ, ‘ನಿಮ್ಮಂತಹ ದುರ್ಜನ ದೇಶ ದ್ರೋಹಿಗಳಿಗೆ ಮತ್ತು ಮತಾಂಧ ಮುಸ್ಲಿಂರಿಗೆ, ಮತಾಂತರ ಕ್ರೈಸ್ತರಿಗೆ ಸಂಪ್ರಿಯ ಸರ್ಕಾರ’ ಎಂದು ಬರೆದಿದೆ.

ಪತ್ರದ ಕುರಿತು ಕುಂ.ವೀ ಅವರನ್ನು ವಿಚಾರಿಸಿದಾಗ, ‘ನನಗೆ ಇದುವರೆಗೂ ಬಂದಿರುವ ಪತ್ರಗಳಲ್ಲಿ ಇದು 16 ನೇ ಪತ್ರವಾಗಿದ್ದು ಇಂತಹ ಬೆದರಿಕೆ ಪತ್ರಗಳಿಗೆ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸುವುದಿಲ್ಲ ಈ ಪತ್ರಗಳು ನನಗೆ ಪ್ರೇಮ ಪತ್ರಗಳೆಂದು ಭಾವಿಸಿದ್ದೇನೆ’ ಎಂದು ತಿಳಿಸಿದರು.

ಪಟ್ಟಣದ ಪಿಎಸ್‌ಐ ಪತ್ರವನ್ನು ಪಡೆದುಕೊಂಡಿದ್ದು ವಿಚಾರಣೆ ಕೈಗೊಳ್ಳುವುದಾಗಿ ತಿಳಿಸಿರುವುದಾಗಿ ಕುಂ.ವೀ ಹೇಳಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ರಾಮನಗರ ವಿಭಾಗ: ಸಂಚಾರ ಶಾಖೆ

ಮೊದಲನೇ ಮಹಡಿ, ವಾಹನ ನಿಲ್ದಾಣ, ಐಜೂರು ವೃತ್ತ, ರಾಮನಗರ–562159

ಸಂ: ಕರಾಸಾ.ರಾನವಿ.ಸಂ.ವಾ/429/2023–24 ದಿನಾಂಕ:25.05.2023

ಇ–ಟೆಂಡರ್ ಪ್ರಕಟಣೆ ಸಂಖ್ಯೆ: 01/2023–24

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು, ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ **ಮಾಗಡಿ, ಚನ್ನಪಟ್ಟಣ, ಕೋಡಿಹಳ್ಳಿ, ಕೋಡಂಬಳ್ಳಿ ಹಾಗೂ ಆನೇಕಲ್** ಬಸ್ ಘಟಕ/ನಿಲ್ದಾಣಗಳಲ್ಲಿ ಖಾಲಿಯಿರುವ / ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ / ತೆರೆದ ಸ್ಥಳದ ಮಳಿಗೆಗಳಿಗೆ 03 ವರ್ಷಗಳವರೆಗೆ ಇ–ಟೆಂಡರ್ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡಲು **ದಿನಾಂಕ: 22.06.2023ರಂದು ಬೆಳಿಗ್ಗೆ 11:00 ಗಂಟೆಗೆ** ಇ–ಟೆಂಡರ್ ನಡೆಸಲು / ತೆರೆಯಲು ಸಮಯವನ್ನು ನಿಗಧಿಪಡಿಸಲಾಗಿರುತ್ತದೆ. **ದಿನಾಂಕ: 29.05.2023 ರಿಂದ** ಇ–ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **ದಿನಾಂಕ: 20.06.2023 ರಂದು 17:00 ಗಂಟೆಯವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ.** ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ–562159ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: **7760990852.**

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ, ರಾಮನಗರ.

ವಾಸಾಸಂಇ/ವಾಪ್ರ/ಜಿಎ/145/2023–24

ಸಾರ್ವಜನಿಕ ಪ್ರಕಟಣೆ

ಶ್ರೀ ಹೇಮಂತ್ ರಾಜು

ಶ್ರೀ ಹೇಮಂತ್ ರಾಜು ಎಂಬ ವ್ಯಕ್ತಿಯು ಯುದ್ಧ ಭೂಮಿ ಹೋರಾಟ ಸೇನೆ (ರಿ) ಗಜ್ಜಗಾರಗುಪ್ಪೆ ಗ್ರಾಮ ಮತ್ತು ಅಂಚೆ, ಮೂಡಬಾಳ ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ, ಈ ಸಂಘದ ಲೆಟರ್ ಹೆಡ್‌ಗಳನ್ನು ಏಕಪಕ್ಷೀಯವಾಗಿ, ಕಾನೂನು ಬಾಹಿರವಾಗಿ ಇತರೆ ಪ್ರಾಧಿಕಾರಗಳಲ್ಲಿ ಸಮಾಜದ ಗಣ್ಯ ವ್ಯಕ್ತಿಗಳು, ಸರ್ಕಾರಿ ಅಧಿಕಾರಿಗಳು ಹಾಗೂ ಇತರರ ಮೇಲೆ ದೂರು ಸಲ್ಲಿಸಲು ಅಕ್ರಮವಾಗಿ ಉಪಯೋಗಿಸಿಕೊಂಡು ಹಲವಾರು ವ್ಯಕ್ತಿಗಳನ್ನು ಬೆದರಿಸುವ ಮೂಲಕ ಹಣವನ್ನು ವಸೂಲಿ ಮಾಡುವ ಮತ್ತು ಒತ್ತಡ ಹಾಕುವ ಮೂಲಕ ಸವಲತ್ತುಗಳನ್ನು ಪಡೆಯುವ ಹವ್ಯಾಸಿ ವ್ಯಕ್ತಿಯಾಗಿರುತ್ತಾರೆ. ಈ ಸಂಬಂಧ ಶ್ರೀ.ಹರೀಶ್ ಎ.ಎಸ್. ಹೆಸರಿನ ವಕೀಲರು ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು, ಇವರಿಗೆ ನೀಡಿದ ದೂರಿನನ್ವಯ, ಸಮಗ್ರವಾದ ತನಿಖೆಯನ್ನು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 25ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಂಡಿರುತ್ತಾರೆ. ತನಿಖೆಯಲ್ಲಿ ಈ ಸಂಘವು ಕರ್ನಾಟಕ ಸಂಘಗಳ ನೊಂದಣಿ ಕಾಯ್ದೆ 1960ರಡಿ ಸಂಖ್ಯೆ : ಆರ್.ಎಂ.ಜಿ/ಎಸ್–98/2015–16 ದಿನಾಂಕ : 07–11–2015 ರಲ್ಲಿ ನೋಂದಣಿ ಆಗಿದ್ದು, ಸದರೀ ಸಂಘವು ಅದೇ ಕಾಯ್ದೆಯ ಕಲಂ 3, 9, 10, 11, 12 ಮತ್ತು 13ರ ಸ್ಪಷ್ಟ ಉಲ್ಲಂಘನೆ ಮಾಡಿದ್ದು, ಸಂಘದ ನಿಬಂಧನೆ ಸಂಖ್ಯೆ : 29ರ ಪ್ರಕಾರ ಸಂಘದ ಎಲ್ಲಾ ಪತ್ರ ವ್ಯವಹಾರಗಳನ್ನು ಹಣಕಾಸಿನ ವ್ಯವಹಾರಗಳನ್ನು ಪ್ರಧಾನ ಕಾರ್ಯದರ್ಶಿಯೊಂದಿಗೆ ಅಧ್ಯಕ್ಷರು ಜಂಟಿಯಾಗಿ ನಿರ್ವಹಿಸುವ ಬದಲು **ಶ್ರೀ ಹೇಮಂತ್ ರಾಜು ರವರು ನಿಬಂಧನೆ ಸಂಖ್ಯೆ : 29ನ್ನು ಉಲ್ಲಂಘನೆ ಮಾಡಿ ಸಂಘದ ಲೆಟರ್ ಹೆಡ್‌ಗಳನ್ನು ನಿಯಮ ಬಾಹಿರವಾಗಿ ಮತ್ತು ಏಕಪಕ್ಷೀಯವಾಗಿ ಮನಸೋ ಇಚ್ಛೆ ದುರ್ಬಳಕೆ ಮಾಡುತ್ತಿರುವುದನ್ನು ದೃಢಪಡಿಸಿಕೊಂಡ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು ದಿನಾಂಕ : 06–05–2023 ರಂದು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27(2)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆದೇಶ ಸಂಖ್ಯೆ : ಉನಿರಾ/ಕ.ಸ.ನೋಂ.ರದ್ದತಿ/01/2022–23 ರಲ್ಲಿ ಸದರೀ “ಯುದ್ಧ ಭೂಮಿ ಹೋರಾಟ ಸೇನೆ” ಎಂಬ ಸಂಘದ ನೋಂದಣಿಯನ್ನು ರದ್ದು ಪಡಿಸಿರುತ್ತಾರೆ.**

“ಮುಂದುವರೆದು, ಈ ಸಂಘದ ಲೆಟರ್ ಹೆಡ್‌ಗಳನ್ನು ಏಕಪಕ್ಷೀಯವಾಗಿ ಸಂಘದ ಅಧ್ಯಕ್ಷರಾದ ಶ್ರೀ ಹೇಮಂತ್ ರಾಜು ರವರು ಮಾತ್ರ ಸಹಿ ಮಾಡಿ ಕಾನೂನುಬಾಹಿರವಾಗಿ ಏಕಪಕ್ಷೀಯವಾಗಿ ವ್ಯವಹರಿಸಿರುವ ಕಾರಣ, ಸದರಿಯವರ ವಿರುದ್ಧ ಸಕ್ಷಮ ಪ್ರಾಧಿಕಾರದಲ್ಲಿ ಸೂಕ್ತ ಸಿವಿಲ್ ಹಾಗೂ ಕ್ರಿಮಿನಲ್ ಕ್ರಮ ಜರುಗಿಸಲು ಅರ್ಜಿದಾರರು ಹಾಗೂ ಬಾಧಿತರಾದವರು ಸ್ವತಂತ್ರರಿರುತ್ತಾರೆ” ಎಂದು ಸ್ಪಷ್ಟ ಪಡಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಹೇಮಂತ್ ರಾಜು, ಯುದ್ಧ ಭೂಮಿ ಹೋರಾಟ ಸೇನೆ ಇವರಿಂದ ದೌರ್ಜನ್ಯಕ್ಕೆ ಒಳಗಾಗಿರುವ ಹಾಗೂ ಭಾದಿತರಾದವರು ಸಿವಿಲ್ ಹಾಗೂ ಕ್ರಿಮಿನಲ್ ಮೊಕದ್ದಮೆ ಹೂಡಲು ಸಹಕಾರ ಸಂಘಗಳ ಉಪ ನಿಬಂಧಕರು ಅವಕಾಶವನ್ನು ಕಲ್ಪಿಸಿದ್ದು ಸದರೀ ಅವಕಾಶವನ್ನು ಬಾಧಿತರು ಉಪಯೋಗಿಸಕೊಳ್ಳಬಹುದೆಂಬ ಅಂಶವನ್ನು ಈ ಪ್ರಕಟಣೆಯ ಮೂಲಕ ಸ್ಪಷ್ಟಪಡಿಸಲಾಗಿದೆ.

ಪ್ರಕಟಣೆ ನೀಡಿದವರು
ಹರೀಶ್ ಎ.ಎಸ್, ವಕೀಲರು
ಮೊ: 9902320931

ಬ್ಯಾಂಕ್ ಆಫ್ ಬರೋಡ
बैंक ऑफ़ बड़ौदा
Bank of Baroda

ಪ್ರಾದೇಶಿಕ ಕಛೇರಿ : ಬೆಂಗಳೂರು (ಉತ್ತರ)
ನಂ. 41/2, 4ನೇ ಮಹಡಿ, ವಿಜಯ ಟವರ್ಸ್, ಎಂ.ಜಿ. ರಸ್ತೆ, ಬೆಂಗಳೂರು – 560001.

ಗುತ್ತಿಗೆ ಆಧಾರದ ಮೇಲೆ ಆರ್ಥಿಕ ಸಾಕ್ಷರತಾ ಸಲಹೆಗಾರರ ನೇಮಕ

ಬ್ಯಾಂಕ್ ಆಫ್ ಬರೋಡ, ಭಾರತ ಸರಕಾರದ ಒಂದು ಸಂಸ್ಥೆ, ಇವರು ಗುತ್ತಿಗೆ ಆಧಾರದ ಮೇಲೆ ಹಣಕಾಸು ಸಾಕ್ಷರತಾ ಸಮಾಲೋಚಕರನ್ನು ನೇಮಕಗೊಳಿಸಲು ಯಾವುದೇ ರಾಷ್ಟ್ರೀಕೃತ ಬ್ಯಾಂಕ್ / ಆರ್ ಆರ್ ಬಿ /ಖಾಸಗಿ ಬ್ಯಾಂಕ್ ಗಳಲ್ಲಿ ಕನಿಷ್ಠ 5 ವರ್ಷಗಳ ಅನುಭವ ಹೊಂದಿರುವ ನಿವೃತ್ತ ಬ್ಯಾಂಕರ್ಗಳು ಅಥವಾ ಕನಿಷ್ಠ 5 ವರ್ಷಗಳ ಅನುಭವ ಹೊಂದಿರುವ ಬಿಸಿನೆಸ್ ಕರೆಸ್ಪಾಂಡೆಂಟ್ / ಬಿ ಸಿ ಸಂಯೋಜಕರು ಅಥವಾ ಕನಿಷ್ಠ 5 ವರ್ಷಗಳ ಅನುಭವವಿರುವ ನಿವೃತ್ತ ಆರ್ ಎಸ್ ಇ ಟಿ ಐ ನಿರ್ದೇಶಕರು /ಬೋಧಕವರ್ಗ ಮತ್ತು ಅರ್ಜಿ ಸಲ್ಲಿಸುವ ಸಮಯದಲ್ಲಿ ವಯಸ್ಸು 64 ವರ್ಷಗಳನ್ನು ಮೀರದಿರುವವರಿಂದ ಯಲಹಂಕ ಕೇಂದ್ರ (ಬೆಂಗಳೂರು ಜಿಲ್ಲೆ), ಕರ್ನಾಟಕ ಇಲ್ಲಿ ಹಣಕಾಸು ಸಾಕ್ಷರತಾ ಸಲಹೆಗಾರರಾಗಿ ನೇಮಕಗೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ . ಸಂಪೂರ್ಣ ವಿವರಗಳಿಗೆ ನಮ್ಮ ಬ್ಯಾಂಕಿನ ವೆಬ್ ಸೈಟ್ www.bankofbaroda.in ಇಲ್ಲಿಗೆ ಭೇಟಿಕೊಡಿ. ನಮ್ಮ ಕಚೇರಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 30.06.2023.

ದಿನಾಂಕ: 01.06.2023 ಸಹಿ/– ಪ್ರಾದೇಶಿಕ ಪ್ರಬಂಧಕರು

ರೈಲು ಭೂಮಿ ಅಭಿವೃದ್ಧಿ ಪ್ರಾಧಿಕಾರ

(ಭಾರತ ಸರ್ಕಾರದ ರೈಲ್ವೆ ಸಚಿವಾಲಯ ಅಡಿಯಲ್ಲಿನ ಒಂದು ಶಾಸನಬದ್ಧ ಪ್ರಾಧಿಕಾರ)
ಯೂನಿಟ್ ನಂ. 702–ಬಿ, 7ನೇ ಮಹಡಿ, ಕನ್ನೆಕ್ಸಸ್ ಟವರ್–2, ಡಿಎಂಆರ್‌ಸಿ ಬಿಲ್ಡಿಂಗ್, ಅಜ್ಮೀರಿ ಗೇಟ್, ನವದೆಹಲಿ–110002 ಫೋನ್: +91–11–23232854, ಫ್ಯಾಕ್ಸ್: +91–11–23232835

ಇ–ಟೆಂಡರ್ ಮುಖಾಂತರ ಪ್ರಸ್ತಾವಣೆಗೆ ಮನವಿ
(ಆರ್‌ಎಫ್‌ಪಿ ನೋಟಿಸ್ ನಂ. ಆರ್‌ಎಲ್‌ಡಿಎ/2023/ಆರ್‌ಎಫ್‌ಪಿ/ಸಿಡಿ/31 ದಿನಾಂಕ 29.05.2023)

ರೇಣಿಗುಂಟದಲ್ಲಿ ಹೋಟೆಲ್ ಕೆಆರ್ ಭವನ ಹತ್ತಿರದ ಸ್ಟೇಷನ್ ರಸ್ತೆಗುಂಟ ಇರುವ 5,532.00 ಚ.ಮೀ. ರೈಲ್ವೆಯ ಭೂ ಪ್ರದೇಶದಲ್ಲಿ ವಾಣಿಜ್ಯ ಅಭಿವೃದ್ಧಿಗಾಗಿ 45 ವರ್ಷಗಳ ಭೋಗ್ಯ ಮಂಜೂರಾತಿ

ನಿವೇಶನದ ವಿವರ	ನಿವೇಶನದ ವಿಸ್ತೀರ್ಣ	ಬಿಲ್ಟಪ್ ಪ್ರದೇಶ	ಬಿಡ್ ಸೆಕ್ಯೂರಿಟಿ	ಮೀಸಲು ಬೆಲೆ
ರೇಣಿಗುಂಟ ಹೋಟೆಲ್ ಕೆಆರ್ ಭವನ ಹತ್ತಿರದ ಸ್ಟೇಷನ್ ರಸ್ತೆಗುಂಟ	5,532.00ಚ.ಮೀ.	7,502.42ಚ.ಮೀ.	ರೂ. 25.00 ಲಕ್ಷ	ರೂ. 6.77 ಕೋಟಿ

ವೆಬೆಕ್ಸ್‌ನಲ್ಲಿ ಬಿಡ್‌ಪೂರ್ವ ಆನ್‌ಲೈನ್ ಸಭೆ: 13 ಜೂನ್, 2023 ರಂದು 11:30 ಗಂಟೆ.
(ಬಿಡ್‌ಪೂರ್ವ ಆನ್‌ಲೈನ್ ಸಭೆಯ ವಿವರಗಳನ್ನು ಡೆ. ಜನರಲ್ ಮ್ಯಾನೇಜರ್/ಮಾರ್ಕೆಟಿಂಗ್/ಎಸ್‌ಸಿ ಇವರಿಂದ ಪಡೆದುಕೊಳ್ಳುವುದು)
ಆನ್‌ಲೈನ್‌ನಲ್ಲಿ ಇ–ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 10.07.2023 ರಂದು 15:00 ಗಂಟೆವರೆಗೆ.
ಯೋಜನೆಯ ಕುರಿತಾದ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ www.rlda.indianrailways.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನ www.tenderwizard.in/RLDA ಪೋರ್ಟಲ್‌ನಲ್ಲಿರುವ ‘ಇ–ಟೆಂಡರ್’ ಶೀರ್ಷಿಕೆಯನ್ನು ಪರಿಶೀಲಿಸಿರಿ.
ಯಾವುದೇ ಸ್ಪಷ್ಟೀಕರಣಗಳಿಗಾಗಿ, ದಯವಿಟ್ಟು ಇವರನ್ನು ಸಂಪರ್ಕಿಸಿರಿ:–

ಡೆ. ಜನರಲ್ ಮ್ಯಾನೇಜರ್ ಮಾರ್ಕೆಟಿಂಗ್/ಎಸ್‌ಸಿ	ಜಾ.ಜನರಲ್ ಮ್ಯಾನೇಜರ್ ಪ್ರಾಜೆಕ್ಟ್/ಎಸ್‌ಸಿ	ಚೀಫ್ ಪ್ರಾಜೆಕ್ಟ್ ಮ್ಯಾನೇಜರ್ ಸಿಕಂದರಾಬಾದ್	ಕನ್ಸಲ್ಟಂಟ್/ಆರ್‌ಎಲ್‌ಡಿಎ ಶ್ರೀ. ವಾಸುದೇವ
M: 73375 50024 rorldasc@gmail.com	M: 94404 67999 ksraorlda@gmail.com	M: 63054 89280 cpmrldasc22@gmail.com	M: 86503 19273 imvdeva07@gmail.com

ಸೂಚನೆ:– ತಿದ್ದುಪಡಿ ಅಥವಾ ಮಾರ್ಪಾಡು ಉಂಟಾದಲ್ಲಿ, ಅಂತಹುದನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
ಡಿಜಿಎಂ/ಟೆಂಡರ್, (M) 90131 64466

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: Y/E.29/2023-24/14
ದಿನಾಂಕ: 26.05.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಮೈಸೂರಿನ ರೈಲ್ವೇ ಆಸ್ಪತ್ರೆಯಲ್ಲಿ ಬೆಳಕಿನ ವ್ಯವಸ್ಥೆಯ ಮೇಲಿನ ಸುಧಾರಣಾ ಕಾಮಗಾರಿ.	ರೂ. 57,63,062/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19.06.2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್, ಮೈಸೂರು
PUB/132/AAD/PRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: B/TRD.2023-24/03
ದಿನಾಂಕ: 29.05.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬಂಗಾರಪೇಟೆ: ಬಂಗಾರಪೇಟೆ ಟಿಎಸ್‌ಎಸ್‌ನ ಟಿಆರ್ 02 ರಲ್ಲಿ ಪುನರ್ವಸತಿ / ಕಾಲ ಕಾಲದ ಕೂಲಂಕುಷವಾದ ಪರೀಕ್ಷೆ.	ರೂ. 1,07,57,923.70

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19.06.2023, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ ಟ್ರ್ಯಾಕ್ಷನ್ ವಿನಿಯೋಗ, ಬೆಂಗಳೂರು
PUB/133/AAD/PRB/SWR/2023-24
S.W.Railways SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 04–ಸಿಡಬ್ಲ್ಯುಎಂ–ಯುಬಿಎಲ್‌ಎಸ್–2023–24
ದಿನಾಂಕ : 26–05–2023
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಮುಕ್ತ ಇ–ಟೆಂಡರ್ ಕರೆಯುವುದರಿಂದ ಹುಬ್ಬಳ್ಳಿಯ ಕ್ಯಾರೇಜ್ ರಿಪೇರಿ ಕಾರ್ಯಾಗಾರದಲ್ಲಿ ಅಗತ್ಯಕ್ಕೆ ತಕ್ಕಂತೆ ಮತ್ತು ಡ್ರಾಯಿಂಗ್‌ಗೆ ಅನುಸಾರವಾಗಿ ಟರ್ನ್‌ಕೀ ಆಧಾರದ ಮೇಲೆ ಹಾಲಿ ಇರುವ ವ್ಯವಸ್ಥೆಗೆ ಸಂಯೋಜಿತವಾಗುವಂತೆ ಪಂಪ್ ಹೌಸ್‌ನೊಂದಿಗೆ ಪ್ರೆಷರೈಸ್ಡ್ ಫೈರ್ ಹೈಡ್ರೆಂಟ್ ವ್ಯವಸ್ಥೆಯ ಸರಬರಾಜು, ಸ್ಥಾಪನೆ ಮತ್ತು ಕಾರ್ಯಾರಂಭಗೊಳಿಸುವುದು.	ರೂ. 79,14,116/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 16–06–2023 ರಂದು 15:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಯಾವುದೇ ತಿದ್ದುಪಡಿಗಳಿಗಾಗಿ ಮುಕ್ತಾಯದ ದಿನಾಂಕದವರೆಗೆ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.
ಮುಖ್ಯ ಕಾರ್ಯಾಗಾರ ವ್ಯವಸ್ಥಾಪಕರು ಹುಬ್ಬಳ್ಳಿ
ಪಿಯುಬಿ/127/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24
S.W.Railways SWRRLY SWRRLY

AstraZeneca

ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್

CIN: L24231KA1979PLC003563
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬೆಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ ಔಟರ್ ರಿಂಗ್ ರೋಡ್, ಬೆಂಗಳೂರು – 560045
ದೂ.: +91 80 6774 8000. ವೆಬ್: www.astrazeneca.com/india

31ನೇ ಮಾರ್ಚ್, 2023ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವರ್ಷದ ಆರ್ಥಿಕ ಫಲಿತಾಂಶಗಳ ಹೇಳಿಕೆ

ರೂ. ಲಕ್ಷಗಳಲ್ಲಿ (ಪ್ರತಿ ಷೇರಿನ ಗಳಿಕೆಯ ಡೇಟಾ ಹೊರತುಪಡಿಸಿ)

ಕ್ರ. ಸಂ.	ವಿವರಗಳು	31/03/2023ಕ್ಕೆ ಕೊನೆಗೊಂಡ 3 ತಿಂಗಳಿಗೆ	31/03/2022ಕ್ಕೆ ಕೊನೆಗೊಂಡ ಹಿಂದಿನ ಅವಧಿಯ ವರ್ಷದಲ್ಲಿನ ಅಂಕಿ ಅಂಶಗಳು	31/03/2023ಕ್ಕೆ ಕೊನೆಗೊಂಡ ವರ್ಷಕ್ಕೆ	31/03/2022ಕ್ಕೆ ಕೊನೆಗೊಂಡ ಹಿಂದಿನ ವರ್ಷಕ್ಕೆ
		ಸೂಚನೆ 3 ಅನ್ನು ನೋಡಿ	ಸೂಚನೆ 3 ಅನ್ನು ನೋಡಿ	ಪರಿಶೋಧಿತ	ಪರಿಶೋಧಿತ
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	29,270.07	23,564.72	1,02,907.26	82,035.77
2	ತೆರಿಗೆಗೆ ಮುನ್ನ ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	2,327.98	3,703.05	13,410.46	8,303.62
3	ತೆರಿಗೆ ಕಳೆದು, ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	1,727.12	2,798.33	9,929.25	6,159.28
4	ತೆರಿಗೆ ಕಳೆದು, ಅವಧಿಗೆ ಸಮಗ್ರ ಆದಾಯ	1,518.53	2,710.71	9,667.82	5,985.98
5	ಈಕ್ವಿಟಿ ಷೇರು ಬಂಡವಾಳ	500.00	500.00	500.00	500.00
6	ಇತರೆ ಈಕ್ವಿಟಿ	–	–	58,368.83	50,639.29
7	ಪ್ರತಿ ಷೇರಿಗೆ ಮೂಲ ಮತ್ತು ಡೈಲ್ಯೂಟೆಡ್ ಗಳಿಕೆ (ತಲಾ 2 ರೂ.ನಂತೆ)	6.91	11.19	39.72	24.64

ಟಿಪ್ಪಣಿ:
1. ಇಲ್ಲಿ ಮೇಲೆ ನೀಡಿರುವುದು ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಬಂಧನೆಗಳು, 2015 ನಿಬಂಧನೆ 33ರ ಅನ್ವಯ ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ಸವಿವರವಾದ ವರದಿಯ ಉದ್ಧೃತ ಭಾಗ. ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ಪೂರ್ಣ ವರದಿ ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟುಗಳಲ್ಲಿ (www.nseindia.com, www.bseindia.com) ಮತ್ತು ಕಂಪನಿಯ ವೆಬ್‌ಸೈಟಿನಲ್ಲಿ (www.astrazeneca.com/india) ಲಭ್ಯವಿದೆ.
2. ಈ ಫಲಿತಾಂಶ ಕಂಪನಿಗಳ ಅಧಿನಿಯಮ, 2013ರ ಸೆಕ್ಷನ್ 133ರಲ್ಲಿ ಹೇಳಲಾಗಿರುವ ಕಂಪನಿಗಳ (ಭಾರತೀಯ ಅಕೌಂಟಿಂಗ್ ಮಾನಗಳು) ನಿಯಮಗಳು, 2015 (Ind AS) ಹಾಗೂ ಅನ್ವಯಿಸುವ ಮಟ್ಟಿಗೆ ಇತರ ಮಾನ್ಯತೆ ಪಡೆದ ಅಕೌಂಟಿಂಗ್ ಅಭ್ಯಾಸಗಳು ಮತ್ತು ಪಾಲಿಸಿಗಳ ಅನುಸಾರ ಸಿದ್ಧಪಡಿಸಲಾಗಿದೆ.
3. 2023 ಮಾರ್ಚ್, 31ಕ್ಕೆ ಹಾಗೂ 2022 ಮಾರ್ಚ್, 31ಕ್ಕೆ ಕೊನೆಯಾದ ತ್ರೈಮಾಸಿಕಗಳ ಅಂಕಿ–ಅಂಶಗಳನ್ನು ನೀಡುವಾಗ ಆಯಾ ಇಡೀ ವಿತ್ತೀಯ ವರ್ಷದ ಪರಿಶೋಧಿತ ಅಂಕಿ–ಅಂಶಗಳನ್ನು, ಶಾಸನಬದ್ಧ ಲೆಕ್ಕಪರಿಶೋಧಕರ ಸೀಮಿತ ಪರಿಶೀಲನೆಗೆ ಒಳಪಡಿಸಿದ್ದ ಆಯಾ ವಿತ್ತೀಯ ವರ್ಷಗಳ ಆರಂಭದಿಂದ ಮೂರನೆಯ ತ್ರೈಮಾಸಿಕದ ಕೊನೆಯ ದಿನಾಂಕದವರೆಗಿನ ಅಂಕಿ–ಅಂಶಗಳ ಜೊತೆ ತಾಳೆಹಾಕಿ ನೀಡಲಾಗಿದೆ.

ನಿರ್ದೇಶಕರ ಮಂಡಳಿಯ ಆದೇಶದಂತೆ,
ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್‌ಗಾಗಿ
ಸಂಜೀವ ಕುಮಾರ್ ಪಾಂಚಾಲ್
ಮ್ಯಾನೇಜಿಂಗ್ ಡೈರೆಕ್ಟರ್
DIN - 9823879

ಸ್ಥಳ: ಬೆಂಗಳೂರು
ದಿನಾಂಕ: ಮೇ 30, 2023

के आई ओ सी एल लिमिटेड
KIOCL LIMITED
KUDREMUKH
(ಭಾರತ ಸರ್ಕಾರದ ಒಂದು ಉದ್ಯಮ)
CIN - L13100KA1976GOI002974
ದೂ & ಫ್ಯಾಕ್ಸ್‌ನಂ 080 - 25531525, ಇಮೇಲ್ : cs@kioclltd.in,
ವೆಬ್‌ಸೈಟ್ : www.kioclltd.in

2023 ಮಾರ್ಚ್ 31ಕ್ಕೆ ಅಂತ್ಯಗೊಂಡ ತ್ರೈಮಾಸಿಕಕ್ಕಾಗಿ ಲೆಕ್ಕ ಪರಿಶೋಧನೆ ಮಾಡಲ್ಪಟ್ಟ ಹಣಕಾಸು ಫಲಿತಾಂಶಗಳು

(EPS ಹೊರತುಪಡಿಸಿ ಲಕ್ಷಗಳಲ್ಲಿ ₹)

ಕ್ರ.ಸಂ.	ವಿವರಗಳು	ಅಂತ್ಯಗೊಂಡ ತ್ರೈಮಾಸಿಕ			ಅಂತ್ಯಗೊಡ ವರ್ಷ	
		31.03.2023 (ಆಡಿಟ್ ಮಾಡಲಾದ)	31.12.2022 (ಆಡಿಟ್ ಮಾಡದ)	31.03.2022 (ಆಡಿಟ್ ಮಾಡಲಾದ)	31.03.2023 (ಆಡಿಟ್ ಮಾಡಲಾದ)	31.03.2022 (ಆಡಿಟ್ ಮಾಡಲಾದ)
	1	2	3	4	5	6
1	ಕಾರ್ಯಾಚರಣೆಯಿಂದ ಒಟ್ಟು ಆದಾಯ	73,474	28,789	1,13,880	1,54,342	3,00,645
2	ಅವಧಿಗಾಗಿ ನಿವ್ವಳ ಲಾಭ /(ನಷ್ಟ) (ತೆರಿಗೆಗಿಂತ ಮುಂಚೆ, ಹೊರತುಪಡಿಸಲಾದ ಮತ್ತು /ಅಥವಾ ಅಸಾಧಾರಣ ವಸ್ತುಗಳು)	5,761	(3,388)	24,099	(12,276)	41,103
3	ಅವಧಿಗೆ ನಿವ್ವಳ ಲಾಭ/(ನಷ್ಟ) (ತೆರಿಗೆ ಮೊದಲು, ಅಸಾಧಾರಣ ಮತ್ತು /ಅಥವಾ ಅಸಾಧಾರಣ ವಸ್ತುಗಳ ನಂತರ)	5,761	(3,388)	24,099	(12,276)	41,103
4	ಅವಧಿಗೆ ನಿವ್ವಳ ಲಾಭ/(ನಷ್ಟ) (ತೆರಿಗೆ ನಂತರ, ಅಸಾಧಾರಣ ಮತ್ತು/ ಅಥವಾ ಅಸಾಧಾರಣ ವಸ್ತುಗಳ ನಂತರ)	8,221	(3,388)	19,394	(9,767)	31,341
5	ಅವಧಿಗೆ ಒಟ್ಟುಸಮಗ್ರ ಆದಾಯ {(ಅವಧಿಗೆ ಸರಿಹೊಂದುವ ಲಾಭ / (ನಷ್ಟ) (ತೆರಿಗೆಯ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆಯ ನಂತರ)}	8,629	(3,388)	19,741	(9,359)	31,688
6	ಈಕ್ವಿಟಿ ಷೇರ್ ಕ್ಯಾಪಿಟಲ್	60,775	60,775	60,775	60,775	60,775
7	ಹಿಂದಿನ ವರ್ಷದ ಆಡಿಟ್ ಮಾಡಲಾದ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವಂತೆ ಮೀಸಲುಗಳು (ಮರುಮೌಲ್ಯಮಾಪನ ಮೀಸಲು ಹೊರತುಪಡಿಸಿ)	-	-	-	1,39,429	1,53,589
8	ಪ್ರತಿ ಷೇರ್‌ಗೆ ಗಳಿಕೆಗಳು (ಪ್ರತಿಯೊಂದಕ್ಕೆ 10 /) (ಮುಂದುವರಿದ ಮತ್ತು ಮುಂದುವರಿಸಲಾಗದ ಕಾರ್ಯಾಚರಣೆಗಳು) ಬೇಸಿಕ್ ಮತ್ತು ಡೈಲ್ಯೂಟ್ ಮಾಡಲಾದ	1.35	(0.56)	3.19	(1.61)	5.16

ಗಮನಿಸಿ :
1 ಮಾರ್ಚ್ 31, 2023 ಕ್ಕೆ ಕೊನೆಗೊಂಡ ತ್ರೈಮಾಸಿಕದ ಹಣಕಾಸು ಫಲಿತಾಂಶಗಳ ಸಂಪೂರ್ಣ ಫಾರ್ಮಾಟ್ ಸ್ಟಾಕ್ ಎಕ್ಸ್‌ಚೇಂಜ್ (ಗಳು) ವೆಬ್‌ಸೈಟ್‌ಗಳಾದ www.nseindia.com, www.bseindia.com, www.msei.in ಮತ್ತು ಕಂಪನಿಯ ವೆಬ್‌ಸೈಟ್ www.kioclltd.in ನಲ್ಲಿ ಲಭ್ಯವಿದೆ.
2 ಕಂಪನಿಯ ಮೇಲಿನ ಫಲಿತಾಂಶಗಳನ್ನು 30.05.2023 ರಂದು ನಡೆದ ಆಡಿಟ್ ಕಮಿಟಿಯಿಂದ ಪರಿಶೀಲಿಸಲಾಗಿದೆ ಮತ್ತು ನಿರ್ದೇಶಕ ಮಂಡಳಿಯಿಂದ ಅನುಮೋದಿಸಲ್ಪಟ್ಟಿದೆ

ಮಂಡಳಿಯಿಂದ ಆದೇಶ
KIOCL ಲಿಮಿಟೆಡ್
ಸಹಿ/-
ಮನೋಜ್ ಕುಮಾರ್ ಝೂವರ್
ನಿರ್ದೇಶಕರು (ಹಣಕಾಸು)
(DIN 07306454)

ಸ್ಥಳ : ಬೆಂಗಳೂರು
ದಿನಾಂಕ : 30.05.2023

COFFEE DAY ENTERPRISES LTD.

Coffee Day — Brewing new possibilities.

Registered and Corporate Office: 23/2, Coffee Day Square, Vittal Mallya Road, Bengaluru - 560 001, Karnataka, India
Tel: + 91 80 4001 2345; **Fax:** + 91 80 4001 2650;
Website: www.coffeeday.com
Corporate Identification Number: L55101KA2008PLC046866

Financial Results for the Quarter/Year ended 31st March, 2023

(₹ in Crores except per share data)

Particulars	Quarter ended 31st March, 2023 (Audited)	Year ended 31st March, 2023 (Audited)	Quarter ended 31st March, 2022 (Audited)	Year ended 31st March, 2022 (Audited)
Total income from operations (net)	301.19	1,028.91	226.79	657.88
Net Profit/(loss) from ordinary activities after tax	34.98	(387.17)	58.67	(130.73)
Net Profit /(loss) for the period after tax (after Extraordinary items)	34.98	(387.17)	58.67	(130.73)
Equity Share Capital	211.25	211.25	211.25	211.25
Reserves (excluding Revaluation Reserve as shown in the Balance Sheet of previous year)				
Earnings Per Share (before extraordinary items) (of ₹ 10/- each)				
Basic :	1.58	(17.98)	2.48	(5.71)
Diluted :	1.58	(17.98)	2.48	(5.71)
Earnings Per Share (after extraordinary items) (of ₹ 10/- each)				
Basic :	1.58	(17.98)	2.48	(5.71)
Diluted :	1.58	(17.98)	2.48	(5.71)

Notes:
1. The above is an extract of the detailed format of Financial Results filed with the Stock Exchanges under Regulation 33 of the SEBI (Listing and other Disclosure Requirements) Regulations, 2015. The full format of the Financial Results are available on the website of BSE (www.bseindia.com) and NSE (www.nseindia.com) and on the Company's website www.coffeeday.com
2. The above results were reviewed by the Audit Committee and thereafter approved by the Board of Directors in their meeting held on 30th May, 2023 and have been Audited by the Statutory Auditors of the Company.
3. **Audited financial results of Coffee Day Enterprises Limited (Standalone Information)**

(₹ in Crores)

Particulars	Quarter ended 31st March, 2023 (Audited)	Year ended 31st March, 2023 (Audited)	Quarter ended 31st March, 2022 (Audited)	Year ended 31st March, 2022 (Audited)
Total income from operations (net)	4.84	18.81	4.05	13.72
Profit/(Loss) before tax and exceptional items	(1.25)	(3.08)	(1.17)	(3.49)
Profit/(Loss) after tax and exceptional items	(1.25)	(3.08)	(1.17)	(3.49)

For and behalf of Board of Directors
S.V Ranganath
Interim Chairman and Independent Director

Place : Bengaluru
Date : 30th May, 2023

रजिस्ट्री सं. डी.एल. 33004/99 REGD. NO. D. L.-33004/99

भारत का राजपत्र
The Gazette of India

सी.जी.-डी.एल.-अ.- 10032023-244213
CG-DL-E- 10032023-244213
असाधारण
EXTRAORDINARY
भाग II-खण्ड 3-उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

No. 1059] NEW DELHI, THURSDAY, MARCH 9, 2023/ PHALGUNA 18,1944

ಭಾರತ ಸರ್ಕಾರದ ವಿಶೇಷ ರಾಜ್ಯ ಪತ್ರ
ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ
(ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಇಲಾಖೆ) ಹೊಸ ದೆಹಲಿ ದಿನಾಂಕ:09–03–2023.

ಅಧಿಸೂಚನೆ

ಎಸ್.ಓ.ನಂ.1103 (ಇ), ಕೇಂದ್ರ ಸರ್ಕಾರಕ್ಕೆ ಇದೀಗ ಸಾರ್ವಜನಿಕ ಉದ್ದೇಶಕ್ಕಾಗಿ ಇದರೊಂದಿಗೆ ಲಗತ್ತಿಸಿರುವ ಷೆಡ್ಯೂಲನಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿರುವ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಶಹರದ ರಾಣಿ ಚನ್ನಮ್ಮ ವೃತ್ತದಿಂದ ಹಾಯ್ದು ಹೋಗುವ ರಾಹೆ–63ರ ಕಿ.ಮೀ 135.650 ದಿಂದ 136.450 ರವರೆಗೆ, ರಾಹೆ–4 ಕಿ.ಮೀ 249.000 ದಿಂದ 250.050 ರವರೆಗೆ ಹಾಗೂ ರಾಹೆ–218ರ ಕಿ.ಮೀ 193.800 ದಿಂದ 193.350 ರವರೆಗಿನ ರಸ್ತೆಗಳಲ್ಲಿ ಫ್ಲೈಓವರ್ ನಿರ್ಮಾಣ ಕಾಮಗಾರಿ (ಜಾಬ ನಂ:ರಾಹೆ–63, 4 & 218–KNT–2020–21–910) ವರೆಗೆ ರಸ್ತೆ ನಿರ್ಮಾಣ ಅನುಮೋದನೆಗೊಂಡಿದ್ದು ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಕ್ರಿಯೆ ಮಾಡುವ ಸಲವಾಗಿ ಭೂಸ್ವಾಧೀನಪಡಿಸಿಕೊಳ್ಳಲು ಅವಶ್ಯಕತೆ ಇದೆ ಎಂಬುದು ಕಂಡುಬಂದಿರುತ್ತದೆ. ಅದ ಕಾರಣ ಕೇಂದ್ರ ಸರ್ಕಾರವು ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956 ರ 48) ತಿದ್ದುಪಡಿ ಕಾಯ್ದೆ 1997 ರ ಪ್ರಕಾರ ಸೆಕ್ಷನ್ 3(ಇ) ರ ಸಬ್ ಸೆಕ್ಷನ್ (1) ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಇದರೊಂದಿಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿ ಈ ಮೂಲಕ ಸೂಚನೆ ನೀಡಿದೆ.

ಸದರಿ ಜಮೀನುಗಳ ಬಗ್ಗೆ ಭೂಮಾಲಿಕರು ಅಥವಾ ಯಾವುದೇ ರೀತಿಯ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆ ಹೊರಡಿಸಿರುವ ಹಾಗೂ ಸರ್ವಜನಿಕರ ಅವಗಾಹನೆಗಾಗಿ ಈ ಅಧಿಸೂಚನೆ ಪ್ರಕಟಿಸಿದ ದಿನಾಂಕದಿಂದ 21 ದಿನಗಳೊಳಗಾಗಿ ಸೆಕ್ಷನ್ 3ಸಿ ಯ ಸಬ್–ಸಕ್ಷನ್(1) ರಂತೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಅಕ್ಷೇಪಣೆಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರ, ರಾಷ್ಟ್ರೀಯ ಹೆದ್ದಾರಿಗಳು, ಮಿನಿವಿಧಾನಸೌಧ, ಧಾರವಾಡ–580001 ಕರ್ನಾಟಕ ರವರಿಗೆ ಲಿಖಿತ ಮೂಲಕ ಸಕಾರಣಗಳೊಂದಿಗೆ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ವಕೀಲರನ್ನಾಗಲಿ, ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ, ಸೂಕ್ತವೆಂದು ಕಂಡುಬಂದಲ್ಲಿ ಈ ಬಗ್ಗೆ ಇತರ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ರಾಷ್ಟ್ರೀಯ ಹೆದ್ದಾರಿ ಕಾಯ್ದೆಯ ಸೆಕ್ಷನ್ 3(ಸಿ)(2) ರಂತೆ ಸಕ್ಷಮ ಪ್ರಾಧಿಕಾರಿಗಳು ಮಾಡಿದ ಆದೇಶ ಅಂತಿಮವಾಗಿರುತ್ತದೆ. ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕಾಶಗಳನ್ನು ಮತ್ತು ಇತರೆ ವಿವರಗಳನ್ನು ಹಿತಾಸಕ್ತಿ ಉಳ್ಳವರಿಗೆ ಈ ಮೇಲೆ ತಿಳಿಸಿದ ಕಛೇರಿಯಲ್ಲಿ ಪರಿಶೀಲನೆಗೆ ಇಡಲಾಗಿದೆ.

3(A) ಅನುಸೂಚಿ.

ಚುನಾವಣಾ ಸಮಯದಲ್ಲಿ ಕಾಂಗ್ರೆಸ್ ಎನ್‌ಇಪಿ ರದ್ದುಗೊಳಿಸುವ ಭರವಸೆ ನೀಡಿದೆಯಾದರೂ, ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ, ಉನ್ನತ ಶಿಕ್ಷಣ ತಜ್ಞರ ಜತೆ ಚರ್ಚಿಸಿದ ಬಳಿಕ ಸ್ಪಷ್ಟ ನಿರ್ಧಾರಕ್ಕೆ ಬರಲಾಗುವುದು. ನಿಖರ ಮಾಹಿತಿ ಪಡೆಯದೇ ವಿದ್ಯಾರ್ಥಿಗಳಲ್ಲಿ ಗೊಂದಲ ಮೂಡಿಸಲು ಸರ್ಕಾರ ಬಯಸುವುದಿಲ್ಲ. ಪ್ರಾಥಮಿಕ ಶಿಕ್ಷಣದಲ್ಲಿರುವಂತೆ ಉನ್ನತ ಶಿಕ್ಷಣದ ಪಠ್ಯಕ್ರಮದಲ್ಲಿ ಅಂತಹ ಸಮಸ್ಯೆಗಳಿಲ್ಲ. ಶಿಕ್ಷಣ ನೀತಿ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದ್ದರೆ ಬದಲಾವಣೆ ಅನಿವಾರ್ಯವಾಗಲಿದೆ ಎಂದು ಪ್ರತಿಕ್ರಿಯಿಸಿದರು.

ಕಾಲೇಜುಗಳಲ್ಲೇ ಸಿಇಟಿ ಅರ್ಜಿ ಭರ್ತಿ ತರಬೇತಿ:

ಸಿಇಟಿ ಆನ್‌ಲೈನ್ ಅರ್ಜಿಗಳನ್ನು ಭರ್ತಿ ಮಾಡುವಲ್ಲಿ ಹಲವು ಲೋಪಗಳು ಮುಂದುವರಿದಿರುವುದು ಗಮನಕ್ಕೆ ಬಂದಿದೆ. ಇಂತಹ ಗೊಂದಲಗಳಿಗೆ ತೆರೆ ಎಳೆಯಲು ಕಾಲೇಜು ಹಂತದಲ್ಲೇ ಆನ್‌ಲೈನ್ ಅರ್ಜಿ ಭರ್ತಿ ಮಾಡಲು ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುವುದು. ಕೆಇಎ ವಿದ್ಯಾರ್ಥಿಗಳಿಗೆ ಅಗತ್ಯವಾದ ಎಲ್ಲ ಮಾಹಿತಿ ಒದಗಿಸಬೇಕು ಎಂದು ಸೂಚಿಸಿದರು.

ಪಾಕಿಸ್ತಾನ: ಇಮ್ರಾನ್ ಖಾನ್‌ಗೆ ಜೂ.19ರವರೆಗೆ ಜಾಮೀನು

ವಿಚಾರಣೆ ನಂತರ ಬಿಗಿ ಭದ್ರತೆಯೊಂದಿಗೆ ಕೋರ್ಟ್‌ನಿಂದ ವಾಪಸ್ ತೆರಳಿದ ಪಾಕಿಸ್ತಾನ ಮಾಜಿ ಪ್ರಧಾನಿ ಇಮ್ರಾನ್ ಖಾನ್ —ಎಎಫ್‌ಪಿ ಚಿತ್ರ

ಇಸ್ಲಾಮಾಬಾದ್ (ಪಿಟಿಐ): ಅಲ್‌-ಖಾದಿರ್ ಟ್ರಸ್ಟ್ ಭ್ರಷ್ಟಾಚಾರ ಪ್ರಕರಣದಲ್ಲಿ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಭ್ರಷ್ಟಾಚಾರ ವಿರೋಧಿ ನ್ಯಾಯಾಲಯ ಜೂನ್ 19ರವರೆಗೆ ಜಾಮೀನು ವಿಸ್ತರಿಸಿ ಆದೇಶ ಹೊರಡಿಸಿದೆ.

ಬುಧವಾರ ವಿಚಾರಣೆ ನಡೆಸಿದ ನ್ಯಾಯಾಧೀಶ ಮಹಮ್ಮದ್ ಬಶೀರ್ ಅವರು, ಐದು ಲಕ್ಷ ರೂಪಾಯಿ ಮೌಲ್ಯದ ಭದ್ರತೆಯ ಬಾಂಡ್ ನೀಡುವಂತೆ ಸೂಚಿಸಿ ಜಾಮೀನು ಮಂಜೂರು ಮಾಡಿದರು.

ಇದಕ್ಕೂ ಮೊದಲು ಇಸ್ಲಾಮಾಬಾದ್ ಹೈಕೋರ್ಟ್ ಇದೇ ಪ್ರಕರಣದಲ್ಲಿ ಖಾನ್ ಅವರ ಜಾಮೀನು ಅವಧಿಯನ್ನು ಮೂರು ದಿನಗಳ ಅವಧಿಗೆ ವಿಸ್ತರಿಸಿ, ಸಂಬಂಧಪಟ್ಟ ಕೋರ್ಟ್ ಮೊರೆ ಹೋಗುವಂತೆ ಸೂಚಿಸಿತ್ತು. ವಿಚಾರಣೆ ವೇಳೆ ಹೈಕೋರ್ಟ್ ಆವರಣದಲ್ಲಿ ಬಿಗಿ ಭದ್ರತಾ ವ್ಯವಸ್ಥೆ ಮಾಡಲಾಗಿತ್ತು.

827	63B	ಖಾಸಗಿ	ಖುಷ್ಕಿ	56.4500000	0.0056450
828	63B1	ಖಾಸಗಿ	ಖುಷ್ಕಿ	45.6300000	0.0045630
829	63C	ಖಾಸಗಿ	ಖುಷ್ಕಿ	78.8900000	0.0078890
830	64/B1A	ಖಾಸಗಿ	ಖುಷ್ಕಿ	56.7800000	0.0056780
831	64A	ಖಾಸಗಿ	ಖುಷ್ಕಿ	67.8300000	0.0067830
832	64A1	ಖಾಸಗಿ	ಖುಷ್ಕಿ	56.4500000	0.0056450
833	64B	ಖಾಸಗಿ	ಖುಷ್ಕಿ	65.2300000	0.0065230
834	64B1	ಖಾಸಗಿ	ಖುಷ್ಕಿ	45.6300000	0.0045630
835	64C	ಖಾಸಗಿ	ಖುಷ್ಕಿ	78.8900000	0.0078890
836	64C1	ಖಾಸಗಿ	ಖುಷ್ಕಿ	65.2300000	0.0065230
837	65	ಖಾಸಗಿ	ಖುಷ್ಕಿ	67.8300000	0.0067830
838	65/B1A	ಖಾಸಗಿ	ಖುಷ್ಕಿ	78.8900000	0.0078890
839	65A	ಖಾಸಗಿ	ಖುಷ್ಕಿ	56.7800000	0.0056780
840	65A1	ಖಾಸಗಿ	ಖುಷ್ಕಿ	45.6300000	0.0045630
841	65B	ಖಾಸಗಿ	ಖುಷ್ಕಿ	78.8900000	0.0078890
842	65B1	ಖಾಸಗಿ	ಖುಷ್ಕಿ	56.7800000	0.0056780
843	65C	ಖಾಸಗಿ	ಖುಷ್ಕಿ	67.8300000	0.0067830
844	65C1	ಖಾಸಗಿ	ಖುಷ್ಕಿ	56.4500000	0.0056450
845	73/1	ಖಾಸಗಿ	ಖುಷ್ಕಿ	56.4500000	0.0056450
846	73/2	ಖಾಸಗಿ	ಖುಷ್ಕಿ	65.2300000	0.0065230
847	73/3	ಖಾಸಗಿ	ಖುಷ್ಕಿ	67.8300000	0.0067830
848	73/4	ಖಾಸಗಿ	ಖುಷ್ಕಿ	78.8900000	0.0078890
849	73/5	ಖಾಸಗಿ	ಖುಷ್ಕಿ	56.7800000	0.0056780
850	74/2	ಖಾಸಗಿ	ಖುಷ್ಕಿ	45.6300000	0.0045630
851	74/3	ಖಾಸಗಿ	ಖುಷ್ಕಿ	56.4500000	0.0056450
852	74/4	ಖಾಸಗಿ	ಖುಷ್ಕಿ	65.2300000	0.0065230
853	74/5	ಖಾಸಗಿ	ಖುಷ್ಕಿ	67.8300000	0.0067830
854	75/1	ಖಾಸಗಿ	ಖುಷ್ಕಿ	78.8900000	0.0078890
855	75/2	ಖಾಸಗಿ	ಖುಷ್ಕಿ	56.7800000	0.0056780
856	75/3	ಖಾಸಗಿ	ಖುಷ್ಕಿ	65.2300000	0.0065230
857	75/4	ಖಾಸಗಿ	ಖುಷ್ಕಿ	67.8300000	0.0067830
858	75/5	ಖಾಸಗಿ	ಖುಷ್ಕಿ	78.8900000	0.0078890
859	76/1	ಖಾಸಗಿ	ಖುಷ್ಕಿ	56.7800000	0.0056780
860	76/2	ಖಾಸಗಿ	ಖುಷ್ಕಿ	67.8300000	0.0067830
861	76/3	ಖಾಸಗಿ	ಖುಷ್ಕಿ	78.8900000	0.0078890
862	76/4	ಖಾಸಗಿ	ಖುಷ್ಕಿ	56.7800000	0.0056780
863	76/5	ಖಾಸಗಿ	ಖುಷ್ಕಿ	45.6300000	0.0045630
864	77/1	ಖಾಸಗಿ	ಖುಷ್ಕಿ	56.4500000	0.0056450
865	77/1A	ಖಾಸಗಿ	ಖುಷ್ಕಿ	240.2500000	0.0240250
866	77/2	ಖಾಸಗಿ	ಖುಷ್ಕಿ	65.2300000	0.0065230
867	77/2A	ಖಾಸಗಿ	ಖುಷ್ಕಿ	245.2300000	0.0245230
868	77/3	ಖಾಸಗಿ	ಖುಷ್ಕಿ	67.8300000	0.0067830
869	77/3A	ಖಾಸಗಿ	ಖುಷ್ಕಿ	265.0000000	0.0265000
870	77/4	ಖಾಸಗಿ	ಖುಷ್ಕಿ	78.8900000	0.0078890
871	78/1	ಖಾಸಗಿ	ಖುಷ್ಕಿ	56.7800000	0.0056780
872	78/1A	ಖಾಸಗಿ	ಖುಷ್ಕಿ	195.5600000	0.0195560
873	78/2	ಖಾಸಗಿ	ಖುಷ್ಕಿ	45.6300000	0.0045630
874	78/2A	ಖಾಸಗಿ	ಖುಷ್ಕಿ	165.2300000	0.0165230
875	78/3	ಖಾಸಗಿ	ಖುಷ್ಕಿ	56.4500000	0.0056450
876	78/3A	ಖಾಸಗಿ	ಖುಷ್ಕಿ	185.6300000	0.0185630
877	78/4	ಖಾಸಗಿ	ಖುಷ್ಕಿ	65.2300000	0.0065230
878	78/5	ಖಾಸಗಿ	ಖುಷ್ಕಿ	67.8300000	0.0067830
879	79/1	ಖಾಸಗಿ	ಖುಷ್ಕಿ	78.8900000	0.0078890
880	79/1A	ಖಾಸಗಿ	ಖುಷ್ಕಿ	168.0000000	0.0168000
881	79/2	ಖಾಸಗಿ	ಖುಷ್ಕಿ	56.7800000	0.0056780
882	79/2A	ಖಾಸಗಿ	ಖುಷ್ಕಿ	186.0000000	0.0186000
883	79/3	ಖಾಸಗಿ	ಖುಷ್ಕಿ	45.6300000	0.0045630
884	79/3A	ಖಾಸಗಿ	ಖುಷ್ಕಿ	195.0000000	0.0195000
885	79/4	ಖಾಸಗಿ	ಖುಷ್ಕಿ	56.4500000	0.0056450
886	79/4A	ಖಾಸಗಿ	ಖುಷ್ಕಿ	240.0000000	0.0240000
887	80/1	ಖಾಸಗಿ	ಖುಷ್ಕಿ	65.2300000	0.0065230
888	80/2	ಖಾಸಗಿ	ಖುಷ್ಕಿ	67.8300000	0.0067830
889	80/3	ಖಾಸಗಿ	ಖುಷ್ಕಿ	78.8900000	0.0078890
890	80/4	ಖಾಸಗಿ	ಖುಷ್ಕಿ	56.7800000	0.0056780
891	80/5	ಖಾಸಗಿ	ಖುಷ್ಕಿ	45.6300000	0.0045630
892	81/1	ಖಾಸಗಿ	ಖುಷ್ಕಿ	56.4500000	0.0056450
893	81/2	ಖಾಸಗಿ	ಖುಷ್ಕಿ	65.2300000	0.0065230
894	81/3	ಖಾಸಗಿ	ಖುಷ್ಕಿ	67.8300000	0.0067830
895	81/4	ಖಾಸಗಿ	ಖುಷ್ಕಿ	78.8900000	0.0078890
896	82A	ಖಾಸಗಿ	ಖುಷ್ಕಿ	56.4500000	0.0056450
897	82B	ಖಾಸಗಿ	ಖುಷ್ಕಿ	45.6300000	0.0045630
898	82B/1	ಖಾಸಗಿ	ಖುಷ್ಕಿ	56.7800000	0.0056780
899	83/15	ಖಾಸಗಿ	ಖುಷ್ಕಿ	78.8900000	0.0078890
900	83A1/A1	ಖಾಸಗಿ	ಖುಷ್ಕಿ	67.8300000	0.0067830
901	83A1/A1/1	ಖಾಸಗಿ	ಖುಷ್ಕಿ	65.2300000	0.0065230
902	84/16	ಖಾಸಗಿ	ಖುಷ್ಕಿ	56.7800000	0.0056780
903	84/17	ಖಾಸಗಿ	ಖುಷ್ಕಿ	45.6300000	0.0045630
904	84/18	ಖಾಸಗಿ	ಖುಷ್ಕಿ	56.4500000	0.0056450
905	85/1	ಖಾಸಗಿ	ಖುಷ್ಕಿ	65.2300000	0.0065230
906	85/2	ಖಾಸಗಿ	ಖುಷ್ಕಿ	67.8300000	0.0067830
907	85/3	ಖಾಸಗಿ	ಖುಷ್ಕಿ	78.8900000	0.0078890
908	86/4	ಖಾಸಗಿ	ಖುಷ್ಕಿ	56.7800000	0.0056780
909	86/B7	ಖಾಸಗಿ	ಖುಷ್ಕಿ	45.6300000	0.0045630
910	86/B8	ಖಾಸಗಿ	ಖುಷ್ಕಿ	56.4500000	0.0056450
911	87/5B	ಖಾಸಗಿ	ಖುಷ್ಕಿ	56.7800000	0.0056780
912	87/B4	ಖಾಸಗಿ	ಖುಷ್ಕಿ	65.2300000	0.0065230
913	87/B5B	ಖಾಸಗಿ	ಖುಷ್ಕಿ	78.8900000	0.0078890
914	87B/4	ಖಾಸಗಿ	ಖುಷ್ಕಿ	67.8300000	0.0067830
915	88/B5A	ಖಾಸಗಿ	ಖುಷ್ಕಿ	45.6300000	0.0045630
916	88A	ಖಾಸಗಿ	ಖುಷ್ಕಿ	56.4500000	0.0056450
917	88A1/A1	ಖಾಸಗಿ	ಖುಷ್ಕಿ	67.8300000	0.0067830
918	88A1/A1/1	ಖಾಸಗಿ	ಖುಷ್ಕಿ	65.2300000	0.0065230
919	88B	ಖಾಸಗಿ	ಖುಷ್ಕಿ	45.6300000	0.0045630
920	88B/1	ಖಾಸಗಿ	ಖುಷ್ಕಿ	56.7800000	0.0056780
921	89A	ಖಾಸಗಿ	ಖುಷ್ಕಿ	78.8900000	0.0078890
922	89A1	ಖಾಸಗಿ	ಖುಷ್ಕಿ	56.7800000	0.0056780
923	89A2	ಖಾಸಗಿ	ಖುಷ್ಕಿ	65.2300000	0.0065230
924	89B	ಖಾಸಗಿ	ಖುಷ್ಕಿ	65.2300000	0.0065230
925	89B1	ಖಾಸಗಿ	ಖುಷ್ಕಿ	67.8300000	0.0067830
926	89B2	ಖಾಸಗಿ	ಖುಷ್ಕಿ	45.6300000	0.0045630
927	89C	ಖಾಸಗಿ	ಖುಷ್ಕಿ	67.8300000	0.0067830
928	89C1	ಖಾಸಗಿ	ಖುಷ್ಕಿ	56.4500000	0.0056450
929	90/15	ಖಾಸಗಿ	ಖುಷ್ಕಿ	78.8900000	0.0078890
930	90/16	ಖಾಸಗಿ	ಖುಷ್ಕಿ	56.7800000	0.0056780
931	90/17	ಖಾಸಗಿ	ಖುಷ್ಕಿ	45.6300000	0.0045630
932	90/18	ಖಾಸಗಿ	ಖುಷ್ಕಿ	56.4500000	0.0056450
933	94/1	ಖಾಸಗಿ	ಖುಷ್ಕಿ	65.2300000	0.0065230
934	94/2	ಖಾಸಗಿ	ಖುಷ್ಕಿ	67.8300000	0.0067830
935	94/3	ಖಾಸಗಿ	ಖುಷ್ಕಿ	78.8900000	0.0078890
936	94/4	ಖಾಸಗಿ	ಖುಷ್ಕಿ	56.7800000	0.0056780
937	96/2	ಖಾಸಗಿ	ಖುಷ್ಕಿ	56.4500000	0.0056450
938	96/3	ಖಾಸಗಿ	ಖುಷ್ಕಿ	65.2300000	0.0065230
939	96/4	ಖಾಸಗಿ	ಖುಷ್ಕಿ	67.8300000	0.0067830
940	96/5	ಖಾಸಗಿ	ಖುಷ್ಕಿ	78.8900000	0.0078890
941	96/6	ಖಾಸಗಿ	ಖುಷ್ಕಿ	56.4500000	0.0056450
942	96/7	ಖಾಸಗಿ	ಖುಷ್ಕಿ	65.2300000	0.0065230
943	96/8	ಖಾಸಗಿ	ಖುಷ್ಕಿ	67.8300000	0.0067830
944	96/B11A	ಖಾಸಗಿ	ಖುಷ್ಕಿ	65.2300000	0.0065230
945	96/B4	ಖಾಸಗಿ	ಖುಷ್ಕಿ	65.2300000	0.0065230
946	96/B5	ಖಾಸಗಿ	ಖುಷ್ಕಿ	56.7800000	0.0056780
947	96/B5A	ಖಾಸಗಿ	ಖುಷ್ಕಿ	45.6300000	0.0045630
948	96/B5B	ಖಾಸಗಿ	ಖುಷ್ಕಿ	78.8900000	0.0078890
949	96/B7	ಖಾಸಗಿ	ಖುಷ್ಕಿ	45.6300000	0.0045630
950	96/B8	ಖಾಸಗಿ	ಖುಷ್ಕಿ	56.4500000	0.0056450
951	96/B9/1	ಖಾಸಗಿ	ಖುಷ್ಕಿ	165.2300000	0.0165230
952	96/B9/1A	ಖಾಸಗಿ	ಖುಷ್ಕಿ	56.7800000	0.0056780
953	96/B9/2	ಖಾಸಗಿ	ಖುಷ್ಕಿ	185.6300000	0.0185630
954	96/B9/2A	ಖಾಸಗಿ	ಖುಷ್ಕಿ	45.6300000	0.0045630
955	96/C	ಖಾಸಗಿ	ಖುಷ್ಕಿ	78.8900000	0.0078890
956	96B/10	ಖಾಸಗಿ	ಖುಷ್ಕಿ	240.2500000	0.0240250
957	96B/10A	ಖಾಸಗಿ	ಖುಷ್ಕಿ	245.2300000	0.0245230
958	96B/10F	ಖಾಸಗಿ	ಖುಷ್ಕಿ	78.8900000	0.0078890
959	96B/11	ಖಾಸಗಿ	ಖುಷ್ಕಿ	67.8300000	0.0067830
960	96B/11A	ಖಾಸಗಿ	ಖುಷ್ಕಿ	78.8900000	0.0078890
961	96B/11B	ಖಾಸಗಿ	ಖುಷ್ಕಿ	78.8900000	0.0078890
962	96B/11C	ಖಾಸಗಿ	ಖುಷ್ಕಿ	56.7800000	0.0056780
963	96B/11D	ಖಾಸಗಿ	ಖುಷ್ಕಿ	45.6300000	0.0045630
964	96B/11E	ಖಾಸಗಿ	ಖುಷ್ಕಿ	56.4500000	0.0056450
965	96B/11F	ಖಾಸಗಿ	ಖುಷ್ಕಿ	56.7800000	0.0056780
966	96B/4	ಖಾಸಗಿ	ಖುಷ್ಕಿ	67.8300000	0.0067830
			ಒಟ್ಟು	**122657.3800**	**12.2657**

(ಎಫ್.ನಂ. ಆರ್ ಡಬ್ಲ್ಯೂ/ಬಿಎನ್‌ಜಿ/ಎನ್‌ಎಚ್–63, 4&218/105/2019/495/3ಎ)
ಸಹಿ/– ಅಭಯ ಜೈನ, ಉಪ ಕಾರ್ಯದರ್ಶಿಗಳು.

ವಾ.ಸಾ.ಇ/ಧಾರವಾಡ/18/2023–24/ದೇಶಪಾಂಡೆಪಬ್ಲಿಸಿಟಿ

ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,
ಚಾಮರಾಜಪೇಟೆ, ಬೆಂಗಳೂರು–560018.

ನಂ: ಬಿಡಿಸಿಸಿಬಿ:ಪ್ರಕ:ಆಸಿ:ನೇಮಕಾತಿ: 502 :2023–24 ದಿನಾಂಕ : 31.05.2023

: ಪತ್ರಿಕಾ ಪ್ರಕಟಣೆ :

ಬೆಂಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಇದರಲ್ಲಿ ಖಾಲಿ ಇರುವ ವಿವಿಧ ವೃಂದಗಳ ಸಿಬ್ಬಂದಿ ನೇರ ನೇಮಕಾತಿಗೆ ಸಂಬಂಧಿಸಿದಂತೆ ಸಂಖ್ಯೆ: ಬಿಡಿಸಿಸಿಬಿ:ಪ್ರಕ:ಆಸಿ:ನೇಮಕಾತಿ : 3576:2022–23, ದಿನಾಂಕ: 27.01.2023 ರಂದು ನೇಮಕಾತಿ ಪ್ರಕಟಣೆ ಹೊರಡಿಸಿದ್ದು, ಈ ಸಂಬಂಧ ಲಿಖಿತ ಪರೀಕ್ಷೆಯನ್ನು ದಿನಾಂಕ:10.06.2023 (ಶನಿವಾರ) ಮತ್ತು 11.06.2023 (ಭಾನುವಾರ) ಗಳಂದು ನಡೆಸಲು ವೇಳಾಪಟ್ಟಿ ನಿಗಧಿಪಡಿಸಿ, ಬ್ಯಾಂಕಿನ ಅಧಿಕೃತ ವೆಬ್‌ಸೈಟ್ http://recruitapp.in/bangalore_dccb2023 ರಲ್ಲಿ ಪ್ರಕಟಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಪರೀಕ್ಷೆಯ ಪ್ರವೇಶ ಪತ್ರವನ್ನು ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಲಿಖಿತ ಪರೀಕ್ಷೆಗೆ ಹಾಜರಾಗಬಹುದಾಗಿದೆ ಹಾಗೂ ಪ್ರವೇಶ ಪತ್ರವನ್ನು ನೋಂದಾಯಿತ ಅಂಚೆ ಮೂಲಕ ಸಹ ನಿಮ್ಮ ವಿಳಾಸಕ್ಕೆ ಕಳುಹಿಸಲಾಗಿದೆ. ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಯಾವುದೇ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (Help Line) 9036377735 ನ್ನು ಬೆಳಗ್ಗೆ 10.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆಯಬಹುದಾಗಿದೆ.

ಸಹಿ/–
ಸದಸ್ಯ ಕಾರ್ಯದರ್ಶಿ ಹಾಗೂ
ಮುಖ್ಯಕಾರ್ಯನಿರ್ವಹಣಾಧಿಕಾರಿ

ಕಲೆ ಮತ್ತು ಸಂಸ್ಕೃತಿ ಪ್ರಚಲಿತ ವಿದ್ಯಮಾನಗಳು



ಸಾಂದರ್ಭಿಕ ಚಿತ್ರಗಳು

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ಪ್ರಚಲಿತ ಮಾಹಿತಿ ಇಲ್ಲಿದೆ.

ಕಾಗದರಹಿತ ಸಂಸದೀಯ ವ್ಯವಹಾರಗಳತ್ತ ಒಂದು ಮಹತ್ವದ ಹೆಜ್ಜೆ

ರಾಷ್ಟ್ರೀಯ ಇ-ವಿಧಾನ್

ಯು.ಟಿ. ಆಯಿಶ ಫರ್ಝಾನ

ಸಂಸದೀಯ ವ್ಯವಹಾರಗಳ ಸಚಿವಾಲಯವು 2023ರ ಮೇ 24 ಮತ್ತು 25ರಂದು ನವದೆಹಲಿಯ ಹೋಟೆಲ್ ಅಶೋಕ್‌ನ ಕನ್ವೆನ್ಷನ್ ಹಾಲ್‌ನಲ್ಲಿ ರಾಷ್ಟ್ರೀಯ ಇ-ವಿಧಾನ್ ಅಪ್ಲಿಕೇಶನ್ – 'ನೇವಾ' (National e-Vidhan Application– NeVA) ಕುರಿತು ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಆಯೋಜಿಸಿತ್ತು.

ಈ ಕಾರ್ಯಾಗಾರದ ಉದ್ದೇಶ ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಶಾಸಕಾಂಗದಲ್ಲಿ NeVA ಪ್ಲಾಟ್‌ಫಾರ್ಮ್ ಬಳಸಲು ಪ್ರೋತ್ಸಾಹಿಸುವುದು ಮತ್ತು ತಂತ್ರಜ್ಞಾನದ ಸಶಕ್ತ ಬಳಕೆಯ ಮೂಲಕ ವಿಧಾನಮಂಡಲಗಳು ಹಾಗೂ ಸಂಸತ್ತಿನ ವ್ಯವಹಾರಗಳಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಮತ್ತು ತ್ವರಿತ ಸ್ಪಂದಿಸುವಿಕೆಯನ್ನು ತರಲು ಪ್ರೇರೇಪಿಸುವುದಾಗಿತ್ತು.

mNeVA

- mNeVA ಎಂಬುದು NeVA ದ ಬಳಕೆದಾರಸ್ನೇಹಿ ಮೊಬೈಲ್ ಅಪ್ಲಿಕೇಶನ್ ಆಗಿದ್ದು Android ಮತ್ತು iOS ಆಪರೇಟಿಂಗ್ ಸಿಸ್ಟಂ ಇರುವ ಮೊಬೈಲ್ ಫೋನ್‌ನಲ್ಲಿ ಲಭ್ಯವಿದೆ.

ರಾಷ್ಟ್ರೀಯ ಇ-ವಿಧಾನ್ ಅಪ್ಲಿಕೇಶನ್

- ರಾಷ್ಟ್ರೀಯ ಇ-ವಿಧಾನ್ ಅಪ್ಲಿಕೇಶನ್(NeVA) ಎನ್ನುವುದು ಭಾರತ ಸರ್ಕಾರದ 'ಡಿಜಿಟಲ್ ಇಂಡಿಯಾ ಪ್ರೋಗ್ರಾಂ' ಅಡಿಯಲ್ಲಿ ಬರುವ 44 ಮಿಷನ್ ಮೋಡ್ ಯೋಜನೆಗಳಲ್ಲಿ(MMPs) ಒಂದಾಗಿದೆ.
- ಇದು ಎಲ್ಲಾ ರಾಜ್ಯಗಳ ಶಾಸಕಾಂಗ ಹಾಗೂ ಸಂಸತ್ತಿನ ಪತ್ರವ್ಯವಹಾರಗಳ ಕಾರ್ಯನಿರ್ವಹಣೆಯನ್ನು 'ಡಿಜಿಟಲ್ ಹೌಸ್' ಮಾದರಿಯಲ್ಲಿ ಕಾಗದರಹಿತ ಕಚೇರಿಯನ್ನಾಗಿಸುವ ಗುರಿಯನ್ನು ಹೊಂದಿದೆ.
- NeVA ಎನ್ನುವುದು 'ಎನ್‌ಐಸಿ (National Informatic Center) ಕ್ಲೌಡ್ ಮೇಘರಾಜ್'ನಲ್ಲಿ ನಿಯೋಜಿಸಲಾದ ಕಾರ್ಯವ್ಯವಸ್ಥೆ. ಇದು ಸದನದ ಕಲಾಪಗಳನ್ನು ಸುಗಮವಾಗಿ ನಡೆಸಲು ಸದನದ ಅಧ್ಯಕ್ಷರಿಗೆ ಸಹಾಯ ಮಾಡುತ್ತದೆ. ಜೊತೆಗೆ, ಶಾಸಕಾಂಗದ ಸದಸ್ಯರು ಸದನದಲ್ಲಿ ತಮ್ಮ ಕರ್ತವ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ಮತ್ತು ಶಾಸಕಾಂಗದ ವ್ಯವಹಾರಗಳನ್ನು ಕಾಗದ ರಹಿತ ಮಾದರಿಯಲ್ಲಿ ನಡೆಸಲು ಅನುಕೂಲಕಾರಿಯಾಗಿದೆ.
- ಇದು ಯುನಿಕೋಡ್ ಬೆಂಬಲಿತ ಸಾಫ್ಟ್‌ವೇರ್ ಆಗಿದ್ದು, ಪ್ರಶ್ನೆಗಳ ಪಟ್ಟಿ, ವ್ಯವಹಾರದ ಪಟ್ಟಿ, ವರದಿಗಳು ಇತ್ಯಾದಿಗಳನ್ನು ಇಲ್ಲೇ ಸುಲಭವಾಗಿ ಪಡೆಯಬಹುದು. ಇಂಗ್ಲಿಷ್ ಮತ್ತು ಯಾವುದೇ ಪ್ರಾದೇಶಿಕ ಭಾಷೆಗಳಲ್ಲಿ ಈ ದಾಖಲೆಗಳನ್ನು ಪಡೆಯಬಹುದಾಗಿದೆ.
- ಈ ಅಪ್ಲಿಕೇಶನ್ ಅನ್ನು ಕ್ಲೌಡ್ ಫಸ್ಟ್ ಮತ್ತು ಮೊಬೈಲ್ ಫಸ್ಟ್ ಎಂಬ ತತ್ವದೊಂದಿಗೆ 'ಒನ್ ನೇಷನ್-ಒನ್ ಅಪ್ಲಿಕೇಶನ್' ಪರಿಕಲ್ಪನೆಯೊಂದಿಗೆ ಪರಿಚಯಿಸಲಾಗಿದೆ.
- ಇದು ಶಾಸಕಾಂಗದ ಸದಸ್ಯರ ದೂರವಾಣಿ ಸಂಖ್ಯೆ, ವಿಳಾಸ, ಕಾರ್ಯವಿಧಾನದ ನಿಯಮಗಳು, ವ್ಯವಹಾರದ ಪಟ್ಟಿ, ಸೂಚನೆಗಳು, ಬುಲೆಟಿನ್‌ಗಳು, ಬಿಲ್‌ಗಳು, ಚುಕ್ಕೆ ಗುರುತಿನ ಪ್ರಶ್ನೆಗಳು, ಚುಕ್ಕೆ ಹಾಕದ ಪ್ರಶ್ನೆಗಳು ಮತ್ತು ಉತ್ತರಗಳು, ಇತರ ಪತ್ರವ್ಯವಹಾರಗಳು ಮತ್ತು ಸಮಿತಿಯ ವರದಿಗಳು ಮುಂತಾದವುಗಳಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಹಾಕುವ ಮೂಲಕ ಎಲ್ಲಾ ಕಲಾಪಗಳು ಹಾಗೂ ವ್ಯವಹಾರಗಳನ್ನು ಅಚ್ಚುಕಟ್ಟಾಗಿ ಸುಲಭಮಾದರಿಯಲ್ಲಿ ನಿರ್ವಹಿಸಲು ರಚಿಸಲಾದ ಅಪ್ಲಿಕೇಶನ್ ಆಗಿದೆ.
- ಮೊಬೈಲ್ ಅಥವಾ ಟ್ಯಾಬ್ಲೆಟ್‌ಗಳ ಮೂಲಕವೇ ಶಾಸಕಾಂಗದ ಸದಸ್ಯರು ಹಾಗೂ ಇತರ ಸಂಬಂಧಿತ ಇಲಾಖೆಗಳ ಕಾರ್ಯನಿರ್ವಹಣೆಯ ಬಗ್ಗೆ ಅಪ್ ಡೇಟ್ ಆಗಿರಲು ಸಹಾಯಕವಾಗಿದೆ. ಮಾಹಿತಿ ಸಂಗ್ರಹಣೆಗಾಗಿ ಸೂಚನೆ ಕಳಿಸುವ, ವಿನಂತಿಯನ್ನು ಕಳುಹಿಸುವ, ಸುತ್ತೋಲೆ ಹೊರಡಿಸುವ ಕ್ಲಿಷ್ಟ ಪ್ರಕ್ರಿಯೆಯನ್ನು NeVA ಸಂಪೂರ್ಣವಾಗಿ ತೆಗೆದುಹಾಕುತ್ತದೆ.
- ಸದನದ ಸದಸ್ಯರು ಪ್ರಶ್ನೆಗಳು ಮತ್ತು ಇತರ ಸೂಚನೆಗಳನ್ನು ಈ ಅಪ್ಲಿಕೇಶನ್ ಮೂಲಕವೇ ಸಲ್ಲಿಸಬಹುದಾಗಿದೆ.
- ದೇಶದ ಎಲ್ಲಾ ಶಾಸಕಾಂಗಗಳನ್ನು ಒಂದೇ ವೇದಿಕೆಯಡಿಯಲ್ಲಿ ತಂದು ಆ ಮೂಲಕ ಬೃಹತ್ ಮತ್ತು ನಿಖರವಾದ ಡೇಟಾ ಶೇಖರಣೆಯನ್ನು ರಚಿಸುವುದು ಹಾಗೂ ಅದರ ಸಲುವಾಗಿ ಬಹು ಅಪ್ಲಿಕೇಶನ್‌ಗಳನ್ನು ಹೊಂದುವ ಗೋಜಲುಗಳಿಗೆ ಕಡಿವಾಣ ಹಾಕುವುದು ಈ ಯೋಜನೆಯ ಉದ್ದೇಶವಾಗಿದೆ.
- 25ನೇ ನವೆಂಬರ್ 2021 ರಂದು ಸಂಪೂರ್ಣವಾಗಿ 'ನೇವಾ' ಪ್ಲಾಟ್‌ಫಾರ್ಮ್ ಅನ್ನು ಬಳಸಿದ ದೇಶದ ಮೊದಲ ಸದನ ಎಂಬ ಹೆಗ್ಗಳಿಕೆಗೆ ಬಿಹಾರ ವಿಧಾನ ಪರಿಷತ್ತು ಪಾತ್ರವಾಗಿದೆ.
- ಇಲ್ಲಿಯವರೆಗೆ 21 ರಾಜ್ಯಗಳ ಶಾಸಕಾಂಗಗಳು 'ನೇವಾ' ಅನುಷ್ಠಾನಕ್ಕಾಗಿ ತಿಳಿವಳಿಕೆ ಪತ್ರಕ್ಕೆ ಸಹಿ ಹಾಕಿವೆ. ಈ ಯೋಜನೆಯನ್ನು 17 ಶಾಸಕಾಂಗಗಳಿಗೆ ಮಂಜೂರು ಮಾಡಲಾಗಿದ್ದು ಯೋಜನೆಯ ಅನುಷ್ಠಾನಕ್ಕಾಗಿ ಈಗಾಗಲೇ ಹಣವನ್ನು ಬಿಡುಗಡೆ ಮಾಡಲಾಗಿದೆ.
- ಅವುಗಳಲ್ಲಿ 9 ಶಾಸಕಾಂಗಗಳು ಈಗಾಗಲೇ ಸಂಪೂರ್ಣ ಡಿಜಿಟಲ್ ಆಗಿದ್ದು 'ನೇವಾ' (NeVA) ಪ್ಲಾಟ್‌ಫಾರ್ಮ್‌ನಲ್ಲಿ ಲೈವ್ ಆಗಿವೆ. ಈ ಶಾಸಕಾಂಗಗಳು ತಮ್ಮ ಎಲ್ಲಾ ವ್ಯವಹಾರವನ್ನು ಡಿಜಿಟಲ್ ಮತ್ತು ಕಾಗದರಹಿತ ಮಾದರಿಯಲ್ಲಿ ನಡೆಸುತ್ತಿವೆ.
- NeVA ಅಪ್ಲಿಕೇಷನ್ ಅನ್ನು ಬಳಸುವುದರ ಮೂಲಕ ಸಾವಿರಾರು ಟನ್ ಪೇಪರ್‌ಗಳನ್ನು ಉಳಿಸಲಾಗುತ್ತದೆ. ಈ ಮೂಲಕ ವಾರ್ಷಿಕವಾಗಿ ಲಕ್ಷಗಟ್ಟಲೆ ಮರ ಗಳನ್ನು ಉಳಿಸಲು ನೆರವಾಗುತ್ತಿದೆ. ಈ ಉಪಕ್ರಮವು ಯುಎನ್‌ಡಿಪಿಯ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು(ಎಸ್‌ಡಿಜಿ) ತಲುಪುವತ್ತ ಪೂರಕವಾಗಿದ್ದು ಪರಿಸರ ರಕ್ಷಣೆಯತ್ತ ಮತ್ತೊಂದು ಹೆಜ್ಜೆ ಎನ್ನಬಹುದು. ❖

EXAM DH ಪ್ರಜಾವಾಣಿ MASTERMIND™

ಮತ್ತಷ್ಟು ಮಾಹಿತಿಗಾಗಿ

ರಾಷ್ಟ್ರೀಯ ಇ-ವಿಧಾನ್ ಸೇರಿದಂತೆ ವಿವಿಧ ಪ್ರಚಲಿತ ವಿದ್ಯಮಾನಗಳ ಕುರಿತ ಮತ್ತಷ್ಟು ಮಾಹಿತಿ ಹಾಗೂ ನಾಗರಿಕ ಸೇವಾ ಪರೀಕ್ಷೆಗಳಿಗೆ ಸಂಬಂಧಿಸಿದ ಲೇಖನಗಳು ಹಾಗೂ ವಿಡಿಯೊಗಳಿಗಾಗಿ 'ಪ್ರಜಾವಾಣಿ-ಡೆಕ್ಕನ್‌ಹೆರಾಲ್ಡ್ ಮಾಸ್ಟರ್ ಮೈಂಡ್' ಇ-ಪೇಪರ್‌ಗೆ ಚಂದಾದಾರರಾಗಿ. ಚಂದಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

www.exammastermind.com

ಪ್ರಚಲಿತ

ಕಪಿಲೇಶ್ವರ ದೇವಾಲಯ, ಭುವನೇಶ್ವರ ಚಿತ್ರ: ವಿಕಿ ಕಾಮನ್ಸ್

1.ಕಪಿಲೇಶ್ವರ ದೇವಾಲಯ

- ಇತ್ತೀಚೆಗೆ ಒಡಿಶಾದ ರಾಜಧಾನಿ ಭುವನೇಶ್ವರದಲ್ಲಿರುವ ಕಪಿಲೇಶ್ವರ ದೇವಾಲಯವನ್ನು ಪುರಾತತ್ವ ಸರ್ವೇಕ್ಷಣಾ ಸಂಸ್ಥೆಯು ಸಂರಕ್ಷಿತ ಸ್ಮಾರಕಗಳ ಪಟ್ಟಿಯಲ್ಲಿ ಸೇರಿಸಲು ನಿರ್ಧಾರ ತೆಗೆದುಕೊಂಡಿದೆ.
- ಒಡಿಶಾ ರಾಜ್ಯದ ರಾಜಧಾನಿಯಾದ ಭುವನೇಶ್ವರವನ್ನು ಭಾರತದ ದೇವಾಲಯಗಳ ನಗರ ಎಂದು ಕರೆಯಲಾಗುತ್ತದೆ. ಈ ನಗರದಲ್ಲಿ ಪ್ರಾಚೀನ ಕಾಲದ ಹಲವಾರು ದೇವಾಲಯಗಳು ತನ್ನ ಅಸ್ತಿತ್ವವನ್ನು ಹೊಂದಿದ್ದು, ಪ್ರಸ್ತುತ ಚರ್ಚಿಸುತ್ತಿರುವ ಕಪಿಲೇಶ್ವರ ದೇವಾಲಯ ಕಪಿಲ ಪ್ರಸಾದ ಎನ್ನುವ ಪ್ರದೇಶದಲ್ಲಿದ್ದು, ಜಗದ್ವಿಖ್ಯಾತ ಲಿಂಗರಾಜ ದೇವಾಲಯಕ್ಕೆ ಒಂದು ಕಿಲೋಮೀಟರ್ ದೂರದಲ್ಲಿದೆ.
- ಕಪಿಲೇಶ್ವರ ದೇವಾಲಯವನ್ನು ಸಂರಕ್ಷಿತ ಸ್ಮಾರಕಗಳ ಪಟ್ಟಿಗೆ ಸೇರಿಸಿದ ನಂತರ ಮುಂದಿನ ಪೀಳಿಗೆಗಳಿಗೆ ಸಾಕ್ಷಿಯಾಗುವಂತೆ ಉತ್ತಮವಾಗಿ ನಿರ್ವಹಿಸಿ ಮತ್ತು ಸಂರಕ್ಷಿಸಲಾಗುತ್ತದೆ.

ದೇವಾಲಯದ ಇತಿಹಾಸ

- ಕಪಿಲೇಶ್ವರ ದೇವಾಲಯವನ್ನು ನೇ ಶತಮಾನದಲ್ಲಿ ನಿರ್ಮಿಸಲಾಗಿದೆ., ಈ ದೇವಾಲಯದ ನಿರ್ಮಾಣದ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿರುವುದಿಲ್ಲ. ಆದರೆ,14 ನೇ ಶತಮಾನದಲ್ಲಿ ಗಜಪತಿ ಕಪಿಲೇಂದ್ರ ದೇವ ಈ ದೇವಾಲಯವನ್ನು ಪುನಶ್ಚೇತನಗೊಳಿಸಿದ್ದಾನೆ ಎಂಬ ಮಾಹಿತಿ ಇದೆ.

ವಿಶೇಷ ಸೂಚನೆ: ಈ ದೇವಾಲಯವನ್ನು ಕಳಿಂಗ ವಾಸ್ತುಶಿಲ್ಪ ಶೈಲಿಯಲ್ಲಿ ನಿರ್ಮಿಸಲಾಗಿದೆ.

2. ಅಂತರರಾಷ್ಟ್ರೀಯ ವಸ್ತು ಸಂಗ್ರಹಾಲಯ ಪ್ರದರ್ಶನ

- ಮೇ 18ರಂದು ಅಂತರರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನದ ಅಂಗವಾಗಿ ನವದೆಹಲಿಯ ಪ್ರಗತಿ ಮೈದಾನದಲ್ಲಿ ನಡೆದ 'ಅಂತರರಾಷ್ಟ್ರೀಯ ವಸ್ತು ಸಂಗ್ರಹಾಲಯ ಪ್ರದರ್ಶನ'ವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟಿಸಿದರು.

ಪ್ರಧಾನಿ ನರೇಂದ್ರ ಮೋದಿಯವರು ದೆಹಲಿಯಯಲ್ಲಿ ಮೇ 18ರಂದು ನಡೆದ ಅಂತರರಾಷ್ಟ್ರೀಯ ಮ್ಯೂಸಿಯಂ ಎಕ್ಸ್‌ಪೊಗೆ ಭೇಟಿ ನೀಡಿದ್ದರು. (ಪಿಟಿಐ ಚಿತ್ರ)

- ಈ ಪ್ರದರ್ಶನದಲ್ಲಿ ವಿವಿಧ ಕಲಾಕೃತಿಗಳನ್ನು ಪ್ರದರ್ಶಿಸಲಾಗಿತ್ತು. ಈ ಸಂದರ್ಭದಲ್ಲಿ ಮೆಹೆಂಜೋದಾರೊದಲ್ಲಿ ಪತ್ತೆಯಾದ 'ಡ್ಯಾನ್ಸಿಂಗ್ ಗರ್ಲ್(ನರ್ತಿಸುತ್ತಿರುವ ಹುಡುಗಿ)' ಮೂಲ ಕಂಚಿನ ಪ್ರತಿಮೆಯ ಪ್ರತಿಕೃತಿಯನ್ನುಅನಾವರಣಗೊಳಿಸಲಾಯಿತು.
- ಈ ಪ್ರದರ್ಶನದಲ್ಲಿ ವಿವಿಧ ನಾಗರಿಕತೆಗಳ ಪರಂಪರೆ ಯನ್ನು ಪ್ರದರ್ಶಿಸಲಾಯಿತು. ಬ್ರಿಟಿಷ್ ಪುರಾತತ್ವ ಇಲಾಖೆಯ ಅಧಿಕಾರಿಯಾದ ಅರ್ನೆಸ್ಟ್ ಮೇಕ್ ಅವರು ಉತ್ಖನನ ಮಾಡಿದ್ದ 'ಡ್ಯಾನ್ಸಿಂಗ್ ಗರ್ಲ್' ಪ್ರತಿಕೃತಿ ಪ್ರದರ್ಶನದ ಕೇಂದ್ರಬಿಂದುವಾಗಿತ್ತು.
- ಮೆಹೆಂಜೋದಾರೊ ಪಾಕಿಸ್ತಾನದ ಭೂಪ್ರದೇಶದ ಭಾಗ ವಾದರೂ ಭಾರತ ಮತ್ತು ಪಾಕಿಸ್ತಾನದ ಒಪ್ಪಂದದ ಅನ್ವಯ 'ಡ್ಯಾನ್ಸಿಂಗ್ ಗರ್ಲ್' ಕಲಾಕೃತಿಯನ್ನು ಭಾರತ ತನ್ನಲ್ಲೇ ಉಳಿಸಿಕೊಂಡಿತು.
- ಈ ಕಲಾಕೃತಿಯ ಮತ್ತೊಂದು ವಿಶೇಷತೆಯೆಂದರೆ, ಸಿಂಧು ಮಹಾ ನಾಗರಿಕತೆಯ ಜನರಿಗೆ ಲೋಹಗಳ ಬಗ್ಗೆ ಇದ್ದಂತಹ ಅರಿವು ಮತ್ತು ಜ್ಞಾನವನ್ನು ಪ್ರದರ್ಶಿಸುತ್ತದೆ.

3. ಲಡಾಖ್ ಮರದ ಕೆತ್ತನೆಗಳಿಗೆ ಭೌಗೋಳಿಕ ಸೂಚಕ(GI)

- ಜಾಗತಿಕ ಮಟ್ಟದಲ್ಲಿ ಖ್ಯಾತಿ ಪಡೆದಿರುವ ಲಡಾಖ್‌ನ ಮರದ ಕೆತ್ತನೆಗಳಿಗೆ(Wood Carving) ಇತ್ತೀಚೆಗೆ ಭೌಗೋಳಿಕ ಸೂಚಕವನ್ನು(GI-Geographical Indicator) ನೀಡಿ ಗೌರವಿಸಲಾಗಿದೆ. ಸ್ಥಳೀಯ ಆರ್ಥಿಕತೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ಹಾಗೂ ಸ್ಥಳೀಯ ಸಂಸ್ಕೃತಿಯನ್ನು ಮತ್ತು ಸಂಪ್ರದಾಯವನ್ನು ಸಂರಕ್ಷಿಸುವ ಉದ್ದೇಶದಿಂದ ಈ ಮರದ ಕೆತ್ತನೆಗಳಿಗೆ ಭೌಗೋಳಿಕ ಸೂಚ್ಯಂಕವನ್ನು ನೀಡಿ ಗೌರವಿಸಲಾಗಿದೆ.
- ಭಾರತದಲ್ಲಿ ಭೌಗೋಳಿಕ ಸೂಚಕವನ್ನು, ಭೌಗೋಳಿಕ ಸೂಚಕ ಕಾಯ್ದೆ-1999ರ ಅನ್ವಯ ನೀಡಲಾಗುತ್ತದೆ. ಭೌಗೋಳಿಕ ಸೂಚಕವನ್ನು ಮತ್ತೊಂದು ಸ್ವರೂಪದ ಬೌದ್ಧಿಕ ಆಸ್ತಿ ಹಕ್ಕು ಎಂದು ಪರಿಗಣಿಸಬಹುದು. ಸ್ವಾಭಾವಿಕವಾಗಿ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಅಸ್ತಿತ್ವದಲ್ಲಿರುವ ಕಲಾಕೃತಿಗಳಿಗೆ ಅಥವಾ ವಿಶೇಷ ಗುಣಲಕ್ಷಣಗಳನ್ನು ಹೊಂದಿರುವ ವಸ್ತುಗಳಿಗೆ ಮತ್ತು ಉತ್ಪನ್ನಗಳಿಗೆ ಈ ಸೂಚಕವನ್ನು ನೀಡಲಾಗುತ್ತದೆ.
- ಬೌದ್ಧಧರ್ಮದ ಸಿದ್ಧಾಂತಗಳನ್ನು ಮತ್ತು ಬೌದ್ಧಧರ್ಮದ ತತ್ವಗಳಿಂದ ಪ್ರೇರಿತವಾಗಿರುವ ಈ ಮರದ ಕೆತ್ತನೆಗಳು ಲಡಾಖ್ ಪ್ರದೇಶದಲ್ಲಿ ದೊರಕುವ ವಿಲೊ ಮತ್ತು ಏಪ್ರಿಕಾಟ್ ಮರಗಳಿಂದ ತಯಾರಿಸಲಾಗುತ್ತದೆ.
- ಲಡಾಖ್‌ನ ಮರದ ಕೆತ್ತನೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಾಗಿಲು, ಕಿಟಕಿಗಳು ಮತ್ತು ಗೃಹಪಯೋಗಿ ವಸ್ತುಗಳನ್ನು ಅಲಂಕರಿಸಲು ಹೆಚ್ಚಾಗಿ ಬಳಸಲಾಗುತ್ತದೆ.
- ಭೌಗೋಳಿಕ ಸೂಚಕವನ್ನು ಯಾವುದೇ ಉತ್ಪನ್ನಕ್ಕೆ ನೀಡಿದ ನಂತರ, ಬೇರೆ ಪ್ರದೇಶದ ಯಾವುದೇ ತಯಾರಕರು ಈ ಹೆಸರನ್ನು ಬಳಸಿಕೊಂಡು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ ಹಾಗೂ ಈ ಉತ್ಪನಗಳನ್ನು ನಕಲು ಮಾಡಲು ಸಾಧ್ಯವಾಗುವುದಿಲ್ಲ.

ವಿಶೇಷ ಸೂಚನೆ: ಭೌಗೋಳಿಕ ಸೂಚಕ ನೋಂದಣಿಯೂ ಕೇಂದ್ರ ಕೈಗಾರಿಕಾ ಉತ್ತೇಜನ ಮತ್ತು ಆಂತರಿಕ ವ್ಯಾಪಾರ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.

ಉಪಯೋಗಗಳು

- ಪ್ರಸ್ತುತ ಭೌಗೋಳಿಕ ಸೂಚಕ ದೊರಕಿದ ನಂತರ ಲಡಾಖ್ ಪ್ರದೇಶದ ಆರ್ಥಿಕತೆಗೆ ಮತ್ತಷ್ಟು ಉತ್ತೇಜನ ದೊರೆಯುತ್ತದೆ.
- ಸ್ಥಳೀಯ ಕುಶಲಕರ್ಮಿಗಳಿಗೆ ಹೆಚ್ಚಿನ ಉದ್ಯೋಗ ಅವಕಾಶಗಳು ದೊರಕುತ್ತವೆ.
- ಲಡಾಖ್ ಪ್ರದೇಶದ ಪ್ರವಾಸೋದ್ಯಮಕ್ಕೂ ಉತ್ತೇಜನ ದೊರಕುವ ಸಾಧ್ಯತೆಯಿದೆ. ಹಾಗೆಯೇ ಲಡಾಖ್ ಪ್ರದೇಶದ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಲಾಗುತ್ತದೆ. ❖

'ಕೋಚಿಂಗ್ ಚಿಂತೆ ಬಿಡಿ, ನಿಮ್ಮ ಪಾಡಿಗೆ ಹೆಚ್ಚು ಓದಿ'

ಯುಪಿಎಸ್‌ಸಿ ಟಾಪರ್ಸ್ ಟಿಪ್ಸ್

ಎಂ.ಪೂಜಾ

ಕೋಚಿಂಗ್ ಪಡೆಯದೇ ಕೇಂದ್ರ ಲೋಕಸೇವಾ ಆಯೋಗದ(ಯುಪಿಎಸ್‌ಸಿ) ಪರೀಕ್ಷೆಯಲ್ಲಿ ಯಶಸ್ಸುಗಳಿಸಲು ಸಾಧ್ಯವೇ ? ಹೌದು, ಮೈಸೂರಿನ ಕುವೆಂಪುನಗರದ ಎಂ.ಪೂಜಾ ಎಲ್ಲೂ ಕೋಚಿಂಗ್ ತೆಗೆದುಕೊಳ್ಳದೇ 2022ನೇ ಸಾಲಿನ ಯುಪಿಎಸ್‌ಸಿ ಪರೀಕ್ಷೆಯಲ್ಲಿ 390ನೇ ರ‍್ಯಾಂಕ್ ಪಡೆದಿದ್ದಾರೆ. ಎರಡನೇ ಪ್ರಯತ್ನದಲ್ಲಿ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ಅವರು, ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ಹೇಗೆ ? ಎಂಬುದರ ಕುರಿತು 'ಸ್ಪರ್ಧಾವಾಣಿ'ಯೊಂದಿಗೆ ಅನುಭವ ಹಂಚಿಕೊಂಡಿದ್ದಾರೆ.

ಸುಧೀರ್‌ಕುಮಾರ್ ಎಚ್.ಕೆ.

● ಯುಪಿಎಸ್‌ಸಿ ಪರೀಕ್ಷೆ ಯಶಸ್ವಿಯಾಗಿ ಪೂರ್ಣಗೊಳಿಸಿದ್ದೀರಿ. ಮುಂದೆ...?

ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡಲು ಹೆಚ್ಚು ಆಸಕ್ತಿಯಿದೆ. ಅದರ ಹೊರತಾಗಿಯೂ ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡಿದರೂ, ಕರ್ತವ್ಯದ ಮೂಲಕ ಹೆಸರು ಗಳಿಸಬೇಕು ಎಂಬುದೇ ನನ್ನ ಕನಸು. ಈ ಪರೀಕ್ಷೆಯ ಯಶಸ್ಸು ಖುಷಿ ಮತ್ತು ಅವಕಾಶ ನೀಡಿದೆ.

● ನಿಮ್ಮ ಕುಟುಂಬ ಮತ್ತು ಓದಿನ ಹಿನ್ನೆಲೆ..?

ನಮ್ಮದು ಮಧ್ಯಮವರ್ಗದ ಕುಟುಂಬ. ತಂದೆ ಮುಕುಂದ ರಾವ್ ಬೇದ್ರೆ ಅವರು ಖಾಸಗಿ ಸಂಸ್ಥೆಯ ಉದ್ಯೋಗಿ. ತಾಯಿ ಎಂ.ಪದ್ಮಾವತಿ ಗೃಹಿಣಿ. ಅಕ್ಕ ಇದ್ದಾರೆ. ಮೈಸೂರಿನ ಕುವೆಂಪು ನಗರದ ಕಾವೇರಿ ಶಾಲೆಯಲ್ಲಿ 10ನೇ ತರಗತಿವರೆಗೆ, ಮರಿಮಲ್ಲಪ್ಪ ಕಾಲೇಜಿನಲ್ಲಿ ಪಿಯು, ವಿದ್ಯಾವರ್ಧಕ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದಲ್ಲಿ ಎಂಜಿನಿಯರಿಂಗ್ ಓದಿದ್ದೇನೆ. ಇನ್ನೂ ಹೆಚ್ಚಿನ ಸಾಧನೆ ಮಾಡಬೇಕು ಎನ್ನಿಸಿತು. ತಾಯಿಯ ಒತ್ತಾಸೆ ಮತ್ತು ವೃತ್ತಿಶಿಕ್ಷಣದ ಹಿನ್ನೆಲೆ ಯುಪಿಎಸ್‌ಸಿ ಪರೀಕ್ಷೆಯ ಪ್ರಯತ್ನಕ್ಕೆ ಧೈರ್ಯ ನೀಡಿತು.

● ಎರಡನೇ ಪ್ರಯತ್ನದಲ್ಲಿ ಯಶಸ್ಸು ದೊರೆತಿದೆ. ಪರೀಕ್ಷೆಗಾಗಿ ತಯಾರಿ ಹೇಗಿತ್ತು?

ಮೊದಲ ಪ್ರಯತ್ನದಲ್ಲಿ ಪ್ರಿಲಿಮ್ಸ್ (ಪೂರ್ವಭಾವಿ ಪರೀಕ್ಷೆ) ಅನ್ನೇ ಪಾಸ್ ಮಾಡಲು ಆಗಿರಲಿಲ್ಲ. ಆತಂಕಕ್ಕೊಳಗಾಗಿ ಹೆಚ್ಚು ಪ್ರಶ್ನೆಗಳಿಗೆ ಉತ್ತರಿಸಿದ ಪ್ರಯತ್ನವೂ ಮುಳುವಾಗಿತ್ತು. ನಂತರ ತಪ್ಪನ್ನು ಕಂಡುಕೊಂಡೆ. ಹಿಂದಿನ ವರ್ಷಗಳ ಪ್ರಶ್ನೆ ಪತ್ರಿಕೆಗಳ ಅಧ್ಯಯನ, ಅಣುಕು ಪರೀಕ್ಷೆಗಳತ್ತ ಗಮನ ಕೇಂದ್ರಿಕರಿಸಿದೆ. ತಪ್ಪುಗಳು ಮರುಕಳಿಸದಂತೆ ನೋಡಿಕೊಂಡೆ.



ಪೋಷಕರಾದ ಮುಕುಂದ ರಾವ್ ಬೇದ್ರೆ ಹಾಗೂ ಎಂ.ಪದ್ಮಾವತಿ ಅವರೊಂದಿಗೆ ಎಂ.ಪೂಜಾ

● ಯುಪಿಎಸ್‌ಸಿ ಪರೀಕ್ಷೆ ಎದುರಿಸಲು ನೀವು ಕೋಚಿಂಗ್ ತೆಗೆದುಕೊಂಡಿದ್ದೀರಾ? ಕೋಚಿಂಗ್ ಕಡ್ಡಾಯವೇ ?

ಪರೀಕ್ಷೆ ತೆಗೆದುಕೊಳ್ಳಬೇಕೆಂದುಕೊಂಡಾಗಲೇ ಸ್ವಯಂ ಅಧ್ಯಯನ ಮಾಡಲು ನಿರ್ಧರಿಸಿದೆ. ತೀರ ಕಷ್ಟವಾದರೆ ಮಾತ್ರ ಕೋಚಿಂಗ್ ಸೇರೋಣ ಎಂಬ ಆಲೋಚನೆಯಿತ್ತು. ಆದರೆ ನನಗೆ ಇದೇ ಹೆಚ್ಚು ಸಹಕಾರಿ ಎನಿಸಿತು. ಎಲ್ಲರಿಗೂ ಕೋಚಿಂಗ್ ಬೇಕು ಎಂದು ನಾನು ಹೇಳುವುದಿಲ್ಲ. ಹಾಗೆಂದು ತೀರ ಅಗತ್ಯವಿದೆ ಎನಿಸಿದರೆ ಪಡೆಯುವುದೂ ತಪ್ಪಲ್ಲ. ಸಲಹೆ ಇಷ್ಟೇ, ಕೋಚಿಂಗ್ ಪಡೆಯಲು ಶಕ್ತರಲ್ಲದವರು ಆತಂಕ ಪಡುವ ಅಗತ್ಯವಿಲ್ಲ. ಅರ್ಧ ಗಂಟೆ ಹೆಚ್ಚು ಓದಿದರೆ ಯಶಸ್ಸು ಸಾಧ್ಯ.

● ನಿಮ್ಮ ಓದಿನ ಕ್ರಮದ ಬಗ್ಗೆ ಹೇಳಿ. ಹಾಗೆಯೇ, ಅಧ್ಯಯನ ಸಾಮಗ್ರಿಗಳ ಆಯ್ಕೆ ಹೇಗೆ ಮಾಡಿಕೊಂಡಿರಿ ?

ಒಬ್ಬಳೇ ಓದುತ್ತಾ ಹೋದಂತೆ ನನಗೆ ನಾನೇ ತರಬೇತುದಾರಳಾದೆ. ನನ್ನ ಸಾಮರ್ಥ್ಯ, ಕೊರತೆ ಕುರಿತು ತಿಳಿಯಿತು. ಸಾಧಾರಣವಾಗಿ ಎಲ್ಲರೂ ಉತ್ತಮ ಎಂದು ಪರಿಗಣಿಸುವ ಪುಸ್ತಕಗಳನ್ನೇ ನಾನೂ ಆಯ್ಕೆ ಮಾಡಿಕೊಂಡೆ. ನಿತಿನ್ ಸಾಂಗ್ವಾನ್ ಅವರ 'ಎಸೆನ್ಸಿಯಲ್ ಸೋಷಿಯಾಲಜಿ' ಪುಸ್ತಕವನ್ನು ಓದಿದೆ. ಈ ಪುಸ್ತಕ ಸಮಾಜ ಶಾಸ್ತ್ರವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಸಾಕಷ್ಟು ಒಳನೋಟಗಳನ್ನು ನೀಡಿತು.

ಆದಷ್ಟೂ ಕಡಿಮೆ ಪುಸ್ತಕಗಳಿದ್ದರೆ ಗೊಂದಲಗಳೂ ಕಡಿಮೆ ಇರುತ್ತವೆ. ಅವುಗಳನ್ನೇ ಹೆಚ್ಚು ಓದಿ, ಪುನರಾವರ್ತನೆ ಮಾಡುವುದು ಯಶಸ್ಸಿನ ಮಾರ್ಗದಲ್ಲಿ ಬಹಳ ಮುಖ್ಯ. ತೀರ ಸಮಸ್ಯೆ ಎದುರಾದಾಗ ಯೂಟ್ಯೂಬ್ ಮತ್ತು ಇಂಟರ್ನೆಟ್ ನೋಡುತ್ತಿದ್ದೆ. ಅಲ್ಲಿಯೂ ನಮ್ಮ ಆಯ್ಕೆ ನಿರ್ದಿಷ್ಟವಾಗಿರಬೇಕು.

ಇಂಟರ್ನೆಟ್‌ನಲ್ಲಿ ಯುಪಿಎಸ್‌ಸಿ ಟಾಪರ್ಸ್‌ಗಳ ಸಂದರ್ಶನಗಳನ್ನು ನೋಡಿ, ನೋಟ್ಸ್ ಮಾಡಿಕೊಳ್ಳುತ್ತಿದ್ದೆ. ಇವು ನನಗೆ ಸ್ವಂತ ಅಧ್ಯಯನ ಮಾಡಲು ಅಗತ್ಯವಾದ ತಾಂತ್ರಿಕತೆ ರೂಪಿಸಿಕೊಳ್ಳಲು ಸಹಾಯವಾಯಿತು.

● ಮುಖ್ಯ ಪರೀಕ್ಷೆಗೆ ಐಚ್ಛಿಕ ವಿಷಯ ಆಯ್ಕೆ ಹೇಗೆ ಮಾಡಿಕೊಂಡಿರಿ ?

ಎಂಜಿನಿಯರಿಂಗ್ ಓದಿದ್ದ ನನಗೆ ಸಮಾಜಶಾಸ್ತ್ರದ ಬಗ್ಗೆ ಹೆಚ್ಚು ಅಧ್ಯಯನದ ಅವಕಾಶವಿರಲಿಲ್ಲ, ಕೇವಲ ಅನುಭವವಷ್ಟೇ. ನನ್ನ ಆಯ್ಕೆ ಹಾಗೂ ಮುಂದಿನ ವೃತ್ತಿಗೆ ಸಮಾಜದ ಕುರಿತು ಆಳವಾದ ಅಧ್ಯಯನ ಬೇಕು ಎನ್ನಿಸಿ ಸಮಾಜಶಾಸ್ತ್ರ ಐಚ್ಛಿಕ ವಿಷಯವಾಗಿ ಆಯ್ಕೆ ಮಾಡಿಕೊಂಡೆ. ಮೊದಮೊದಲು ಕಷ್ಟವೆನಿಸಿತು. ಆದರೆ, ನಿರಂತರ ಓದು ಮತ್ತು ಪಠ್ಯಗಳ ಪುನರ್ಮನನ ವಿಷಯದ ಮೇಲೆ ಹಿಡಿತ ಸಾಧಿಸಲು ಸಹಕರಿಸಿತು. ❖

'ಪ್ರಜಾವಾಣಿ' ಓದು ನೆರವಾಯ್ತು

● ಸಂದರ್ಶನ ಎದುರಿಸಿದ ಅನುಭವ ಹೇಗಿತ್ತು?

ನನ್ನ ಸಂದರ್ಶನದ ದಿನಾಂಕ ಕೊನೆಯಲ್ಲಿತ್ತು. ಸಹಜವಾಗಿಯೇ ಆತಂಕಕ್ಕೊಳಗಾಗಿದ್ದೆ. ಎಲ್ಲ ದಿನವೂ ಉತ್ತಮವೇ ಎಂದು ಹಾಜರಾದೆ. ಸಂದರ್ಶನದ ಕೋಣೆಯ ಹೊರಗಿದ್ದಾಗ, ಕಣ್ಮುಚ್ಚಿ ನನ್ನ ಜೀವನವನ್ನೇ ಒಮ್ಮೆ ಮೆಲುಕು ಹಾಕಿದೆ. ನನ್ನ ಪಯಣ ನನಗೆ ಖುಷಿ ನೀಡಿತು. ಅದೇ ಜೋಷ್‌ನಲ್ಲಿ ಒಳಹೋಗಿ, ಸಂತಸದಿಂದ ಸಂದರ್ಶಕರನ್ನು ಎದುರಿಸಿದೆ. ಬಹುಶಃ ಗೆಲುವಿಗೆ ಇದೂ ಸಹಕಾರಿಯಾಗಿದೆ.

ಸಂದರ್ಶನದಲ್ಲಿ ಪ್ರಶ್ನೆಗಳನ್ನು ಎದುರಿಸುವಾಗ ದಿನಪತ್ರಿಕೆಗಳ ಓದು ಹೆಚ್ಚು ಅಗತ್ಯ. ಕರ್ನಾಟಕದ ವಿಷಯಗಳಿಗಾಗಿ ಹಾಗೂ ಪ್ರಚಲಿತ ವಿದ್ಯಮಾನಗಳಿಗಾಗಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಅವಲಂಬಿಸಿದ್ದೆ. ಈ ಪತ್ರಿಕೆಗಳ ಓದು, ನನಗೆ ಸಂದರ್ಶನದ ವೇಳೆ ಹೆಚ್ಚು ನೆರವಾದವು.

ಅಧಿಕಾರಿಗಳ ಗಳಿಕೆ ಅಪಾರ, ತನಿಖೆ ಭರಪೂರ

ನಾಲ್ವರು ಅಧಿಕಾರಿಗಳು ಕೋಟಿ ಕುಳಗಳು

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮುಖ್ಯ ಲೆಕ್ಕಾಧಿಕಾರಿ ಮುತ್ತು ಅವರು ವಿಜಯನಗರದಲ್ಲಿ 60*40 ನಿವೇಶನದಲ್ಲಿ ಕಟ್ಟಿಸುತ್ತಿರುವ ನಾಲ್ಕು ಅಂತಸ್ತಿಕ ಕಟ್ಟಡದ ಬೆಲೆ ಸುಮಾರು ₹ 1.50 ಕೋಟಿ. ಪ್ರಾಧಿಕಾರದ ಎಂಜಿನಿಯರ್ ನಾಗೇಶ್ ಅವರ ಬಳಿ ಇರುವ ನಿವೇಶನ ಮತ್ತು ಜಮೀನಿನ ಮೌಲ್ಯ ₹ 1.32 ಕೋಟಿ. ನಂಜನಗೂಡಿನ ಹಿರಿಯ ಸಬ್ ರಿಜಿಸ್ಟ್ರಾರ್ ಶಿವಶಂಕರ ಮೂರ್ತಿ ಅವರ ಬಳಿ ಇರುವ ಐದು ನಿವೇಶನಗಳ ಮೌಲ್ಯ ₹ 1.28 ಕೋಟಿ, ಎರಡು ಕಾರು ಸೇರಿ ಎಲ್ಲ ವಾಹನಗಳ ಒಟ್ಟು ಮೌಲ್ಯ ₹ 30 ಲಕ್ಷ.

ಜಿಲ್ಲೆಯ ನಾಲ್ವರು ಅಧಿಕಾರಿಗಳ ಬಳಿ ಲೋಕಾಯುಕ್ತ ಅಧಿಕಾರಿಗಳು ಪತ್ತೆ ಹಚ್ಚಿರುವ ಸ್ಥಿರ ಮತ್ತು ಚರಾಸ್ತಿಗಳಿವು. ಎಲ್ಲ ಅಧಿಕಾರಿಗಳೂ ಕೋಟ್ಯಧೀಶರು. ಅಪಾರ ಮೌಲ್ಯದ ಚಿನ್ನ, ಬೆಳ್ಳಿ ಆಭರಣಗಳನ್ನು ಹೊಂದಿದ್ದಾರೆ. ಜಿಲ್ಲಾ ಕೇಂದ್ರ ಮತ್ತು ಚಾಮರಾಜನಗರ ಜಿಲ್ಲೆಯ ಹನೂರು ಸೇರಿದಂತೆ 11 ಕಡೆ ಬುಧವಾರ ದಾಳಿ ಕಾರ್ಯಾಚರಣೆ ನಡೆಯಿತು.

ಮುಡಾ ಮುಖ್ಯ ಲೆಕ್ಕಾಧಿಕಾರಿ ಮುತ್ತು ಅವರ ವಿಜಯನಗರದ ಮೂರನೇ ಹಂತದ ಮನೆ, ಎಂಜಿನಿಯರ್ ನಾಗೇಶ್ ಹಾಗೂ ನಂಜನಗೂಡು ಹಿರಿಯ ಉಪ ನೋಂದಣಾಧಿಕಾರಿ ಶಿವಶಂಕರಮೂರ್ತಿ ಅವರ ನಿವೇದಿತಾ ನಗರದ ಮನೆಗಳ ಮೇಲೂ ದಾಳಿ ಮಾಡಲಾಗಿದೆ.

ನಾಗೇಶ್ ಅವರಿಗೆ ದಟ್ಟಗಳ್ಳಿಯಲ್ಲಿ ₹5 ಲಕ್ಷ ಮೌಲ್ಯದ ನಿವೇಶನ , ಮದಗಳ್ಳಿಯಲ್ಲಿ ₹30 ಲಕ್ಷ, ರಾಮಕೃಷ್ಣನಗರದಲ್ಲಿ ₹50 ಲಕ್ಷ ಮೌಲ್ಯದ ಮನೆಗಳಿವೆ. ಸಿದ್ದಾರ್ಥ ನಗರದಲ್ಲಿ ₹2.5 ಲಕ್ಷ ಮೌಲ್ಯದ ವಾಣಿಜ್ಯ ಮಳಿಗೆ, ದೀಪಾ ಹೌಸಿಂಗ್ ಸೊಸೈಟಿಯಲ್ಲಿ ₹10 ಲಕ್ಷ ಮೌಲ್ಯದ ನಿವೇಶನ, ರತ್ನಹಳ್ಳಿಯಲ್ಲಿ 22.13 ಎಕರೆ ಜಮೀನಿದೆ. 1 ಕೆಜಿ 25 ಗ್ರಾಂ ಚಿನ್ನ, 9 ಕೆಜಿ ಬೆಳ್ಳಿ, ₹1 ಲಕ್ಷ ನಗದು, ₹16.5 ಲಕ್ಷ ಮೌಲ್ಯದ 2 ಕಾರು ಹಾಗೂ 1.25 ಲಕ್ಷ ಮೌಲ್ಯದ ಬೈಕ್ ಇದೆ. ಎಲ್ಲದ್ದರ ಒಟ್ಟು ಮೌಲ್ಯ ₹ 2.30 ಕೋಟಿ.

ಶಿವಶಂಕರಮೂರ್ತಿ ಮನೆಯಲ್ಲಿ ₹1.38 ಲಕ್ಷ ನಗದು, ₹19 ಲಕ್ಷ ಮೌಲ್ಯದ ಚಿನ್ನ, ₹55 ಸಾವಿರ ಮೌಲ್ಯದ ಬೆಳ್ಳಿ ಪತ್ತೆಯಾಗಿದೆ. ಶಿವಶಂಕರಮೂರ್ತಿ, ಪತ್ನಿ ಪ್ರಿಯಾಂಕಾ ಹಾಗೂ ತಾಯಿ ರಾಜಮ್ಮ ಹೆಸರಿನಲ್ಲಿ ಒಟ್ಟು ₹2.60 ಕೋಟಿ ಮೌಲ್ಯದ ಆಸ್ತಿ ಇದೆ. ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಅಜ್ಜೀಪುರದ ಹೊರವಲಯದಲ್ಲಿರುವ ತೋಟದ ಮನೆ ಹಾಗೂ ನಂಜನಗೂಡಿನ ಕಚೇರಿಯಲ್ಲೂ ತಪಾಸಣೆ ನಡೆದಿದೆ.

ಮುತ್ತು ಅವರಿಗೆ ಸೇರಿದ 2 ಜಾಗಗಳಲ್ಲಿ ತಪಾಸಣೆ ನಡೆಸಲಾಗಿದೆ. ₹4.5 ಲಕ್ಷ ಮೌಲ್ಯದ ಎರಡು ವಾಹನ, ₹36.50 ಲಕ್ಷ ನಗದು, 4 ಕೆಜಿ ಚಿನ್ನ ಪತ್ತೆಯಾಗಿದೆ.

₹ 50 ಸಾವಿರ ಮೌಲ್ಯದ ಮದ್ಯ ಪತ್ತೆ

ಪಾಲಿಕೆ ಉಪ ಆಯುಕ್ತ ಮಹೇಶ್ ಕುಮಾರ್ ಅವರ ಮನೆಯಲ್ಲಿ ₹ 50 ಸಾವಿರ ಮೌಲ್ಯದ ಮದ್ಯ ಪತ್ತೆಯಾಗಿದೆ. ಕುವೆಂಪುನಗರದ ಮನೆ ಹಾಗೂ ಅವರಿಗೆ ಸೇರಿದ 13 ಸ್ಥಳಗಳಲ್ಲಿ ಪರಿಶೀಲನೆ ನಡೆದಿದೆ.

ಕುವೆಂಪು ನಗರದಲ್ಲಿ ₹35 ಲಕ್ಷ ಮೌಲ್ಯದ ಮನೆ, ನಂಜನಗೂಡಿನ ಕಾಡಜಟ್ಟಿಯಲ್ಲಿ ₹ 48 ಲಕ್ಷ ಮೌಲ್ಯದ 8 ಎಕರೆ ಜಮೀನು ಮತ್ತು ತೋಟದ ಮನೆ, 629 ಗ್ರಾಂ ಚಿನ್ನ, 7 ಕೆಜಿ ಬೆಳ್ಳಿ, 17 ಲಕ್ಷ ಮೌಲ್ಯದ ಬಿ.ಎಂ.ಡಬ್ಲ್ಯೂ ಕಾರು, 1 ಟಿಲ್ಲರ್ ಪತ್ತೆಯಾಗಿದೆ.

200 ಜೊತೆ ಶೂ, 300 ಶರ್ಟ್‌ಗಳು!

ಶಿವಮೊಗ್ಗ: ಎಂಟು ಕಡೆ ಲೋಕಾಯುಕ್ತ ಪೊಲೀಸರ ದಾಳಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಆದಾಯ ಮೀರಿ ಆಸ್ತಿ ಹೊಂದಿರುವ ಆರೋಪದ ಹಿನ್ನೆಲೆಯಲ್ಲಿ ಇಲ್ಲಿನ ತುಂಗಾ ಮೇಲ್ದಂಡೆ ಯೋಜನೆಯ ಸೂಪರಿಂಟೆಂಡೆಂಟ್ ಎಂಜಿನಿಯರ್ ಪಿ.ಪ್ರಶಾಂತ್ ಹಾಗೂ ಜಿಲ್ಲಾ ಪಂಚಾಯಿತಿಯ ಪಂಚಾಯತ್‌ರಾಜ್ ಎಂಜಿನಿಯರಿಂಗ್ ವಿಭಾಗದ ಕಿರಿಯ ಎಂಜಿನಿಯರ್ ಶಂಕರ ನಾಯ್ಕ ಅವರಿಗೆ ಸೇರಿದ ಮನೆ, ತೋಟದ ಮನೆ ಹಾಗೂ ಕಚೇರಿ ಸೇರಿದಂತೆ ಜಿಲ್ಲೆಯ ಎಂಟು ಕಡೆ ಲೋಕಾಯುಕ್ತ ಅಧಿಕಾರಿಗಳು ಬುಧವಾರ ದಾಳಿ ನಡೆಸಿದ್ದಾರೆ.

ಪ್ರಶಾಂತ್ ಅವರ ಶಿವಮೊಗ್ಗದ ಕೆ.ಎಚ್.ಬಿ ಕಾಲೊನಿಯ ಮನೆ, ಭದ್ರಾವತಿ ತಾಲ್ಲೂಕು ಶೆಟ್ಟಿಹಳ್ಳಿಯ ತೋಟದ ಮನೆ ಹಾಗೂ ಅವರ ಕಚೇರಿಯಲ್ಲಿ ಲೋಕಾಯುಕ್ತ ಸಿಬ್ಬಂದಿ ಪರಿಶೀಲನೆ ನಡೆಸುತ್ತಿದ್ದಾರೆ. ಅಲ್ಲದೇ, ಶರಾವತಿ ನಗರದಲ್ಲಿರುವ ಪ್ರಶಾಂತ್ ಅವರ ಪತ್ನಿಯ ಸಹೋದರ ನಾಗೇಶ್ ಅವರ ಮನೆ ಮೇಲೂ ದಾಳಿ ಮಾಡಿ ಶೋಧ ನಡೆಸಲಾಗಿದೆ.

ಪಿ.ಪ್ರಶಾಂತ್ ಅವರ ಮನೆಯಲ್ಲಿ ಇರುವ ಶೂ, ಚಪ್ಪಲಿಗಳು ಮತ್ತು ವಶಪಡಿಸಿಕೊಂಡ ಚಿನ್ನ, ಬೆಳ್ಳಿ ಹಾಗೂ ನಗದು

ಪಿ.ಪ್ರಶಾಂತ್

ಶಂಕರ ನಾಯ್ಕ

ದಾಳಿ ವೇಳೆ ಪ್ರಶಾಂತ್ ಮನೆಯಲ್ಲಿ 3.5 ಕೆ.ಜಿ ಚಿನ್ನ, 23 ಕೆ.ಜಿ ಬೆಳ್ಳಿ ಹಾಗೂ ₹ 26 ಲಕ್ಷ ನಗದು ಪತ್ತೆಯಾಗಿದೆ. ವಿದೇಶಿ ಬ್ರ್ಯಾಂಡ್‌ನದ್ದೂ ಸೇರಿದಂತೆ 50 ಬಾಟಲಿ ಮದ್ಯ ಹಾಗೂ 200 ಜೊತೆ ಶೂ, 50 ಜೊತೆ ಚಪ್ಪಲಿ ಸಹ ಪತ್ತೆಯಾಗಿದೆ. 300 ಶರ್ಟ್ ಹಾಗೂ 300 ಸೀರೆ, ಮೂರು ಐಷಾರಾಮಿ ಕಾರು, 6 ಎಕರೆ ಕೃಷಿ ಜಮೀನು ಹಾಗೂ ಬೆಂಗಳೂರಿನಲ್ಲಿ ಎರಡು ನಿವೇಶನ ಹೊಂದಿರುವ ದಾಖಲೆಗಳನ್ನು ಲೋಕಾಯುಕ್ತ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಕಿರಿಯ ಎಂಜಿನಿಯರ್ ಶಂಕರ ನಾಯ್ಕ ಅವರಿಗೆ ಸಂಬಂಧಿಸಿದಂತೆ ಶಿಕಾರಿಪುರದ ಮೂರು ಕಡೆಗಳಲ್ಲಿ ದಾಳಿ ನಡೆಸಲಾಗಿದೆ. ಅವರ ಮನೆಯಲ್ಲಿ 386 ಗ್ರಾಂ ಚಿನ್ನ, 3 ಕೆ.ಜಿ ಬೆಳ್ಳಿ, ₹ 1 ಲಕ್ಷ ನಗದು ಹಾಗೂ 11 ಎಕರೆ ಜಮೀನಿನ ದಾಖಲೆ, ಒಂದು ಬೈಕ್, ಆರು ಕಾರುಗಳು ಪತ್ತೆಯಾಗಿವೆ.

ಏಳು ಕೋಟಿ ಮೌಲ್ಯದ ಬಂಗಲೆ ಒಡೆಯ ಪಿಡಿಓ!

ದೊಡ್ಡಬಳ್ಳಾಪುರ: ಬೆಂಗಳೂರಿನ ರಾಜಾನುಕುಂಟೆಯ ಕಾಕೋಳು ರಸ್ತೆಯಲ್ಲಿ ಅಂದಾಜು ₹7 ಕೋಟಿ ಬೆಲೆ ಬಾಳುವ ಭವ್ಯ ಬಂಗಲೆ, ದೊಡ್ಡಬಳ್ಳಾಪುರ ತಾಲ್ಲೂಕಿನ ತೂಬಗೆರೆ ಹೋಬಳಿಯ ಸೋತೇನಹಳ್ಳಿ ಗ್ರಾಮದಲ್ಲಿ ಮನೆ, ಗುಂಜೂರು ಗ್ರಾಮದ ಸಮೀಪದ ಕೃಷಿ ಜಮೀನು, ದೊಡ್ಡಬಳ್ಳಾಪುರದ ಟಿ.ಬಿ. ನಾರಾಯಣಪ್ಪ ಬಡಾವಣೆಯಲ್ಲಿ ವಾಣಿಜ್ಯ ಸಂಕೀರ್ಣ...

ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ರಂಗಸ್ವಾಮಿ ಮನೆಯಲ್ಲಿ ದಾಖಲೆ ಪರಿಶೀಲನೆಯಲ್ಲಿ ದೊರೆತ ಆಸ್ತಿಗಳ ದಾಖಲೆ ಕಂಡು ಖುದ್ದು ಲೋಕಾಯುಕ್ತ ಅಧಿಕಾರಿಗಳೇ ಆಶ್ಚರ್ಯ ಚಕಿತರಾಗಿದ್ದಾರೆ.

ರಂಗಸ್ವಾಮಿ ಅವರ ಅಳಿಯ ಹಾಗೂ ರಾಜಾಜಿನಗರದ ಕಂದಾಯ ನಿರೀಕ್ಷಕ ಶ್ರೀನಿವಾಸ್ ಅವರ ಬೆಂಗಳೂರಿನ ಮನೆ ಯಲ್ಲಿಯೂ ಶೋಧ ನಡೆಸಿದ್ದಾರೆ.

20 ನಿವೇಶನ, 65 ಎಕರೆ ಒಡೆಯ ಎಂಜಿನಿಯರ್

4.75 ಕೋಟಿ ಮೌಲ್ಯದ ಆಸ್ತಿ, 16 ಇಂಚಿನ ಜಿಂಕೆ ಕೊಂಬು ಪತ್ತೆ

ಪ್ರಜಾವಾಣಿ ವಾರ್ತೆ

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ಹಾವೇರಿ ಜಿಲ್ಲಾ ನಿರ್ಮಿತಿ ಕೇಂದ್ರದ ಯೋಜನಾ ಎಂಜಿನಿಯರ್ ವಾಗೀಶ ಬಸವಾನಂದ ಶೆಟ್ಟರ್ ಅವರ ಮನೆ, ಕಚೇರಿ, ಕೌಶಲ ಕೇಂದ್ರ, ನಿರ್ಮಿತಿ ಕೇಂದ್ರ ಕಚೇರಿಗಳ ಮೇಲೆ ಬುಧವಾರ ಲೋಕಾಯುಕ್ತ ದಾಳಿ ನಡೆದಿದ್ದು, ಅಂದಾಜು ₹ 4.75 ಕೋಟಿ ಮೌಲ್ಯದ ಆಸ್ತಿ ಪತ್ತೆ ಹಚ್ಚಲಾಗಿದೆ.

ಇಲ್ಲಿನ ಚನ್ನೇಶ್ವರನಗರದ ಬನಶಂಕರಿ ಬಡಾವಣೆ ನಿವಾಸಿ ಆಗಿರುವ ವಾಗೀಶ ಅವರು ಆದಾಯಕ್ಕಿಂತ ಹೆಚ್ಚಿನ ಆಸ್ತಿ ಗಳಿಸಿರುವುದು ದಾಳಿ ವೇಳೆ ಗೊತ್ತಾಗಿದೆ.

ಅರ್ಧ ಕೆ.ಜಿ ಬಂಗಾರ, 2 ಕೆ.ಜಿ ಬೆಳ್ಳಿ, ₹18.36 ಲಕ್ಷ ನಗದು ಮತ್ತು ಹಣ ಎಣಿಕೆ ಯಂತ್ರ, 3 ಕಾರು, 2 ಬೈಕ್, ಹಾವೇರಿ, ರಾಣೆಬೆನ್ನೂರು ಸೇರಿ 8 ಮನೆ, ರಾಜ್ಯದ ವಿವಿಧ ಭಾಗಗಳಲ್ಲಿ ಒಟ್ಟು 20 ನಿವೇಶನ, 65 ಎಕರೆ ಭೂಮಿ ಹೊಂದಿರುವ ದಾಖಲೆಗಳು ಹಾಗೂ 16 ಇಂಚಿನ ಜಿಂಕೆ ಕೊಂಬು ಕೂಡ ದಾಳಿ ವೇಳೆ ಪತ್ತೆಯಾಗಿದೆ.

ವಾಗೀಶ ಬಸವಾನಂದ ಶೆಟ್ಟರ್

ವಾಗೀಶ ಅವರ ಕುಟುಂಬದ ಹೆಸರಿನಲ್ಲಿ ಆಸ್ತಿ ಇರುವ ಬ್ಯಾಲಹುಣಸಿ, ಬೂದನೂರ, ಗುತ್ತಲ ಮತ್ತು ರಾಣೆಬೆನ್ನೂರಿನಲ್ಲಿಯೂ ಲೋಕಾಯುಕ್ತ ತಂಡ ಮಾಹಿತಿ ಕಲೆ ಹಾಕಿದೆ.

ವಿಶೇಷವಾಗಿ ಜಿಂಕೆ ಕೊಂಬು ತೀವ್ರ ಚರ್ಚೆಗೆ ಗ್ರಾಸವಾಯಿತು.

ವಾಗೀಶ ಬಸವಾನಂದ ಶೆಟ್ಟರ್ ಅವರ ನಿವಾಸದಲ್ಲಿ ಪತ್ತೆಯಾಗಿರುವ ಬೆಳ್ಳಿ, ಚಿನ್ನಾಭರಣ ಹಾಗೂ ಕಂತೆ ಕಂತೆ ನೋಟುಗಳು

ಲೋಕಾಯುಕ್ತ ಅಧಿಕಾರಿಗಳು ವನ್ಯ ಜೀವಿ ಇಲಾಖೆ ಆರ್‌ಎಫ್‌ಒ ಕಿರಣಕುಮಾರ ಕಲ್ಲಮ್ಮನವರ ಅವರನ್ನು ಕರೆಯಿಸಿ ಜಿಂಕೆ ಕೊಂಬು ಪರಿಶೀಲಿಸಿದರು. ‘ಜಿಂಕೆ ಕೊಂಬು ಅನೇಕ ವರ್ಷ ಗಳಷ್ಟು ಹಳೆಯದು ಎಂದು ಮೇಲ್ನೋಟಕ್ಕೆ ಪತ್ತೆಯಾಗಿದೆ. ಅದನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳಿಸಿದ ಬಳಿಕ ನಿಖರ ಮಾಹಿತಿ ಸಿಗಲಿದೆ. ಈ ಬಗ್ಗೆ ದೂರು ದಾಖಲಿ ಸಿಕೊಳ್ಳಲು ಲೋಕಾಯುಕ್ತರು ಸೂಚಿಸಿದರೆ ದೂರು ದಾಖಲಿಸಿಕೊಳ್ಳಲಾಗುವುದು’ ಎಂದು ಆರ್‌ಎಫ್‌ಒ ತಿಳಿಸಿದರು.

ಕೆಆರ್‌ಐಡಿಎಲ್ ಇ.ಇ ಕಚೇರಿ ಮೇಲೆ ದಾಳಿ



ಝರಣಪ್ಪ ಚಿಂಚೋಳಿಕರ್

ಕೊಪ್ಪಳ/ ಕಲಬುರಗಿ: ಕೊಪ್ಪಳದ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ (ಕೆಆರ್‌ಐಡಿಎಲ್) ಕಾರ್ಯ ನಿರ್ವಾಹಕ ಎಂಜಿನಿಯರ್ ಝಡ್. ಎಂ. ಚಿಂಚೋಳಿಕರ್ ಕಾರ್ಯನಿರ್ವಹಿಸುತ್ತಿದ್ದ ಕಚೇರಿ ಮೇಲೆ ಬುಧವಾರ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಆದಾಯಕ್ಕಿಂತಲೂ ಹೆಚ್ಚು ಆಸ್ತಿ ಗಳಿಸಿದ ಆರೋಪ ಕೇಳಿ ಬಂದಿದ್ದರಿಂದ ರಾಯಚೂರು ಲೋಕಾಯುಕ್ತದ ಅಧಿಕಾರಿಗಳಿಂದ ಬೆಳಿಗ್ಗೆ 6 ಗಂಟೆಗೆ ಆರಂಭವಾದ ಪರಿಶೀಲನೆ ರಾತ್ರಿ ತನಕ ನಡೆಯಿತು.

ಚಿಂಚೋಳಿಕರ್ ಬೀದರ್ ಜಿಲ್ಲೆಯ ಚಿಟಗುಪ್ಪ ತಾಲ್ಲೂಕಿನ ಮುತ್ತಂಗಿ ಬಳಿಯ ಹೊರವಲಯದಲ್ಲಿರುವ ಹೊಂದಿರುವ ಫಾರ್ಮ್ ಹೌಸ್‌ನಲ್ಲಿಯೂ ಅಧಿಕಾರಿಗಳು ಪರಿಶೀಲಿಸಿದರು. ಕಲಬುರಗಿ ಕೆಆರ್‌ಐಡಿಎಲ್ ಪ್ರಭಾರ ಜಂಟಿ ನಿರ್ದೇಶಕರೂ ಆದ ಅವರು ಕಲಬುರಗಿಯಲ್ಲಿ ನಿರ್ಮಾಣ ಮಾಡುತ್ತಿರುವ ಮನೆಗೆ ಭಾರಿ ಬೆಲೆಬಾಳುವ ಗ್ರಾನೈಟ್‌ಗಳನ್ನು ಗುಜರಾತ್‌ನಿಂದ ತರಿಸಿದ್ದಾರೆ ಎನ್ನಲಾಗಿದ್ದು, ಇದರ ಮೌಲ್ಯದ ಬಗ್ಗೆಯೂ ಅಧಿಕಾರಿಗಳು ಲೆಕ್ಕ ಹಾಕುತ್ತಿದ್ದಾರೆ.

‘ಚಿಂಚೋಳಿಕರ್ ಸದ್ಯ ಕಲಬುರಗಿಯಲ್ಲಿದ್ದಾರೆ. ಕೊಪ್ಪಳಕ್ಕೆ ಬಂದ ಬಳಿಕ ಇಲ್ಲಿನ ಮನೆಯಲ್ಲಿಯೂ ಪರಿಶೀಲನೆ ನಡೆಸಲಾಗುವುದು’ ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ.

ಒಂದು ಕೆ.ಜಿ ಚಿನ್ನ, ₹8 ಲಕ್ಷ ನಗದು



ತುಮಕೂರಿನ ಆರ್‌.ಟಿ.ನಗರದಲ್ಲಿರುವ ಎಸ್‌.ಎನ್‌.ಮೂರ್ತಿ ಮನೆ

ಪ್ರಜಾವಾಣಿ ವಾರ್ತೆ

ತುಮಕೂರು: ಒಂದು ಕೆ.ಜಿ.ಗೂ ಅಧಿಕ ಚಿನ್ನಾಭರಣ, ₹8 ಲಕ್ಷಕ್ಕೂ ಹೆಚ್ಚಿನ ನಗದು ಹಾಗೂ ಸ್ಥಿರ, ಚರಾಸ್ತಿಗೆ ಸಂಬಂಧಿಸಿದ ದಾಖಲೆ, ತುಮಕೂರು ನಗರ ಸೇರಿದಂತೆ ವಿವಿಧೆಡೆ ನಿವೇಶನಗಳು, ಅಪಾರ ಪ್ರಮಾಣದ ಆಸ್ತಿಪಾಸ್ತಿ...

– ಇವಿಷ್ಟು ನಗರದಲ್ಲಿರುವ ಮೈಸೂರಿನ ಕೆಐಎಡಿಬಿ ಕಾರ್ಯನಿರ್ವಾಹಕ ಎಂಜಿನಿಯರ್ ಎಸ್.ಎನ್. ಮೂರ್ತಿ ಮನೆ ಮೇಲೆ ಬುಧವಾರ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದಾಗ ಕಂಡು ಬಂದ ಆಸ್ತಿ ವಿವರ. ರಾತ್ರಿಯಾದರೂ ದಾಖಲೆಗಳ ಪರಿಶೀಲನೆ, ಶೋಧ ಕಾರ್ಯ, ಮುಂದುವರಿದಿದೆ.

ತುಮಕೂರಿನ ಆರ್.ಟಿ.ನಗರ ಸಮೀಪದ ಶಂಕರಪುರ ಡಿ ಬ್ಲಾಕ್‌ನಲ್ಲಿರುವ ಮೂರ್ತಿ ಮನೆ, ಸಮೀಪದಲ್ಲಿರುವ ಮಾವ ಹಾಗೂ ನಾದಿನಿ ಮನೆಗಳ ಮೇಲೂ ಏಕಕಾಲಕ್ಕೆ ಲೋಕಾಯುಕ್ತ ದಾಳಿ ನಡೆದಿದೆ.

‘ಕುಬೇರ ಅಧಿಕಾರಿಗಳ’ ಬಳಿ ಭಾರಿ ಆಸ್ತಿ ಪತ್ತೆ

ಒಂದನೇ ಪುಟದಿಂದ...

ಕಾರ್ಖಾನೆ ವಿಭಾಗದ ಉಪ ನಿರ್ದೇಶಕ ಟಿ.ವಿ.ನಾರಾಯಣಪ್ಪಗೆ ಸೇರಿದ 4 ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ. ಹೆಜ್ಜಾಲ ಲೇಔಟ್‌ನಲ್ಲಿ 1 ನಿವೇಶನ, ವಿಜಯನಗರದಲ್ಲಿ 1 ಮನೆ, ಕೆ.ಆರ್. ಪುರದಲ್ಲಿ 2 ಮನೆ, ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ 10 ಎಕರೆ ಕೃಷಿ ಜಮೀನಿರುವುದು ಪ್ರಾಥಮಿಕ ತನಿಖೆಯಿಂದ ಪತ್ತೆಯಾಗಿದೆ. ಇದರ ಮೌಲ್ಯ ₹ 2.58 ಕೋಟಿ ಎಂದು ಅಂದಾಜಿಸಲಾಗಿದೆ. ಅವರ ಮನೆ ಯಲ್ಲೂ ₹ 22.50 ಲಕ್ಷ ಮೌಲ್ಯದ ಚಿನ್ನಾಭರಣ, ಬೆಳ್ಳಿ ಆಭರಣ, ಪೀಠೋಪಕರಣ, ಎರಡು ಬೈಕ್‌ಗಳು ಪತ್ತೆಯಾಗಿವೆ ಎಂದು ಮೂಲಗಳು ಹೇಳಿವೆ.

ಬೆಂಗಳೂರಿನ ಕೆ.ಆರ್‌.ವೃತ್ತದ ಬೆಸ್ಕಾಂ ಕಚೇರಿಯ (ತಾಂತ್ರಿಕ ವಿಭಾಗ) ಮುಖ್ಯ ಎಂಜಿನಿಯರ್ ಎಚ್‌.ಜೆ.ರಮೇಶ್ ಅವರ ಮನೆಯಲ್ಲಿ ಪತ್ತೆಯಾಗಿರುವ ಮದ್ಯದ ಬಾಟಲಿಗಳು

ಜಿಲ್ಲೆ	ಪ್ರಕರಣಗಳ ಸಂಖ್ಯೆ	ಶೋಧ ನಡೆಸಿದ ಸ್ಥಳಗಳು
ಬೆಂಗಳೂರು ನಗರ	2	14
ಬೆಂಗಳೂರು ಗ್ರಾ.	1	3
ಮಂಡ್ಯ	1	5
ಮೈಸೂರು	3	8
ಚಾಮರಾಜನಗರ	1	3
ಶಿವಮೊಗ್ಗ	2	8
ಮಂಗಳೂರು	1	4
ಉಡುಪಿ	1	2
ಹಾವೇರಿ	1	3
ಕೊಪ್ಪಳ	1	4
ತುಮಕೂರು	1	3
ಒಟ್ಟು	15	57



ವಿರಾಮ ಅರಬ್ಬಿಸಮುದ್ರದಲ್ಲಿ ಜೂನ್ 1ರಿಂದ ಆಳ ಸಮುದ್ರ ಮೀನುಗಾರಿಕೆ ನಿಷೇಧವಾಗಲಿದ್ದು, ಮೋಟಾರುಚಾಲಿತ ಮೀನುಗಾರಿಕಾ ದೋಣಿಗಳು ಉಡುಪಿ ಸಮೀಪದ ಮಲ್ಪೆ ಬಂದರಿನಲ್ಲಿ ಲಂಗರು ಹಾಕಿವೆ – ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

ಟಿ.ಸಿಗೆ ಲಂಚ: ಪ್ರಾಂಶುಪಾಲ ಬಂಧನ

ಬೆಂಗಳೂರು: ವಿದ್ಯಾರ್ಥಿಗೆ ವರ್ಗಾವಣೆ ಪ್ರಮಾಣ ಪತ್ರ ನೀಡಲು ₹ 5 ಸಾವಿರ ಲಂಚ ಪಡೆಯುತ್ತಿದ್ದಾಗ ರಾಜಾಜಿನಗರ 2ನೇ ಬ್ಲಾಕ್‌ನ ಬಸವೇಶ್ವರ ಪ್ರೌಢಶಾಲೆಯ ಪ್ರಾಂಶುಪಾಲ ವಿ.ನಾರಾಯಣ ಅವರನ್ನು ಬುಧವಾರ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ವಿದ್ಯಾರ್ಥಿ ನಂದೀಶ್ ಫಲಿತಾಂಶವನ್ನು ತಡೆ ಹಿಡಿದು ಹಣಕ್ಕೆ ಬೇಡಿಕೆ ಇಡಲಾಗಿತ್ತು. ವಿದ್ಯಾರ್ಥಿ ತಾಯಿ ದಿವ್ಯಾ ದೂರು ನೀಡಿದ್ದರು.

‘ಶಾಲೆಯಲ್ಲಿ ವಿದ್ಯಾರ್ಥಿ 9ನೇ ತರಗತಿ ಕಲಿಯುತ್ತಿದ್ದ. ಆತನನ್ನು ಮುಂದಿನ ತರಗತಿಗೆ ತೇರ್ಗಡೆ ಮಾಡಲು ಲಂಚಕ್ಕೆ ಬೇಡಿಕೆ ಇಡಲಾಗಿತ್ತು. ಬುಧವಾರ ₹ 5 ಸಾವಿರ ಲಂಚದ ಹಣ ಪಡೆಯುತ್ತಿದ್ದಾಗ ಪೋಷಕರ ಎದುರೇ ಬಂಧಿಸಲಾಯಿತು’ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಯಾವ ಅಧಿಕಾರಿಗಳ ಮೇಲೆ ದಾಳಿ?

ಬೆಂಗಳೂರಿನ ಕೆ.ಆರ್.ವೃತ್ತದ ಬೆಸ್ಕಾಂ ಕಚೇರಿಯ (ತಾಂತ್ರಿಕ ವಿಭಾಗ) ಮುಖ್ಯ ಎಂಜಿನಿಯರ್ ಎಚ್.ಜೆ.ರಮೇಶ್, ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯ ಕಾರ್ಮಿಕ ಭವನದಲ್ಲಿನ ಕಾರ್ಖಾನೆ ವಿಭಾಗದ ಉಪ ನಿರ್ದೇಶಕ ಟಿ.ವಿ.ನಾರಾಯಣಪ್ಪ, ಬೆಂಗಳೂರು ಗ್ರಾಮಾಂತರದ ಕಿಟ್ಟನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಎಸ್.ಡಿ.ರಮೇಶ್, ಬಿಬಿಎಂಪಿ ದಕ್ಷಿಣ ವಲಯದ ಇಇ ಎನ್.ಜಿ.ಪ್ರಮೋದ್ ಕುಮಾರ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮುಖ್ಯ ಲೆಕ್ಕಾಧಿಕಾರಿ ಎನ್. ಮುತ್ತು ಹಾಗೂ ಎಇಇ ಎಂಜಿನಿಯರ್ ಎ.ನಾಗೇಶ್, ಮೈಸೂರು ಮಹಾನಗರ ಪಾಲಿಕೆಯ ಅಭಿವೃದ್ಧಿ ವಿಭಾಗದ ಉಪ ಆಯುಕ್ತ ಜೆ.ಮಹೇಶ್, ನಂಜನಗೂಡಿನ ಹಿರಿಯ ನೋಂದಣಾಧಿಕಾರಿ ಎಂ.ಶಿವಶಂಕರಮೂರ್ತಿ, ಶಿವಮೊಗ್ಗ ಜಿಲ್ಲೆ ಶಿಕಾರಿಪುರದ ಪಂಚಾಯತ್‌ರಾಜ್ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆ ಉಪ ವಿಭಾಗದ ಕಿರಿಯ ಎಂಜಿನಿಯರ್ ಶಂಕರ್‌ನಾಯಕ್, ಶಿವಮೊಗ್ಗದ ತುಂಗಾ ಮೇಲ್ದಂಡೆ ಯೋಜನೆಯ ವಿಶೇಷ ಎಂಜಿನಿಯರ್ ಕೆ.ಪ್ರಶಾಂತ್, ಉಡುಪಿ ಜಿಲ್ಲೆ ಮಣಿಪಾಲದ ಕಾರ್ಮಿಕ ಅಧಿಕಾರಿ ಬಿ.ಆರ್.ಕುಮಾರ್, ಬೆಂಗಳೂರಿನ ವಿಕಾಸಸೌಧದ ಹಿರಿಯ ಭೂವಿಜ್ಞಾನಿ ಎ.ಎಂ. ನಿರಂಜನ್, ಹಾವೇರಿ ಉಪ ವಿಭಾಗದ ನಿರ್ಮಿತಿ ಕೇಂದ್ರದ ಯೋಜನಾ ಎಂಜಿನಿಯರ್ ವಾಗೀಶ್, ಕೊಪ್ಪಳದ ಕೆಆರ್‌ಐಡಿಎಲ್‌ನ ಇಇ ಜರಣಪ್ಪ ಎಂ.ಚಿಂಚೋಳಿಕರ್, ಮೈಸೂರು ಕೆಐಎಡಿಬಿ ಇಇ ಸಿ.ಎನ್.ಮೂರ್ತಿ ಅವರ ಮನೆಗಳಲ್ಲಿ ಶೋಧ ನಡೆಸಿದರು. ಇವರ ವಿರುದ್ಧ ತನಿಖೆ ಆರಂಭಿಸಿದ್ದಾರೆ.

ಕಲಿಕಾಹುಂಡಿಗೆ ಕಾಣಿಕೆ ಹಾಕಿ ಪ್ರಾರಂಭೋತ್ಸವ

ಪ್ರಜಾವಾಣಿ ವಾರ್ತೆ

ಕಡಬ (ದಕ್ಷಿಣ ಕನ್ನಡ): ತಾಲ್ಲೂಕಿನ ಪುಣ್ಚಪ್ಪಾಡಿ ಸರ್ಕಾರಿ ಶಾಲೆಯ ಪ್ರಾರಂಭೋತ್ಸವ ‘ಕಲಿಕಾ ಹುಂಡಿ’ ಎಂಬ ವಿಶಿಷ್ಟ ಪರಿಕಲ್ಪನೆಯೊಂದಿಗೆ ಜರುಗಿತು.

ಪೋಷಕರು, ಊರವರು, ದಾನಿಗಳು, ವಿದ್ಯಾಭಿಮಾನಿಗಳು, ವಿವಿಧ ಸಂಘ ಸಂಸ್ಥೆಗಳವರು ತಾವು ತಂದ ಕಲಿಕಾ ಸಾಮಗ್ರಿ, ಹಣ, ವಸ್ತುರೂಪದ ಕಾಣಿಕೆಗಳನ್ನು ಈ ಹುಂಡಿಗೆ ಹಾಕಿದರು. ಮಕ್ಕಳಿಗೆ ಆರತಿ ಬೆಳಗಿ, ಹೂ, ಕಲಿಕಾ ಸಾಮಗ್ರಿ ನೀಡಿ, ವಾದ್ಯಘೋಷದೊಂದಿಗೆ ಶಾಲೆಗೆ ಬರಮಾಡಿಕೊಳ್ಳಲಾಯಿತು.

ಅಕ್ಷರ ರಥ, ಕಲಿಕಾ ಚಪ್ಪರ, ಕಲಿಕಾ ಮಂಟಪ, ಪುಸ್ತಕ ಜೋಳಿಗೆ, ಕಲಿಕಾ ಚೀಲ ಹೀಗೆ ವರ್ಷಂಪ್ರತಿ ವಿವಿಧ ವಿಶೇಷ ಪರಿಕಲ್ಪನೆಗಳ ಮೂಲಕ ಶಾಲಾ ಆರಂಭೋತ್ಸವ ನಡೆಸಲಾಗುತ್ತಿದೆ. ಶಾಲೆಯ ಈ ಬಾರಿಯ ಪರಿಕಲ್ಪನೆ ಕಲಿಕಾಹುಂಡಿ. ಮಕ್ಕಳ ಕಲಿಕೆಗೆ ಬೇಕಾಗುವ ಕಲಿಕಾ ಸಾಮಾಗ್ರಿಗಳು, ವಸ್ತುಗಳು, ದೇಣಿಗೆಯನ್ನು ಸಂಗ್ರಹಿಸುವ ವಿಶಿಷ್ಟ ಪರಿಕಲ್ಪನೆ ಇದು. ಹುಂಡಿಗೆ ವರ್ಷಪೂರ್ತಿ ಕಾಣಿಕೆ ನೀಡಬಹುದು.

ಕಲಿಕಾ ಹುಂಡಿಗೆ ನೋಟ್‌ಬುಕ್ ಹಾಕುವ ಮೂಲಕ ಶಾಲಾ ಆರಂಭೋತ್ಸವಕ್ಕೆ ಚಾಲನೆ ನೀಡಿದ ವಿಜಯ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಕೃಷ್ಣ ಕುಮಾರ್ ರೈ ದೇವಸ್ಯ, ‘ಮಕ್ಕಳ ಕಲಿಕೆ, ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಇಂತಹ ವಿಭಿನ್ನ ಪರಿಕಲ್ಪನೆಗಳು ಉಪಯುಕ್ತವಾಗಲಿವೆ’ ಎಂದರು. ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ಸಮವಸ್ತ್ರ ವಿತರಿಸಲಾಯಿತು.

ನಕ್ಸಲೀಯರಿಗೆ ಸೇರಿದ ಸ್ಫೋಟಕ, ಶಸ್ತ್ರಾಸ್ತ್ರ ವಶ

ನವದೆಹಲಿ (ಪಿಟಿಐ): ಬಂಧಿತ ನಕ್ಸಲ್ ಕಮಾಂಡರ್ ದಿನೇಶ್ ಗೋಪೆ ನೀಡಿದ ಮಾಹಿತಿ ಆಧರಿಸಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಹಾಗೂ ಪೊಲೀಸ್ ಪಡೆ ಜಾರ್ಖಂಡ್‌ನಲ್ಲಿ ನಡೆಸಿದ ಎರಡು ದಿನಗಳ ಜಂಟಿ ಕಾರ್ಯಾಚರಣೆಯಲ್ಲಿ ಅಪಾರ ಪ್ರಮಾಣದ ಸ್ಫೋಟಕ ವಸ್ತುಗಳು, ಶಸ್ತ್ರಾಸ್ತ್ರ, ಮದ್ದುಗುಂಡು ವಶಪಡಿಸಿಕೊಳ್ಳಲಾಗಿದೆ.

ನಿಷೇಧಿತ ನಕ್ಸಲ್ ಸಂಘಟನೆಯಾದ ಪೀಪಲ್ಸ್ ಲಿಬರೇಷನ್ ಫ್ರಂಟ್ ಆಫ್ ಇಂಡಿಯಾದ ಸ್ವಯಂ ಘೋಷಿತ ನಾಯಕ ಗೋಪೆ ಅಲಿಯಾಸ್ ಕುಲ ದೀಪ್ ಯಾದವ್‌ನನ್ನು ಮೇ 21ರಂದು ಎನ್‌ಐಎ ಬಂಧಿಸಿತ್ತು. ಆತ ನೀಡಿದ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಲಾಗಿದ್ದು, ಒಟ್ಟು 62.3 ಕೆ.ಜಿ ಜಿಲೆಟಿನ್, ಕಾಡತೂಸುಗಳು, ಕಚ್ಚಾ ಬಾಂಬ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.

₹16 ಲಕ್ಷದ ಜಾಡು ಹಿಡಿದು ಬಂದ ಎನ್‌ಐಎ

ಪ್ರಜಾವಾಣಿ ವಾರ್ತೆ

ಉಪ್ಪಿನಂಗಡಿ (ದಕ್ಷಿಣ ಕನ್ನಡ): ಬೆಳ್ತಂಗಡಿ ತಾಲ್ಲೂಕಿನ ಬಜತ್ತೂರು ಗ್ರಾಮದ ನೀರಕಟ್ಟೆಯ ಅಬ್ಬಾಸ್ ಅವರ ಮನೆಯಲ್ಲಿ ಎನ್‌ಐಎ ಅಧಿಕಾರಿಗಳು ತಪಾಸಣೆ ನಡೆಸಿದ್ದಾರೆ.

‘ಅಬ್ಬಾಸ್ ಅವರ ಪುತ್ರ ಅಶ್ರಫ್ ಅವರನ್ನು ಹುಡುಕಿಕೊಂಡು ಎನ್‌ಐಎ ಅಧಿಕಾರಿಗಳು ಬಂದಿದ್ದರು. ಅಶ್ರಫ್ ಮನೆಯಲ್ಲಿ ಇರಲಿಲ್ಲ. ಅಧಿಕಾರಿಗಳು ಮೊಬೈಲ್ ಮೂಲಕ ಅಶ್ರಫ್‌ನನ್ನು ಸಂಪರ್ಕಿಸಿ, ಅವರ ಬ್ಯಾಂಕ್ ಖಾತೆಗೆ ₹ 16 ಲಕ್ಷ ಜಮೆಯಾದ ಬಗ್ಗೆ ಮಾಹಿತಿ ಕೇಳಿದರು. ತಾನು ಈ ಮೊದಲು ವಿಟ್ಲದಲ್ಲಿ ಸೋಫಾ ತಯಾರಿ ಹಾಗೂ ಮಾರಾಟದ ವ್ಯವಹಾರ ಮಾಡುತ್ತಿದ್ದೆ. ಅಲ್ಲಿನ ಜಾಗ ಮಾರಿದ್ದು, ಅದಕ್ಕೆ ಸಂಬಂಧಿಸಿ ₹ 16 ಲಕ್ಷ ತಮ್ಮ ಖಾತೆಗೆ ಜಮೆಯಾಗಿದೆ. ತಾನೀಗ ಕೇರಳದ ಚೆರ್ಕಳದಲ್ಲಿ ವ್ಯವಹಾರ ನಡೆಸುತ್ತಿದ್ದು, ವಿಚಾರಣೆಗೆ ಕರೆದಾಗ ಹಾಜರಾಗುವುದಾಗಿ ಅಶ್ರಫ್ ತಿಳಿಸಿದರು. ಬಳಿಕ ಎನ್‌ಐಎ ಅಧಿಕಾರಿಗಳು ಅಬ್ಬಾಸ್ ಅವರ ಮನೆಯನ್ನು ಪರಿಶೀಲನೆ ನಡೆಸಿ ನಿರ್ಗಮಿಸಿದರು’ ಸ್ಥಳೀಯ ಮೂಲಗಳು ತಿಳಿಸಿವೆ.

ಬೆಳ್ತಂಗಡಿ ತಾಲ್ಲೂಕಿನ ಕುಪ್ಪೆಟ್ಟಿಯ ಹುಣ್ಸೆಕಟ್ಟೆಯಲ್ಲಿ ಬಾಡಿಗೆಗಿರುವ ಹುಸೈನ್ ಎಂಬುವರ ಮನೆಗೂ ಎನ್‌ಐಎ ತಂಡ ದಾಳಿ ನಡೆಸಿದೆ. ಹುಸೈನ್ ಅವರ ಪುತ್ರ ಮುಹಮ್ಮದ್ ಕೈಫ್ ಹೆಸರಿನಲ್ಲಿರುವ ಬ್ಯಾಂಕ್ ಖಾತೆಗೆ ಜಮೆಯಾದ ಹಣದ ಮೂಲದ ಬಗ್ಗೆ ಮಾಹಿತಿ ಕಲೆ ಹಾಕಿದರು.

‘ನನ್ನ ಹೆಸರಿನಲ್ಲಿ ಅಂತಹ ಬ್ಯಾಂಕ್ ಖಾತೆ ಇರುವುದೇ ನನಗೆ ಗೊತ್ತಿಲ್ಲ. ಅದಕ್ಕೆ ಹಣ ಬರುತ್ತಿರುವುದಾಗಲಿ, ಆ ಖಾತೆಯಿಂದ ಹಣ ಪಡೆಯುವುದಾಗಲಿ ನನಗೆ ತಿಳಿದಿಲ್ಲ. ನನ್ನ ಖಾತೆ ಬೇರೆಯೇ ಇದೆ’ ಎಂದು ಮುಹಮ್ಮದ್ ಕೈಫ್ ಉತ್ತರಿಸಿದರು. ಎನ್‌ಐಎ ತಂಡ ಪರಿಶೀಲನೆ ನಡೆಸುತ್ತಿದ್ದ ಸಂದರ್ಭದಲ್ಲೇ ಆ ಖಾತೆಗೆ ₹ 3 ಲಕ್ಷ ಜಮೆಯಾಗಿದೆ ಎಂಬ ಮಾಹಿತಿ ಲಭಿಸಿದೆ. ಹೆಚ್ಚಿನ ವಿಚಾರಣೆಗೆ ಕರೆದಾಗ ಹಾಜರಾಗಬೇಕು ಎಂದು ಎನ್‌ಐಎ ಅಧಿಕಾರಿಗಳು ಸೂಚನೆ ನೀಡಿದ್ದಾರೆ ಎಂದು ಸ್ಥಳೀಯ ಮೂಲಗಳು ತಿಳಿಸಿವೆ.

ಎನ್‌ಐಎಯಿಂದ 16 ಕಡೆ ಶೋಧ

ಒಂದನೇ ಪುಟದಿಂದ...

ಭಯೋತ್ಪಾದಕ ಕೃತ್ಯಗಳಿಗೆ ಕೊಲ್ಲಿ ರಾಷ್ಟ್ರಗಳಿಂದ ಹವಾಲಾ ಮೂಲಕ ರವಾನೆಯಾದ ಹಣ ಬಳಕೆಯಾಗಿದೆ ಎಂಬ ಸಂಶಯದಿಂದ ಕೆಲವರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಗಿದೆ’ ಎಂದು ಸ್ಥಳೀಯ ಪೊಲೀಸ್ ಮೂಲಗಳು ತಿಳಿಸಿವೆ.

ಪುತ್ತೂರು ತಾಲ್ಲೂಕಿನ ಚಿಕ್ಕಮುಡ್ನೂರು ಗ್ರಾಮದ ಕೆರೆಮೂಲೆ, ಸಂಪ್ಯ ಪೊಲೀಸ್ ಠಾಣಾ ವ್ಯಾಪ್ತಿಯ ಕುಟಿನೋಪಿನಡ್ಕ ಮತ್ತು ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಕೂರ್ನಡ್ಕ ಕ್ಯಾಂಪ್ಕೊ ಚಾಕಲೇಟ್ ಕಾರ್ಖಾನೆಯ ಬಳಿಯ ವಸತಿ ಸಮುಚ್ಚಯದ ಮನೆಯೊಂದನ್ನು ತಪಾಸಣೆ ನಡೆಸಿ ನಿವಾಸಿಗಳನ್ನು ವಿಚಾರಣೆ ನಡೆಸಿದ್ದಾರೆ ಎಂದು ಮಾಹಿತಿ ಲಭ್ಯವಾಗಿದೆ.

ಬಂಟ್ವಾಳ ತಾಲ್ಲೂಕಿನ ನರಿಕೊಂಬು ಮತ್ತು ಗೋಳ್ತಮಜಲು ಗ್ರಾಮಗಳಲ್ಲಿ ತಲಾ ಎರಡು ಕಡೆ, ಮಾಣಿ, ನೆಟ್ಲಮುಡ್ನೂರು, ಕೊಳ್ನಾಡು, ಸಜಿಪನಡು, ಸಜಿಪಮೂಡ ಗ್ರಾಮಗಳು ಸೇರಿ ಒಟ್ಟು 9 ಕಡೆ ಎನ್‌ಐಎ ದಾಳಿ ನಡೆಸಿರುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ.

ಡಿಜಿಟಲ್ ರೂಪದಲ್ಲಿ ಹಣ ವರ್ಗಾವಣೆ ಮಾಡಿದ್ದಕ್ಕೆ ಸಂಬಂಧಿಸಿದ ಉಪಕರಣಗಳನ್ನು ಅಧಿಕಾರಿಗಳು ದಾಳಿ ವೇಳೆ ವಶಕ್ಕೆ ಪಡೆದಿದ್ದಾರೆ ಎಂದು ಗೊತ್ತಾಗಿದೆ.

‘ಎನ್‌ಐಎ ಅಧಿಕಾರಿಗಳು ಭಯೋತ್ಪಾದನಾ ಕೃತ್ಯಗಳಿಗೆ ಬೆಂಬಲ ನೀಡಿದ ಸಂಶಯದ ಮೇರೆಗೆ ಕೆಲವರ ವಿಚಾರಣೆ ನಡೆಸಿದ್ದಾರೆ. ಹೆಚ್ಚಿನ ಮಾಹಿತಿ ನಮಗೂ ಲಭ್ಯವಿಲ್ಲ’ ಎಂದು ದಕ್ಷಿಣ ಕನ್ನಡ ಜಿಲ್ಲೆಯ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಗ್ಯಾರಂಟಿ’ಗಳಿಗೆ ಸಿಗದ ಸ್ಪಷ್ಟರೂಪ

ಒಂದನೇ ಪುಟದಿಂದ...

ಕೆಲವು ಷರತ್ತುಗಳನ್ನು ವಿಧಿಸಿ ಎಲ್ಲ ಅರ್ಹರನ್ನು ಗ್ಯಾರಂಟಿ ಯೋಜನೆ ವ್ಯಾಪ್ತಿಗೆ ತಂದರೆ ಸುಮಾರು ₹26 ಸಾವಿರ ಕೋಟಿಯಿಂದ ₹46 ಸಾವಿರ ಕೋಟಿವರೆಗೆ ವೆಚ್ಚವಾಗಬಹುದು ಎಂಬ ಚರ್ಚೆಯೂ ನಡೆಯಿತು.

ಇದೇ ಸಂದರ್ಭದಲ್ಲಿ ಹಣಕಾಸು ಇಲಾಖೆಯ ಅಧಿಕಾರಿಗಳು ಹಲವು ಸಲಹೆಗಳು ಮತ್ತು ಆಯ್ಕೆಗಳನ್ನು ಸಭೆಯ ಮುಂದಿಟ್ಟರು. ಈ ಆಯ್ಕೆಗಳ ಬಗ್ಗೆ ಸಚಿವರು ಸಹಮತ ವ್ಯಕ್ತಪಡಿಸಲಿಲ್ಲ, ಜನರಿಗೆ ಭರವಸೆ ನೀಡಿದಂತೆಯೇ ಜಾರಿ ಮಾಡಬೇಕು ಎಂದು ಸಚಿವರು ಪಟ್ಟು ಹಿಡಿದರು ಎಂದು ತಿಳಿದು ಬಂದಿದೆ.

ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಷರತ್ತುಗಳಿಗಿಂತ ಗ್ಯಾರಂಟಿ ಜಾರಿಗೆ ಬೇಕಾದ ವ್ಯವಸ್ಥೆ ಮುಖ್ಯ. ಗ್ಯಾರಂಟಿಗಳನ್ನು ವ್ಯವಸ್ಥಿತವಾಗಿ ಜಾರಿ ಮಾಡಲಾಗುವುದು ಎಂದರು.

‘ಉಚಿತ ಬಸ್ ಪ್ರಯಾಣದ ವಿಚಾರದಲ್ಲಿ ಯಾರಿಗೆ ಯಾವ ಬಸ್ ಎಂಬುದು ವ್ಯವಸ್ಥಿತ ರೂಪದಲ್ಲಿ ಯೋಜನೆ ಜಾರಿ ಆಗಬೇಕಿದೆ. ನಿರುದ್ಯೋಗ ಭತ್ಯೆ ವಿಚಾರದಲ್ಲಿ ಪದವೀಧರ ಮನೆಯಲ್ಲಿದ್ದಾನಾ ಅಥವಾ ಖಾಸಗಿ ಕೆಲಸದಲ್ಲಿ ಇದ್ದಾನಾ? ಖಾಸಗಿಯಲ್ಲಿ ಆತನ ಪರಿಸ್ಥಿತಿ ಏನು? ಎಂಬ ಲೆಕ್ಕಾಚಾರ ಮಾಡಬೇಕು. ನಾವು ವಿರೋಧ ಪಕ್ಷಗಳಾಗಲಿ ಅಥವಾ ಬೇರೆಯವರ ಒತ್ತಡಕ್ಕೆ ಮಣಿಯುವುದಿಲ್ಲ’ ಎಂದರು.

ಈ ಯೋಜನೆಗಳ ಜಾರಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಯವರಿಗೇ ಪರಮಾಧಿಕಾರ ನೀಡಲಾಗಿದೆ ಎಂದು ಸಭೆಯ ಬಳಿಕ ಕೆಲವು ಸಚಿವರು ತಿಳಿಸಿದರು.

> **ಆರ್ಥಿಕ ಇಲಾಖೆಯವರು ಹಲವು ಸಲಹೆ ಮತ್ತು ಆಯ್ಕೆಗಳನ್ನು ಮುಂದಿಟ್ಟಿದ್ದಾರೆ. ನಾವು ಅದನ್ನು ಅಧ್ಯಯನ ಮಾಡುತ್ತೇವೆ. ಆಯ್ಕೆಗಳ ಬಗ್ಗೆ ಮತ್ತೊಮ್ಮೆ ಪರಾಮರ್ಶೆ ನಡೆಸುವಂತೆಯೂ ಅಧಿಕಾರಿಗಳಿಗೆ ಸೂಚಿಸಿದ್ದೇವೆ**
> ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ

❦ ಸುಭಾಷಿತ ❦
ನಿನ್ನನ್ನು ನೀನು ದುರ್ಬಲ ಎಂದುಕೊಳ್ಳುವುದೇ ದೊಡ್ಡ ರೋಗ.
–ಸ್ವಾಮಿ ವಿವೇಕಾನಂದ

ಮಣಿಪುರ ಹಿಂಸಾಚಾರ ಕೊನೆಗೊಳಿಸಿ ಸಮಸ್ಯೆಗಳಿಗೆ ಪರಿಹಾರ ಸೂತ್ರ ರೂಪಿಸಿ

ಮಣಿಪುರದಲ್ಲಿ ಕೆಲವು ದಿನಗಳಿಂದ ಶಾಂತವಾಗಿದ್ದ ಪರಿಸ್ಥಿತಿಯು ಮತ್ತೆ ಬಿಗಡಾಯಿಸಿದೆ. ಅಲ್ಲಿ ತೀವ್ರ ಪ್ರತಿಭಟನೆಗಳು, ಆಸ್ತಿಗೆ ಬೆಂಕಿ ಹಚ್ಚಿದ ಪ್ರಕರಣಗಳು, ಹತ್ಯೆಗಳು ನಡೆದಿವೆ. ಇದು ಆಡಳಿತಾತ್ಮಕವಾಗಿ ಹಾಗೂ ರಾಜಕೀಯವಾಗಿ ಹಲವು ಹಂತಗಳಲ್ಲಿ ಆಗಿರುವ ವೈಫಲ್ಯಗಳ ಪರಿಣಾಮ. ದೇಶದ ಈಶಾನ್ಯ ಭಾಗದಲ್ಲಿರುವ ಈ ಪುಟ್ಟ ರಾಜ್ಯದಲ್ಲಿ ಒಂದು ತಿಂಗಳಿನಿಂದ ಹಿಂಸಾಚಾರ ನಡೆಯುತ್ತಿದೆ. ಅಲ್ಲಿನ ಬಹುಸಂಖ್ಯಾತ ಮೈತೇಯಿ ಸಮುದಾಯ ಹಾಗೂ ಬುಡಕಟ್ಟು ಕುಕಿ ಸಮುದಾಯಕ್ಕೆ ಸೇರಿದ ತೀವ್ರವಾದಿಗಳು ಪರಸ್ಪರ ಸೆಣಸಾಟಕ್ಕೆ ನಿಂತಿದ್ದಾರೆ. ಭದ್ರತಾ ಪಡೆಯು ಕುಕಿ ಸಮುದಾಯಕ್ಕೆ ಸೇರಿದ 40 ತೀವ್ರಗಾಮಿಗಳನ್ನು ಹತ್ಯೆ ಮಾಡಿದೆ ಎಂದು ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರು ಭಾನುವಾರ ಹೇಳಿದ್ದಾರೆ. ಒಂದು ತಿಂಗಳಲ್ಲಿ ಹಿಂಸಾಚಾರದ ಕಾರಣದಿಂದ ಕನಿಷ್ಠ 75 ಮಂದಿ ಜೀವ ಕಳೆದುಕೊಂಡಿದ್ದಾರೆ. ಅಲ್ಲಿ ಶಾಸಕರ ಮನೆಗಳು, ಪೊಲೀಸ್ ಠಾಣೆಗಳು ಮತ್ತು ಇತರ ಕೆಲವು ಕಚೇರಿಗಳ ಮೇಲೆ ದಾಳಿಗಳು ನಡೆದಿವೆ. ಶಸ್ತ್ರಾಗಾರಗಳನ್ನು ಲೂಟಿ ಮಾಡಲಾಗಿದೆ. ಮಣಿಪುರದ ಸಮಾಜದಲ್ಲಿ ವಿಭಜನೆಗೆ ಕಾರಣವಾಗುವ ಹಲವು ಸಮಸ್ಯೆಗಳಿವೆ. ಮೈತೇಯಿ ಸಮುದಾಯದವರು ಸಾಮಾನ್ಯವಾಗಿ ಅಲ್ಲಿನ ಸಮತಟ್ಟು ಪ್ರದೇಶಗಳಲ್ಲಿ ವಾಸ ಮಾಡುತ್ತಾರೆ. ಅವರು ಹಿಂದೂ ಧರ್ಮೀಯರು. ಕುಕಿ ಮತ್ತು ಇತರ ಬುಡಕಟ್ಟು ಸಮುದಾಯದವರು ಬೆಟ್ಟ ಪ್ರದೇಶಗಳಲ್ಲಿ ವಾಸಿಸುತ್ತಾರೆ, ಕ್ರೈಸ್ತ ಧರ್ಮವನ್ನು ಪಾಲಿಸುತ್ತಾರೆ. ಬಹುಸಂಖ್ಯಾತ ಸಮುದಾಯದವರ ಕಾರಣದಿಂದಾಗಿ ತಮ್ಮ ಜಮೀನು ಒಡೆತನದ ಹಕ್ಕುಗಳಿಗೆ ಧಕ್ಕೆ ಆಗುತ್ತಿದೆ ಎಂದು ಕುಕಿ ಸಮುದಾಯದವರು ಆತಂಕಕ್ಕೆ ಒಳಗಾಗಿದ್ದಾರೆ. ಇಲ್ಲಿ ರಾಜಕಾರಣವೂ ತನ್ನದೇ ಆದ ಪಾತ್ರ ನಿರ್ವಹಿಸಿದೆ. ಈ ಎರಡು ಸಮುದಾಯಗಳ ನಡುವಿನ ಬಿಕ್ಕಟ್ಟು ಬಹುಕಾಲದಿಂದ ಇದೆ, ಬಿಕ್ಕಟ್ಟು ಬಹಳ ಆಳವಾಗಿಯೂ ಇದೆ.

ಮಣಿಪುರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ನೆಲೆಸುವಂತೆ ಮಾಡುವುದು ತಕ್ಷಣದ ಅಗತ್ಯ

ಸಂಘರ್ಷವು ಬೂದಿ ಮುಚ್ಚಿದ ಕೆಂಡದಂತೆ ಇದ್ದ ಹೊತ್ತಿನಲ್ಲಿ ಇಲ್ಲವೆ ಹಿಂಸಾಚಾರ ಭುಗಿಲೆದ್ದ ನಂತರ ಮಣಿಪುರಕ್ಕೆ ಭೇಟಿ ನೀಡಿರಲಿಲ್ಲ ಎಂಬ ಆರೋಪಕ್ಕೆ ಗುರಿಯಾಗಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈಗ ಅಲ್ಲಿದ್ದಾರೆ. ಎರಡು ಸಮುದಾಯಗಳ ನಡುವೆ ಮಾತುಕತೆಗೆ ಹಾಗೂ ಬಿಕ್ಕಟ್ಟು ಶಮನಕ್ಕೆ ಗಂಭೀರ ಪ್ರಯತ್ನ ನಡೆಸದೇ ಇದ್ದ ಅವಧಿಯಲ್ಲಿ ದ್ವೇಷಮಯ ವಾತಾವರಣವು ಇನ್ನಷ್ಟು ಹರಡಿದೆ ಎನ್ನಲಾಗಿದೆ. ಮೈತೇಯಿ ಸಮುದಾಯಕ್ಕೆ ಬುಡಕಟ್ಟು ಸಮುದಾಯದ ಸ್ಥಾನಮಾನ ನೀಡುವ ಬಗ್ಗೆ ತೀರ್ಮಾನ ಕೈಗೊಳ್ಳಬೇಕು ಎಂದು ಮಣಿಪುರ ಹೈಕೋರ್ಟ್ ಆದೇಶಿಸಿದ್ದು ಈಗಿನ ಸಂಘರ್ಷಕ್ಕೆ ಮೂಲದಂತೆ ಕಾಣುತ್ತಿದೆ. ಈ ಆದೇಶಕ್ಕೆ ಸುಪ್ರೀಂ ಕೋರ್ಟ್ ಈಗ ತಡೆ ನೀಡಿದೆಯಾದರೂ, ಕುಕಿ ಸಮುದಾಯವು ಈಗಿರುವ ತನ್ನ ಹಕ್ಕುಗಳಿಗೆ ಧಕ್ಕೆ ಎದುರಾಗಬಹುದು ಎಂಬ ಆತಂಕದಲ್ಲಿದೆ. ಹೈಕೋರ್ಟ್ ಆದೇಶದ ನಂತರದಲ್ಲಿ ಕುಕಿ ಸಮುದಾಯದವರು ಆಯೋಜಿಸಿದ್ದ ನಡಿಗೆ ಕಾರ್ಯಕ್ರಮವು ಹಿಂಸೆಗೆ ಪ್ರಚೋದನೆ ನೀಡಿತು ಎನ್ನಲಾಗಿದೆ. ಹಿಂಸಾಚಾರಕ್ಕೆ ಹೈಕೋರ್ಟ್ ಆದೇಶವು ಕಾರಣವಾಯಿತು ಎಂದು ಶಾ ಅವರು ಹೇಳಿದ್ದಾರೆ. ಆದರೆ ಹೀಗೆ ಹೇಳುವುದು ಹಲವು ವರ್ಷಗಳಿಂದ ಸೃಷ್ಟಿಯಾಗುತ್ತಿದ್ದ ಸಂಕೀರ್ಣ ಪರಿಸ್ಥಿತಿಯೊಂದನ್ನು ಬಹಳ ಸರಳವಾಗಿ ಕಂಡಂತೆ ಆಗುತ್ತದೆ.

ಅಲ್ಲಿನ ರಾಜ್ಯ ಸರ್ಕಾರವು ಕುಕಿ ಸಮುದಾಯದವರಲ್ಲಿ ವಿಶ್ವಾಸ ಹುಟ್ಟಿಸುತ್ತಿಲ್ಲ. ಏಕೆಂದರೆ ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರು ಮೈತೇಯಿ ಸಮುದಾಯದ ಪರ ಇದ್ದಾರೆ ಎಂಬ ಭಾವನೆ ಇದೆ. ರಾಜ್ಯದ ಆಡಳಿತದಲ್ಲಿ ಮೈತೇಯಿ ಸಮುದಾಯ ಮೇಲುಗೈ ಹೊಂದಿದೆ. ಹೈಕೋರ್ಟ್ ಆದೇಶದಿಂದ ಆಗಬಹುದಾದ ಪರಿಣಾಮಗಳನ್ನು ರಾಜ್ಯ ಸರ್ಕಾರವು ನಿರೀಕ್ಷೆ ಮಾಡಿರಲಿಲ್ಲ. ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಲ್ಲಿ ಅದು ವಿಫಲವಾಯಿತು. ಮತ್ತು ಬರಿಸುವ ರಸವುಳ್ಳ ಗಸಗಸೆ ಗಿಡವನ್ನು ಬೆಟ್ಟ ಪ್ರದೇಶಗಳಲ್ಲಿ ಬೆಳೆಯುವುದರ ವಿರುದ್ಧ ಸರ್ಕಾರ ನಡೆಸಿದ ಅಭಿಯಾನವು ಬುಡಕಟ್ಟು ಸಮುದಾಯದವರನ್ನು ಗುರಿಯಾಗಿಸಿಕೊಂಡಿದೆ ಎಂದು ಗ್ರಹಿಸಲಾಯಿತು. ಕುಕಿ ಸಮುದಾಯದವರ ಜೊತೆ ನಂಟು ಹೊಂದಿರುವ ಮ್ಯಾನ್ಮಾರ್ ನಿರಾಶ್ರಿತರು ರಾಜ್ಯವನ್ನು ಪ್ರವೇಶಿಸಿದ್ದು ಪರಿಸ್ಥಿತಿಯನ್ನು ಸಂಕೀರ್ಣಗೊಳಿಸಿತು. ಹಿಂಸಾಚಾರವನ್ನು ಕೊನೆಗಾಣಿಸಿ, ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ನೆಲೆಸುವಂತೆ ಮಾಡುವುದು ತಕ್ಷಣದ ಅಗತ್ಯ. ಹಾಗೆಯೇ ಅಲ್ಲಿನ ಸಮಾಜವನ್ನು ಒಡೆಯುತ್ತಿರುವ ಹಲವು ಸಮಸ್ಯೆಗಳನ್ನು ಪರಿಹರಿಸಲು ಸಮಗ್ರವಾದ ಪರಿಹಾರ ಸೂತ್ರವೊಂದನ್ನು ರೂಪಿಸಬೇಕಿದೆ.

ದಿನದ ಟ್ವೀಟ್

ಭಾಷೆಗೆ ಒದಗಿದ ದುಃಸ್ಥಿತಿ

ಎಲ್ಲೆಡೆ ಹೆಚ್ಚುತ್ತಿರುವ ಸಿಬಿಎಸ್‌ಇ ಶಾಲೆಗಳಲ್ಲಿ, ಅದರಲ್ಲೂ ನಗರಗಳಲ್ಲಿ ಕನ್ನಡ ಕಲಿಕೆಯ ಸ್ಥಿತಿ ನೋಡಿದರೆ, ಇನ್ನು ಹತ್ತು ವರ್ಷಗಳಲ್ಲಿ ಸರಿಯಾದ ಕನ್ನಡ ಓದು, ಬರಹ ಗೊತ್ತಿರದ ಕನ್ನಡಿಗರ ಸಂಖ್ಯೆ ತೀವ್ರವಾಗಿ ಏರುವುದಂತೂ ಖಚಿತ! ಶಿಕ್ಷಣ ವ್ಯವಸ್ಥೆಯೇ ಮಕ್ಕಳನ್ನು ತಮ್ಮ ಭಾಷೆಯಿಂದ ದೂರ ಮಾಡುವಂತಾಗಿರುವುದು ಭಾರತದ ದುರಂತ!

ವಿಕಾಸ್ ಹೆಗಡೆ

ಕಿಡಿನುಡಿ

ಕಾಂಗ್ರೆಸ್ಸಿನ ಐದು ಗ್ಯಾರಂಟಿಗಳು ಸರಿಯಾಗಿ ಜಾರಿಗೆ ಬರುತ್ತವೋ ಬಿಡುತ್ತವೋ ಆಮೇಲಿನ ವಿಷಯ. ಒಂದು ಲಾಭವನ್ನಂತೂ ಅವು ಮಾಡಿವೆ. ಇರುವ ಮೂರು ಪಕ್ಷಗಳು ಅದರ ಬಗ್ಗೆಯೇ ಮಾತನಾಡುತ್ತಿವೆ. ಕೆಲಸಕ್ಕೆ ಬಾರದ ಜಾತಿ/ಧರ್ಮದ ವಿವಾದಗಳ ಜಾಗದಲ್ಲಿ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳು ಮುನ್ನೆಲೆಗೆ ಬಂದಿದ್ದು ಒಂದು ಲೆಕ್ಕಕ್ಕೆ ಸಣ್ಣ ಸಾಧನೆಯೇ ಸರಿ...

ವಸಂತ ಶೆಟ್ಟಿ, ಬರಹಗಾರ

25 ವರ್ಷಗಳ ಹಿಂದೆ

ಸೋಮವಾರ, 1-6-1998

- **ಅಣ್ವಸ್ತ್ರ ಪ್ರಯೋಗ: ಭಾರತದ ಸಲಹೆಗೆ ಪಾಕ್ ತಿರಸ್ಕಾರ**

ಇಸ್ಲಾಮಾಬಾದ್, ಮೇ 31 (ಪಿಟಿಐ)– ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧ ನಡೆಯುವ ಸಾಧ್ಯತೆಯನ್ನು ತಪ್ಪಿಸಲು 'ಮೊದಲು ಅಣ್ವಸ್ತ್ರ ಪ್ರಯೋಗ ಮಾಡುವುದಿಲ್ಲ' ಎಂಬ ಒಪ್ಪಂದಕ್ಕೆ ಬರಬೇಕೆನ್ನುವ ಭಾರತದ ಸಲಹೆಯನ್ನು ಪಾಕಿಸ್ತಾನ ಇಂದು ರಾತ್ರಿ ತಳ್ಳಿಹಾಕಿದೆ.

ಈ ನಡುವೆ, ಪಾಕಿಸ್ತಾನದಲ್ಲಿರುವ ಭಾರತದ ರಾಯಭಾರ ಕಚೇರಿಯ ಅಧಿಕಾರಿ ಬಿ.ಎಸ್. ರಾವತ್ ಅವರ ಮೇಲೆ ದಾಳಿ ನಡೆದಿದ್ದು, ಇದರಿಂದ ಎರಡೂ ದೇಶಗಳ ನಡುವಿನ ಸಂಬಂಧ ಇನ್ನಷ್ಟು ಬಿಗಡಾಯಿಸಿದೆ.

'ಅಣ್ವಸ್ತ್ರಗಳನ್ನು ಒಯ್ಯುವ ಕ್ಷಿಪಣಿಗಳು ಕ್ಷಣಮಾತ್ರದಲ್ಲಿ ಶತ್ರುಗಳ ಮೇಲೆ ದಾಳಿ ಮಾಡಲು ಸಾಧ್ಯವಾಗುವುದರಿಂದ ಯಾರು ಮೊದಲು ಅಣ್ವಸ್ತ್ರ ಪ್ರಯೋಗಿಸಿದರು ಎನ್ನುವುದನ್ನು ತಿಳಿಯುವುದು ಹೇಗೆ' ಎಂದು ಪ್ರಶ್ನಿಸಿರುವ ಪಾಕಿಸ್ತಾನದ ವಿದೇಶಾಂಗ ಸಚಿವ ಗೋಹರ್ ಆಯೂಬ್ ಖಾನ್ ಅವರು ಈ ಕುರಿತ ಭಾರತದ ಸಲಹೆಯನ್ನು ತಿರಸ್ಕರಿಸಿದ್ದಾರೆ.

ಸರ್ಕಾರಿ ದೂರದರ್ಶನದಲ್ಲಿ ಮಾತನಾಡಿದ ಅವರು, ಭಾರತದ ಆಕ್ರಮಣಕಾರಿ ನೀತಿಯಿಂದ ತಮ್ಮ ದೇಶ ಅಣ್ವಸ್ತ್ರ ಪ್ರಯೋಗ ನಡೆಸಿತು ಎಂದು ಸಮರ್ಥಿಸಿಕೊಂಡರು. 'ಈ ವಲಯದಲ್ಲಿ ನಾವು ಮಿಲಿಟರಿ ಸಮತೋಲನ ಕಾಯ್ದುಕೊಂಡಿದ್ದೇವೆ' ಎಂದು ಹೇಳಿದರು.

50 ವರ್ಷಗಳ ಹಿಂದೆ

ಶುಕ್ರವಾರ, 1-6-1973

- **ವಿಮಾನ ಅಪಘಾತ: ಮೋಹನ ಕುಮಾರ ಮಂಗಳಂ ಸೇರಿ 48 ಮಂದಿ ಸಾವು**

ದೆಹಲಿ, ಮೇ 31– ಮದ್ರಾಸಿನಿಂದ ದೆಹಲಿಗೆ ಬರುತ್ತಿದ್ದ ಇಂಡಿಯನ್ ಏರ್‌ಲೈನ್ಸ್‌ನ ಬೋಯಿಂಗ್ 737 ವಿಮಾನ ಇಂದು ರಾತ್ರಿ 10 ಗಂಟೆ ಸಮಯದಲ್ಲಿ ದೆಹಲಿಯಲ್ಲಿ ಅಪಘಾತಕ್ಕೀಡಾಗಿ ಕೇಂದ್ರ ಉಕ್ಕು ಖಾತೆ ಸಚಿವ ಮೋಹನ ಕುಮಾರ ಮಂಗಳಂ ಅವರೂ ಸೇರಿದಂತೆ 48 ಮಂದಿ ಮೃತಪಟ್ಟರು. ವಿಮಾನದಲ್ಲಿ 65 ಮಂದಿ ಇದ್ದರು.

ಪಂಜಾಬಿನ ಮಾಜಿ ಮುಖ್ಯಮಂತ್ರಿಗಳೂ ಅಕಾಲಿ ನಾಯಕರೂ ಆದ ಗುರ್ನಾಂ ಸಿಂಗ್ ಅವರು ದುರ್ಮರಣಕ್ಕೀಡಾದ ಮತ್ತೊಬ್ಬ ನಾಯಕರು.

ಭಗ್ನಗೊಂಡ ವಿಮಾನದ ಅವಶೇಷಗಳ ಅಡಿಯಿಂದ ಏಳು ಮಂದಿಯನ್ನು ಸಜೀವವಾಗಿ ಹೊರತೆಗೆದು, ಇವರಲ್ಲಿ ಮೂವರನ್ನು ದೆಹಲಿಯ ಕಂಟೋನ್ಮೆಂಟ್ ಆಸ್ಪತ್ರೆಗೆ ಹಾಗೂ ಉಳಿದವರನ್ನು ಸಫ್ದರ್‌ಜಂಗ್ ಆಸ್ಪತ್ರೆಗೆ ಸೇರಿಸಲಾಗಿದೆ. ಮೂವರ ಸ್ಥಿತಿ ಚಿಂತಾಜನಕ ಎನ್ನಲಾಗಿದೆ.

ರಾತ್ರಿ 1.30ರಲ್ಲಿ ಬಂದ ವರದಿಗಳ ಪ್ರಕಾರ, 15 ಮಂದಿ ಪ್ರಾಣಾಪಾಯದಿಂದ ಪಾರಾಗಿ ಉಳಿದುಕೊಂಡಿದ್ದಾರೆಂದು ತಿಳಿದುಬಂದಿದೆ.

- **ಉಳುವವನೇ ಒಡೆಯನಾಗುವ ಐತಿಹಾಸಿಕ ಕ್ರಮಕ್ಕೆ ಅಂಗೀಕಾರ**

ಬೆಂಗಳೂರು, ಮೇ 31– ಬಹುಕಾಲದಿಂದ ಜಾರಿಯಲ್ಲಿದ್ದ ಭೂ ಒಡೆಯ ಹಾಗೂ ಗೇಣಿದಾರ ಎಂಬ ವರ್ಗಗಳನ್ನು ಕಿತ್ತುಹಾಕುವ, ಉಳುವವನೇ ನೆಲದೊಡೆಯನಾಗಲು ಅವಕಾಶ ಕಲ್ಪಿಸುವ ಮೈಸೂರು ಭೂ ಸುಧಾರಣೆ (ತಿದ್ದುಪಡಿ) ವಿಧೇಯಕಕ್ಕೆ ಇಂದು ವಿಧಾನಸಭೆ ತನ್ನ ಅಂಗೀಕಾರದ ಮುದ್ರೆ ಒತ್ತಿತು.

ವಿಧಾನಸಭೆಯ ಇತಿಹಾಸದಲ್ಲೇ ಅತಿ ದೀರ್ಘ ಕಾಲ ಪರಿಶೀಲನೆಗೆ ಒಳಗಾದ ವಿಧೇಯಕವನ್ನು ಇಂದು ಮುಗಿಸಲೇಬೇಕೆಂದು ಪಣ ತೊಟ್ಟ ಸಭೆಯು ಬೆಳಿಗ್ಗೆಯಿಂದ ರಾತ್ರಿ 8ರವರೆಗೆ ಸತತವಾಗಿ ಕುಳಿತು ಅದನ್ನು ಸಾಧಿಸಿತು.

ಭಾರತ– ಪಾಕಿಸ್ತಾನದ ವಿಷಯದಲ್ಲಿ ಟರ್ಕಿಯ ನಿಲುವು ಈಗಲಾದರೂ ಬದಲಾಗುವುದೇ?

ಎರ್ಡೋಗನ್: ಎರಡು ದಶಕ, ನಾಲ್ಕು ಮುಖ

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಇಪ್ಪತ್ತು ವರ್ಷಗಳಿಂದ ಟರ್ಕಿಯ ಆಡಳಿತದ ಚುಕ್ಕಾಣಿ ಹಿಡಿದಿರುವ ಎರ್ಡೋಗನ್ ಅವರ ಕೈಗೆ ಅಲ್ಲಿನ ಜನ ಮತ್ತೊಮ್ಮೆ ದೇಶವನ್ನು ಒಪ್ಪಿಸಿದ್ದಾರೆ. ಟರ್ಕಿ ಇತ್ತೀಚೆಗಷ್ಟೇ ಭೂಕಂಪದಿಂದ ನಲುಗಿತ್ತು. ಜುಲೈನಲ್ಲಿ ನಿಗದಿಯಾಗಿದ್ದ ಚುನಾವಣೆಯನ್ನು ಈ ಕಾರಣದಿಂದ ಸರ್ಕಾರ ಮುಂದೂಡಬಹುದು ಎನ್ನಲಾಗಿತ್ತು. ಆದರೆ ನಿಗದಿತ ಅವಧಿಗೆ ಮುನ್ನವೇ ಚುನಾವಣೆ ನಡೆಸಲು ಎರ್ಡೋಗನ್ ಆಡಳಿತ ನಿರ್ಧರಿಸಿತು. ವಿರೋಧ ಪಕ್ಷಗಳು ಸಂಘಟಿತಗೊಳ್ಳಲು ಹೆಚ್ಚು ಸಮಯ ನೀಡಬಾರದು ಎಂಬುದು ಅದರ ಆಲೋಚನೆ ಇದ್ದಿರಬಹುದು.

ಮಾರ್ಚ್ ವೇಳೆಗೆ ಆರು ವಿರೋಧ ಪಕ್ಷಗಳು ಒಂದಾಗಿ ಸಹಮತದ ಅಭ್ಯರ್ಥಿಯನ್ನು ಕಣಕ್ಕಿಳಿಸಲು ನಿರ್ಧರಿಸಿದವಾದರೂ ಎರ್ಡೋಗನ್ ಆಡಳಿತದ ವಿರುದ್ಧ ಜನಾಭಿಪ್ರಾಯ ರೂಪಿಸಲು ವೇಗದ ಹೆಜ್ಜೆ ಇಡಲಿಲ್ಲ. ಚುನಾವಣೆಯಲ್ಲಿ ಎರ್ಡೋಗನ್ ಗೆಲುವು ಸಾಧಿಸಿದರು.

ಹಾಗೆ ನೋಡಿದರೆ, ಎರ್ಡೋಗನ್ ಅವರು ವಿದ್ಯಾರ್ಥಿ ಚಳವಳಿಯ ಮೂಲಕ ಸಾರ್ವಜನಿಕ ಜೀವನಕ್ಕೆ ಬಂದವರು. ನಂತರ ಇಸ್ಲಾಮಿಕ್ ವೆಲ್‌ಫೇರ್ ಪಕ್ಷದ ಪರವಾಗಿ ಕೆಲಸ ಮಾಡಿದರು. 1994ರಲ್ಲಿ ಅದೇ ಪಕ್ಷದಿಂದ ಚುನಾವಣೆಗೆ ಸ್ಪರ್ಧಿಸಿ ಗೆದ್ದು ಇಸ್ತಾನ್‌ಬುಲ್ ನಗರದ ಮೇಯರ್ ಆದರು. 1997ರಲ್ಲಿ ನಡೆದ ಮಿಲಿಟರಿ ದಂಗೆ ಅಂದಿನ ಪ್ರಧಾನಿ ಎರ್ಬಾಕನ್ ಅವರ ನೇತೃತ್ವದ ಸರ್ಕಾರವನ್ನು ಪತನಗೊಳಿಸಿತ್ತು.

ಆಗ ಸಾರ್ವಜನಿಕ ಸಭೆಯೊಂದರಲ್ಲಿ ಟರ್ಕಿ ಸೇನೆಯ ವಿರುದ್ಧ ಮಾತನಾಡಿದ್ದ ಎರ್ಡೋಗನ್, ಜನರ ಮತೀಯ ಭಾವನೆಯನ್ನು ಉದ್ದೀಪಿಸುವ ಪದ್ಯವೊಂದನ್ನು ಓದಿದ್ದರು. ಆ ಕಾರಣಕ್ಕಾಗಿಯೇ ಅವರನ್ನು ಚುನಾವಣೆಯಲ್ಲಿ ಸ್ಪರ್ಧಿಸದಂತೆ ನಿಷೇಧಿಸಿ, 10 ತಿಂಗಳ ಕಾಲ ಜೈಲಿನಲ್ಲಿ ಇಡಲಾಯಿತು.

ಬರೀ ಮತೀಯವಾದಕ್ಕೆ ಅಂಟಿಕೊಂಡರೆ ರಾಜಕೀಯವಾಗಿ ತಮಗೆ ಉಳಿಗಾಲವಿಲ್ಲ ಎನ್ನುವುದನ್ನು ಎರ್ಡೋಗನ್ ಅರಿತುಕೊಂಡರು. ಜೈಲಿನಿಂದ ಹೊರಬಂದವರೇ ನೂತನ ಪಕ್ಷವನ್ನು ('ಎಕೆ' ಪಕ್ಷ) ಕಟ್ಟಿದರು. ಅಭಿವೃದ್ಧಿಯ ಮಂತ್ರವನ್ನು ಉಚ್ಚರಿಸಿದರು. 2002ರ ಚುನಾವಣೆಯಲ್ಲಿ ಎರ್ಡೋಗನ್ ಅವರ ಪಕ್ಷಕ್ಕೆ ಜನಮತ ಸಿಕ್ಕಿತು. ಎರ್ಡೋಗನ್ ಅವರ ಮೇಲೆ ನಿರ್ಬಂಧವಿದ್ದ ಕಾರಣ ತಾತ್ಕಾಲಿಕವಾಗಿ ಅಬ್ದುಲ್ಲಾ ಗುಲ್ ಪ್ರಧಾನಿಯಾದರು. ಎರ್ಡೋಗನ್ ಅವರ ಮೇಲಿದ್ದ ನಿರ್ಬಂಧವನ್ನು ಗುಲ್ ತೆರವುಗೊಳಿಸಿದರು. 2003ರಲ್ಲಿ ಟರ್ಕಿಯ 25ನೇ ಪ್ರಧಾನಿಯಾಗಿ ಎರ್ಡೋಗನ್ ಅಧಿಕಾರ ವಹಿಸಿಕೊಂಡರು.

ಆದರೆ ಎರ್ಡೋಗನ್ ತಕ್ಷಣಕ್ಕೆ ಸೇನೆಯನ್ನು ಎದುರು ಹಾಕಿಕೊಳ್ಳಲಿಲ್ಲ. ಮತೀಯವಾದಕ್ಕೆ ಜಾಗ ಬಿಡಲಿಲ್ಲ. ಆರ್ಥಿಕ ಸುಧಾರಣೆ, ದಕ್ಷ ಆಡಳಿತ ಮತ್ತು ಅಭಿವೃದ್ಧಿಯತ್ತ ಗಮನ ನೆಟ್ಟರು. ಜನರ ವಿಶ್ವಾಸ ಗಳಿಸುವುದು ಅವರ ಆದ್ಯತೆಯಾಯಿತು. 2007ರ ಚುನಾವಣೆಯಲ್ಲಿ ಎರ್ಡೋಗನ್ ಅವರ ಪಕ್ಷ ಪ್ರಚಂಡ ಬಹುಮತ ಗಳಿಸಿತು. ಎರ್ಡೋಗನ್ ಅವರ ತಲೆಯಲ್ಲಿ ಬೇರೆಯದೇ ಲೆಕ್ಕಾಚಾರ ನಡೆದಿತ್ತು. ಟರ್ಕಿಯ ಅಧ್ಯಕ್ಷರನ್ನು ಜನರೇ ನೇರವಾಗಿ ಆಯ್ಕೆ ಮಾಡುವ ವ್ಯವಸ್ಥೆಯನ್ನು ತಂದರು. 2016ರಲ್ಲಿ ಪ್ರಧಾನಿ ಎರ್ಡೋಗನ್ ಅವರನ್ನು ಪದಚ್ಯುತಿಗೊಳಿಸುವ ವಿಫಲ ಪ್ರಯತ್ನವೊಂದು ನಡೆಯಿತು. ಆ ಬಳಿಕ ಸಂವಿಧಾನಕ್ಕೆ ಮಾರ್ಪಾಡು ತಂದು ಟರ್ಕಿಯನ್ನು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಅಧ್ಯಕ್ಷೀಯ ಮಾದರಿಯ ಆಡಳಿತ ವ್ಯವಸ್ಥೆಯನ್ನಾಗಿ ಬದಲಿಸಲಾಯಿತು.

2018ರಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಎರ್ಡೋಗನ್ ಸ್ಪರ್ಧಿಸಿ ಗೆದ್ದರು. ಆ ಮೂಲಕ ಎರ್ಡೋಗನ್ ಟರ್ಕಿಯ ಏಕಮೇವ ನಾಯಕನಾಗಿ ಹೊರಹೊಮ್ಮಿದರು. ಜನರ ಬೆಂಬಲ ಖಾತರಿಯಾದೊಡನೆ, ಸೇನೆಗೆ ಮೂಗುದಾರ ತೊಡಿಸಿ ತಮ್ಮ ಸೊಂಟಕ್ಕೆ ಸುತ್ತಿಕೊಂಡರು. ನ್ಯಾಯಾಂಗದ ಮುಖ್ಯ ಹುದ್ದೆಗಳಲ್ಲಿ ತಮ್ಮ ಬೆಂಬಲಿಗರೇ ಇರುವಂತೆ ನೋಡಿಕೊಂಡರು. ಮಾಧ್ಯಮಗಳ ಒಡೆತನ ಎರ್ಡೋಗನ್ ನಿಕಟವರ್ತಿಗಳ ಕೈಗೆ ಬಂತು.

ಅಧಿಕಾರದ ಬಲ ಹೆಚ್ಚಿದಂತೆ, ಎರ್ಡೋಗನ್ ನಿರಂಕುಶವಾದಿಯಾಗಿ ಬದಲಾದರು. ತಮ್ಮ ವಿರೋಧಿಗಳನ್ನು, ಟೀಕಾಕಾರರನ್ನು ಮಟ್ಟಹಾಕುವ ಕೆಲಸಕ್ಕೆ ಮುಂದಾದರು. ವಿರೋಧ ಪಕ್ಷದ ನಾಯಕರು ಮತ್ತು ಪತ್ರಕರ್ತರ ಮೇಲೆ ಮೊಕದ್ದಮೆಗಳು ದಾಖಲಾದವು. ಎರ್ಡೋಗನ್ ಅವರಿಗೆ ಪ್ರಬಲ ಸ್ಪರ್ಧೆ ಒಡ್ಡುವ ಸಾಮರ್ಥ್ಯ ಇದ್ದ ಎಕ್ರಾಂ ಇಮಾಮೋಗ್ಲೂ ಅವರು ಜೈಲುವಾಸ ಅನುಭವಿಸಬೇಕಾಯಿತು.

ಎರ್ಡೋಗನ್ ಅವರು ಜಾಗತಿಕ ವೇದಿಕೆಯಲ್ಲಿ ಮಿಂಚುವ ಕನಸು ಕಂಡರು. ಟರ್ಕಿ ಆಯಕಟ್ಟಿನ ಪ್ರದೇಶದಲ್ಲಿ ಇರುವುದರಿಂದ ಅಮೆರಿಕ ಮತ್ತು ರಷ್ಯಾ ಎರಡಕ್ಕೂ ಟರ್ಕಿ ಬೇಕು ಎಂಬುದು ಜಾಹೀರಾಗಿತ್ತು. ಅಮೆರಿಕ ಮತ್ತು ರಷ್ಯಾವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲು ಎರ್ಡೋಗನ್ ಆರಂಭಿಸಿದರು. ರಾಷ್ಟ್ರ ಮೊದಲು ಎಂಬ ಉದ್ಘೋಷ ಟರ್ಕಿಯಲ್ಲೂ ಮೊಳಗಿತು.

ಅಮೆರಿಕದ ವಿರೋಧದ ನಡುವೆಯೂ ರಷ್ಯಾದ ಎಸ್-400 ಕ್ಷಿಪಣಿ ರಕ್ಷಣಾ ವ್ಯವಸ್ಥೆಯನ್ನು ಟರ್ಕಿಗೆ ತಂದರು. ನ್ಯಾಟೊ ರಾಷ್ಟ್ರಗಳು ರಷ್ಯಾದ ಮೇಲೆ ಆರ್ಥಿಕ ದಿಗ್ಬಂಧನ ಹೇರಿದರೂ, ಟರ್ಕಿ ಮಾತ್ರ ಅದರಿಂದ ಹೊರಗುಳಿಯಿತು. ರಷ್ಯಾದಿಂದ ಅಗ್ಗದ ಬೆಲೆಗೆ ಇಂಧನ ಖರೀದಿಸಿತು. ಉಕ್ರೇನ್‌ಗೆ ಡ್ರೋನ್‌ಗಳನ್ನು ಮಾರುವ ಕೆಲಸ ಮುಂದುವರಿಸಿತು.

ಉಕ್ರೇನ್ ಮತ್ತು ರಷ್ಯಾವನ್ನು ಮಾತುಕತೆಯ ಮೇಜಿಗೆಳೆಯುವ ಪ್ರಯತ್ನವನ್ನು ಎರ್ಡೋಗನ್ ಮಾಡಿದರು. ರಷ್ಯಾ ಆಕ್ರಮಿತ ಉಕ್ರೇನಿನ ಉಗ್ರಾಣದಲ್ಲಿದ್ದ ಗೋಧಿಯನ್ನು ಜಾಗತಿಕ ಪೂರೈಕೆ ಜಾಲಕ್ಕೆ ತರಲು ಎರ್ಡೋಗನ್ ಪ್ರಯತ್ನಿಸಿದರು. ಜಗತ್ತು ಶ್ಲಾಘಿಸಿತು. ಉಕ್ರೇನ್ ಮತ್ತು ರಷ್ಯಾ ನಡುವಿನ ಯುದ್ಧಕೈದಿಗಳ ಹಸ್ತಾಂತರಕ್ಕೂ ಎರ್ಡೋಗನ್ ಸೇತುವೆಯಾದರು. ಚುನಾವಣೆ ನಡೆದ ಈ ಸಂದರ್ಭದಲ್ಲಿ ಟರ್ಕಿ ಆರ್ಥಿಕ ಹಿಂಜರಿತ, ಹಣದುಬ್ಬರ, ನಿರುದ್ಯೋಗದ ಸಮಸ್ಯೆಯನ್ನು ಎದುರಿಸುತ್ತಿದ್ದರೂ, ಟರ್ಕಿಯ ಜನ ಎರ್ಡೋಗನ್ ಅವರನ್ನೇ ಆರಿಸಿದ್ದಾರೆ ಎಂದರೆ, ಪ್ರಾಯಶಃ ಎರ್ಡೋಗನ್ ಅವರ ಚತುರ ವಿದೇಶಾಂಗ ನೀತಿಯನ್ನು ಮೆಚ್ಚಿ, ಸದ್ಯದ ಮಟ್ಟಿಗೆ ಟರ್ಕಿಗೆ ಎರ್ಡೋಗನ್ ಅನಿವಾರ್ಯ ಎಂದು ಅವರು ಭಾವಿಸಿರಬಹುದು.

ಭಾರತ ಮತ್ತು ಟರ್ಕಿಯ ವಿಷಯ ನೋಡುವುದಾದರೆ, ಎರಡು ದೇಶಗಳ ನಡುವಿನ ವಾಣಿಜ್ಯಿಕ ವ್ಯವಹಾರ ಸರಾಗ ಎನಿಸಿದರೂ, ಪಾಕಿಸ್ತಾನದ ವಿಷಯ ಬಂದಾಗ ಟರ್ಕಿ ಭಾರತದ ವಿರುದ್ಧ ನಿಂತದ್ದೇ ಹೆಚ್ಚು. ಕಾಶ್ಮೀರಕ್ಕೆ ಸಂಬಂಧಿಸಿದ 370ನೇ ವಿಧಿಯನ್ನು ಭಾರತ ತೆರವುಗೊಳಿಸಿದಾಗ ಮುಸ್ಲಿಂ ಜಗತ್ತಿನ ಪ್ರಮುಖ ರಾಷ್ಟ್ರಗಳು, ಇದು ಭಾರತದ ಆಂತರಿಕ ವಿಷಯ ಎಂದು ಪ್ರತಿಕ್ರಿಯಿಸಿದರೆ, ಟರ್ಕಿಯ ಎರ್ಡೋಗನ್ ಭಾರತದ ನಿಲುವನ್ನು ಖಂಡಿಸಿದ್ದರು. ಆಗ ಭಾರತವು ಎರ್ಡೋಗನ್ ಹೇಳಿಕೆಯ ವಿರುದ್ಧ ಪ್ರತಿಭಟನೆಯನ್ನು ದಾಖಲಿಸಲು ಟರ್ಕಿಯ ರಾಜತಾಂತ್ರಿಕ ಅಧಿಕಾರಿಗೆ ಸೂಚಿಸಿತ್ತು.

ಆದರೆ ಕೊರೊನಾದ ಹೊಡೆತ ಟರ್ಕಿಯನ್ನು ಕೊಂಚ ಮೆತ್ತಗೆ ಮಾಡಿತು. ಹಿಂದಿನ ವರ್ಷ ಉಜ್ಬೇಕಿಸ್ತಾನದಲ್ಲಿ ನಡೆದ ಶಾಂಘೈ ಸಹಕಾರ ಒಕ್ಕೂಟದ ಶೃಂಗಸಭೆಯ ವೇಳೆ, ಎರ್ಡೋಗನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಡುವೆ ಮಾತುಕತೆ ನಿಗದಿಯಾಗಿರಲಿಲ್ಲ. ಆದರೆ ಎರ್ಡೋಗನ್ ಅವರು ಮಾತುಕತೆ ಬಯಸಿದಾಗ ಮೋದಿ ಅವರು ಆಹ್ವಾನ ಒಪ್ಪಿಕೊಂಡು ಮಾತುಕತೆಗೆ ಕುಳಿತರು. ಟರ್ಕಿಯ ವಿದೇಶಾಂಗ ನೀತಿ ಇಸ್ಲಾಂಕೇಂದ್ರಿತವಾಗಿದೆ ಮತ್ತು ಆ ಕಾರಣದಿಂದಲೇ ಅದು ಪಾಕಿಸ್ತಾನದ ಪರ ನಿಲ್ಲಲಿದೆ ಎಂಬುದು ಗೊತ್ತಿದ್ದರೂ, ಟರ್ಕಿಯ ಸಂಕಷ್ಟದ ಸಮಯದಲ್ಲಿ ಆ ದೇಶಕ್ಕೆ ಸಹಾಯಹಸ್ತ ಚಾಚಲು ಭಾರತ ಮುಂದಾಯಿತು.

ಈ ನಡೆಯ ಹಿಂದೆ ನಮ್ಮ ಹಿತಾಸಕ್ತಿ ಇರಲಿಲ್ಲ ಎಂದಲ್ಲ. ಟರ್ಕಿಯಲ್ಲಿ ವ್ಯಾಪಾರ ಮತ್ತು ಉದ್ಯೋಗದ ಕಾರಣದಿಂದ ನೆಲೆ ನಿಂತ ಭಾರತೀಯರು ಇದ್ದಾರೆ. ಭಾರತದಿಂದ ಅಕ್ಕಿ ಮತ್ತು ಗೋಧಿಯನ್ನು ಟರ್ಕಿ ಆಮದು ಮಾಡಿಕೊಳ್ಳುತ್ತದೆ. ಯುರೋಪ್‌ನಲ್ಲಿ ನಮ್ಮ ಹಿತಾಸಕ್ತಿ ಕಾಯ್ದುಕೊಳ್ಳಲು ಟರ್ಕಿ ಮೆಟ್ಟಿಲಾಗಬಹುದು, ಮುಂದಾದರೂ ಪಾಕಿಸ್ತಾನ ಕುರಿತ ಮೋಹವನ್ನು ಅದು ಬಿಡಬಹುದು ಎಂಬ ಲೆಕ್ಕಾಚಾರ ಟರ್ಕಿಯ ವಿಷಯದಲ್ಲಿ ಭಾರತದ ನಡೆಯನ್ನು ನಿರ್ದೇಶಿಸಿತು.

ಅದೇನೇ ಇರಲಿ, ಎರ್ಡೋಗನ್ ಇನ್ನೊಂದು ಅವಧಿಗೆ ಟರ್ಕಿಯ ಅಧ್ಯಕ್ಷರಾಗಿ ಮುಂದುವರಿಯಲಿದ್ದಾರೆ. ಟರ್ಕಿಯ ಆಂತರಿಕ ಸಮಸ್ಯೆಗಳನ್ನು ಅವರು ಹೇಗೆ ನಿರ್ವಹಿಸುತ್ತಾರೆ, ಜಾಗತಿಕ ವೇದಿಕೆಯಲ್ಲಿ ಯಾವ ಪಾತ್ರ ನಿರ್ವಹಿಸುತ್ತಾರೆ, ಭಾರತ ಮತ್ತು ಪಾಕಿಸ್ತಾನದ ವಿಷಯ ಬಂದಾಗ ಅವರ ನಿಲುವು ಬದಲಾಗುತ್ತದೆಯೇ ಎನ್ನುವುದನ್ನು ಕಾದು ನೋಡಬೇಕು.

ಚುರುಮುರಿ

ಬಂಪರ್ ಭಾಗ್ಯ

• ಸಿ.ಎನ್.ರಾಜು

'**ಕರೆಂಟ್** ಬಿಲ್ ಕಟ್ಟಲ್ಲ, ಬಸ್ ಟಿಕೆಟ್ ಮುಟ್ಟಲ್ಲ ಅಂತ ಗ್ಯಾರಂಟಿ ಭಾಗ್ಯದ ಭಾವಿ ಭಾಗ್ಯವಂತರು ಜೋರು ಮಾಡ್ತಿದ್ದಾರೆ ಕಣ್ರೀ...' ಎಂದಳು ಅನು.

'ಗ್ಯಾರಂಟಿ ಭಾಗ್ಯಗಳನ್ನು ಬೇಗ ಜಾರಿ ಮಾಡಬೇಕು ಅಂತ ಭಾಗ್ಯವಂತರಿಗಿಂತ ವಿರೋಧ ಪಕ್ಷದವರೇ ಆತುರ ಪಡ್ತಿದ್ದಾರಂತೆ. ಭಾಗ್ಯಗಳು ಜಾರಿಯಾಗುತ್ತವೋ ಜಾರಿಹೋಗುತ್ತವೋ ಎಂದು ತಿಳಿಯುವ ಕಾತರವಂತೆ...' ಅಂದ ಗಿರಿ.

'ಕಾತರ, ಆತುರ ಬೇಡ. ಮಂತ್ರಿ ಭಾಗ್ಯ ಸಿಗದ ಹತಭಾಗ್ಯರಿಗೆ ನಿಗಮ, ಮಂಡಳಿಗಳಲ್ಲಿ ಪರ್ಯಾಯ ಭಾಗ್ಯ ಕೊಟ್ಟು, ಬೇಡವೆಂದವರಿಗೆ ಸಚಿವ ಸಂಪುಟದ ಮುಂದಿನ ಸಂಚಿಕೆಯಲ್ಲಿ ಮಂತ್ರಿ ಭಾಗ್ಯದ ಭರವಸೆ ನೀಡಿ, ಸರ್ಕಾರದಲ್ಲಿ ಶಾಂತಿ, ನೆಮ್ಮದಿ ನೆಲೆಯಾದ ನಂತರ ಸರ್ವ ಭಾಗ್ಯಗಳನ್ನೂ ಜಾರಿಗೆ ತರುತ್ತೇವೆ ಎಂದು ಸರ್ಕಾರಿ ನಾಯಕರು ಹೇಳಿದ್ದಾರೆ'.

'ಉಚಿತ ಭಾಗ್ಯಗಳಿಗೆ ಸರ್ಕಾರ ಹೇಗೆ ಹಣ ಹೊಂದಿಸುತ್ತದೆ? ದುಡ್ಡಿನ ಗಿಡ ಬೆಳೆಸುವುದೇ, ನೋಟು ಪ್ರಿಂಟ್ ಮಾಡುವುದೇ, ಬೆಲೆ ಏರಿಕೆ ಬರೆ, ತೆರಿಗೆ ಹೊರೆ ಹೇರುವುದೇ ಎಂಬ ಕುತೂಹಲವಂತೆ ವಿರೋಧ ಪಕ್ಷಗಳಿಗೆ'.

'ಕಾಂಗ್ರೆಸ್ಸಿನ ಉಚಿತ ಭಾಗ್ಯಗಳ ದೆಸೆಯಿಂದ ತಾವು ಚುನಾವಣೆಯಲ್ಲಿ ಸೋಲುವಂತಾಯಿತು ಎಂದು ನೊಂದವರು, ಎಲೆಕ್ಷನ್ ಗೆಲುವಿಗೆ ಉಚಿತ ಭಾಗ್ಯಗಳೇ ಪ್ರಮುಖ ಅಸ್ತ್ರ ಎಂದು ನಂಬಿರುವವರು ಮುಂದಿನ ಚುನಾವಣೆಗಳಲ್ಲಿ ಭರಪೂರ ಭಾಗ್ಯಗಳ ಭರವಸೆ ನೀಡಿ, ಭಾಗ್ಯದಿಂದ ಸೋತ ಸೋಲನ್ನು ಭಾಗ್ಯದಿಂದಲೇ ಗೆಲ್ಲುವ ಪ್ರಯತ್ನ ಮಾಡಬಹುದು'.

'ಲೋಕಸಭಾ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಪೈಪೋಟಿಗೆ ಬಿದ್ದಂತೆ ಉಚಿತ ಭಾಗ್ಯಗಳನ್ನು ಘೋಷಣೆ ಮಾಡಬಹುದು'.

'ಮಾಡಬಹುದು. ಪ್ರತಿ ಕುಟುಂಬಕ್ಕೆ ತಿಂಗಳಿಗೊಂದು ಗ್ಯಾಸ್ ಸಿಲಿಂಡರ್ ಉಚಿತ, ಪ್ರತಿ ದಿನ ಒಂದು ಲೀಟರ್ ಪೆಟ್ರೋಲ್ ಫ್ರೀ, ರೈಲಿನಲ್ಲಿ ದೇಶದಾದ್ಯಂತ ಉಚಿತ ಪ್ರಯಾಣ ಎನ್ನುವಂತಹ ಭರವಸೆಗಳನ್ನು ನೀಡಬಹುದೇನೋ, ಕಾದು ನೋಡೋಣ...' ಅಂದಳು ಅನು.

ಸಂಗತ

ಕರ್ಕಶ ಸದ್ದು ಮಾಡುವ ಮುನ್ನ...

ಸೈಲೆನ್ಸರ್‌ಗಳನ್ನು ಮಾರ್ಪಡಿಸಿಕೊಂಡು ಓಡಿಸುವ ದ್ವಿಚಕ್ರ ವಾಹನಗಳು, ವಿಶೇಷವಾಗಿ ಬೈಕ್‌ಗಳು ನಿಜಕ್ಕೂ ಜನರಿಗೆ ದೊಡ್ಡ ಸಮಸ್ಯೆಯಾಗಿವೆ

• ಡಾ. ಕೆ.ಎಸ್.ಚೈತ್ರಾ

ಎಪ್ಪತ್ತರ ಹಿರಿಯರು ಉದ್ಯಾನಕ್ಕೆ ಕುಂಟುತ್ತಾ ಬರುತ್ತಿದ್ದರು. ಏನಾಯಿತು ಎಂದು ವಿಚಾರಿಸಿದ್ದಕ್ಕೆ 'ಮೊನ್ನೆ ಸಂಜೆ ವಾಕಿಂಗ್‌ಗೆ ಬರುತ್ತಿದ್ದಾಗ ಇದ್ದಕ್ಕಿದ್ದಂತೆ ದೊಡ್ಡ ಸದ್ದು. ಅದಕ್ಕೆ ಸರಿಯಾಗಿ ದಾರಿಬದಿಯಲ್ಲಿದ್ದ ನಾಯಿಗಳು ಸಿಕ್ಕಾಪಟ್ಟೆ ಬೊಗಳಲು ಆರಂಭಿಸಿದವು. ಭೂಕಂಪವಾಗುತ್ತಿದೆಯೇನೋ ಅನಿಸಿ ಒಂದು ಕ್ಷಣ ಹೆದರಿಕೆಯಾಯಿತು. ಕೈಕಾಲು ನಡುಗಿ ಓಡಲು ಹೋದಾಗ ಮೋರಿಗೆ ಬಿದ್ದೆ. ಗುಂಡಿಗೆ ಗಟ್ಟಿ ಇರದಿದ್ದರೆ ಮೇಲೆಯೇ ಹೋಗಬೇಕಿತ್ತು' ಎಂದು ನಕ್ಕರು. ಬೆಂಗಳೂರಿನಲ್ಲಿ ಭೂಕಂಪವೇ ಎಂದು ಬೆರಗಾದವರಿಗೆ ಆಮೇಲೆ ಗೊತ್ತಾದದ್ದು, ಕಾಲೇಜು ಹುಡುಗರು ತಮ್ಮ ಬೈಕ್‌ಗಳನ್ನು ಸೈಲೆನ್ಸರ್ ಇಲ್ಲದೆ ಓಡಿಸಿಕೊಂಡು ಹೋದಾಗ ಸೃಷ್ಟಿಯಾದ ಶಬ್ದಪ್ರಳಯ ಈ ಅಪಘಾತಕ್ಕೆ ಕಾರಣವಾಯಿತು ಎಂಬುದು.

ಅವರು ಹೀಗೆಂದ ಕೂಡಲೆ ಪ್ರತಿಯೊಬ್ಬರೂ ತಮ್ಮ ದನಿಗೂಡಿಸಿದರು. ರಾತ್ರಿ ಹನ್ನೊಂದಾದರೂ ಆಗಾಗ್ಗೆ ಕೇಳಿಬರುವ ಈ ಕರ್ಕಶವಾದ ಸದ್ದು ನಿದ್ದೆಗೆ ತೊಂದರೆ ಉಂಟು ಮಾಡುತ್ತದೆ ಎಂಬುದು ಕೆಲವರ ಅಳಲು. ಹಸುಗೂಸುಗಳು ಬೆಚ್ಚಿ ಬೀಳುವಷ್ಟು ಭೀಕರ ಈ ಸದ್ದು ಎಂದು ಪುಟ್ಟ ಮಕ್ಕಳ ತಂದೆ ತಾಯಿ ಬೇಸರಿಸಿದರೆ, ಆಸ್ಪತ್ರೆಗಳಲ್ಲೂ ರೋಗಿಗಳ ವಿಶ್ರಾಂತಿಗೆ ಭಂಗವನ್ನುಂಟು ಮಾಡುತ್ತದೆ ಎನ್ನುವುದು ಅನೇಕರ ದೂರು. ನಗರ ಪ್ರದೇಶಗಳಲ್ಲಿ ಶಬ್ದಮಾಲಿನ್ಯವು ಈಗಾಗಲೇ ದೊಡ್ಡ ಪಿಡುಗಾಗಿರುವ ಸಂದರ್ಭದಲ್ಲಿ, ಸೈಲೆನ್ಸರ್‌ಗಳನ್ನು ಮಾರ್ಪಡಿಸಿಕೊಂಡು ಓಡಿಸುವ ದ್ವಿಚಕ್ರ ವಾಹನಗಳು, ವಿಶೇಷವಾಗಿ ಬೈಕ್‌ಗಳು ನಿಜಕ್ಕೂ ಜನರಿಗೆ ದೊಡ್ಡ ಸಮಸ್ಯೆಯಾಗಿವೆ.

ವೇಗವಾಗಿ ಚಲಿಸಬಲ್ಲ, ಕಡಿಮೆ ಜಾಗ ಸಾಕಾಗುವ, ಕೈಗೆಟುಕುವ ದರದ ದ್ವಿಚಕ್ರ ವಾಹನಗಳು ಯುವಕ, ಯುವತಿಯರಿಗೆ ಅಚ್ಚುಮೆಚ್ಚು. ಇವುಗಳಲ್ಲಿ ಅಳವಡಿಸಲಾದ ಸೈಲೆನ್ಸರ್‌ನಿಂದ ಸುಮಾರು ಎಪ್ಪತ್ತರಿಂದ ಎಂಬತ್ತು ಡೆಸಿಬಲ್‌ನಷ್ಟು ಶಬ್ದ ಉಂಟಾಗುತ್ತದೆ. ಆದರೆ ಇತರರ ಗಮನ ಸೆಳೆಯಲು, ಶೋಕಿಗಾಗಿ, ಈ ಬೈಕ್‌ಗಳ ಸೈಲೆನ್ಸರ್ ಒಳಗೆ ಇರುವ ಮಫ್ಲರ್ ಎಂಬ ಉಪಕರಣವನ್ನು ಹೊರತೆಗೆಸುತ್ತಾರೆ. ಆಗ ಹೊರಬರುವ ಶಬ್ದ ನೂರಾಮೂವತ್ತಕ್ಕೂ ಹೆಚ್ಚು ಡೆಸಿಬಲ್‌ನಷ್ಟು, ಅಂದರೆ ದುಪ್ಪಟ್ಟು! ಕಿವಿಗೆ ಕರ್ಕಶ ಎನಿಸುವ ಇಂತಹ ಸದ್ದು ಶಬ್ದಮಾಲಿನ್ಯಕ್ಕೆ ಕಾರಣವೂ ಹೌದು. ಈ ರೀತಿ ಸೈಲೆನ್ಸರ್ ಅನ್ನು ಬದಲಿಸಲು ಅವಕಾಶವನ್ನೇ ನೀಡಬಾರದು ಮತ್ತು ಹಾಗೆ ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂಬುದು ಸಾರ್ವಜನಿಕರ ಅಭಿಪ್ರಾಯ.

ಇದಲ್ಲದೆ ಪ್ರತಿಯೊಂದು ವಾಹನಕ್ಕೂ ಹಾರ್ನ್ ಇರುತ್ತದೆ. ವಾಹನವನ್ನು ಚಲಾಯಿಸುವಾಗ ಇತರರಿಗೆ ತಮ್ಮ ಇರುವಿಕೆಯನ್ನು ತಿಳಿಸಲು ಅಥವಾ ಎಚ್ಚರಿಕೆ ನೀಡಲು ಉಪಯೋಗಿಸುವ ಸಾಧನವಿದು. ಆದರೆ ತಮಗಿಷ್ಟ ಬಂದಂತೆ ಚಿತ್ರ ವಿಚಿತ್ರ ಸದ್ದು ಮಾಡುವ ಕರ್ಕಶವಾದ ದನಿಯ ಹಾರ್ನ್‌ಗಳನ್ನು ಅಳವಡಿಸಿಕೊಳ್ಳುವುದು ಯುವಜನರ ಟ್ರೆಂಡ್. ಶಬ್ದ ಜೋರಾಗಿದ್ದಷ್ಟೂ ಹೆಚ್ಚು ಗಮನ ಸೆಳೆಯಬಹುದೆಂಬ ಇರಾದೆ!

ಬೈಕಿನ ಮುಂದಿನ ಚಕ್ರವನ್ನು ಗಾಳಿಯಲ್ಲಿ ಎತ್ತಿ ಬರೀ ಹಿಂದಿನ ಚಕ್ರದಲ್ಲಿ ಕರ್ಕಶ ಸದ್ದಿನೊಂದಿಗೆ ಗಾಡಿ ಓಡಿಸುವ ವ್ಹೀಲಿಂಗ್ ಕೂಡಾ ಯುವಜನರಿಗೆ ಸಾಹಸ ಕ್ರಿಯೆ. ಹರೆಯದ ಬಿಸಿರಕ್ತ, ಉನ್ಮಾದದಲ್ಲಿ ಮಾಡುವ ಈ ಎಲ್ಲಾ ಹುಚ್ಚಾಟಗಳು ಜನರಿಗೆ ಬಹಳಷ್ಟು ಕಿರಿಕಿರಿ ಉಂಟುಮಾಡುವುದು ಮಾತ್ರವಲ್ಲ ಅಪಘಾತಗಳಿಗೆ ಕಾರಣವಾಗುತ್ತಿವೆ.

ವಿಶ್ವಸಂಸ್ಥೆಯು ದ್ವಿಚಕ್ರ ವಾಹನಗಳ ಸವಾರಿಯನ್ನು ಅತ್ಯಂತ ಅಸುರಕ್ಷಿತ ಸಾರಿಗೆ ಸಂಚಾರ ಎಂದು ಗುರುತಿಸಿದೆ. ಅಂದರೆ, ರಸ್ತೆ ಅಪಘಾತದಲ್ಲಿ ಸಾವಿಗೀಡಾಗುವವರ ಪ್ರಮಾಣ ಅತ್ಯಂತ ಹೆಚ್ಚು. ಬೆಂಗಳೂರಿನಲ್ಲಿ ವಾಹನ ಅಪಘಾತದಿಂದ ಸಾವಿಗೀಡಾಗುವವರಲ್ಲಿ ಶೇ 70ರಷ್ಟು ಮಂದಿಯ ತಲೆಗೆ ಪೆಟ್ಟು ಬಿದ್ದಿರುತ್ತದೆ ಎನ್ನುವುದು ದೃಢಪಟ್ಟಿದೆ. ಸವಾರರು ಹೆಲ್ಮೆಟ್ ಧರಿಸಿದರೆ ಇಂತಹ ಬಹಳಷ್ಟು ಅಪಘಾತಗಳನ್ನು ತಡೆಗಟ್ಟಬಹುದು. ಬೆಂಗಳೂರು ನಗರದ ಮೂರು ಪ್ರಮುಖ ಸಿಗ್ನಲ್‌ಗಳಲ್ಲಿ ವೈದ್ಯರು ಮತ್ತು ಸಂಚಾರ ಪೊಲೀಸರನ್ನು ಒಳಗೊಂಡ ತಂಡದಿಂದ ಇತ್ತೀಚೆಗೆ ಸಮೀಕ್ಷೆಯೊಂದನ್ನು ನಡೆಸಲಾಯಿತು. ಶೇ 77ರಷ್ಟು ಜನ ಹೆಲ್ಮೆಟ್ ಧರಿಸಿದ್ದರು. ಅಂದರೆ ಹೆಚ್ಚಿನವರು ಹೆಲ್ಮೆಟ್ ಧರಿಸುತ್ತಿದ್ದಾರೆ ಎಂದು ಸಮಾಧಾನಪಡುವ ಹಾಗಿಲ್ಲ. ಏಕೆಂದರೆ ಇವರಲ್ಲಿ ಶೇ 52ರಷ್ಟು ಜನ ಅದನ್ನು ಸರಿಯಾಗಿ ಧರಿಸಿರಲಿಲ್ಲ, ಅಂದರೆ ಅದರ ಬಕಲ್ ಹಾಕಿಕೊಂಡಿರಲಿಲ್ಲ.

ಸಂಚಾರ ಪೊಲೀಸರು ದಂಡ ಹಾಕುತ್ತಾರೆ ಎಂಬ ಕಾರಣಕ್ಕೆ ಹೆಲ್ಮೆಟ್ ಧರಿಸುವವರೇ ಹೆಚ್ಚು ಜನ. ಹಿಂಬದಿ ಸವಾರರಂತೂ ಕೈಯಲ್ಲಿ ಹೆಲ್ಮೆಟ್ ಹಿಡಿದು, ಪೊಲೀಸರನ್ನು ಕಂಡೊಡನೆ ತಲೆಗೇರಿಸುವ ಸಾಹಸ ಮಾಡುತ್ತಾರೆ. ಇದರೊಂದಿಗೆ, ಬೇಸಿಗೆ ಕಾಲದಲ್ಲಿ ಸೆಖೆ ಹೆಚ್ಚು, ಉಸಿರು ಕಟ್ಟಿದಂತೆ ಆಗುತ್ತದೆ, ಭಾರಕ್ಕೆ ತಲೆನೋವು, ಕಡಿಮೆ ದೂರಕ್ಕೆ ಅಗತ್ಯವಿಲ್ಲ, ಬೆವರು ಜಾಸ್ತಿಯಾಗಿ ಅಂಟಾಗುತ್ತದೆ, ಕೂದಲು ಉದುರುತ್ತದೆ, ಮುಖ ಕಾಣುವುದಿಲ್ಲ ಎನ್ನುವಂತಹ ನೆಪಗಳು ಹೆಲ್ಮೆಟ್ ಅನ್ನು ಪೊಲೀಸರನ್ನು ಕಂಡಾಗಲಷ್ಟೇ ಧರಿಸಿಕೊಳ್ಳುವುದಕ್ಕೆ ಸೀಮಿತಗೊಳಿಸಿವೆ.

ಹೆಲ್ಮೆಟ್ ಧರಿಸದವರಿಗೆ ಮಾತ್ರವಲ್ಲ, ಹೆಲ್ಮೆಟ್‌ನ ಬಕಲ್ ಹಾಕದವರು, ಸಂಪೂರ್ಣ ತಲೆ ಮುಚ್ಚದ ಅರೆ ಹೆಲ್ಮೆಟ್ ಧರಿಸಿದವರು, ಕರ್ಕಶ ಸದ್ದು ಮಾಡುವವರ ವಿರುದ್ಧವೂ ಮೋಟಾರು ವಾಹನ ಕಾಯ್ದೆಯಡಿ ಸಂಚಾರ ಪೊಲೀಸರು ಕ್ರಮ ಕೈಗೊಳ್ಳಬೇಕು ಎನ್ನುವುದೇನೋ ಸರಿ. ಅದರೊಂದಿಗೇ ಸರಿಯಾಗಿ ಹೆಲ್ಮೆಟ್ ಧರಿಸುವುದು ಜೀವ ರಕ್ಷಣೆಗಾಗಿ ಎನ್ನುವ ಅರಿವು, ಕರ್ಕಶ ಶಬ್ದ ಇತರರಿಗೆ ಉಂಟುಮಾಡುವ ಶಬ್ದಮಾಲಿನ್ಯದ ಕುರಿತಾಗಿ ತಿಳಿವಳಿಕೆ, ಸಂಚಾರ ನಿಯಮಗಳ ಕುರಿತು ವಿಶೇಷವಾಗಿ ಶಾಲಾ ಕಾಲೇಜುಗಳಲ್ಲಿ ಕಾರ್ಯಕ್ರಮ ನಡೆಯಬೇಕು. ಏಕೆಂದರೆ ದಂಡನೆಗಿಂತ ಅರಿವಿದ್ದಾಗ ಪಾಲನೆ ಸುಲಭ!

ವಾಚಕರ ವಾಣಿ

ಶಾಲೆಗಳು ಕಳೆಗಟ್ಟಬಹುದು, ಕಲರವ ಕೇಳಬಹುದು...

ರಾಜ್ಯದಾದ್ಯಂತ ಸರ್ಕಾರಿ ಶಾಲೆಗಳು ಪುನರಾರಂಭವಾದ ಬುಧವಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಪ್ರಿಯ ಮಕ್ಕಳೇ, ಜ್ಞಾನ ದೇಗುಲಕ್ಕೆ ಬನ್ನಿ...' ಎಂದು ಸ್ವಾಗತಿಸಿ ವಿದ್ಯಾರ್ಥಿಗಳಿಗೆ ಬಹಿರಂಗ ಪತ್ರ ಬರೆದಿರುವುದು (ಪ್ರ.ವಾ., ಮೇ 31) ಸಂತೋಷದ ಸಂಗತಿ. ಆದರೆ ಇತ್ತೀಚಿನ ವರ್ಷಗಳಲ್ಲಿ ನಗರ ಮಾತ್ರವಲ್ಲ ಗ್ರಾಮೀಣ ಪ್ರದೇಶಗಳಲ್ಲಿಯೂ ಸರ್ಕಾರಿ ಶಾಲೆ ಬಿಟ್ಟು, ಖಾಸಗಿ ಶಾಲೆಗೆ ಸೇರುವವರ ಸಂಖ್ಯೆ ಹೆಚ್ಚಾಗಿದೆ. ಸರ್ಕಾರಿ ಶಾಲೆಗಳಲ್ಲಿ ಅದರಲ್ಲೂ ಕನ್ನಡ ಮಾಧ್ಯಮದಲ್ಲಿ ಕನಿಷ್ಠ ಏಳನೇ ತರಗತಿವರೆಗೆ ವ್ಯಾಸಂಗ ಮಾಡಿದವರಿಗೆ ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ಜಾರಿಗೆ ತರಲು ಸರ್ಕಾರ ಮುಂದಾಗಲಿ. ಆಗ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಹೆಚ್ಚಾಗಿ ಶಾಲೆಗಳು ಕಳೆಗಟ್ಟಬಹುದು, ಅಲ್ಲಿ ಮತ್ತೆ ಮಕ್ಕಳ ಕಲರವವನ್ನು ಕೇಳುವಂತೆ ಆಗಬಹುದು. **ಸಿ.ಸಿದ್ದರಾಜು ಆಲಕೆರೆ,** ಮಂಡ್ಯ

ನಿಯಮದ ನಡುವೆಯೂ ಇರಲಿ ಮಾನವೀಯತೆ

ಸಾಗರಕ್ಕೆ ಬರಲು ಇತ್ತೀಚೆಗೆ ಸ್ನೇಹಿತರೊಬ್ಬರೊಂದಿಗೆ ಶಿವಮೊಗ್ಗದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಸಂಜೆ ಹಾಸನ- ಯಲ್ಲಾಪುರ ಬಸ್ ಹತ್ತಿದೆ. ನಿರ್ವಾಹಕ ಬಂದು ಟಿಕೆಟ್ ಕೇಳಿದಾಗ 'ಎರಡು ಸೀನಿಯರ್ ಸಿಟಿಜನ್ ಟಿಕೆಟ್ ಸಾಗರಕ್ಕೆ ಕೊಡಿ. ಆದರೆ ನಾನು ಸಾಗರಕ್ಕಿಂತ 15 ಕಿ.ಮೀ. ಹಿಂದೆ ಕಾಸ್ಪಾಡಿ ಎಂಬಲ್ಲಿ ಇಳಿಯುತ್ತೇನೆ. ನನಗೆ ಈಗ 82 ವರ್ಷ. ಸಾಗರದಿಂದ ಮತ್ತೆ ವಾಪಸ್ ಬರಲು ತೊಂದರೆಯಾಗುತ್ತದೆ' ಎಂದು ಹೇಳಿದೆ. ಅದಕ್ಕೆ ನಿರ್ವಾಹಕ ಚಾಲಕನನ್ನು ಕೇಳುವಂತೆ ತಿಳಿಸಿದರು. ಬಸ್‌ನಲ್ಲಿ ಪ್ರಯಾಣಿಕರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದುದರಿಂದ ಸ್ವಲ್ಪ ದೂರ ಪ್ರಯಾಣಿಸಿದ ಬಳಿಕ ನಾನು ಚಾಲಕನ ಬಳಿ ಹೋಗಿ ಅದೇ ರೀತಿ ಮನವಿ ಮಾಡಿದೆ. ಆದರೆ ಚಾಲಕ ಸ್ವಲ್ಪವೂ ಸ್ಪಂದಿಸದೆ 'ಇಲ್ಲ, ನೀವು ಸಾಗರದಲ್ಲೇ ಇಳಿದುಕೊಳ್ಳಿ' ಎಂದು ಬಸ್ಸನ್ನು ಸಾಗರದಲ್ಲೇ ನಿಲ್ಲಿಸಿದರು.

ನಿಯಮವು ಜನರಿಗಾಗಿಯೇ ಇರುತ್ತದೆ. ಆದರೆ ನಿಯಮದ ನೆಪ ಹೇಳಿ ಮಾನವೀಯತೆಯನ್ನು ಮರೆಯಬಾರದು. ಅಂದು ನಾನು ಸಾಗರಕ್ಕೆ ಬರುವಾಗಲೇ ಕತ್ತಲಾಗುತ್ತಾ ಬಂದಿತ್ತು. ಪುನಃ 15 ಕಿ.ಮೀ. ವಾಪಸ್ ಹೋಗಬೇಕು. ಸ್ಥಳೀಯ ಬಸ್ ಆ ಸಮಯಕ್ಕೆ ಸಿಗುವುದೋ ಇಲ್ಲವೋ ಎಂಬ ಆತಂಕ ನನಗೆ. ಆಟೊ ಮಾಡಿಕೊಂಡು ಹೋಗೋಣವೆಂದರೆ ₹ 300 ಕೇಳುತ್ತಾರೆ. ಅಂತೂ ಯಾರೋ ಪರಿಚಿತರು ಸಿಕ್ಕ ಮೇಲೆ ಮನೆ ತಲುಪಿದೆ ಎನ್ನಿ. ಎಕ್ಸ್‌ಪ್ರೆಸ್ ಬಸ್ಸನ್ನು ಮಧ್ಯದಲ್ಲಿ ನಿಲ್ಲಿಸಬಾರದೆಂಬ ನಿಯಮವಿದೆ ಸರಿ. ಆದರೆ ನಿಯಮ ಅನುಸರಿಸುವಾಗ ಹಿರಿಯ ನಾಗರಿಕರು, ಮಹಿಳೆಯರ ಬಗ್ಗೆ ತುಸು ಮಾನವೀಯತೆ ಇರಲಿ. ಸಾರಿಗೆ ಅಧಿಕಾರಿಗಳು ತಮ್ಮ ನೌಕರರಿಗೆ ಈ ಬಗ್ಗೆ ಸೂಚನೆ ನೀಡಲಿ ಎಂಬ ಆಶಯ ನನ್ನದು. **ಎಚ್.ವಿ.ರಾಮಚಂದ್ರ ರಾವ್,** ಸಾಗರ

ಕಳೆದುಹೋಗುತ್ತಿದೆ ಪುಸ್ತಕ ಓದುವ ಕೌಶಲ

ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುವವರು ಮೊದಲನೇ ಹಂತದ ಓದಿಗಾಗಿ 6ರಿಂದ 12ನೇ ತರಗತಿಯವರೆಗಿನ ಪುಸ್ತಕಗಳನ್ನು ಓದುವುದು ಕಡ್ಡಾಯ. ಕಾರಣ ಇಷ್ಟೇ, ಈ ಪುಸ್ತಕಗಳು ಸಾಮಾನ್ಯ ಜ್ಞಾನಕ್ಕೆ ಬುನಾದಿಯಿದ್ದಂತೆ. ಇವುಗಳನ್ನು ತಿರುವಿ ಹಾಕಿದ ನಂತರ ಎರಡನೇ ಹಂತದಲ್ಲಿ, ಪ್ರಸಿದ್ಧ ಲೇಖಕರ ಪುಸ್ತಕಗಳನ್ನು ಓದಿ ಪರೀಕ್ಷೆಗೆ ತಯಾರಾಗಬೇಕು. ಆದರೆ ಈಗ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಬರುವ ಬಹುತೇಕ ಪ್ರಶ್ನೆಗಳು ಪ್ರಮುಖ ಪರೀಕ್ಷಾ ಸಂಬಂಧಿ ವೆಬ್‌ಸೈಟ್‌ಗಳ ಮಾಹಿತಿಯನ್ನು ಆಧರಿಸಿರುತ್ತವೆ. ಇದರಿಂದ ಸ್ಪರ್ಧಾರ್ಥಿಗಳು ಪುಸ್ತಕಗಳನ್ನು ಮರೆತು ಜಾಲತಾಣದಲ್ಲಿ ಸಂಶೋಧನೆಗೆ ಜೋತು ಬೀಳುತ್ತಿದ್ದಾರೆ.

ಇದೆಲ್ಲದರ ಮಧ್ಯೆ, ಸರ್ಕಾರಗಳು ಬದಲಾದಾಗ ಪಾಠಗಳನ್ನು ಬದಲಿಸುವ, ಹೊಸ ಪಾಠ ಸೇರ್ಪಡೆ ಮಾಡುವ ಓಲೈಕೆಯ 'ಪಠ್ಯಸಹಿತ' ರಾಜಕೀಯ ನಡೆಯುತ್ತಿರುವುದು ಶೋಚನೀಯ ಸಂಗತಿ. ಇದರಿಂದ ಬಹುತೇಕ ಸ್ಪರ್ಧಾರ್ಥಿಗಳು ಪುಸ್ತಕಗಳನ್ನು ಓದಬೇಕೋ ಬೇಡವೋ ಎನ್ನುವ ಗೊಂದಲದಿಂದ ಜಾಲತಾಣಕ್ಕೆ ಮತ್ತಷ್ಟು ದಾಸರಾಗುತ್ತಿದ್ದಾರೆ. ಪುಸ್ತಕ ಓದುವ ಕೌಶಲವನ್ನು ಕಳೆದುಕೊಳ್ಳುತ್ತಿದ್ದಾರೆ.

ಬಸನಗೌಡ ಮಂಜುನಾಥಗೌಡ ಪಾಟೀಲ, ಯರಗುಪ್ಪಿ

ಇದು ಗಿಡ ನೆಡುವ ಸಮಯ...

ರಾಜ್ಯದಾದ್ಯಂತ ವ್ಯಾಪಕವಾಗಿ ಮಳೆ ಸುರಿಯಲಾರಂಭಿಸಿದೆ. ಈ ಸಂದರ್ಭದಲ್ಲಿ, ಖಾಲಿ ಇರುವ ಸರ್ಕಾರಿ ಭೂಮಿ, ಕಚೇರಿಗಳ ಆವರಣ, ನಾಶವಾದ ಕಾಡು, ಕಾಯ್ದಿಟ್ಟ ಅರಣ್ಯ ಪ್ರದೇಶ, ರಸ್ತೆ ಬದಿ, ಬಡಾವಣೆಗಳಲ್ಲಿ ಗಿಡಗಳನ್ನು ನೆಡುವ ಹಾಗೂ ಅರಣ್ಯಗಳು, ರೈತರ ಜಮೀನಿನಲ್ಲಿ ಚೆಕ್ ಡ್ಯಾಂಗಳನ್ನು ನಿರ್ಮಿಸುವ ಕುರಿತು ಜನಜಾಗೃತಿ ಮೂಡಿಸಬೇಕು. ಕಾಡಿನಲ್ಲಿ ನಿರ್ಮಿಸಿದ ಚೆಕ್‌ಡ್ಯಾಂ ಕಾಡುಪ್ರಾಣಿ, ಪಕ್ಷಿಗಳ ದಾಹ ತಣಿಸುತ್ತದೆ. ಊರಿನ ಅಲ್ಲಲ್ಲಿ ಅರಳಿ ಮತ್ತು ಬೇವಿನ ಮರಗಳನ್ನು ಬೆಳೆಸುವುದು ಹಿಂದಿನಿಂದ ನಡೆದುಬಂದ ಪರಂಪರೆಯಾಗಿದೆ. ದೇವರಕಾಡು, ಮರಗಳ ತೋಪು ಎಂದೆಲ್ಲ ಕೇಳಿದ್ದೇವೆ, ನೋಡಿದ್ದೇವೆ. ಪ್ರಕೃತಿಯಲ್ಲಿಯೂ ದೈವವನ್ನು ಕಾಣುವ ಮೂಲಕ ಪ್ರಾಕೃತಿಕ ಸಮತೋಲನ ಸಾಧ್ಯ. **ಎಚ್.ಎನ್.ಕಿರಣ್ ಕುಮಾರ್,** ಹಳೇಹಳ್ಳಿ, ಗೌರಿಬಿದನೂರು

ಹಳೆಯ ಪಠ್ಯಪುಸ್ತಕ ಜಾರಿಗೆ ಬರಲಿ

ಇತಿಹಾಸವನ್ನು ತಿರುಚಿ ವಿದ್ಯಾರ್ಥಿಗಳ ದಿಕ್ಕು ತಪ್ಪಿಸುವಂತಹ ಪರಿಷ್ಕೃತ ಪಠ್ಯಪುಸ್ತಕವನ್ನು ಜಾರಿಗೆ ತಂದಿದ್ದ ಬಿಜೆಪಿ ನೇತೃತ್ವದ ಸರ್ಕಾರವು ಸಾಹಿತಿಗಳು ಮತ್ತು ವಿರೋಧ ಪಕ್ಷಗಳಿಂದ ತೀವ್ರ ವಿರೋಧ ಎದುರಿಸಿತ್ತು. ಆಗ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್ ಈಗ ಅಧಿಕಾರಕ್ಕೆ ಬಂದಿದೆ. ಪಠ್ಯಪುಸ್ತಕ ಪರಿಷ್ಕರಣೆಗೆ ಮುಂದಾಗಿರುವುದು ಸೂಕ್ತ ನಡೆಯೇ. ಆದರೆ ಈಗಾಗಲೇ ಮುದ್ರಣಗೊಂಡ ಪಠ್ಯಪುಸ್ತಕಗಳನ್ನೇ ಮುಂದುವರಿಸುವಂತೆ ಆಂಜನೇಯ ಎನ್. ಅವರು ಹೇಳಿರುವುದು (ವಾ.ವಾ., ಮೇ 31) ಸೂಕ್ತವಲ್ಲ.

ದೇಶದ ಇತಿಹಾಸವನ್ನು ತಿರುಚಿ ಪರಿಷ್ಕರಿಸಿರುವ ಪಠ್ಯಪುಸ್ತಕ ಬದಲಾದಾಗ ಮಾತ್ರ ಇಂದಿನ ಯುವಪೀಳಿಗೆಯು ದೇಶದ ವಾಸ್ತವ ಇತಿಹಾಸವನ್ನು ಅರಿಯಲು ಸಾಧ್ಯ. ಈಗಾಗಲೇ ಮುದ್ರಣಗೊಂಡ ಪಠ್ಯಪುಸ್ತಕಗಳನ್ನು ಮುಂದುವರಿಸುವಂತೆ, ಮುಂದಿನ ಶೈಕ್ಷಣಿಕ ವರ್ಷಕ್ಕೆ ಒಂದು ಶಾಶ್ವತ ಪಠ್ಯಪುಸ್ತಕ ಆಯೋಗವನ್ನು ರಚಿಸುವಂತೆ ಅವರು ಹೇಳಿರುವುದು ಕಾರ್ಯಗತಗೊಂಡರೆ, ಎರಡೂ ಸರ್ಕಾರಗಳ ನಡುವೆ ವ್ಯತ್ಯಾಸವೇ ಇಲ್ಲದಂತೆ ಆಗುತ್ತದೆ. ಅಂದರೆ, ಸರ್ಕಾರಗಳು ಪರಸ್ಪರ ಆಯೋಗಗಳನ್ನು ರಚಿಸಿಕೊಂಡು ತಮ್ಮ ಕಾರ್ಯ ಸಾಧಿಸಿಕೊಂಡಂತೆ ಆಗುತ್ತದೆ. ಆದ್ದರಿಂದ ಹಳೆಯ ಪಠ್ಯಪುಸ್ತಕವನ್ನೇ ಜಾರಿಗೆ ತರಲಿ, ಹೊಸ ಆಯೋಗ ರಚನೆಯ ಅಗತ್ಯವಿಲ್ಲ.

ಎಲ್.ಚಿನ್ನಪ್ಪ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಯಾರ ಮುಡಿಗೆ ಚೆಂದದ ಸಮ್ಮಾನ?



ಚಂದನವನದ ಚೆಂದದ ಸಮ್ಮಾನ ಯಾರ ಮುಡಿಗೆ ಎನ್ನುವ ಪ್ರಶ್ನೆಗೆ ಉತ್ತರ ದೊರೆಯಲು ಕೆಲ ದಿನಗಳಷ್ಟೇ ಬಾಕಿ ಇದೆ. ಜೂನ್ 3ರಂದು **'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'** ಸಮಾರಂಭ ನಡೆಯಲಿದೆ. 2022ನೇ ಸಾಲಿನಲ್ಲಿ ತೆರೆಕಂಡ ಚಿತ್ರಗಳನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗಿತ್ತು. 23 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು ಈಗಾಗಲೇ ಪ್ರಕಟಿಸಲಾಗಿದೆ. ಇದೀಗ ನಾಮನಿರ್ದೇಶಿತರನ್ನು ಪರಿಚಯಿಸುವ ಸಮಯ. **'ಅತ್ಯುತ್ತಮ ನಟ'** ಹಾಗೂ **'ಅತ್ಯುತ್ತಮ ನಟಿ'** ವಿಭಾಗಗಳಲ್ಲಿ ನಾಮನಿರ್ದೇಶನಗೊಂಡವರ ಕಿರುಪರಿಚಯ ಇಲ್ಲಿದೆ.

'ಸಿನಿ ಸಮ್ಮಾನ'ದ ಕುರಿತ ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ prajavani.net/cinesamman

ಅತ್ಯುತ್ತಮ ನಟ

ರಂಗಭೂಮಿಯಿಂದ ಬಂದು ಚಂದನವನದಲ್ಲಿ ಮಿಂಚಿದವರು ವಿಜಯ್. 'ಸಂಚಾರಿ' ತಂಡದ ಸದಸ್ಯರಾಗಿ, ಬಣ್ಣದ ಲೋಕ ಪ್ರವೇಶಿಸಿದ್ದ ವಿಜಯ್, ನಂತರ 'ಸಂಚಾರಿ ವಿಜಯ್' ಎಂದೇ ಕರೆಸಿಕೊಂಡರು. 2011ರಲ್ಲಿ 'ರಂಗಪ್ಪ ಹೋಗ್ಬಿಟ್ನಾ' ಚಿತ್ರದ ಮುಖಾಂತರ ವಿಜಯ್ ಸಿನಿಪಯಣ ಆರಂಭಿಸಿದರು. 'ದಾಸ್ವಾಳ', 'ಒಗ್ಗರಣೆ' ಚಿತ್ರದಲ್ಲಿನ ಅವರ ಪಾತ್ರ ಬಹಳ ಮೆಚ್ಚುಗೆ ಪಡೆದಿತ್ತು. ಬಿ.ಎಸ್.ಲಿಂಗದೇವರು ನಿರ್ದೇಶನದ 'ನಾನು ಅವನಲ್ಲ, ಅವಳು' ಚಿತ್ರ ಅವರನ್ನು ರಾಷ್ಟ್ರ ಮಟ್ಟದಲ್ಲಿ ಗುರುತಿಸುವಂತೆ ಮಾಡಿತು. ಚಿತ್ರದಲ್ಲಿನ ಪಾತ್ರಕ್ಕೆ ಅವರಿಗೆ ರಾಷ್ಟ್ರ ಪ್ರಶಸ್ತಿ ದೊರೆಯಿತು. 2021ರ ಜೂನ್‌ನಲ್ಲಿ ರಸ್ತೆ ಅಪಘಾತದಲ್ಲಿ ವಿಜಯ್ ಅವರು ನಿಧನರಾದರು. 2022ರಲ್ಲಿ ವಿಜಯ್ ಅಭಿನಯದ ಕೊನೆಯ ಚಿತ್ರ 'ತಲೆದಂಡ' ಪರಿಸರ ಸಂರಕ್ಷಣೆ ಸಂಬಂಧಿತ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ ಬಾಚಿಕೊಂಡಿತ್ತು.



ಸಂಚಾರಿ ವಿಜಯ್
ಚಿತ್ರ: ತಲೆದಂಡ

ಕರಾವಳಿಯಿಂದ ಗಾಂಧಿನಗರಕ್ಕೆ ಬಂದು 'ನಮ್ ಏರಿಯಾಲ್ ಒಂದ್ ದಿನ' ಇದ್ದು 'ತುಗ್ಲಕ್' ಆದವರು ಇವರು. ನಂತರದಲ್ಲಿ 'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ' ಹೇಳಿದ್ದ ರಕ್ಷಿತ್ ಶೆಟ್ಟಿ, '777 ಚಾರ್ಲಿ' ಸಿನಿಮಾ ಮೂಲಕ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಮಿಂಚಿದವರು. 'ಕಿರಿಕ್ ಪಾರ್ಟಿ' ಇವರ ಸಿನಿಪಯಣಕ್ಕೆ ತಿರುವು ನೀಡಿದ ಸಿನಿಮಾ. ನಟನಾಗಿಯಷ್ಟೇ ಅಲ್ಲದೆ ನಿರ್ದೇಶನದ ಸಾಮರ್ಥ್ಯವನ್ನು 'ಉಳಿದವರು ಕಂಡಂತೆ' ಸಿನಿಮಾ ಮೂಲಕ ತೋರ್ಪಡಿಸಿ, 'ಪರಂವಃ ಸ್ಟುಡಿಯೋಸ್' ಮೂಲಕ ನಿರ್ಮಾಪಕರೂ ಆದರು. 'ರಿಕ್ಕಿ', 'ವಾಸ್ತು ಪ್ರಕಾರ', 'ಗೋಧಿ ಬಣ್ಣ ಸಾಧಾರಣ ಮೈಕಟ್ಟು', 'ಅವನೇ ಶ್ರೀಮನ್ನಾರಾಯಣ' ಇವು ರಕ್ಷಿತ್ ಅವರ ಖಾತೆಯಲ್ಲಿರುವ ಸಿನಿಮಾಗಳು. ಸದ್ಯ 'ರಿಚರ್ಡ್ ಆಂಟನಿ'ಯನ್ನು ಬೆನ್ನತ್ತಿ 'ಸಪ್ತ ಸಾಗರದಾಚೆ ಎಲ್ಲೋ' ಹೋಗಿದ್ದಾರೆ ರಕ್ಷಿತ್ ಶೆಟ್ಟಿ.

ರಕ್ಷಿತ್ ಶೆಟ್ಟಿ
ಚಿತ್ರ: 777 ಚಾರ್ಲಿ

ಇವರು ಸ್ಯಾಂಡಲ್‌ವುಡ್‌ನ 'ಅಧ್ಯಕ್ಷ'. ತೆರೆಯ ಮೇಲೆ ಹಾಸ್ಯದೌತಣ ಬಡಿಸುವ ಬಾಣಸಿಗ. ಹಾಸ್ಯ ಪಾತ್ರಗಳು, ಪೋಷಕ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಶರಣ್ ಅವರನ್ನು 'ಅಧ್ಯಕ್ಷ' ಸಿನಿಮಾ ನಾಯಕ ನಟನಾಗಿ ಸ್ಥಿರಗೊಳಿಸಿತು. ಸಿನಿಮಾದಲ್ಲಿ ಅವರ ಮೊದಲ ಹೆಜ್ಜೆ 'ಪ್ರೇಮ ಪ್ರೇಮ ಪ್ರೇಮ'. ತಮ್ಮ ನೂರನೇ ಚಿತ್ರದ ಮೂಲಕ ನಾಯಕ ನಟನಾಗಿ ಚಂದನವನದಲ್ಲಿ ಹೊಸ ಇನಿಂಗ್ಸ್ ಆರಂಭಿಸಿದರು. ಅದುವೇ 'ರ್‍ಯಾಂಬೋ' ಸಿನಿಮಾ. ನಂತರ ಬಂದ 'ವಿಕ್ಟರಿ', 'ಅಧ್ಯಕ್ಷ', 'ರಾಜರಾಜೇಂದ್ರ', 'ಜೈ ಮಾರುತಿ 800', 'ವಿಕ್ಟರಿ -2', 'ರ್‍ಯಾಂಬೋ-2' ಮುಂತಾದ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಸದ್ದು ಮಾಡಿದವು. 'ಗುರು ಶಿಷ್ಯರು' ಸಿನಿಮಾ ಮೂಲಕ ತನ್ನೊಳಗಿನ ಮತ್ತೋರ್ವ 'ಶರಣ'ನನ್ನು ಶರಣ್ ಪರಿಚಯಿಸಿದರು. 'ಅವತಾರ ಪುರುಷ'ನಾಗಿ ಕಾಣಿಸಿಕೊಂಡು ಅಷ್ಟದಿಗ್ಬಂಧನ ಮಂಡಲಕ ಭೇದಿಸಿ ಸದ್ಯ 'ಛೂ ಮಂತರ್' ಆಗಿದ್ದಾರೆ ಶರಣ್.



ಶರಣ್
ಚಿತ್ರ: ಗುರು ಶಿಷ್ಯರು

ಅಚ್ಯುತ್ ಕುಮಾರ್ ಅವರು ಸದ್ಯ ಚಂದನವನದ ನಾಯಕೇತರ ಪ್ರಮುಖ ಪಾತ್ರಗಳಿಗೆ ಜೀವ ತುಂಬುವ ನಟರಲ್ಲಿ ಒಬ್ಬರು. ರಂಗಭೂಮಿಯ ನಂಟಿನಿಂದ ಕಿರುತೆರೆಗೆ ಹೆಜ್ಜೆ ಇಟ್ಟವರು. 'ಗೃಹಭಂಗ' ಧಾರಾವಾಹಿಯ ಮುಖ್ಯಪಾತ್ರದ ಮೂಲಕ ಗುರುತಿಸಿಕೊಂಡ ಅಚ್ಯುತ್ ಅವರು ನಂತರ ಬೆಳ್ಳಿತೆರೆಗೆ ಜಿಗಿದರು. ಕಿರುತೆರೆಯಲ್ಲೂ ಅನಂತನಾಗ್ ತರಹದ ಹಿರಿಯ ನಟರ ಸಮಕ್ಕೂ ಅಭಿನಯದ ಸಾಣೆಗೆ ಒಡ್ಡಿಕೊಂಡವರು. ಜನಪ್ರಿಯ, ಕಲಾತ್ಮಕ ಎರಡೂ ಬಗೆಯ ಚಿತ್ರಗಳಲ್ಲಿ ಅಚ್ಯುತ್ ನಟಿಸಲು ಹಿಂಜರಿದವರಲ್ಲ. ಪ್ರಯೋಗಶೀಲತೆಗೆ ಸದಾ ಸಾಥ್ ನೀಡುತ್ತಾ ಬಂದವರು. ಇದಕ್ಕೆ 'ಫೋರ್ ವಾಲ್ಸ್' ಸಿನಿಮಾ ಒಂದು ಸಾಕ್ಷ್ಯ. ಕನ್ನಡದಲ್ಲಷ್ಟೇ ಅಲ್ಲದೆ ತಮಿಳು ಚಿತ್ರರಂಗದಲ್ಲೂ ಸಕ್ರಿಯರಾಗಿದ್ದಾರೆ. ಅವರ ಅಭಿನಯ ಪ್ರತಿಭೆ ರಾಷ್ಟ್ರ ಮಟ್ಟದಲ್ಲಿ ಗುರುತಾಗಲು 'ಕಾಂತಾರ' ಚಿತ್ರವೂ ಕಾರಣವಾಗಿದೆ.



ಅಚ್ಯುತ್ ಕುಮಾರ್
ಚಿತ್ರ: ಫೋರ್‌ವಾಲ್ಸ್

ಬಣ್ಣದ ಲೋಕದ ಕನಸು ಹೊತ್ತು ಹಳ್ಳಿಯಿಂದ ಗಾಂಧಿನಗರಕ್ಕೆ ಹೆಜ್ಜೆ ಇಟ್ಟು, ಕಿರುತೆರೆ ಮೂಲಕ ಬೆಳ್ಳಿತೆರೆಗೆ ಪ್ರವೇಶಿಸಿದವರು ಯಶ್. 'ಜಂಬದ ಹುಡುಗಿ' ಚಿತ್ರದ ಮೂಲಕ ಚಂದನವನದಲ್ಲಿ ಪಯಣ ಆರಂಭಿಸಿದ ಯಶ್ ಸದ್ಯ 'ರಾಕಿ ಭಾಯ್' ಆಗಿ ವಿಶ್ವದೆಲ್ಲೆಡೆ ಪರಿಚಿತರು. ಯಶ್ ಸಿನಿ ಬದುಕಿಗೆ ತಿರುವು ಕೊಟ್ಟ ಸಿನಿಮಾ ಶಶಾಂಕ್ ಅವರ ನಿರ್ದೇಶನದ 'ಮೊಗ್ಗಿನ ಮನಸು'. ಇದಾದ ಬಳಿಕ ಬಿಡುಗಡೆಗೊಂಡ 'ಮೊದಲಾಸಲ' ಸಿನಿಮಾ ಯಶ್ ಅವರ ಸಿನಿಪಯಣಕ್ಕೆ ಕಿಕ್‌ಸ್ಟಾರ್ಟ್ ನೀಡಿತು. 'ಕಿರಾತಕ', 'ಲಕ್ಕಿ', 'ಡ್ರಾಮ', 'ಗೂಗ್ಲಿ', 'ರಾಜಾಹುಲಿ', 'ಗಜಕೇಸರಿ', 'ಮಿ. ಆ್ಯಂಡ್ ಮಿಸಸ್ ರಾಮಾಚಾರಿ' ಹೀಗೆ ಸಾಲು ಸಾಲು ಸಿನಿಮಾಗಳು ಗೆದ್ದವು. 'ಕೆ.ಜಿ.ಎಫ್' ಸರಣಿ ಬಾಕ್ಸ್ ಆಫೀಸ್ ಕೊಳ್ಳೆ ಹೊಡೆಯಿತು. ಇದು ಅವರಿಗೆ ಹೊಸ ಛಾಪು ನೀಡಿತು.

ಯಶ್
ಚಿತ್ರ: ಕೆ.ಜಿ.ಎಫ್. ಚಾಪ್ಟರ್–2

ಅತ್ಯುತ್ತಮ ನಟಿ

ಸಿಹಿ-ಕಹಿ ಚಂದ್ರು ಮತ್ತು ಸಿಹಿ-ಕಹಿ ಗೀತಾ ಎಂದೇ ಪರಿಚಿತರಾದ ಚಂದ್ರಶೇಖರ್ ಮತ್ತು ಗೀತಾ ಅವರ ಮಗಳು ಹಿತಾ ಚಂದ್ರಶೇಖರ್. ಬೆಂಗಳೂರಿನ ಕ್ರೈಸ್ಟ್ ಕಾಲೇಜಿನಿಂದ ಬಿಬಿಎಮ್ ಪದವಿ ಪಡೆದು, ರಂಗಭೂಮಿಯ ನಂಟು ಹೊಂದಿ ಬೆಳ್ಳಿತೆರೆಯತ್ತ ಹೆಜ್ಜೆ ಇಟ್ಟವರು ಇವರು. ರೋಶನ್ ತನೇಜಾ ಸ್ಕೂಲ್ ಆಫ್ ಆ್ಯಕ್ಟಿಂಗ್‌ನಲ್ಲಿ ಡಿಪ್ಲೊಮಾ ಕೋರ್ಸ್ ಬಳಿಕ, 2014ರಲ್ಲಿ ಕನ್ನಡ ಚಿತ್ರರಂಗ ಪ್ರವೇಶಿಸಿದರು. 2015ರಲ್ಲಿ '1/4 ಕೆಜಿ ಪ್ರೀತಿ'ಯಲ್ಲಿ ನಾಯಕಿಯಾಗಿ ನಟಿಸಿದ ಹಿತಾ, ಬಳಿಕ 'ಯೋಗಿ ದುನಿಯಾ'ದಲ್ಲೂ ಲೀಡ್ ರೋಲ್‌ನಲ್ಲಿ ಕಾಣಿಸಿಕೊಂಡರು. ನಂತರ 'ಒಂಥರಾ ಬಣ್ಣಗಳು', 'ಪ್ರಿಮೀಯರ್ ಪದ್ಮಿನಿ', 'ಶುಭಮಂಗಳ', 'ತುರ್ತು ನಿರ್ಗಮನ'ದಲ್ಲಿ ಗಮನಸೆಳೆದರು.

ಹಿತಾ ಚಂದ್ರಶೇಖರ್
ಚಿತ್ರ: ತುರ್ತು ನಿರ್ಗಮನ

ಶಾಲಾ ದಿನಗಳಿಂದ ನಾಟಕಗಳಲ್ಲಿ ಪಾತ್ರಗಳಿಗೆ ಜೀವ ತುಂಬುತ್ತಿದ್ದ ಲಕ್ಷ್ಮಿ ಚಂದ್ರಶೇಖರ್ ಅವರಿಗೆ ಅಭಿನಯದಲ್ಲಿ ಐದು ದಶಕಗಳ ಅನುಭವವಿದೆ. 'ಮಾಯಾಮೃಗ' ಧಾರಾವಾಹಿಯಲ್ಲಿ 'ಕಮಲು' ಪಾತ್ರದಿಂದ ಜನಪ್ರಿಯರಾಗಿರುವ ಇವರು 'ಗೃಹಭಂಗ', 'ಚುಕ್ಕಿ', 'ಮಂಥನ' ಸೇರಿದಂತೆ 20ಕ್ಕೂ ಅಧಿಕ ಧಾರಾವಾಹಿಗಳಲ್ಲಿ ನಟಿಸಿದ್ದಾರೆ. ವಿಜಯಾ ಕಾಲೇಜಿನಲ್ಲಿ ಕೆಲ ಸಮಯ ಕೆಲಸ ಮಾಡಿ 'ಸಮುದಾಯ' ಪ್ರವೇಶಿಸಿದವರು ಇವರು. ಎನ್‌ಎಂಕೆಆರ್‌ವಿ ಕಾಲೇಜಿನಲ್ಲಿ ಪ್ರಾಧ್ಯಾಪಕಿಯಾಗಿಯೂ ಕೆಲಸ ಮಾಡಿದವರು. 'ಪ್ರೀತಿಯಿಂದ', 'ಜ್ಯೋತಿ ಅಲಿಯಾಸ್ ಕೋತಿರಾಜ್' ಸಿನಿಮಾದಲ್ಲಿ ಪ್ರಮುಖ ಪಾತ್ರ ಮಾಡಿದ್ದಾರೆ. ಇಲ್ಲಿಯವರೆಗೂ ಸುಮಾರು 30 ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ. 'ಒಂಬತ್ತು ಸುಳ್ಳು ಕಥೆಗಳು' ಚಿತ್ರದ ಒಂದು ಕಥೆಯಲ್ಲಿ ಮುಖ್ಯ ಪಾತ್ರಧಾರಿ ಇವರು.

ಲಕ್ಷ್ಮಿ ಚಂದ್ರಶೇಖರ್
ಚಿತ್ರ: 9 ಸುಳ್ಳು ಕಥೆಗಳು

ನಟ ರಕ್ಷಿತ್ ಶೆಟ್ಟಿ ಅವರ ಪರಂವಃ ಸ್ಟುಡಿಯೋಸ್ ನಿರ್ಮಾಣದ 'ಸಕುಟುಂಬ ಸಮೇತ' ಚಿತ್ರದ ಮೂಲಕ ಚಂದನವನದಲ್ಲಿ ಗುರುತಿಸಿಕೊಂಡಿರುವ ನಟಿ ಸಿರಿ. ಮೂಲತಃ ಆರ್‌ಜೆ, ರೂಪದರ್ಶಿ, ನಿರೂಪಕಿಯಾಗಿರುವ ಸಿರಿ, ಸದ್ಯ ನಟ ರಾಜ್ ಬಿ.ಶೆಟ್ಟಿ ನಾಯಕರಾಗಿ ನಟಿಸಿರುವ 'ಸ್ವಾತಿ ಮುತ್ತಿನ ಮಳೆ ಹನಿಯೇ' ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ್ದಾರೆ. ನಟಿ ರಮ್ಯಾ ಅವರ ನಿರ್ಮಾಣ ಸಂಸ್ಥೆ ಆ್ಯಪಲ್ ಬಾಕ್ಸ್ ಸ್ಟುಡಿಯೋಸ್‌ನ ಮೊದಲ ಚಿತ್ರ ಇದಾಗಿದೆ. ಈ ಚಿತ್ರದ ಜೊತೆಗೆ 'ಅಬ್ರಕಡಾಬ್ರ' ಹಾಗೂ ಅಭಿಜಿತ್ ಮಹೇಶ್ ನಿರ್ದೇಶನದ, ಪರಂವಃ ಸ್ಟುಡಿಯೋಸ್ ನಿರ್ಮಾಣದ 'ಬ್ಯಾಚುಲರ್ ಪಾರ್ಟಿ' ಸಿನಿಮಾದಲ್ಲೂ ಸಿರಿ ಬಣ್ಣ ಹಚ್ಚಿದ್ದಾರೆ.

ಸಿರಿ ರವಿಕುಮಾರ್
ಚಿತ್ರ: ಸಕುಟುಂಬ ಸಮೇತ

ಕಿರುತೆರೆಯಿಂದ ಬೆಳ್ಳಿತೆರೆಗೆ ಕಾಲಿಟ್ಟು ಮಿಂಚುತ್ತಿರುವ ನಟಿಯರ ಪೈಕಿ ಗಾನವಿ ಕೂಡಾ ಒಬ್ಬರು. ಟಿ.ಎನ್. ಸೀತಾರಾಂ ನಿರ್ದೇಶನದ 'ಮಗಳು ಜಾನಕಿ' ಧಾರಾವಾಹಿ ಮೂಲಕ ಮನೆಮಾತಾಗಿರುವ ಗಾನವಿ ಚಿಕ್ಕಮಗಳೂರಿನವರು. ರಂಗಭೂಮಿಯ ನಂಟೂ ಇವರಿಗಿದೆ. ಇವರು ತಮ್ಮ ವೃತ್ತಿಜೀವನವನ್ನು ಮೊದಲು ಆರಂಭಿಸಿದ್ದು ವಸತಿ ಶಾಲೆಯೊಂದರಲ್ಲಿ ನೃತ್ಯ ಶಿಕ್ಷಕಿಯಾಗಿ. ನಟ ರಿಷಬ್ ಶೆಟ್ಟಿ ನಟನೆಯ 'ಹೀರೋ' ಸಿನಿಮಾ ಮೂಲಕ ಬೆಳ್ಳಿತೆರೆಗೆ ಕಾಲಿಟ್ಟು, ನಟ ಶಿವರಾಜ್‌ಕುಮಾರ್ ಅವರ 125ನೇ ಸಿನಿಮಾ 'ವೇದ'ದಲ್ಲಿ 'ಪುಷ್ಪ' ಪಾತ್ರದಲ್ಲಿ ಮಿಂಚಿದವರು. 'ಭಾವಚಿತ್ರ' ಇವರ ಮತ್ತೊಂದು ಸಿನಿಮಾ. ಅವರ ತೆಲುಗಿನ ಮೊದಲ ಚಿತ್ರ 'ರುದ್ರಾಂಗಿ'ಯ ಚಿತ್ರೀಕರಣ ಪೂರ್ಣಗೊಂಡಿದ್ದು ಇನ್ನಷ್ಟೇ ಬಿಡುಗಡೆಯಾಗಬೇಕಿದೆ.

ಗಾನವಿ ಲಕ್ಷ್ಮಣ್
ಚಿತ್ರ: ವೇದ

ಮಾತಿನ ಬೆನ್ನೇರಿ ವೇದಿಕೆ ಏರಿದವರು ಅದಿತಿ. ಕಿರುತೆರೆಗೆ ಮೊದಲ ಹೆಜ್ಜೆ ಇಟ್ಟು, 'ನಾಗಕನ್ನಿಕೆ'ಯಾಗಿ ಗಾಂಧಿನಗರದ ಗಮನ ಸೆಳೆದವರು. 'ಧೈರ್ಯಂ' ಸಿನಿಮಾ ಮೂಲಕ ಹಿರಿತೆರೆಗೆ ಜಿಗಿದರು. ಅತಿ ಹೆಚ್ಚು ಸಿನಿಮಾ ಬ್ಯಾಂಕ್ ಹೊಂದಿರುವ ನಟಿಯರ ಪೈಕಿ ಅದಿತಿ ಒಬ್ಬರು. ವಿಜಯ್ ಪ್ರಸಾದ್ ನಿರ್ದೇಶನದ 'ತೋತಾಪುರಿ' ಸರಣಿ, 'ಓಲ್ಡ್ ಮಾಂಕ್', 'ತ್ರಿಬಲ್ ರೈಡಿಂಗ್' ಮಾಡಿ, 'ಆನ'ದಂಥ ನಾಯಕಿಪ್ರಧಾನ ಸಿನಿಮಾದಲ್ಲೂ ಬಣ್ಣಹಚ್ಚಿದವರು. 'Once upon a time in ಜಮಾಲಿಗುಡ್ಡ' ಸಿನಿಮಾದಲ್ಲಿ ಅದಿತಿ ಪಾತ್ರ ಮೆಚ್ಚುಗೆ ಪಡೆಯಿತು. ಇವರ ನಟನೆಯ 'ತೋತಾಪುರಿ-2', 'ಅದೊಂದಿತ್ತು ಕಾಲ', '5ಡಿ', 'ಮಾಫಿಯಾ', 'ಮ್ಯಾಟ್ನಿ' ಬಿಡುಗಡೆ ಹಂತದಲ್ಲಿವೆ.

ಅದಿತಿ ಪ್ರಭುದೇವ
ಚಿತ್ರ: Once upon a time in ಜಮಾಲಿಗುಡ್ಡ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ 'ದೆಹಲಿಯಲ್ಲಿರುವ ಸರ್ಕಾರದ ವಿವಿಧ ಇಲಾಖಾ ಕಚೇರಿಗಳು ಬಾಡಿಗೆ ಕಟ್ಟಡಗಳಲ್ಲಿ ಇವೆ. ವರ್ಷಕ್ಕೆ ಅಂದಾಜು ₹600 ಕೋಟಿ ಬಾಡಿಗೆ ಕಟ್ಟಲಾಗುತ್ತಿದೆ. ಈ ಎಲ್ಲಾ ಕಟ್ಟಡಗಳ ಮಾಲೀಕರು ಕಾಂಗ್ರೆಸ್ಸಿಗರು, ಎಡಪಕ್ಷಗಳವರು, ಕೆಲ ಪತ್ರಕರ್ತರು. ಮೋದಿಜೀ ಈಗ ಆ ಎಲ್ಲಾ ಕಟ್ಟಡಗಳನ್ನು ಹೊಸ ಸಂಸತ್ ಭವನಕ್ಕೆ ಸ್ಥಳಾಂತರಿಸಲಿದ್ದಾರೆ. ಮೋದಿ ಅವರು, ಎರಡು ವರ್ಷದ ಬಾಡಿಗೆ ಹಣದಲ್ಲಿ ಹೊಸ ಸಂಸತ್ ಭವನ ಕಟ್ಟಡವನ್ನೇ ನಿರ್ಮಿಸಿದ್ದಾರೆ. ತಮಗೆ ಬರುವ ಬಾಡಿಗೆ ಹಣ ಖೋತಾ ಆಯಿತು ಎಂದು ವಿರೋಧ ಪಕ್ಷಗಳು ಬಾಯಿಬಡಿದುಕೊಳ್ಳುತ್ತಿವೆ' ಎಂಬ ವಿವರ ಇರುವ ಪೋಸ್ಟ್ ಮತ್ತು ಪೋಸ್ಟರ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಆದರೆ, ಇದು ತಪ್ಪು ಮಾಹಿತಿ.

✓ ದೆಹಲಿಯಲ್ಲಿರುವ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ಕಚೇರಿಗಳು ಬಾಡಿಗೆ ಕಟ್ಟಡದಲ್ಲಿವೆ. ಅದಕ್ಕೆ ವಾರ್ಷಿಕ ಸುಮಾರು ₹1,000 ಕೋಟಿ ಬಾಡಿಗೆ ಕಟ್ಟಬೇಕು ಎಂದು 2020ರಲ್ಲಿ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿತ್ತು. ಆದರೆ ಈ ಬಗ್ಗೆ ವಿವರ ನೀಡಿರಲಿಲ್ಲ. ಇನ್ನು ಈ ಬಗ್ಗೆ ಲೋಕಸಭೆಯಲ್ಲಿ ಪ್ರಶ್ನಿಸಿದಾಗ, 'ಯಾವ ಕಚೇರಿಗಳು ಬಾಡಿಗೆ ಕಟ್ಟಡಗಳಲ್ಲಿಇವೆ, ಕಟ್ಟಡಗಳ ಮಾಲೀಕರು ಯಾರು ಮತ್ತು ಕಟ್ಟಲಾಗುತ್ತಿರುವ ಬಾಡಿಗೆ ಎಷ್ಟು ಎಂಬುದರ ಬಗ್ಗೆ ಮಾಹಿತಿ ಲಭ್ಯವಿಲ್ಲ' ಎಂದು ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯವು 2021ರ ಜುಲೈನಲ್ಲಿ ಮಾಹಿತಿ ನೀಡಿತ್ತು. ಹೀಗಾಗಿ ವಿರೋಧ ಪಕ್ಷಗಳ ನಾಯಕರ ಕಟ್ಟಡಗಳಲ್ಲಿ ಸರ್ಕಾರಿ ಕಚೇರಿಗಳು ಬಾಡಿಗೆಗೆ ಇವೆ ಎಂಬ ಆರೋಪಕ್ಕೆ ಆಧಾರವಿಲ್ಲ. ಜತೆಗೆ ₹600 ಕೋಟಿ ಬಾಡಿಗೆ ಕಟ್ಟಲಾಗುತ್ತಿದೆ ಎಂಬುದೂ ಸುಳ್ಳು ಮಾಹಿತಿ. ಇನ್ನು ಸೆಂಟ್ರಲ್ ವಿಸ್ತಾ ಯೋಜನೆ ಅಡಿ ಹಲವು ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ಸೆಂಟ್ರಲ್ ವಿಸ್ತಾ ಯೋಜನೆಯ ವೆಚ್ಚ ₹20,000 ಕೋಟಿ. ಆ ಕಟ್ಟಡಗಳಿಗೆ ಎಲ್ಲಾ ಸರ್ಕಾರಿ ಕಚೇರಿಗಳನ್ನು ಸ್ಥಳಾಂತರಿಸಲಾಗುತ್ತಿದೆ. ಆ ಕಚೇರಿಗಳನ್ನು ನೂತನ ಸಂಸತ್ ಭವನಕ್ಕೆ ಸ್ಥಳಾಂತರಿಸುತ್ತಿಲ್ಲ. ವೈರಲ್ ಆಗಿರುವ ಪೋಸ್ಟ್ ಮತ್ತು ಪೋಸ್ಟರ್‌ನಲ್ಲಿ ಇರುವ ಮಾಹಿತಿ ತಪ್ಪಾಗಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಅವಿನಾಶಿ ಆತ್ಮ

ಭೌತವಿಜ್ಞಾನ ವಿವರಗಳಿನೇನಾತ್ಮಂಗೆ ? |
ಪ್ರೇತ ಪ್ರಯಾಣ ಕಥೆಯೆಂತರೊಡ್ಡೇನು ? ||
ಜಾತಿ ನೀತಿ ಸಮಾಜ ವರ್ಗ ಭೇದದಿನೇನು ? |
ಘಾತಿಯಿಲ್ಲಾತ್ಮಂಗೆ – ಮಂಕುತಿಮ್ಮ || **896** ||

ಪದ-ಅರ್ಥ: ವಿವರಗಳಿನೇನಾತ್ಮಂಗೆ = ವಿವರಗಳಿಂ+ಏನು + ಆತ್ಮಂಗೆ, ಪ್ರೇತಪ್ರಯಾಣಕಥೆಯೆಂತರೊಡ್ಡೇನು = ಪ್ರೇತ + ಪ್ರಯಾಣ + ಕಥೆ + ಎಂತರೊಡ್ಡೆ (ಎಂತಿದ್ದರೆ) + ಏನು, ವರ್ಗಭೇದದಿನೇನು = ವರ್ಗಭೇದದಿನ್ + ಏನು, ಘಾತಿಯಿಲ್ಲಾತ್ಮಂಗೆ = ಘಾತಿಯಿಲ್ಲ (ನಾಶವಿಲ್ಲ) + ಆತ್ಮಂಗೆ.

ವಾಚ್ಯಾರ್ಥ: ಭೌತವಿಜ್ಞಾನದ ವಿವರಗಳಿಂದ ಆತ್ಮನಿಗೆ ಏನು ಪ್ರಯೋಜನ? ಪ್ರೇತದ ಪ್ರಯಾಣ ಕಥೆ ಹೇಗಿದ್ದರೇನು? ಜಾತಿ, ನೀತಿ, ಸಮಾಜ, ವರ್ಗಭೇದದಿಂದ ಏನು? ಆತ್ಮನಿಗೆ ನಾಶವಿಲ್ಲ.

ವಿವರಣೆ: ಈ ಕಗ್ಗ ಮೂರು ಅವಸ್ಥೆಗಳನ್ನು ಗುರುತಿಸುತ್ತದೆ. ಒಂದು ಬದುಕಿನ ಕಥೆ, ಎರಡನೆಯದು ಮರಣಾನಂತರದ ಕಥೆ, ಮೂರನೆಯದು ಬದುಕಿನಲ್ಲಿ ವ್ಯವಸ್ಥೆಯ ಕಥೆ. ನಮ್ಮ ಬದುಕು ಇರುವುದೇ ಪ್ರಪಂಚದಲ್ಲಿ. ನಮ್ಮ ವ್ಯವಹಾರಗಳೆಲ್ಲ ಭೌತವಸ್ತುಗಳೊಡನೆ. ಪ್ರತಿಯೊಂದು ವಸ್ತುವಿಗೆ ಅದರದೇ ಆದ ಆಕಾರ, ರೂಪ, ಬಣ್ಣ, ವಾಸನೆ ಎಲ್ಲ ಇವೆ. ಅವುಗಳಿಂದಲೇ ನಮಗೆ ವಸ್ತುವಿನ ಪರಿಚಯ ಮತ್ತು ನೆನಪು. ಅವುಗಳನ್ನು ಅಳೆಯುವುದಕ್ಕೆ ನಮ್ಮಲ್ಲಿ ಮಾಪನಗಳಿವೆ. ನಮ್ಮ ಭೌತವಿಜ್ಞಾನ ಇವುಗಳನ್ನು ಕರಾರುವಕ್ಕಾಗಿ ಹೇಳಲು ಸನ್ನದ್ಧವಾಗಿ ನಿಂತಿದೆ. ಸಣ್ಣ ಧೂಳಿಕಣದಿಂದ ಹಿಡಿದು ಸೂರ್ಯನ ಗಾತ್ರದ ವರೆಗೆ ಸ್ಪಷ್ಟ ಮಾಹಿತಿಯನ್ನು ಈ ವಿಜ್ಞಾನ ಕೊಟ್ಟಿದೆ. ಇವೆಲ್ಲ ಬೇಕಾದದ್ದು ಮನುಷ್ಯ ದೇಹಕ್ಕೆ. ಆದರೆ ಆತ್ಮನಿಗೆ ಈ ಅಳತೆ, ಸಂಬಂಧಗಳಿಂದ ಏನಾಗಬೇಕು? ಅದರ ಸಂಬಂಧ ಏನಿದ್ದರೂ ಅವಿನಾಶಿಯಾದದ್ದರ ಜೊತೆಗೆ, ನಾಶವಾಗುವ ಭೌತವಸ್ತುಗಳೊಡನೆ ಅಲ್ಲ. ವ್ಯಕ್ತಿ ಸತ್ತ ಮೇಲೆ ಏನಾಗುತ್ತದೆ? ಇದರ ಬಗ್ಗೆ ಅನೇಕ ಜಿಜ್ಞಾಸೆಗಳು ಹುಟ್ಟಿಕೊಂಡಿವೆ. ಏನಾಗುತ್ತದೋ ಯಾರಿಗೆ ಗೊತ್ತು? ಹೋಗಿ ಮರಳಿ ಬಂದವರಿಲ್ಲ, ವರದಿ ಕೊಟ್ಟವರಿಲ್ಲ. ಆದರೂ ಮನುಷ್ಯನ ಮನಸ್ಸು ಕುತೂಹಲದಿಂದ ಏನೇನೋ ಊಹೆ ಮಾಡಿ ಕಥೆ ಕಟ್ಟಿ, ಆತ್ಮದ ಪ್ರಯಾಣ ಹೇಗಿರುತ್ತದೆಂದು ವರ್ಣಿಸಲು ಪ್ರಯತ್ನಿಸಿದ್ದಾರೆ. ಅದು ಹೇಗೆ ನೋವು ಪಡುತ್ತದೆ, ಕಷ್ಟವನ್ನು ಅನುಭವಿಸುತ್ತದೆ ಎಂದು ಕರಳು ಕಿವುಚುವಂಥ ವಿವರ ನೀಡಿದ್ದಾರೆ. ಆದರೆ ಕಗ್ಗ ಹೇಳುತ್ತದೆ, ಆತ್ಮನಿಗೆ ಯಾವ ನೋವೂ ಇಲ್ಲ, ಅದು ಪರಸತ್ವದ ಒಂದು ಕಿಡಿ. ಮತ್ತೆ ಪರಮಸತ್ವದಲ್ಲಿ ಕರಗಿ ಮರೆಯಾಗುವುದೇ ಅದರ ಗತಿ. ಹಾಗಿದ್ದಾಗ ಪ್ರೇತ ಪ್ರಯಾಣ ಕಥೆಯಿಂದ ಆತ್ಮನಿಗೆ ಆಗುವುದೇನು? ಸಮಾಜದಲ್ಲಿ ಬದುಕುವಾಗ ಜಾತಿ, ನೀತಿ, ವರ್ಗಭೇದ ಎಂಬ ಅನೇಕ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದೇವೆ. ಅವೆಲ್ಲ ಭೌತಕ ಪ್ರಪಂಚಕ್ಕೆ, ಈ ದೇಹಕ್ಕೆ ಸಂಬಂಧಿಸಿದವುಗಳು. ಆದರೆ ನಿರ್ಲಿಪ್ತವಾದ ಆತ್ಮಕ್ಕೆ ಇವು ಯಾವುದರ ಸಂಬಂಧವೂ ಇಲ್ಲ. ಅದಕ್ಕೆ ಕೊನೆಗೆ ಕಗ್ಗ ಘೋಷಿಸುತ್ತದೆ, "ಆತ್ಮಂಗೆ ಯಾವ ಘಾತಿಯೂ ಇಲ್ಲ. ಭೌತವಿವರಗಳಿಂದ, ಪ್ರೇತಪ್ರಯಾಣದ ಕಥೆಗಳಿಂದ, ಸಮಾಜ ವ್ಯವಸ್ಥೆಗಳಿಂದ ಆತ್ಮಕ್ಕೆ ಯಾವ ಹಾನಿಯೂ ಇಲ್ಲ. ಯಾಕೆಂದರೆ ಅದು ಇವು ಯಾವುಗಳಿಗೂ ಸಂಬಂಧಿಸಿದ್ದಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜೂನ್ 1, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ದ್ವಾದಶಿ ಗಂ. 13-40 ನಕ್ಷತ್ರ: ಚಿತ್ತಾ ಗಂ. 6-48 ಯೋಗ: ವರಿಯಾನ್ ಗಂ. 18-59, ಕರಣ: ಬಾಲವ ಗಂ. 13-40, ವೃಷಭ ಮಾಸದ 17ನೇ ದಿನ, ಮಳೆನಕ್ಷತ್ರ: ರೋಹಿಣಿ 2. ರಾಹುಕಾಲ : ಮಧ್ಯಾಹ್ನ 01-30 – 03-00, ಸೂರ್ಯೋದಯ : 06-06 ಸೂರ್ಯಾಸ್ತ : 06-50
ಮುಸ್ಲಿಂ ದಿನಾಂಕ : 12 ಜುಲ್ಖಾಯದ್
ದಿನ ವಿಶೇಷ : ಚಂಪಕ ದ್ವಾದಶಿ
ಅದೃಷ್ಟ ಸಂಖ್ಯೆ : 3, 7

ಮೇಷ: ಗೃಹ ಸಾಮಗ್ರಿ ವಸ್ತುಗಳ ಖರೀದಿಯಿಂದ ಅಧಿಕ ಖರ್ಚು ಬರುವುದು. ತೀರ್ಪುಗಳನ್ನು ನೀಡುವುದು ಅಥವಾ ಇನ್ನೊಬ್ಬರನ್ನು ಪರೀಕ್ಷಿಸುವ ಕೆಲಸ ಈ ದಿನ ನಿಮಗೆ ಸರಿಯಲ್ಲ. ಆಫೀಸಿನ ಕೆಲಸ ಕಾರ್ಯ ಹೆಚ್ಚೆನಿಸುವುದು.

ವೃಷಭ: ಇಂದಿನ ನಿಮ್ಮ ನಡವಳಿಕೆ ಸಮಾಜದಲ್ಲಿ ಎಲ್ಲರ ಕೇಂದ್ರ ಬಿಂದುವಾಗಲಿದೆ. ವಕೀಲರು, ನ್ಯಾಯಾಂಗ ಇಲಾಖಾ ಅಧಿಕಾರಿಗಳು ಹೆಚ್ಚಿನ ಪ್ರಗತಿ ಕಾಣುವರು. ಇತರರ ಭಾವನೆಗಳಿಗೆ ಆದ್ಯತೆ ನೀಡುವುದು ಅನಿವಾರ್ಯ.

ಮಿಥುನ: ಹಣಕಾಸಿನ ವಹಿವಾಟು ಉತ್ತಮವಾಗಿದ್ದು ಮಾರಾಟ ಕ್ಷೇತ್ರವನ್ನು ಹೆಚ್ಚಿಸಿಕೊಳ್ಳುವಿರಿ. ಖಾದ್ಯ ತೈಲಗಳ ಮಾರಾಟ ಉತ್ತಮವಾಗಿದ್ದು ಲಾಭಾಂಶ ಹೆಚ್ಚುವುದು. ಧೈರ್ಯ ಸಾಮರ್ಥ್ಯದಿಂದ ಉತ್ತೇಜನ ಪಡೆಯುವಿರಿ.

ಕರ್ಕಾಟಕ: ಹಲವು ಕಾರಣಗಳಿಗೆ ಸ್ನೇಹಿತರು ಮಾರ್ಗದರ್ಶನ, ಬೆಂಬಲ ಹಾಗೂ ಸಹಕಾರವನ್ನು ಅಪೇಕ್ಷಿಸುವಂತಾಗುವುದು. ಖಾದಿ ಉದ್ಯಮದವರಿಗೆ ಸರಕಾರದಿಂದ ಸಹಾಯ ಸೌಲಭ್ಯ ದೊರೆಯಲಿದೆ.

ಸಿಂಹ: ಅಕ್ಕ ಪಕ್ಕದವರಲ್ಲಿ ಅನವಶ್ಯಕ ಸಂಬಂಧವಿರದ ವಿಚಾರಕ್ಕೆ ಸಲಹೆ ಹೇಳಿದರೆ ನಿಷ್ಠುರವಾಗುವುದು ಖಚಿತ. ವ್ಯವಹಾರಗಳ ಬಗ್ಗೆ ಗಮನ ಹರಿಸುವುದು ಸರಿ ಎನಿಸಲಿದೆ. ಷೇರು ವ್ಯಾಪಾರ ಅದೃಷ್ಟದಾಯಕವಾಗಿರುತ್ತದೆ.

ಕನ್ಯಾ: ಸ್ವಯಂ ಸಾಮರ್ಥ್ಯದಿಂದ ಅವಕಾಶಗಳನ್ನು ಪಡೆದುಕೊಳ್ಳುವ ಹಾದಿ ನೋಡಿರಿ. ಜಗದ್ಗುರುವಿನ ಸೇವೆಯಿಂದ ಪುಣ್ಯ ಪ್ರಾಪ್ತಿಯಾಗುವುದರ ಜತೆಗೆ ಶುಭ ದೊರಕುವುದು. ನಾಯಕತ್ವದ ಗುಣಗಳನ್ನು ಪ್ರದರ್ಶಿಸುವುದರಿಂದಲಾಭ.

ತುಲಾ: ಹಲವು ಕಾಲದಿಂದ ನಿಂತು ಹೋಗಿದ್ದ ಕೆಲಸಗಳು ದೈವಾನುಗ್ರಹದಿಂದ ಆರಂಭವಾಯಿತೆಂದು ಸಂತೋಷ ಪಡುವಿರಿ. ಕೆಲಸದತ್ತ ಹೆಚ್ಚಿನ ಗಮನ ಹರಿಸುವಿರಿ. ವಿದ್ಯಾರ್ಥಿಗಳಿಗೆ ಇಂದು ಸಾಧನೆಗೆ ಪೂರಕವಾದ ದಿನವಾಗಿದೆ.

ವೃಶ್ಚಿಕ: ಯೋಜನೆಗಳ ಕುರಿತು ಸ್ಪಷ್ಟ ಮಾಹಿತಿಗಳನ್ನು ಕಲೆಹಾಕುವುದರಿಂದ ಮಾರ್ಗಮಧ್ಯದ ಅಡೆತಡೆಗಳು ನಿವಾರಣೆಯಾಗಲಿವೆ. ಭಾಷಾ ಅಧ್ಯಾಪಕರಿಗೆ ಮತ್ತು ನಾಟಕ ಕಲಾವಿದರಿಗೆ ಹೆಚ್ಚಿನ ಮನ್ನಣೆ ಸಿಗುವುದು.

ಧನು: ಸೋದರನ ಆಗಮನದಿಂದ ಮನೆಯಲ್ಲಿ ಹೆಚ್ಚಿನ ಸಂಭ್ರಮದ ವಾತಾವರಣ ಇರುವುದು. ನಿಮ್ಮ ಚಾಣಾಕ್ಷತನದಿಂದ ಪ್ರತಿಸ್ಪರ್ಧಿಗಳು ದೂರಾಗುವರು.

ಮಕರ: ಕೋಪದ ಮತ್ತು ದಡ್ಡತನದ ತೀರ್ಮಾನದಿಂದ ಪಶ್ಚಾತಾಪ ಪಡುವಂತಹ ಘಟನೆ ನಡೆಯುವುದು. ಕೃಷಿಕರಿಗೆ ತೋಟದ, ಹೊಲದ ಕೆಲಸಗಳು ಸರಾಗವಾಗಿ ನಡೆಯುವಂತಾಗಲಿದೆ.

ಕುಂಭ: ಮನೆಯ ಪರಿಸ್ಥಿತಿಯು ಸುಧಾರಿಸುವುದು. ಹಣಕಾಸಿನ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ಹಿರಿಯರನ್ನು ನೋಡಿಕೊಳ್ಳುವ ಕರ್ತವ್ಯಗಳಿಂದ ತಪ್ಪಿಸಿಕೊಳ್ಳಬೇಡಿ. ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಸಹನೆಯಿಂದ ಇರಿ.

ಮೀನ: ಎಲ್ಲರೊಂದಿಗೆ ಬೆರೆಯುವ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಸಂದರ್ಭವೊಂದು ಬರಲಿದೆ. ಹಿರಿಯರ ಮಾತಿನಂತೆ ನಡೆದುಕೊಳ್ಳುವ ನಿರ್ಧಾರ ಶುಭಪ್ರದವಾಗುತ್ತದೆ.

ಪದಬಂಧ 5336

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗೆ ಜಯವಿದ್ದರೂ ಇದು ಸೋಲು! (4)
3.ಅಂಗೈಯಿಂದ ಕೆನ್ನೆಗೆ ಕೊಡುವ ಏಟು (4)
5.ಈತ ಲಗ್ನವಾಗುತ್ತಿರುವವ (4)
7.ಉತ್ಸುಕತೆ ಈ ತರಹ ಬಂದಿದೆ (3)
8.ನೆಲಗೊಳಿಸುವುದು (5)
11.ಸತಿ ನೀಡಿದ ಒಪ್ಪಿಗೆ (3)
12.ಈತ ಹಂಚಿಕೆದಾರ (4)
14.ಪಾಂಡವರಿಗೂ ಕೌರವರಿಗೂ ಯುದ್ಧ ನಡೆದ ಸ್ಥಳ (4)
15.ಲೆಕ್ಕ ಬರೆಯುವವನು ಇಲ್ಲಿದ್ದಾನೆ (4)

ಮೇಲಿಂದ ಕೆಳಕ್ಕೆ

1.ರಾಜನ ಗೃಹವಿದು (4)
2.ಜನ್ಮವಿಲ್ಲಿ ವಿರಳವಾಗಿ ಬಂದಿದೆ (3)
4.ವರ ಪಡೆದು ಹುಟ್ಟಿದ ಮಗ (3)
6.ಈಕೆ ಪತಿವ್ರತೆ (3)
7.ಕಾಮನಿಂದ ಮೂಡಿದ ಅತಿಯಾದ ಆಸೆ (3)
8.ಏಳಿಗೆಯನ್ನು ಹೀಗೆನ್ನಿ (3)
9.ಪದ ಹೇಳಿ ಪಡೆದ ಡಿಗ್ರಿ (3)
10.ಇದು ಕಳಂಕವಿಲ್ಲದ್ದು (4)
11.ಸರಕ್ಕನೆ ತಂದಿರುವ ಸಾಮಾನು (3)
13.ಆಸಕ್ತನಾದವನು ತರದೊಳಗಿದ್ದಾನೆ (3)



5335ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಕಪ್ಪ 4.ಪದರ
5.ಯವನಿಕೆ 6.ತಾರಾಪುಂಜ
7.ದಾನವ 9.ನಗದು
13.ವಾತಾಯನ 14.ಮಧುಮಾಸ
15.ಚುಂಬನ 16.ಕಂಬಿ

ಮೇಲಿಂದ ಕೆಳಕ್ಕೆ:
1.ತಾಪತ್ರಯ 2.ಕರತಾಡನ
3.ವನಿತ 5.ಯಜಮಾನ
8.ವನವಾಸ 10.ಗಗನಚುಂಬಿ
11.ನವನಟ 12.ಮಧುರ

ಸುಡೊಕು 5722

4			3		8			2
		1		6		3	8	
9					2			6
							6	
	2	6	9	4	7			
	4		6		1		7	5
			1		9	8		
8		7					9	
1	9		8		6	4		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5721 ಸುಡೊಕು

1	5	8	4	3	2	9	7	6
3	7	6	9	8	1	2	4	5
9	2	4	6	5	7	1	8	3
8	9	5	2	7	4	6	3	1
4	6	1	5	9	3	7	2	8
7	3	2	1	6	8	5	9	4
5	4	9	3	2	6	8	1	7
2	1	7	8	4	5	3	6	9
6	8	3	7	1	9	4	5	2

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 300-350
ನಡುಗೋಲು 450-500
ರಾಶಿ 500-550
ರಾಶಿ ಉತ್ತಮ 750-800
ಜರಡಿ 1000 - 1050
ಹೆರಕಿದ್ದು 1200-1300
ಹಸಿರು ಸಾಧಾರಣ 800-900
ಹಸಿರು ಉತ್ತಮ 1000-1100
ಹಸಿರು ಅತಿ ಉತ್ತಮ 1600-1650
ಕಾಳು ಮೆಣಸು - 475
ಅಡಿಕೆ
ಬಂಟ್ವಾಳ
ಕೋಕ 1 2500-25000
ಹೊಸತು 27500-40500
ಹಳತು 48000-53000
ಕುಮಟಾ
ಚಿಪ್ಪು 29509-32899
ಕೋಕ 20169-32499
ಫ್ಯಾಕ್ಟರಿ 14509-22309
ಹಳೆಚಾಲಿ 36099-39119
ಹೊಸಚಾಲಿ 35599-37449
ಶಿವಮೊಗ್ಗ
ಬೆಟ್ಟೆ 49509-54599
ಗೊರಬಲು 18009-36159
ರಾಶಿ 35500-50019
ಸರಕು 56069-83170
ಸಿದ್ದಾಪುರ
ಬಿಳಿಗೋಟು 28999-32899
ಚಾಲಿ 35689-37700
ಕೋಕ 27499-32699
ಹಳೆಚಾಲಿ 34899-37600
ಕೆಂಪುಗೋಟು 28811-32399
ರಾಶಿ 43079-47929
ತಟ್ಟಿಬೆಟ್ಟೆ 38309-44099
ಶಿರಸಿ
ಬೆಟ್ಟೆ 37019-45399
ಬಿಳಿಗೋಟು 22899-32968
ಚಾಲಿ 34898-38569
ಕೆಂಪುಗೋಟು 30009-36099
ರಾಶಿ 43099-47599

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15000	15000	15100	177.10 ಸೆಂಟ್ಸ್
ಎಸಿ	7980	7800	7650	
ಆರ್‌ಪಿ	10500	10750	10675	ಲಂಡನ್
ಆರ್‌ಸಿ	5910	5900	5900	2562 ಡಾಲರ್ಸ್

ಷೇರುಪೇಟೆ ವಹಿವಾಟು

346



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ 18633
ಇಂದಿನ ಅಂತ್ಯ 18534
▼ 99
ದಿನದ ಗರಿಷ್ಠ 18603

ಕೊಬ್ಬರಿ ಧಾರಣೆ

ಕೆ.ಆರ್. ಪೇಟೆ (ಇತರ) ₹7900-7950
ತುಮಕೂರು (ಇತರ) ₹8200-9000
ತಿಪಟೂರು ₹8500-9000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹550
12 ಮೊಟ್ಟೆಗೆ ₹73
ಮೈಸೂರು
100 ಮೊಟ್ಟೆಗೆ ₹555

ಖಾದ್ಯ ತೈಲ ಮುಂಬೈ

(10 ಕೆಜಿಗೆ)
ಶೇಂಗಾ (ರಿಫೈನ್ಡ್) ₹1550(1570)
ಸೋಯಾ (ರಿಫೈನ್ಡ್) ₹870(900)
ಸೂರ್ಯಕಾಂತಿ (ರಿಫೈನ್ಡ್) ₹892(902)
ಪಾಮೋಲಿನ್ ₹825(847)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)
ದಪ್ಪ ₹1200-1600
ಮಧ್ಯಮ ₹800-1200
ಸಣ್ಣ ₹400-800

2022–23ನೆಯ ಹಣಕಾಸು ವರ್ಷದಲ್ಲಿ ಆರ್ಥಿಕ ಬೆಳವಣಿಗೆ ಶೇ 7.2ರಷ್ಟು

ಜಿಡಿಪಿ ಬೆಳವಣಿಗೆ: ಆಶಾದಾಯಕ ಚಿತ್ರಣ

ನವದೆಹಲಿ (ಪಿಟಿಐ): ದೇಶದ ಅರ್ಥವ್ಯವಸ್ಥೆಯು ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಶೇಕಡ 6.1ರಷ್ಟು ಬೆಳವಣಿಗೆ ಕಂಡಿದೆ. ಇದರಿಂದಾಗಿ 2022–23ನೆಯ ಹಣಕಾಸು ವರ್ಷದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆಯು ಶೇ 7.2ರಷ್ಟು ಆದಂತಾಗಿದೆ.

ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಅರ್ಥ ವ್ಯವಸ್ಥೆ ತನ್ನದು ಎಂಬ ಹೆಗ್ಗಳಿಕೆಯನ್ನು ಭಾರತ ಉಳಿಸಿಕೊಂಡಿದೆ.

ಕೃಷಿ, ತಯಾರಿಕೆ, ಗಣಿಗಾರಿಕೆ, ನಿರ್ಮಾಣ ವಲಯಗಳಲ್ಲಿನ ಉತ್ತಮ ಬೆಳವಣಿಗೆಯು ಒಟ್ಟು ಜಿಡಿಪಿ ಬೆಳವಣಿಗೆಯು ನಿರೀಕ್ಷೆಗೆ ಮೀರಿದ ಮಟ್ಟವನ್ನು ತಲುಪುವಲ್ಲಿ ಕೊಡುಗೆ ನೀಡಿದೆ ಎಂದು ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತಿವೆ.

ಈ ಪ್ರಮಾಣದ ಬೆಳವಣಿಗೆಯ ಪರಿಣಾಮವಾಗಿ ದೇಶದ ಅರ್ಥ ವ್ಯವಸ್ಥೆಯ ಗಾತ್ರವು ಈಗ 3.3 ಟ್ರಿಲಿಯನ್ ಅಮೆರಿಕನ್ ಡಾಲರ್ ಆಗಿದೆ. ಅಲ್ಲದೆ, ಇದು ಮುಂದಿನ ಕೆಲವು ವರ್ಷಗಳಲ್ಲಿ ಅರ್ಥ ವ್ಯವಸ್ಥೆಯ ಗಾತ್ರವನ್ನು 5 ಟ್ರಿಲಿಯನ್ ಡಾಲರ್‌ಗೆ ಬೆಳೆಸುವುದಕ್ಕೆ ಭೂಮಿಕೆ ಸಜ್ಜುಮಾಡಿ ಕೊಟ್ಟಂತೆ ಆಗಿದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

> **ಜಿಡಿಪಿ ಬೆಳವಣಿಗೆಗೆ ಸಂಬಂಧಿಸಿದ ಅಂಕಿ–ಅಂಶಗಳು ಜಾಗತಿಕ ಸವಾಲುಗಳ ನಡುವೆಯೂ ದೇಶದ ಅರ್ಥವ್ಯವಸ್ಥೆಯು ಎಷ್ಟು ಗಟ್ಟಿಯಾಗಿದೆ ಎಂಬುದನ್ನು ತೋರಿಸುತ್ತಿವೆ**
> **ನರೇಂದ್ರ ಮೋದಿ,** ಪ್ರಧಾನಿ

2021–22ರಲ್ಲಿ ದೇಶದ ಜಿಡಿಪಿ ಶೇ 9.1ರಷ್ಟು ಬೆಳವಣಿಗೆ ಸಾಧಿಸಿತ್ತು. ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಚೀನಾದ ಆರ್ಥಿಕ ಬೆಳವಣಿಗೆಯು ಶೇ 4.5ರಷ್ಟು ಆಗಿದೆ.

ಜಿಡಿಪಿ ಬೆಳವಣಿಗೆ ಪ್ರಮಾಣದ ಕುರಿತು ಫೆಬ್ರುವರಿಯಲ್ಲಿ ಎರಡನೆಯ ಮುನ್ನೋಟವನ್ನು ಬಿಡುಗಡೆ ಮಾಡಿದ್ದ ಕೇಂದ್ರ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ), 2022–23ರಲ್ಲಿ ಜಿಡಿಪಿ ಬೆಳವಣಿಗೆ ಶೇ 7ರಷ್ಟು ಇರಬಹುದು ಎಂದು ಹೇಳಿತ್ತು.

'ವೇಗದ ಬೆಳವಣಿಗೆಯ ಸೂಚಕ': ದೇಶದ ಅರ್ಥ ವ್ಯವಸ್ಥೆಯು ಮಾರ್ಚ್ ತ್ರೈಮಾಸಿಕದಿಂದ ವೇಗವಾಗಿ ಬೆಳವಣಿಗೆ ಕಾಣುತ್ತಿದೆ ಎಂಬುದನ್ನು ಜಿಡಿಪಿ ಅಂಕಿ–ಅಂಶಗಳು ಹೇಳುತ್ತಿವೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕಚ್ಚಾ ವಸ್ತುಗಳ ಬೆಲೆ ಕಡಿಮೆ ಆಗುತ್ತಿದೆ, ಕಚ್ಚಾ ತೈಲದ ಬೆಲೆ ತಗ್ಗಿದೆ ಹಾಗೂ ಸಾಲದ ಮೇಲಿನ ಬಡ್ಡಿಯು ಗರಿಷ್ಠ ಮಟ್ಟವನ್ನು ತಲುಪಿಯಾಗಿದೆ.

ಹೀಗಾಗಿ, ಮುಂದಿನ ತ್ರೈಮಾಸಿಕಗಳಲ್ಲಿಯೂ ದೇಶದ ಬೆಳವಣಿಗೆಯು ವೇಗವಾಗಿ ಇರುವ ನಿರೀಕ್ಷೆ ಇದೆ ಎಂದು ಉದ್ಯಮಗಳ ಸಂಘಟನೆ ಅಸೋಚಾಂ ಪ್ರಧಾನ ಕಾರ್ಯದರ್ಶಿ ದೀಪಕ್ ಸೂದ್ ಹೇಳಿದ್ದಾರೆ.

ರೇಟಿಂಗ್ ಸಂಸ್ಥೆ ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಅವರು, 'ಮಾರ್ಚ್ ತ್ರೈಮಾಸಿಕದಲ್ಲಿನ ಬೆಳವಣಿಗೆಯು ಮೆಚ್ಚುಗೆಗೆ ಅರ್ಹವಾದದ್ದು. ಮುಂದಿನ ತ್ರೈಮಾಸಿಕಗಳಲ್ಲಿ ಬೆಳವಣಿಗೆಯು ಚೇತರಿಕೆ ಕಾಣಲಿದೆ ಎಂದು ನಿರೀಕ್ಷಿಸಿದ್ದನ್ನು ನಿಜವಾಗಿಸಿದೆ' ಎಂದು ಹೇಳಿದ್ದಾರೆ.



(ಮಾಹಿತಿ: ಎನ್‌ಎಸ್‌ಒ)



(ಮಾಹಿತಿ: ರಾಷ್ಟ್ರೀಯ ಸಾಂಖ್ಯಿಕ ಕಚೇರಿ)

ವಿತ್ತೀಯ ಕೊರತೆ ಶೇ 6.4ರಷ್ಟು

ನವದೆಹಲಿ (ಪಿಟಿಐ): 2022–23ನೆಯ ಸಾಲಿನಲ್ಲಿ ವಿತ್ತೀಯ ಕೊರತೆಯು ದೇಶದ ಒಟ್ಟು ಜಿಡಿಪಿಯ ಶೇಕಡ 6.4ರಷ್ಟು ಆಗಿದೆ. ಕೇಂದ್ರ ಸರ್ಕಾರದ ಪರಿಷ್ಕೃತ ಬಜೆಟ್ ಅಂದಾಜಿನಲ್ಲಿ ಇದ್ದ ಮಟ್ಟದಲ್ಲಿಯೇ ವಿತ್ತೀಯ ಕೊರತೆ ಇದೆ.

ವಿತ್ತೀಯ ಕೊರತೆಯ ಮೊತ್ತವು ₹17.33 ಲಕ್ಷ ಕೋಟಿ ಎಂದು ಕೇಂದ್ರದ ಲೆಕ್ಕಪತ್ರಗಳ ಮಹಾನಿಯಂತ್ರಕರು (ಸಿಜಿಎ) ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳಿವೆ. ವಿತ್ತೀಯ ಕೊರತೆಯನ್ನು ಭರ್ತಿ ಮಾಡಿಕೊಳ್ಳಲು ಕೇಂದ್ರವು ಮಾರುಕಟ್ಟೆಯಿಂದ ಹಣವನ್ನು ಸಾಲವಾಗಿ ತರುತ್ತದೆ.

ನಾಲ್ಕನೇ ಮಗುವಿನ ನಿರೀಕ್ಷೆಯಲ್ಲಿ ನಟ ಅಲ್ ಪಚಿನೊ

ಲಂಡನ್ (ರಾಯಿಟರ್ಸ್): ಆಸ್ಕರ್ ವಿಜೇತ, ಹಾಲಿವುಡ್‌ನ ಖ್ಯಾತ ನಟ ಅಲ್ ಪಚಿನೊ ಅವರು 83ನೇ ವಯಸ್ಸಿನಲ್ಲಿ ನಾಲ್ಕನೇ ಮಗುವಿಗೆ ತಂದೆಯಾಗುವ ಸಂಭ್ರಮದಲ್ಲಿದ್ದಾರೆ. ಪಚಿನೊ ಅವರ ಪ್ರತಿನಿಧಿಯೊಬ್ಬರು ಬುಧವಾರ ಈ ಮಾಹಿತಿಯನ್ನು ಖಚಿತಪಡಿಸಿದ್ದಾರೆ.

ಪಚಿನೊ ಅವರ ಗೆಳತಿ, ನಿರ್ಮಾಪಕಿ ನೂರ್ ಅಲ್‌ಫಲ್ಲಾಹ್ ಅವರು ಸದ್ಯ ಎಂಟು ತಿಂಗಳ ಗರ್ಭಿಣಿ. ಕಳೆದ ವರ್ಷದ ಏಪ್ರಿಲ್ 29ರಿಂದ ಪಚಿನೊ ಮತ್ತು ಅಲ್‌ಫಲ್ಲಾಹ್ ಅವರು ಜತೆಗಿದ್ದಾರೆ ಎಂದು ಸೆಲೆಬ್ರಿಟಿ ನ್ಯೂಸ್ ವೆಬ್‌ಸೈಟ್ ಟಿಎಂಜಡ್ ವರದಿ ಮಾಡಿದೆ.

ದಶಕಕ್ಕೂ ಕಡಿಮೆ ಅವಧಿಯಲ್ಲಿ ಸುಧಾರಣೆ ಕಂಡ ಭಾರತ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತವು ಪರಿವರ್ತನೆ ಕಂಡಿದೆ, ಜಾಗತಿಕ ಅರ್ಥ ವ್ಯವಸ್ಥೆ ಹಾಗೂ ಏಷ್ಯಾದ ಅರ್ಥ ವ್ಯವಸ್ಥೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಮಾರ್ಗನ್ ಸ್ಟ್ಯಾನ್ಲಿ ವರದಿ ಹೇಳಿದೆ.

ಭಾರತವು ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಬೆಳವಣಿಗೆ ಸಾಧಿಸಿಲ್ಲ ಹಾಗೂ ದೇಶದ ಷೇರು ಮಾರುಕಟ್ಟೆಗಳ ಬಂಡವಾಳ ಮೌಲ್ಯವು ಬಹಳ ದುಬಾರಿಯಾಗಿದೆ ಎಂಬ ಟೀಕೆಗಳನ್ನು ಅಲ್ಲಗಳೆದಿರುವ ಮಾರ್ಗನ್ ಸ್ಟ್ಯಾನ್ಲಿ, ಇಂತಹ ಮಾತುಗಳು ದೇಶದಲ್ಲಿ ಒಂಬತ್ತು ವರ್ಷಗಳಲ್ಲಿ ಆಗಿರುವ ಸುಧಾರಣೆಗಳನ್ನು ಅಲಕ್ಷಿಸುತ್ತಿವೆ ಎಂದು ಹೇಳಿದೆ.

ಮೋದಿ ಅವರು ಪ್ರಧಾನಿಯಾದ ನಂತರದಲ್ಲಿ ಆಗಿರುವ 10 ದೊಡ್ಡ ಬದಲಾವಣೆಗಳನ್ನು ವರದಿಯು ಪಟ್ಟಿ ಮಾಡಿದೆ. ಕಾರ್ಪೊರೇಟ್ ತೆರಿಗೆ ಪ್ರಮಾಣವನ್ನು ಇತರ ಸಮಾನ ದೇಶಗಳಿಗೆ ಅನುಗುಣವಾಗಿ ಹೊಂದಿಸಿರುವುದು, ಮೂಲಸೌಕರ್ಯಕ್ಕೆ ಹೂಡಿಕೆ ಹೆಚ್ಚುತ್ತಿರುವುದು ಪ್ರಮುಖ ಸುಧಾರಣೆಗಳಲ್ಲಿ ಸೇರಿದೆ ಎಂದು ಹೇಳಿದೆ.

ಜಿಎಸ್‌ಟಿ ಸಂಗ್ರಹ ಏರಿಕೆ, ಸಬ್ಸಿಡಿ ಮೊತ್ತವನ್ನು ಅರ್ಹರ ಖಾತೆಗಳಿಗೆ ವರ್ಗಾಯಿಸುವುದು, ದಿವಾಳಿ ಸಂಹಿತೆಯ ಜಾರಿ, ಎಫ್‌ಡಿಐ ಮೇಲೆ ಗಮನ, ಹಣದುಬ್ಬರ ನಿಯಂತ್ರಣಕ್ಕೆ ಹೊಂದಾಣಿಕೆಯ ನೀತಿ, ಕಾರ್ಪೊರೇಟ್ ಲಾಭಕ್ಕೆ ಸರ್ಕಾರದ ಬೆಂಬಲ, ರಿಯಲ್ ಎಸ್ಟೇಟ್ ವಲಯಕ್ಕೆ ಹೊಸ ಕಾನೂನು... ಇವೆಲ್ಲ ಗಮನಾರ್ಹ ಬದಲಾವಣೆಗಳು ಎಂದು ವರದಿ ಹೇಳಿದೆ.

ಇವೆಲ್ಲವುಗಳ ಕಾರಣದಿಂದಾಗಿ ಕಾರ್ಪೊರೇಟ್ ಹಾಗೂ ಷೇರು ಮಾರುಕಟ್ಟೆ ಹೂಡಿಕೆದಾರರ ಲಾಭವು ಹೆಚ್ಚಾಗಿದೆ ಎಂದು ಈ ಬ್ರೋಕರೇಜ್ ಸಂಸ್ಥೆ ಹೇಳಿದೆ.

ಉಪಗ್ರಹ ಉಡಾವಣೆ ವಿಫಲ

ಸೋಲ್ (ದಕ್ಷಿಣ ಕೊರಿಯಾ) (ಎಪಿ): ಉತ್ತರಕೊರಿಯಾದ ಮೊದಲ ಬೇಹುಗಾರಿಕಾ ಉಪಗ್ರಹ ಉಡಾವಣೆಯ ಪ್ರಯತ್ನ ಬುಧವಾರ ವಿಫಲವಾಗಿದೆ. ಉಪಗ್ರಹವನ್ನು ಬಾಹ್ಯಾಕಾಶ ಕಕ್ಷೆಗೆ ಕೊಂಡೊಯ್ಯುವಲ್ಲಿ ರಾಕೆಟ್ ವಿಫಲವಾಗಿ ಸಮುದ್ರಕ್ಕೆ ಬಿದ್ದಿದೆ.

ಅಮೆರಿಕ ಮತ್ತು ದಕ್ಷಿಣ ಕೊರಿಯಾ ಜತೆಗೆ ಸೇನಾ ಸಂಘರ್ಷಕ್ಕಿಳಿದು, ಉದ್ವಿಗ್ನ ಪರಿಸ್ಥಿತಿ ನೆಲೆಸಿರುವಾಗ, ಸೇನಾ ಸಾಮರ್ಥ್ಯ ವೃದ್ಧಿಸಿಕೊಳ್ಳಲು ಹೊರಟಿದ್ದ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಅವರಿಗೆ ಇದರಿಂದ ತೀವ್ರ ಹಿನ್ನಡೆಯಾದಂತಾಗಿದೆ.

ರಾಕೆಟ್‌ನ ಅವಶೇಷಗಳನ್ನು ಇಯೊಚಿಯಾಂಗ್ಡೊ ನೈರುತ್ಯ ದ್ವೀಪದ ಪಶ್ಚಿಮಕ್ಕೆ 200 ಕೀ.ಮೀ ದೂರದಲ್ಲಿ ಸಮುದ್ರದಿಂದ ವಶಪಡಿಸಿಕೊಂಡಿರುವುದಾಗಿ ದಕ್ಷಿಣ ಕೊರಿಯಾ ಸೇನೆ ಹೇಳಿದೆ. ರಕ್ಷಣಾ ಸಚಿವಾಲಯವು, ರಾಕೆಟ್‌ನ ಭಾಗವೆಂದು ಶಂಕಿಸಲಾದ ಬಿಳಿ ಬಣ್ಣದ ಲೋಹದ ಸಿಲಿಂಡರ್ ಚಿತ್ರಗಳನ್ನು ಬಿಡುಗಡೆ ಮಾಡಿದೆ.

ಮಲಿಗ್‌ಯಾಂಗ್–1 ಬೇಹುಗಾರಿಕೆ ಉಪಗ್ರಹವನ್ನು ಹೊತ್ತ, ಹೊಸದಾಗಿ ಅಭಿವೃದ್ಧಿಪಡಿಸಲಾದ ಚೊಲಿಮಾ–1 ರಾಕೆಟ್ ಅನ್ನು ದೇಶದ ಉತ್ತರ ಭಾಗದ ಸೋಹಾ ಉಪಗ್ರಹ ಉಡಾವಣಾ ನೆಲೆಯಿಂದ ಬೆಳಿಗ್ಗೆ 6.37ಕ್ಕೆ ಉಡಾವಣೆ ಮಾಡಲಾಗಿತ್ತು. ರಾಕೆಟ್ ಪ್ರತ್ಯೇಕಗೊಳ್ಳುವ ಮೊದಲ ಮತ್ತು ಎರಡನೇ ಹಂತದ ನಂತರ ಭಗ್ನವಾಗಿ ಕೊರಿಯಾ ದ್ವೀಪದ ಪಶ್ಚಿಮ ಕರಾವಳಿಯಲ್ಲಿ ಸಮುದ್ರಕ್ಕೆ ಬಿದ್ದಿದೆ ಎಂದು ವರದಿಯಾಗಿದೆ.

ಉಡಾವಣೆ ವೇಳೆ ಆಗಿರುವ ದೋಷ ಸರಿಪಡಿಸಿ ಮತ್ತೊಮ್ಮೆ ಉಪಗ್ರಹ ಉಡಾವಣೆ ಮಾಡುವುದಾಗಿ ಉತ್ತರ ಕೊರಿಯಾ ಪ್ರತಿಜ್ಞೆ ಮಾಡಿದೆ. 'ದೇಶದ ಬಾಹ್ಯಾಕಾಶ ಸಂಸ್ಥೆಯು ಉಪಗ್ರಹ ಉಡಾವಣೆಯಲ್ಲಿ ಆಗಿರುವ ಗಂಭೀರ ದೋಷಗಳ ಬಗ್ಗೆ ತನಿಖೆ ನಡೆಸಲಿದ್ದು, ಶೀಘ್ರವೇ ಎರಡನೇ ಉಡಾವಣೆ ಮಾಡಲಿದೆ' ಎಂದು ದೇಶದ ಮಾಧ್ಯಮಗಳು ವರದಿ ಮಾಡಿವೆ.

ಸುನೀಲ್ ಕನುಗೋಲು ಮುಖ್ಯಮಂತ್ರಿಗಳ ಸಲಹೆಗಾರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಯಲ್ಲಿ 135 ಸ್ಥಾನಗಳನ್ನು ಗೆಲ್ಲುವ ಮೂಲಕ ಕಾಂಗ್ರೆಸ್ ಅಭೂತಪೂರ್ವ ಗೆಲುವು ಸಾಧಿಸಿ, ಅಧಿಕಾರದ ಚುಕ್ಕಾಣಿ ಹಿಡಿಯಲು ತೆರೆಮರೆಯಲ್ಲಿ ಕೆಲಸ ಮಾಡಿದ ಚುನಾವಣಾ ನೀತಿ ತಂತ್ರಜ್ಞ ಸುನೀಲ್ ಕನುಗೋಲು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಲಹೆಗಾರರಾಗಿ ನೇಮಕಗೊಳ್ಳುವ ಸಾಧ್ಯತೆಯಿದೆ.

ಸುನಿಲ್ ಕುನುಗೋಲು ಅವರ ನೇಮಕಗೊಳ್ಳುವ ಬಗ್ಗೆ ಮುಖ್ಯಮಂತ್ರಿ ಸಚಿವಾಲಯದ ಮೂಲಗಳು ಖಚಿತಪಡಿಸಿವೆ.

ಚುನಾವಣೆಯ ಹೊಸ್ತಿಲಲ್ಲಿ ಕಾಂಗ್ರೆಸ್ಸಿಗಾಗಿ ಸುನೀಲ್ ಕನುಗೋಲು ನೇತೃತ್ವದ 'ಇನ್‌ಕ್ಲ್ಯೂಸಿವ್ ಮೈಂಡ್ಸ್' ತಂಡ ರಾಜ್ಯದಲ್ಲಿ ಐದು ಸಮೀಕ್ಷೆಗಳನ್ನು ನಡೆಸಿತ್ತು. ಎಲ್ಲ 224 ಕ್ಷೇತಗಳಲ್ಲಿ ಅಭ್ಯರ್ಥಿಗಳ ಗೆಲ್ಲುವ ಸಾಧ್ಯತೆಯನ್ನು ಆಧರಿಸಿ ನಡೆಸಿದ ಸಮೀಕ್ಷೆಯ ವರದಿಯನ್ನು ಕೆಪಿಸಿಸಿ ಮತ್ತು ಎಐಸಿಸಿ ನಾಯಕರಿಗೆ ಕನುಗೋಲು ನೀಡಿದ್ದರು. ಈ ತಂಡದ ಸಮೀಕ್ಷೆಯ ದತ್ತಾಂಶಗಳನ್ನು ಆಧರಿಸಿ ಪಕ್ಷ ಸಂಘಟನೆ ಬಲಪಡಿಸಿ, ಪ್ರಚಾರ ತಂತ್ರ ಬದಲಿಸಿಕೊಂಡಿತ್ತು. ಆ ಮೂಲಕ, ಅಧಿಕಾರ ಗದ್ದುಗೆ ಹಿಡಿಯಲು ಸಾಧ್ಯವಾಗಿತ್ತು.

ಮುಂದಿನ ಲೋಕಸಭೆ ಚುನಾವಣೆಗೂ ಸಜ್ಜಾಗಲು ಸುನೀಲ್ ಕನುಗೋಲು ಅವರಿಂದ ಸಲಹೆಗಳನ್ನು ಪಡೆಯಲು ಕಾಂಗ್ರೆಸ್ ಮುಂದಾಗಿದೆ. ಅದರ ಭಾಗವಾಗಿ ಮುಖ್ಯಮಂತ್ರಿಯ ಸಲಹೆಗಾರರಾಗಿ ನೇಮಿಸಿಕೊಳ್ಳುವ ಬಗ್ಗೆ ಚರ್ಚೆ ನಡೆದಿದೆ ಎಂದು ಗೊತ್ತಾಗಿದೆ.

ಸಂಕ್ಷಿಪ್ತ ಸುದ್ದಿ

ಮಾತುಕತೆಯಿಂದ ಹಿಂದೆ ಸರಿದ ಸುಡಾನ್ ಸೇನೆ

ಖಾರ್ಟೂಮ್ (ಎಎಫ್‌ಪಿ): ಅಮೆರಿಕ ಮತ್ತು ಸೌದಿ ಅರೇಬಿಯಾ ಮಧ್ಯಸ್ಥಿಕೆಯ ಕದನವಿರಾಮ ಮಾತುಕತೆಯಿಂದ ಸುಡಾನ್ ಸೇನೆ ಹಿಂದೆ ಸರಿದಿದೆ. ಅರೆಸೇನಾಪಡೆಯು ನಮ್ಮ ಬದ್ಧತೆಯನ್ನು ಗೌರವಿಸುವಲ್ಲಿ ವಿಫಲವಾಗಿದೆ ಎಂದು ಬುಧವಾರ ಆರೋಪಿಸಿದೆ.

'ತಾತ್ಕಾಲಿಕವಾಗಿ ಕದನ ವಿರಾಮ ಘೋಷಿಸಿದಾಗ ಅರೆಸೇನಾಪಡೆಯು ಒಂದೇ ಒಂದು ನಿಯಮವನ್ನೂ ಅನುಷ್ಠಾನ ಮಾಡಿಲ್ಲದ ಕಾರಣ ಸೇನೆಯು ಸಂಧಾನ ಮಾತುಕತೆಯಿಂದ ಹಿಂದೆ ಸರಿಯುತ್ತಿದೆ. ಅರೆ ಸೇನಾಪಡೆಯು ನಿರಂತರವಾಗಿ ಕದನ ವಿರಾಮ ಉಲ್ಲಂಘಿಸುತ್ತಿದೆ' ಎಂದು ಸುಡಾನ್ ಸರ್ಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಈ ಮಧ್ಯೆ 'ಗೆಲುವು ಸಿಗುವವರೆಗೂ ಹೋರಾಡಲು ಸಿದ್ಧ' ಎಂದು ಸೇನಾ ಮುಖ್ಯಸ್ಥ ಅಬ್ದುಲ್ ಫತ್ತಾಹ್ ಅಲ್ ಬುಹ್ರಾನ್ ಘೋಷಿಸಿದ್ದಾರೆ.

ಕೃತಕ ಬುದ್ಧಿಮತ್ತೆಯ ಅಪಾಯದ ಎಚ್ಚರಿಕೆ ನೀಡಿದ ಚೀನಾ

ಬೀಜಿಂಗ್(ಎಪಿ): ಕೃತಕ ಬುದ್ಧಿಮತ್ತೆಯಿಂದಾಗುವ ಅಪಾಯಗಳ ಬಗ್ಗೆ ಚೀನಾದ ಆಡಳಿತಾರೂಢ ಕಮ್ಯುನಿಸ್ಟ್ ಪಕ್ಷವು ಎಚ್ಚರಿಸಿದ್ದು ರಾಷ್ಟ್ರೀಯ ಭದ್ರತಾ ಕ್ರಮಗಳನ್ನು ಬಿಗಿಗೊಳಿಸುವಂತೆ ಸೂಚಿಸಿದೆ.

ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ನೇತೃತ್ವದಲ್ಲಿ ಮಂಗಳವಾರ ನಡೆದ ಸಭೆ ನಂತರ ಈ ಹೇಳಿಕೆ ಹೊರಬಿದ್ದಿದೆ.

ಅಮೆರಿಕ ವಿಜ್ಞಾನಿಗಳು ಮತ್ತು ತಂತ್ರಜ್ಞಾನ ಪರಿಣತರು ಕೃತಕ ಬುದ್ಧಿಮತ್ತೆಯು ಮಾನವನ ಮೇಲೆ ಬೀರಬಹುದಾದ ಪರಿಣಾಮಗಳ ಬಗ್ಗೆ ಎಚ್ಚರಿಸಿದ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಗಿದೆ.

ಉಕ್ರೇನ್‌ಗೆ ಶೀಘ್ರವೇ ಹೊಸ ಪ್ಯಾಕೇಜ್ ಘೋಷಣೆ

ವಾಷಿಂಗ್ಟನ್ (ಎಪಿ): ಯುದ್ಧಪೀಡಿತ ಉಕ್ರೇನ್‌ಗೆ ಅಮೆರಿಕವು ಸುಮಾರು ₹2,482 ಕೋಟಿ ಮೊತ್ತದ ಸೇನಾ ನೆರವಿನ ಮತ್ತೊಂದು ಹೊಸ ಪ್ಯಾಕೇಜ್ ಅನ್ನು ಈ ವಾರದಲ್ಲಿ ಘೋಷಿಸುವ ನಿರೀಕ್ಷೆ ಇದೆ. ಈ ಪ್ಯಾಕೇಜ್‌ನಲ್ಲಿ ಹೆಚ್ಚುವರಿಯಾಗಿ ಸ್ಫೋಟಕ ಡ್ರೋನ್‌ಗಳನ್ನು ಪೂರೈಸಲಾಗುತ್ತಿದೆ ಎಂದು ಅಮೆರಿಕ ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

ಮಾಸ್ಕೊ ಮೇಲೆ ಡ್ರೋನ್‌ಗಳ ದಾಳಿ ನಡೆದ ಬೆನ್ನಲ್ಲೇ, ಸ್ಫೋಟಕ ಡ್ರೋನ್‌ಗಳನ್ನು ಉಕ್ರೇನ್‌ಗೆ ಅಮೆರಿಕ ಪೂರೈಸುತ್ತಿರುವ ಮಾಹಿತಿ ಹೊರ ಬಿದ್ದಿದೆ. ಆದರೆ, ಹೊಸ ಪ್ಯಾಕೇಜ್‌ನಲ್ಲಿ ಯಾವ ರೀತಿಯ ಡ್ರೋನ್‌ಗಳು ಅಥವಾ ಯುದ್ಧ ಸಾಮಗ್ರಿಗಳು ಒಳಗೊಂಡಿವೆ ಎನ್ನುವ ವಿವರಗಳನ್ನು ಅವರು ಬಹಿರಂಗಪಡಿಸಿಲ್ಲ.

4 ಕಾನ್ಸುಲೇಟ್ ಕಚೇರಿಗಳ ಮುಚ್ಚಲು ರಷ್ಯಾಕ್ಕೆ ಆದೇಶ

ಬರ್ಲಿನ್ (ಎಪಿ): ದೇಶದಲ್ಲಿರುವ ರಷ್ಯಾದ ಐದು ಕಾನ್ಸುಲೇಟ್ ಕಚೇರಿಗಳ ಪೈಕಿ ನಾಲ್ಕನ್ನು ಮುಚ್ಚುವಂತೆ ರಷ್ಯಾಗೆ ಹೇಳಿರುವುದಾಗಿ ಜರ್ಮನಿ ಸರ್ಕಾರ ಬುಧವಾರ ತಿಳಿಸಿದೆ. ರಷ್ಯಾದಲ್ಲಿಯ ಜರ್ಮನಿ ರಾಯಭಾರ ಕಚೇರಿ ಮತ್ತು ಅದಕ್ಕೆ ಸಂಬಂಧಿಸಿದ ಇತರ ಕಚೇರಿಗಳಲ್ಲಿಯ ಸಿಬ್ಬಂದಿ ಸಂಖ್ಯೆಗೆ ರಷ್ಯಾ ಆಡಳಿತ ಮಿತಿ ಹೇರಿದ ಬೆನ್ನಲ್ಲೇ ಜರ್ಮನಿ ಈ ಕ್ರಮ ಕೈಗೊಂಡಿದೆ.

ಜರ್ಮನಿಯ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಕ್ರಿಸ್ಟೊಫರ್ ಬರ್ಗರ್ ಅವರು ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಉಭಯ ದೇಶಗಳ ನಡುವೆ ಸಿಬ್ಬಂದಿ ಮತ್ತು ಕಚೇರಿಗಳ ಸಂಖ್ಯೆಯಲ್ಲಿ ಸಮಾನತೆ ತರುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ರಷ್ಯಾದ ವರ್ತನೆಯಿಂದಾಗಿ ನಾವು ಹೀಗೆ ನಡೆದುಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ರಷ್ಯಾ– ಉಕ್ರೇನ್ ನಡುವೆ ಯುದ್ಧ ಆರಂಭವಾದಾಗಿನಿಂದ ಜರ್ಮನಿ ಮತ್ತು ರಷ್ಯಾ ನಡುವಿನ ದ್ವಿಪಕ್ಷೀಯ ಸಂಬಂಧ ಯಾವ ಮಟ್ಟಿಗೆ ಹಳಸಿದೆ ಎಂಬುದಕ್ಕೆ ಉಭಯ ದೇಶಗಳ ಈ ನಿರ್ಧಾರಗಳೇ ಸಾಕ್ಷಿಯಾಗಿವೆ ಎನ್ನಲಾಗಿದೆ.

ದೇಶದಲ್ಲಿ ಜರ್ಮನಿ ಸರ್ಕಾರದ ಅಧಿಕಾರಿಗಳ ಸಂಖ್ಯೆಯ ಗರಿಷ್ಠ ಮಿತಿಯನ್ನು 350ಕ್ಕೆ ನಿಗದಿಪಡಿಸಿ ರಷ್ಯಾ ಘೋಷಣೆ ಹೊರಡಿಸಿತ್ತು. ಇದರಲ್ಲಿ ಸಾಂಸ್ಕೃತಿಕ ಕೇಂದ್ರಗಳ ಮತ್ತು ಶಾಲೆಗಳ ಉದ್ಯೋಗಿಗಳೂ ಸೇರಿದ್ದಾರೆ ಎಂದು ಹೇಳಿತ್ತು.

ಇದರರ್ಥ ಜರ್ಮನಿಯು ರಷ್ಯಾದಲ್ಲಿಯ ನಾಲ್ಕು ರಾಯಭಾರ ಕಚೇರಿಗಳನ್ನು ಮುಚ್ಚಬೇಕು ಎಂಬುದಾಗಿದೆ ಎಂದು ಬರ್ಗರ್ ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ
31-5-2023
ಜಾವಾ 70/80(ಹೊಸ) 12000-12050
ಜಾವಾ 80/90(ಹೊಸ) 11100-11150
ದಪ್ಪ ಮಧ್ಯಪ್ರದೇಶ(ಹೊಸ) 11100-11200
ದಪ್ಪ ಗುಜರಾತ್(ಹೊಸ) 12200-12300

ಶೇಂಗಾ ಎಣ್ಣೆ (10 ಕೆಜಿಗೆ)
ಕಚ್ಚಾ (ತೆರಿಗೆ ಬಿಟ್ಟು) 1560(1580)
ಒಂದು ವಾರದ ಡೆಲಿವರಿ 1555(1575)
ಸೋಯಾ ಕಚ್ಚಾ 835(840)
ಪಾಮ್ ವಾರದ ಡೆಲಿವರಿ 823(845)
ಸೂರ್ಯಕಾಂತಿ ಎಣ್ಣೆ ಕಚ್ಚಾ 800 (830)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
60100(60100)
ಬೆಳ್ಳಿ ಕೆ.ಜಿ 70950(70800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್ ಕಂಪನಿಗಳಿಗೆ SSLC,PUC, ಡಿಗ್ರಿ,ಡಿಪ್ಲೊಮಾದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000/- 65,000/- ವಸತಿಯೂಟದೊಂದಿಗೆ 9036125229

ಶ್ರೀಶಕ್ತಿ ಹೆಲ್ತ್ ಕೇರನಲ್ಲಿ ಹೆಲ್ಪರ್ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಸಂಬಳ 13000/- ರಿಂದ 15000/- ಸಾವಿರವರೆಗೆ. ಬೆಂಗಳೂರು. 9019626612

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬಳಿ ಇರುವ ಹಾಸ್ಟೆಲ್‌ಗಾಗಿ ನಾರ್ತ್ ಇಂಡಿಯನ್ ಕುಕ್‌ಗಳು ಮತ್ತು ಸಪ್ಲೈಯರ್‌ಗಳುತಕ್ಷಣ ಬೇಕಾಗಿದ್ದಾರೆ. ಆಕರ್ಷಕ ಸಂಬಳ.ಸಂಪರ್ಕಿಸಿ: 8892491613, 9739013813

Multiple Vacancy

ನುರಿತ ಅಡುಗೆಯವರು, ರೂಮ್ ಬಾಯ್ಸ್, ಹೊರನಾಡು, ಕಳಸದ ಹತ್ತಿರವಿರುವ ರೆಸಾರ್ಟ್ ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ 9886789567/ 9632365251

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611227266/ 9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ:- 8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000/- ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಸಾರ್ವಜನಿಕ ಪ್ರಕಟಣೆ

HINDUSTAN AERONAUTICS EMPLOYEES ASSOCIATION
Vimanapura Post. Bengaluru-560017
Invites expression of interest from accredited and reputed Transport operators for the following service:
- To provide to & fro Transport Services to the HAL Employees from different parts of Bangalore from respective residence to various Divisions of HAL, Bangalore.
- Minimum coverable distance will be average 100 Kms. per day for 26 days or number of working days per month.
- Approximate number of vehicles required about 30 Buses (50 seats each)

Experienced in the field and interested reputed transport operators may forward their proposals/quotations on or before 15-06-2023 to -
The General Secretary,
Hindustan Aeronautics Employees Association, Vimanapura Post, Bengaluru-560017, Email: haea1946@gmail.com.
Contact Nos. 9448009801. 9845876556, 9481423477.

ಪ್ರವಾಸ

Travel

9.6.2023ರಿಂದ 4ದಿನ ಧರ್ಮಸ್ಥಳ,ಕೊಲ್ಲೂರುಮೂಕಾಂಬಿಕೆ,ಮುರುಡೇಶ್ವರ,ಹೊರನಾಡು, ಸಿಂಗದೂರು. 20.06.2023ರಿಂದ 10 ದಿನ ಶಿರಡಿ,ಬಾಂಬೆ,ಗೋವಾ,ನಾಸಿಕ್, ಪಂಡರಾಪುರ, ಗೋಕರ್ಣ,ಮುರುಡೇಶ್ವರ29.06. 2023 ರಿಂದ 4ದಿನ 9 ನವಗ್ರಹ ದೇವಾಲಯಗಳ ದರ್ಶನ ಮತ್ತು ಶ್ರೀರಂಗ,ತಂಜಾವೂರು,ಚಿದಂಬರಂ 6.7.2023ರಿಂದ 10 ದಿನ ವೈಷ್ಣೋದೇವಿ,ಕುಲುಮನಾಲಿ,ಶಿಮ್ಲಾ, ದೆಹಲಿ,ಅಮೃತಸರ,ವಾಘಾ ಬಾರ್ಡರ್ 11.07.2023 ರಿಂದ 6ದಿನ ರಾಮೇಶ್ವರ,ಕನ್ಯಾಕುಮಾರಿ, ತ್ರಿವೇಂಡ್ರಂ,ಗುರುವಾಯೂರು, ಅಲಪಿಬೋಟಿಗ್ ಕೋವಲಂಬೀಚ್ 17.07.2023ರಿಂದ 12 ದಿನ ಚಾರ್‌ದಾಮ್ ಪ್ರವಾಸ ಕೇದಾರನಾಥ,ಗಂಗೋತ್ರಿ, ಬದರಿನಾಥ್,ಯಮನೋತ್ರಿ 23.07.2023ರಿಂದ 7 ದಿನ ಭದ್ರಾಚಲಂ,ಹೈದ್ರಾಬಾದ್,ಶ್ರೀಶೈಲ ,ಮಂತ್ರಾಲಯ,ಅಮರಾವತಿ, ರಾಮೋಜಿಫಿಲಂ ಸಿಟಿ ಶ್ರೀಗುರುರಾಜ ಟ್ರಾವೆಲ್ಸ್, ಕೋಲಾರ 9449652555, 9611082432, 8123099913

08.06.2023, 4 ದಿನ ಅಹೋಬಲ, ಶ್ರೀಶೈಲ, ಮಂತ್ರಾಲಯ, ಕದ್ರಿನರಸಿಂಹ ಇತ್ಯಾದಿ. 15.06.2023, 4ದಿನ ಬಾದಾಮಿ, ಕೂಡಲಸಂಗಮ, ಸವದತ್ತಿಯಲ್ಲಮ್ಮ, ಗೋಲಗುಮ್ಮಟ, ಚಿತ್ರದುರ್ಗಕೋಟೆ, ಆಲಮಟ್ಟಿಡ್ಯಾಮ್ ಇತ್ಯಾದಿ. 9481433157

ಊಟ, ಏಸಿರೂಂ ನೊಂದಿಗೆ 28.6.23 ಹೈದರಾಬಾದ್, ಶ್ರೀಶೈಲ 7.7.23 ನಾಲ್ಕು ಜ್ಯೋತಿರ್ಲಿಂಗ ಗುಜರಾತ್, ಉಜ್ಜಯಿನಿ ವಿಮಾನ ಪ್ರವಾಸ: 25.7.23 ರಾಜಸ್ತಾನ ಪ್ರವಾಸ: 27.7.23 ದೆಹಲಿ, ಕಾಶಿ, ಅಯೋಧ್ಯ ವಿಮಾನ: ಮಲ್ಲಿಕಾರ್ಜುನ ಟೂರ್ಸ್, ತುಮಕೂರು 8496044942

★ಶ್ರೇಯಸ್ ಟೂರ್ಸ್★ 15.06.2023 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯಪ್ರವಾಸ (ಅಮರಕಂಠಕ,ಮಯ್ಯಾರ್ ಸಹಿತ).20.06.2023 8ದಿನಗಳು ಕಾಶಿ ನೈಮಿಷಾರಣ್ಯ ಪ್ರಯಾಗ,ಗಯಾ,ಅಯೋಧ್ಯೆ ಇತರೆ.,10.07.2023 12ದಿನಗಳು ಅಮರನಾಥಯಾತ್ರಾ ಲೇ,ಲಡಾಖ್.,23.07.2023 10ದಿನಗಳು ಅಖಂಡ ಕೇರಳ ರಾಜ್ಯಪ್ರವಾಸ.20.06.2023 11ದಿನಗಳು ಚಂಡೀಗಢ್ ಸಿಮ್ಲಾ,ಮನಾಲಿ 5ದೇವಿಯರು ವೈಷ್ಣೋದೇವಿ,ಅಮೃತಸರ್ ವಾಘಗಡಿ,ಕುರುಕ್ಷೇತ್ರ,ದೆಹಲಿ. 8073824856, 6366322639, 9206979202

10/7/2023 13/17ದಿನಗಳು ರೈಲು/ವಿಮಾನದಲ್ಲಿ ದೆಹಲಿ ಆಗ್ರ ಅಮೃತಸರ ವೈಷ್ಣವದೇವಿ ಅಮರನಾಥ್ ಕಾಶ್ಮೀರ ಕುರುಕ್ಷೇತ್ರ ಇತ್ಯಾದಿ24000/34000/ (ಕೆಲವೇ ಸೀಟುಗಳಿವೆ)'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9739847429/ 9845560219.

ಕೃಷ್ಣ ಹೆರಿಟೇಜ್ ಟೂರ್ಸ ಊಟ ರೂಮಿನೊಂದಿಗೆ 6/12ದಿನಗಳು. 28.6.2023 ರಾಮೇಶ್ವರ, ಕನ್ಯಾಕುಮಾರಿ, ಮದುರೈ,ಶ್ರೀರಂಗಾ, ತಿರುಚೊಂದೂರು ಇತ್ಯಾದಿ. 8.8.2023 ಸೋಮನಾಥ್, ದ್ವಾರಕಾ, ನಾಗೇಶ್ವರ,ಮಹಾಕಾಳೇಶ್ವರ್,ಓಂಕಾರೇಶ್ವರ್ ಗುಜರಾತ್, ಮಧ್ಯಪ್ರದೇಶ. 9448390735, 9449721678.

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 22/6 ಕಾಶಿ, ಗಯಾ, ಅಯೋಧ್ಯೆ. 29/6 ಗುರುವಾಯೂರ್, ಕೊಚ್ಚಿನ್,ತಿರುವನಂತಪುರ 11/7 ಗುಜರಾತ್ ಪ್ಯಾಕೇಜ್ 9964527782/9591017782

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
For more information Contact:
9845114560 : 9731810277
9901641752 : 9886213331
080 - 45557163 / 164
*conditions apply

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

REMEMBERING ANNA OUR BELOVED FATHER
Prof. C. Govinda Gowda
S/o Late Patel Marale Gowda, Changavara, Sira Taluk,Tumakuru District.
On his 100 Year Birthday.

Smt. C.G. Nagarathna
Born: 12.02.1940 D.O.D: 24.04.2011


Prof. C.Govinda Gowda
Born: 01.06.1923 D.O.D: 30.06.2008

Smt. H. K. Latha, G. V. K. Gowda, C.V Prajwal Gowda - 9980172099.
Dr. J. Thriveni, G. A. K. Gowda. Aasish Changavar - 9845023500
Dr. Usha N Murthy & N. Narasimha Murthy - 9739002767
Grand & Great Grand Children and Family Members.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕುಸ್ತಿಪಟುಗಳ ಪ್ರತಿಭಟನೆ: ಬಿಕೆಯು ಮುಖಂಡ ನರೇಶ್ ಟಿಕಾಯತ್ ಘೋಷಣೆ

ಇಂದು ‘ಮಹಾಪಂಚಾಯತ್’

ಪ್ರಜಾವಾಣಿ ವಾರ್ತೆ/ಪಿಟಿಐ

ಮುಜಫ್ಫರನಗರ (ಉತ್ತರಪ್ರದೇಶ): ಭಾರತೀಯ ಕುಸ್ತಿ ಫೆಡರೇಷನ್‌ನ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಕುಸ್ತಿಪಟುಗಳು ನಡೆಸುತ್ತಿರುವ ಪ್ರತಿಭಟನೆ ಕುರಿತು ಚರ್ಚಿಸಲು ಜಿಲ್ಲೆಯ ಸೋರಮ್ ಗ್ರಾಮದಲ್ಲಿ ಗುರುವಾರ ‘ಮಹಾಪಂಚಾಯತ್’ ನಡೆಸಲಾಗುವುದು ಎಂದು ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ಮುಖಂಡ ನರೇಶ್ ಟಿಕಾಯತ್ ಹೇಳಿದ್ದಾರೆ.

‘ಉತ್ತರ ಪ್ರದೇಶ, ಹರಿಯಾಣ, ಪಂಜಾಬ್, ರಾಜಸ್ಥಾನ ಹಾಗೂ ದೆಹಲಿಯ ಖಾಪ್‌ಗಳ ಮುಖ್ಯಸ್ಥರು ಮಹಾಪಂಚಾಯತ್‌ನಲ್ಲಿ ಭಾಗವಹಿಸುವರು. ಕುಸ್ತಿಪಟುಗಳು ನಡೆಸುತ್ತಿರುವ ಹೋರಾಟದ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ಮುಂದಿನ ಹೆಜ್ಜೆ ಕುರಿತು ಚರ್ಚಿಸಲಾಗುವುದು’ ಎಂದು ಅವರು ತಿಳಿಸಿದ್ದಾರೆ.

ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ನಡೆಸುತ್ತಿರುವ ಪ್ರತಿಭಟನೆ ಭಾಗವಾಗಿ ಕುಸ್ತಿಪಟುಗಳು, ಒಲಿಂಪಿಕ್, ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಗೆದ್ದಿರುವ ಪದಕಗಳನ್ನು ಗಂಗಾನದಿಯಲ್ಲಿ ಹಾಕಲು ಹರಿದ್ವಾರಕ್ಕೆ ಮಂಗಳವಾರ ತೆರಳಿದ್ದರು. ಆಗ, ನರೇಶ್ ಅವರ ಮನವೊಲಿಕೆ ನಂತರ ಕುಸ್ತಿಪಟುಗಳು ತಮ್ಮ ನಿರ್ಧಾರದಿಂದ ಹಿಂದೆ ಸರಿದಿದ್ದರು.

ಈ ಪ್ರತಿಭಟನಾ ಸ್ಥಳದಲ್ಲಿ ಮಂಗಳವಾರ ರಾತ್ರಿ ಕುಸ್ತಿಪಟುಗಳೊಂದಿಗೆ ಚರ್ಚೆ ನಡೆಸಿದ ನಂತರ ನರೇಶ್ ಅವರು ಮಹಾಪಂಚಾಯತ್ ಆಯೋಜಿಸುವ ನಿರ್ಧಾರ ಪ್ರಕಟಿಸಿದ್ದಾರೆ.

ಬಿಜೆಪಿಯ ಘೋಷಣೆ ‘ಬೇಟಿ ಬಚಾವೋ, ಬೇಟಿ ಪಢಾವೋ’ ಅರ್ಥ ಈಗ ‘ಬೇಟಿ ಬಿಜೆಪಿ ಕೆ ನೇತಾವೋ ಸೆ ಬಚಾವೋ’ (ಬಿಜೆಪಿ ನಾಯಕರಿಂದ ಮಗಳನ್ನು ರಕ್ಷಿಸಿ) ಎಂಬಂತಾಗಿದೆ

ದೀಪೇಂದರ್ ಹೂಡಾ, ಕಾಂಗ್ರೆಸ್ ಸಂಸದ

ಚುನಾವಣೆ ನಡೆಸದಿದ್ದರೆ ಕುಸ್ತಿ ಸಂಸ್ಥೆ ಅಮಾನತು: ಎಚ್ಚರಿಕೆ

ಕಾರ್ಸಿ ಸುಯಿ ವರ್ವೆ (ಸ್ವಿಜರ್ಲೆಂಡ್) (ಪಿಟಿಐ): ನವದೆಹಲಿಯ ಜಂತರ್‌ಮಂತರ್‌ನಲ್ಲಿ ಧರಣಿನಿರತ ಕುಸ್ತಿಪಟುಗಳ ಜೊತೆ ಭಾನುವಾರ ರಾತ್ರಿ ಪೊಲೀಸರು ತೋರಿದ ವರ್ತನೆಯನ್ನು ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ (ಯುಡಬ್ಲ್ಯುಡಬ್ಲ್ಯು) ಖಂಡಿಸಿದೆ. ನಿಗದಿತ ಅವಧಿಯೊಳಗೆ ಭಾರತ ಕುಸ್ತಿ ಫೆಡರೇಷನ್‌ಗೆ ಚುನಾವಣೆ ನಡೆಸದಿದ್ದಲ್ಲಿ ಅದನ್ನು ಅಮಾನತುಗೊಳಿಸುವುದಾಗಿಯೂ ಮಂಗಳವಾರ ಎಚ್ಚರಿಕೆ ನೀಡಿದೆ.

ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಕುಸ್ತಿಪಟುಗಳು ನಡೆಸುತ್ತಿರುವ ಪ್ರತಿಭಟನೆಯನ್ನು ಗಮನಿಸಲಾಗುತ್ತಿದೆ ಎಂದೂ ಅದು ಹೇಳಿದೆ. ಏಳು ಮಂದಿ ಮಹಿಳಾ ಕುಸ್ತಿಪಟುಗಳಿಗೆ ಬ್ರಿಜ್‌ಭೂಷಣ್ ಅವರು ಲೈಂಗಿಕ ಕಿರುಕುಳ ನೀಡಿದ್ದು ಅವರನ್ನು ಬಂಧಿಸುವ ತನಕ ಪ್ರತಿಭಟನೆ ಮುಂದುವರಿಸುವುದಾಗಿ ಪ್ರಮುಖ ಅಂತರರಾಷ್ಟ್ರೀಯ ಕುಸ್ತಿಪಟುಗಳು ಹೇಳಿದ್ದಾರೆ.

ಪೊಲೀಸರ ವರ್ತನೆ: ಐಒಸಿ ಟೀಕೆ

ನವದೆಹಲಿ (ಪಿಟಿಐ): ಪ್ರತಿಭಟನೆಯಲ್ಲಿರುವ ಭಾರತದ ಪ್ರಮುಖ ಕುಸ್ತಿಪಟುಗಳ ಜೊತೆ ಕಳೆದ ವಾರದ ಕೊನೆಯಲ್ಲಿ ದೆಹಲಿ ಪೊಲೀಸರು ನಡೆದುಕೊಂಡ ರೀತಿಯನ್ನು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಖಂಡಿಸಿದೆ. ಇದು ‘ತೀವ್ರ ಕಳವಳಕಾರಿ’ ಎಂದು ಕಟುಶಬ್ದಗಳಲ್ಲಿ ಹೇಳಿಕೆ ನೀಡಿದೆ.

ಜಂತರ್ ಮಂಥರ್‌ನಲ್ಲಿ ಪ್ರತಿಭಟನೆ ವೇಳೆ ಕುಸ್ತಿಪಟುಗಳನ್ನು ವಶಕ್ಕೆ ಪಡೆದ ರೀತಿಯನ್ನು ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ (ಯುಡಬ್ಲ್ಯುಡಬ್ಲ್ಯು) ಕೂಡ ಟೀಕಿಸಿತ್ತು.

ವಾರಾಂತ್ಯದಲ್ಲಿ ಭಾರತದ ಕುಸ್ತಿಪಟುಗಳ ಜೊತೆ ನಡೆದುಕೊಂಡ ರೀತಿ ತುಂಬಾ ಕಳವಳಕಾರಿಯಾಗಿದೆ. ಕುಸ್ತಿಪಟುಗಳು ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ ನಿಷ್ಪಕ್ಷಪಾತವಾಗಿ ಕಾನೂನು ಪ್ರಕಾರ ಕ್ರಿಮಿನಲ್ ವಿಚಾರಣೆ ನಡೆಸಬೇಕು’ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಈ ಪ್ರಕ್ರಿಯೆಯುದ್ದಕ್ಕೂ ಕುಸ್ತಿಪಟುಗಳ ಸುರಕ್ಷತೆ ಕಡೆ ಹೆಚ್ಚಿನ ಗಮನ ನೀಡಬೇಕು. ವಿಚಾರಣೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು’ ಎಂದು ಐಒಸಿ ಆಗ್ರಹಿಸಿದೆ.

ಕುಸ್ತಿಪಟುಗಳು ಮೌನಕ್ಕೆ ಶರಣು

ನವದೆಹಲಿ (ಪಿಟಿಐ): ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಹೋರಾಟದ ಭಾಗವಾಗಿ ತಾವು ಗೆದ್ದ ಪದಕಗಳನ್ನು ಗಂಗಾ ನದಿಯಲ್ಲಿ ಹಾಕಲು ಹರಿದ್ವಾರಕ್ಕೆ ತೆರಳಿದ್ದ ಕುಸ್ತಿಪಟುಗಳು, ತಮ್ಮ ನಿರ್ಧಾರ ಬದಲಿಸಿದ ಬೆನ್ನಲ್ಲೇ ಮನೆಗಳತ್ತ ಹೆಜ್ಜೆ ಹಾಕಿದ್ದಾರೆ. ಅಲ್ಲದೇ, ಮೌನದಿಂದಿರುವ ಪ್ರತಿಜ್ಞೆ ಮಾಡಿದ್ದಾರೆ.

ಹರಿದ್ವಾರದಲ್ಲಿ ಅವರು ಮಾಧ್ಯಮ ಪ್ರತಿನಿಧಿಗಳೊಂದಿಗೂ ಮಾತನಾಡಲಿಲ್ಲ.

‘ಆಘಾತಕ್ಕೊಳಗಾಗಿರುವ ಕುಸ್ತಿಪಟುಗಳು, ಈಗ ಮೌನವಾಗಿರಬೇಕು ಎಂಬ ಪ್ರತಿಜ್ಞೆ ಮಾಡಿದ್ದಾರೆ. ಹೀಗಾಗಿ ಅವರು ಮಾಧ್ಯಮಗಳೊಂದಿಗೆ ಮಾತನಾಡಿಲ್ಲ’ ಎಂದು ಅವರೊಂದಿಗೆ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದವರೊಬ್ಬರು ಹೇಳಿದರು.

ಪೋಕ್ಸೊ ಕಾಯ್ದೆ ಸಿಂಗ್‌ಗೆ ಅನ್ವಯವಾಗದೇ?: ಸಿಬಲ್



ನವದೆಹಲಿ (ಪಿಟಿಐ): ಪೋಕ್ಸೊ ಕಾಯ್ದೆ ಹಾಗೂ ತಕ್ಷಣ ಬಂಧನದಂತಹ ಕ್ರಮಗಳು ಡಬ್ಲ್ಯುಎಫ್‌ಐನ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ಅವರನ್ನು ಬಿಟ್ಟು ಉಳಿದ ಎಲ್ಲ ಆರೋಪಿಗಳಿಗೆ ಮಾತ್ರ ಅನ್ವಯವಾಗುತ್ತವೆಯೇ ಎಂದು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಬುಧವಾರ ಪ್ರಶ್ನಿಸಿದ್ದಾರೆ.

ಈ ಕುರಿತು ಅವರು ಟ್ವೀಟ್ ಮಾಡಿದ್ದು, ‘ಖ್ಯಾತನಾಮರಾದ ಕುಸ್ತಿಪಟುಗಳಿಗಿಂತ ಮತಗಳೇ ಮುಖ್ಯವಾಗಿವೆ ಹಾಗೂ ಈ ಪ್ರಕರಣದ ಬಗ್ಗೆ ಸರ್ಕಾರ ತಲೆಕೆಡಿಸಿಕೊಳ್ಳುತ್ತಿಲ್ಲ. ಇದು ನನ್ನ ನವ ಭಾರತವೇ?’ ಎಂದಿದ್ದಾರೆ.

ಸಿಬಲ್ ಅವರು ಸುಪ್ರೀಂಕೋರ್ಟ್‌ನಲ್ಲಿ ಕುಸ್ತಿಪಟುಗಳ ಪರ ವಾದ ಮಂಡಿಸಿದ್ದರು.

‘ಸಿಂಗ್ ವಿರುದ್ಧ ಸಾಕ್ಷ್ಯ ಲಭ್ಯವಾಗಿಲ್ಲ ಎಂಬ ವರದಿ ತಪ್ಪು’

ನವದೆಹಲಿ (ಪಿಟಿಐ): ‘ಕೆಲ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಭಾರತೀಯ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ)ನ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ತನಿಖೆ ನಡೆಯುತ್ತಿದೆ. ಅವರ ವಿರುದ್ಧ ಪೊಲೀಸರಿಗೆ ಸಾಕ್ಷ್ಯಗಳು ಲಭ್ಯವಾಗಿಲ್ಲ ಎಂಬ ವರದಿಗಳು ತಪ್ಪು’ ಎಂದು ಪೊಲೀಸರು ಬುಧವಾರ ಹೇಳಿದ್ದಾರೆ.

ಈ ಕುರಿತು ದೆಹಲಿ ಪೊಲೀಸರು ಟ್ವೀಟ್ ಮಾಡಿದ್ದಾರೆ.

‘ಈ ವಿಚಾರವಾಗಿ ಕೆಲ ಟಿ.ವಿ ಚಾನೆಲ್‌ಗಳಲ್ಲಿ ಪ್ರಸಾರವಾಗುತ್ತಿರುವ ಸುದ್ದಿ ತಪ್ಪು. ಸೂಕ್ಷ್ಮವಾಗಿರುವ ಈ ಪ್ರಕರಣ ಕುರಿತು ತನಿಖೆ ನಡೆಯುತ್ತಿದೆ ಎಂಬುದಾಗಿ ಸ್ಪಷ್ಟಪಡಿಸುತ್ತೇವೆ’ ಎಂದು ಪೊಲೀಸರು ಹೇಳಿದ್ದಾರೆ.

ಈ ಸ್ಪಷ್ಟೀಕರಣ ನೀಡುವುದಕ್ಕೂ ಮುನ್ನ, ‘ಬ್ರಿಜ್‌ಭೂಷಣ್ ಸಿಂಗ್ ಅವರನ್ನು ಬಂಧಿಸಲು ಅಗತ್ಯವಿರುವಷ್ಟು ಸಾಕ್ಷ್ಯಗಳು ತನಿಖಾಧಿಕಾರಿಗಳಿಗೆ ಲಭಿಸಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿ 15 ದಿನಗಳ ಒಳಗಾಗಿ ಚಾರ್ಜ್‌ಶೀಟ್ ಅಥವಾ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು’ ಎಂದು ದೆಹಲಿ ಪೊಲೀಸ್ ಮೂಲಗಳು ಹೇಳಿದ್ದವು.

ಈಗ, ಪೊಲೀಸರು ಟ್ವಿಟರ್ ಮೂಲಕ ಸ್ಪಷ್ಟನೆ ನೀಡಿದ್ದು ಕುತೂಹಲಕ್ಕೆ ಕಾರಣವಾಗಿದೆ.

‘ತನಿಖೆ ನಡೆಯುತ್ತಿದೆ. ಹೀಗಾಗಿ ಸಂಗ್ರಹಿಸಲಾದ ಸಾಕ್ಷ್ಯಗಳು ಅಥವಾ ಯಾವಾಗ ತನಿಖೆ ಪೂರ್ಣಗೊಳ್ಳಲಿದೆ ಎಂಬ ಬಗ್ಗೆ ಪೊಲೀಸರು ಹೇಳಿಕೆ ನೀಡಲು ಸಾಧ್ಯವಿಲ್ಲ. ತನಿಖೆ ಪೂರ್ಣಗೊಂಡ ನಂತರ ಸಂಪೂರ್ಣ ಮಾಹಿತಿ ನೀಡಲಾಗುವುದು’ ಎಂದು ದೆಹಲಿ ಪೊಲೀಸ್ ವಕ್ತಾರೆ ಸುಮನ್ ನಲ್ವಾ ಹೇಳಿದ್ದಾರೆ.

ಗಂಗೆಯಲ್ಲಿ ಪದಕ ಹಾಕಿದರೆ ನನ್ನನ್ನು ಗಲ್ಲಿಗೇರಿಸುವುದಿಲ್ಲ: ಬ್ರಿಜ್‌ಭೂಷಣ್

ಬಾರಾಬಂಕಿ (ಉತ್ತರ ಪ್ರದೇಶ) (ಪಿಟಿಐ): ‘ಕುಸ್ತಿಪಟುಗಳು ಗಂಗಾ ನದಿಯಲ್ಲಿ ತಮ್ಮ ಪದಕಗಳನ್ನು ಹಾಕುವುದರಿಂದ ನನ್ನನ್ನು ಗಲ್ಲಿಗೇರಿಸುವುದಿಲ್ಲ. ನಿಮ್ಮಲ್ಲಿ ಸಾಕ್ಷ್ಯಗಳಿದ್ದರೆ ನ್ಯಾಯಾಲಯಕ್ಕೆ ಸಲ್ಲಿಸಿ. ಒಂದು ವೇಳೆ ನ್ಯಾಯಾಲಯ ನನಗೆ ಮರಣ ದಂಡನೆ ವಿಧಿಸಿದರೆ ನಾನು ಸ್ವೀಕರಿಸುತ್ತೇನೆ’ ಎಂದು ಭಾರತೀಯ ಕುಸ್ತಿ ಫೆಡರೇಷನ್‌ನ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ಬುಧವಾರ ಹೇಳಿದರು.

ಇಲ್ಲಿನ ರಾಮನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ನನ್ನ ವಿರುದ್ಧದ ಆರೋಪಗಳ ಪೈಕಿ ಒಂದೇ ಒಂದು ಆರೋಪ ಸಾಬೀತಾದರೂ ಸಾರ್ವಜನಿಕವಾಗಿ ನಾನು ನೇಣು ಹಾಕಿಕೊಳ್ಳುತ್ತೇನೆ’ ಎಂದರು.

ಕ್ರೀಡೆ ಹಾಳು ಮಾಡುವ ಕ್ರಮ ಬೇಡ: ಠಾಕೂರ್

ನವದೆಹಲಿ (ಪಿಟಿಐ): ಕ್ರೀಡೆಯನ್ನು ಹಾಳು ಮಾಡುವ ಅಥವಾ ಕ್ರೀಡಾಪಟುಗಳಿಗೆ ನೋವುಂಟು ಮಾಡುವಂತಹ ಯಾವುದೇ ಕ್ರಮ ಕೈಗೊಳ್ಳಬೇಡಿ ಎಂದು ಪ್ರತಿಭಟನೆ ನಡೆಸುತ್ತಿರುವ ಕುಸ್ತಿಪಟುಗಳಿಗೆ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಮನವಿ ಮಾಡಿದ್ದಾರೆ.

‘ಬ್ರಿಜ್‌ಭೂಷಣ್ ಸಿಂಗ್ ವಿರುದ್ಧದ ಆರೋಪಗಳಿಗೆ ಸಂಬಂಧಿಸಿ ನಡೆಯುತ್ತಿರುವ ತನಿಖೆ ಪೂರ್ಣಗೊಂಡ ನಂತರ, ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಭಾರತೀಯ ಕುಸ್ತಿ ಫಡರೇಷನ್‌ಗೆ ಶೀಘ್ರವೇ ಚುನಾವಣೆ ನಡೆಸಿ, ಹೊಸ ಆಡಳಿತ ಮಂಡಳಿಯನ್ನು ಆಯ್ಕೆ ಮಾಡಲಾಗುವುದು ಎಂದರು.

ಶಸ್ತ್ರಸಜ್ಜಿತರಿಂದ ಗ್ರಾಮಸ್ಥರ ಮೇಲೆ ಗುಂಡಿನ ದಾಳಿ

ಮಣಿಪುರ: ಮತ್ತೆ ಹಿಂಸಾಚಾರ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮಣಿಪುರದಲ್ಲಿಯೇ ವಾಸ್ತವ್ಯ ಹೂಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಮೈತೇಯಿ ಮತ್ತು ಕುಕಿ ಸಮುದಾಯದ ನಾಯಕರ ನಡುವಣ ಮಾತುಕತೆ ನಡೆಸಿ ಶಾಂತಿ ಪುನರ್ ಸ್ಥಾಪನೆಗೆ ಪ್ರಯತ್ನಿಸುತ್ತಿರುವ ಬೆನ್ನಲ್ಲೇ ಬುಧವಾರ ಮತ್ತೆ ನಾಲ್ಕು ಜಿಲ್ಲೆಗಳಲ್ಲಿ ಹಿಂಸಾಚಾರ ನಡೆದಿದೆ.

ಬಿಷ್ಣುಪುರ್ ಮತ್ತು ಚುರಚಂದಪುರ ಜಿಲ್ಲೆಗಳಲ್ಲಿನ ಹಲವು ಗ್ರಾಮಗಳಲ್ಲಿ ಶಸ್ತ್ರಸಜ್ಜಿತ ಕಿಡಿಗೇಡಿಗಳು ಬೆಳಿಗ್ಗೆ ನಡೆಸಿದ ಗುಂಡಿನ ದಾಳಿಯಲ್ಲಿ ಹಲವು ನಾಗರಿಕರು ಗಾಯಗೊಂಡಿದ್ದಾರೆ.

ಇಂಫಾಲ್ ಪಶ್ಚಿಮ ಜಿಲ್ಲೆಯ ತೌಬಾನ್ ಡ್ಯಾಂ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿನ ಹಲವು ಮನೆಗಳು ಹಾಗೂ ಕುಕಿ ಸಮುದಾಯ ಹೆಚ್ಚಿರುವ ಕಾಂಗ್ಪೋಪಿ ಜಿಲ್ಲೆಯ ಹಲವು ಗ್ರಾಮಗಳಲ್ಲಿ ಮನೆಗಳಿಗೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ.

ಗಡಿಯಲ್ಲೂ ಪರಿಶೀಲನೆ: ಭಾರತ ಮತ್ತು ಮ್ಯಾನ್ಮಾರ್ ಗಡಿಗೆ ಹೊಂದಿರುವ ಮೊರೆಹ್ ಮತ್ತು ಕಾಂಗ್ಪೋಪಿ ಜಿಲ್ಲೆಗಳಿಗೆ ಅಮಿತ್ ಶಾ ಅವರು ಬೆಳಿಗ್ಗೆ ಭೇಟಿ ನೀಡಿ ಎರಡೂ ಬುಡಕಟ್ಟು ಸಮುದಾಯದ ನಾಯಕರ ಜೊತೆ ಪ್ರತ್ಯೇಕವಾಗಿ ಮಾತುಕತೆ ನಡೆಸಿ ಶಾಂತಿ ನೆಲೆಗೊಳ್ಳಲು ಸಹಕರಿಸುವಂತೆ ಮನವಿ ಮಾಡಿದರು. ಬಳಿಕ ಸೇನಾ ಅಧಿಕಾರಿಗಳು ಮತ್ತು ಭದ್ರತಾ ಏಜೆನ್ಸಿಗಳ ನಡುವೆ ಸಭೆ ನಡೆಸಿ ಪರಿಸ್ಥಿತಿಯನ್ನು ಹತೋಟಿಗೆ ತರುವ ಬಗ್ಗೆ ಚರ್ಚಿಸಿದರು.

ಚುರಚಂದಪುರ ನಗರದಲ್ಲಿ ಮಂಗಳವಾರ ಬುಡಕಟ್ಟು ನಾಯಕರನ್ನು ಭೇಟಿ ಮಾಡಿದ್ದ ಶಾ ಅವರು, ಶಾಂತಿ ಕಾಪಾಡುವಂತೆ ಮನವಿ ಮಾಡಿದ್ದರು.

ಹಿಂಸಾಚಾರದಲ್ಲಿ ಇಲ್ಲಿಯವರೆಗೆ 75 ಜನರು ಮೃತಪಟ್ಟಿದ್ದು, ಎರಡು ಸಾವಿರ ಮನೆಗಳು ಭಸ್ಮವಾಗಿವೆ. 35 ಸಾವಿರ ಜನರು ನೆಲೆ ಕಳೆದುಕೊಂಡಿದ್ದಾರೆ. ಸೇನೆ ಮತ್ತು ಅರೆಸೇನಾ ಪಡೆಯ 34 ಸಾವಿರಕ್ಕೂ ಹೆಚ್ಚು ಯೋಧರನ್ನು ನಿಯೋಜಿಸಲಾಗಿದೆ. ಹಿಂಸಾಚಾರದ ವೇಳೆ ಪೊಲೀಸ್ ಠಾಣೆಗಳಲ್ಲಿದ್ದ 1,014 ಶಸ್ತ್ರಾಸ್ತ್ರಗಳನ್ನು ಕಿಡಿಗೇಡಿಗಳು ಹೊತ್ತೊಯ್ದಿದ್ದಾರೆ.

ಈ ಪೈಕಿ 500 ಶಸ್ತ್ರಾಸ್ತ್ರಗಳನ್ನಷ್ಟೇ ವಶಪಡಿಸಿಕೊಳ್ಳಲಾಗಿದೆ. ಉಳಿದವು ಕಿಡಿಗೇಡಿಗಳ ಬಳಿ ಇರುವುದರಿಂದ ಭದ್ರತಾ ಪಡೆಯ ಯೋಧರು ಮತ್ತು ನಿರಾಶ್ರಿತ ಶಿಬಿರಗಳಲ್ಲಿ ಇರುವ ಜನರ ನಿದ್ದೆಗೆಡುವಂತಾಗಿದೆ.

‘ಹೊತ್ತೊಯ್ದಿರುವ ಶಸ್ತ್ರಾಸ್ತ್ರಗಳನ್ನು ಕೂಡಲೇ ವಾಪಸ್ ನೀಡಬೇಕು. ಸೇನಾ ಪಡೆಗಳು ಈಗಾಗಲೇ ಪತ್ತೆ ಕಾರ್ಯಾಚರಣೆ ಆರಂಭಿಸಿವೆ. ಈ ವೇಳೆ ಶಸ್ತ್ರಾಸ್ತ್ರ ಸಿಕ್ಕಿದರೆ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಎನ್. ಬಿರೆನ್ ಸಿಂಗ್ ಎಚ್ಚರಿಕೆ ನೀಡಿದ್ದಾರೆ.

ಮಣಿಪುರದ ಕಾಕ್ಚಿಂಗ್ ಜಿಲ್ಲೆಯ ಸುಗ್ನು ಪ್ರದೇಶದಲ್ಲಿ ಘರ್ಷಣೆಯಿಂದ ಹಾನಿಗೀಡಾಗಿರುವ ಮನೆ–ಪಿಟಿಐ ಚಿತ್ರ

5ರವರೆಗೆ ಇಂಟರ್‌ನೆಟ್ ಸಂಪರ್ಕ ಕಡಿತ

ಹಿಂಸಾಚಾರ ಮತ್ತೆ ಉಲ್ಬಣಗೊಂಡಿರುವ ಹಿನ್ನೆಲೆಯಲ್ಲಿ ಮುಂಜಾಗ್ರತೆಯಾಗಿ ಮೊಬೈಲ್ ಮತ್ತು ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ಸೇವೆಯ ಬಳಕೆ ಮೇಲೆ ವಿಧಿಸಿದ್ದ ನಿರ್ಬಂಧವನ್ನು ಜೂನ್ 5ರ ವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಹಲವೆಡೆ ರಸ್ತೆ ಸಂಚಾರ ಬಂದ್ ಮಾಡಿರುವುದರಿಂದ ಭದ್ರತಾ ಪಡೆಯ ಯೋಧರು ಮತ್ತು ಅಗತ್ಯ ವಸ್ತುಗಳ ಸಾಗಣೆ ವಾಹನಗಳ ಸಂಚಾರಕ್ಕೆ ತೊಂದರೆಯಾಗಿದೆ. ಹಾಗಾಗಿ, ನಾಗರಿಕರು ರಸ್ತೆ ಬಂದ್ ಮಾಡದಂತೆ ಮುಖ್ಯಮಂತ್ರಿ ಬಿರೆನ್ ಸಿಂಗ್ ಮನವಿ ಮಾಡಿದ್ದಾರೆ.

ರಾಷ್ಟ್ರಪತಿ ಆಡಳಿತ ಜಾರಿಗೆ ಆಗ್ರಹ

ಮಣಿಪುರದ ಬುಡಕಟ್ಟು ಸಂಘಟನೆಗಳ ಮುಖಂಡರು ಬುಧವಾರ ದೆಹಲಿಯ ಜಂತರ್ ಮಂತರ್‌ನಲ್ಲಿ ಒಗ್ಗಟ್ಟಿನ ಯಾತ್ರೆ ನಡೆಸಿದರು.

ಜನಾಂಗೀಯ ಘರ್ಷಣೆಯನ್ನು ಶಮನಗೊಳಿಸುವ ಕಾರ್ಯ ನಡೆಯುತ್ತಿದೆ. ಕೂಡಲೇ, ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಬೇಕು. ಈ ಹಿಂಸಾಚಾರದ ಬಗ್ಗೆ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ವಿಶೇಷ ತಂಡ ರಚಿಸಿ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಧಾನ್ಯ ದಾಸ್ತಾನಿಗಾಗಿ ದೇಶದಾದ್ಯಂತ ವ್ಯವಸ್ಥೆ

ಒಂದನೇ ಪುಟದಿಂದ...

‘ದೇಶದಲ್ಲಿ ವರ್ಷಕ್ಕೆ 31 ಕೋಟಿ ಟನ್‌ಗಳಷ್ಟು ಆಹಾರ ಧಾನ್ಯ ಉತ್ಪಾದಿಸಲಾಗುತ್ತದೆ. ಆದರೆ, ಈಗಿರುವ ಉಗ್ರಾಣಗಳಲ್ಲಿ ಒಟ್ಟು ಉತ್ಪಾದನೆಯ ಶೇ 47ರಷ್ಟು ಉತ್ಪನ್ನಗಳನ್ನು ಮಾತ್ರ ಸಂಗ್ರಹಿಸಿಡಲು ಸಾಧ್ಯವಾಗುತ್ತಿದೆ. ಉಗ್ರಾಣಗಳ ಸಂಖ್ಯೆ ಹೆಚ್ಚುವುದರಿಂದ ಸಾಗಾಣಿಕೆಗೆ ತಗುಲುವ ವೆಚ್ಚ ತಗ್ಗುವ ಜೊತೆಗೆ ಆಹಾರ ಭದ್ರತೆಯೂ ಬಲಗೊಳ್ಳುವುದು’ ಎಂದರು.

‘ಭಾರತೀಯ ಆಹಾರ ನಿಗಮದ (ಎಫ್‌ಸಿಐ) ಉಗ್ರಾಣಗಳ ಸಂಗ್ರಹ ಸಾಮರ್ಥ್ಯ 8 ಕೋಟಿ ಟನ್ ಇದ್ದು, ಉಳಿದ ಅಹಾರ ಧಾನ್ಯಗಳನ್ನು ರಾಜ್ಯ ಹಾಗೂ ಖಾಸಗಿ ಒಡೆತನದ ಉಗ್ರಾಣಗಳಲ್ಲಿ ಸಂಗ್ರಹಿಸಲಾಗುತ್ತಿದೆ’ ಎಂದು ಹೇಳಿದರು.

ಅನುಷ್ಠಾನ: ಯೋಜನೆಯನ್ನು ಪರಿಣಾಮಕಾರಿಯಾಗಿ ಹಾಗೂ ವೃತ್ತಿಪರತೆಯೊಂದಿಗೆ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸಲಾಗುವುದು. ಸಹಕಾರ ಸಚಿವಾಲಯವು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಯ್ದ 10 ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಿದೆ’ ಎಂದು ಸಚಿವರು ವಿವರಿಸಿದರು.

‘ಸಿಐಟಿಐಐಎಸ್ 2.0’ಗೆ ಅನುಮೋದನೆ: ನಗರ ಪ್ರದೇಶಗಳ ಸಮಗ್ರ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಒತ್ತು ನೀಡುವ ‘ಸಿಟಿ ಇನ್ವೆಸ್ಟ್‌ಮೆಂಟ್ಸ್ ಟು ಇನ್ನೋವೇಟ್, ಇಂಟಿಗ್ರೇಟ್ ಅಂಡ್ ಸಸ್ಟೇನ್ (ಸಿಐಟಿಐಐಎಸ್) 2.0‘ ಎಂಬ ಯೋಜನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಈ ಕುರಿತು ಮಾಹಿತಿ ನೀಡಿದ ಸಚಿವ ಠಾಕೂರ್, ಪ್ರಸಕ್ತ ಹಣಕಾಸು ವರ್ಷದಿಂದ ನಾಲ್ಕು ವರ್ಷಗಳ ವರೆಗೆ ಈ ಯೋಜನೆ ಜಾರಿಯಲ್ಲಿರುತ್ತದೆ. ಫ್ರೆಂಚ್ ಅಭಿವೃದ್ಧಿ ಸಂಸ್ಥೆ (ಎಎಫ್‌ಡಿ), ಕೆಎಫ್‌ಡಬ್ಲ್ಯು, ಐರೋಪ್ಯ ಒಕ್ಕೂಟ ಹಾಗೂ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅರ್ಬನ್ ಅಫೇರ್ಸ್ (ಎನ್‌ಐಯುಎ) ಸಹಭಾಗಿತ್ವದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ ಎಂದು ಹೇಳಿದರು.

‘ನಗರ ಮಟ್ಟದಲ್ಲಿ ಸಮಗ್ರ ತ್ಯಾಜ್ಯ ನಿರ್ವಹಣೆ, ರಾಜ್ಯ ಮಟ್ಟದಲ್ಲಿ ಹವಾಮಾನ ಬದಲಾವಣೆ ಕೇಂದ್ರಿತ ಸುಧಾರಣಾ ಕ್ರಮಗಳಿಗೆ ಉತ್ತೇಜನ ನೀಡಲಾಗುತ್ತದೆ. ಈ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುವ ಸಂಸ್ಥೆಗಳ ಸಬಲೀಕರಣ ಹಾಗೂ ಜ್ಞಾನ ಪ್ರಸಾರ ಕಾರ್ಯಕ್ಕೆ ರಾಷ್ಟ್ರ ಮಟ್ಟದಲ್ಲಿ ಪ್ರೋತ್ಸಾಹ ನೀಡುವುದನ್ನು ಈ ಯೋಜನೆ ಒಳಗೊಂಡಿದೆ’ ಎಂದು ತಿಳಿಸಿದರು.

‘ಈ ಯೋಜನೆ ಅನುಷ್ಠಾನಕ್ಕೆ ಎಎಫ್‌ಡಿ ಹಾಗೂ ಕೆಎಫ್‌ಡಬ್ಲ್ಯು ಜಂಟಿಯಾಗಿ ಒಟ್ಟು ₹ 1,760 ಕೋಟಿ ಸಾಲ ಒದಗಿಸಲಿವೆ. ತಾಂತ್ರಿಕ ನೆರವಿನಡಿ ಐರೋಪ್ಯ ಒಕ್ಕೂಟವು ₹ 106 ಕೋಟಿ ಒದಗಿಸಲಿದೆ’ ಎಂದು ಹೇಳಿದರು.

ಮಧ್ಯಪ್ರದೇಶದ ಪನ್ನಾ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಎರಡು ಮರಿಗಳೊಂದಿಗೆ ಕಾಣಿಸಿಕೊಂಡ ತಾಯಿ ಹುಲಿ –ಪಿಟಿಐ ಚಿತ್ರ

ಪನ್ನಾ: ಎರಡು ಹುಲಿ ಮರಿಗಳ ಜನನ

ಪನ್ನಾ (ಪಿಟಿಐ): ಮಧ್ಯಪ್ರದೇಶದ ಪನ್ನಾ ಹುಲಿ ಸಂರಕ್ಷಿತ ಪ್ರದೇಶದಲ್ಲಿ (ಪಿಟಿಆರ್) ಹುಲಿಯೊಂದು ಎರಡು ಮರಿಗಳಿಗೆ ಜನ್ಮ ನೀಡಿದೆ ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದರು.

ಪಿ–234 ಹುಲಿಯು ಅಕೋಲ ಬಫರ್ ಪ್ರದೇಶದಲ್ಲಿ ಎರಡು ಮರಿಗಳೊಂದಿಗೆ ಕಾಣಿಸಿಕೊಂಡಿದೆ. ಮರಿಗಳು ಆರೋಗ್ಯಯುತವಾಗಿದ್ದು, ಅವುಗಳು ಜನಿಸಿ ಸುಮಾರು ನಾಲ್ಕು ತಿಂಗಳಾಗಿರಬಹುದು ಎಂದು ಪಿಟಿಆರ್ ಕ್ಷೇತ್ರ ನಿರ್ದೇಶಕ ಬ್ರಿಜೇಂದ್ರ ಝಾ ಮಾಹಿತಿ ನೀಡಿದರು. ಮೇ ಮೊದಲ ವಾರದಲ್ಲಿ, ಮತ್ತೊಂದು ಹುಲಿ ಪಿ–234 (23) ಸಹ ಎರಡು ಮರಿಗಳೊಂದಿಗೆ ಕಾಣಿಸಿಕೊಂಡಿತ್ತು. ಹೀಗಾಗಿ ಮೇ ತಿಂಗಳಲ್ಲಿ ಪಿಟಿಆರ್‌ನಲ್ಲಿ ನಾಲ್ಕು ಮರಿಗಳು ಜನಿಸಿದಂತಾಗಿದೆ. ಇತ್ತೀಚಿನ ಗಣತಿ ಪ್ರಕಾರ ಪಿಟಿಆರ್‌ನಲ್ಲಿ 78 ಹುಲಿಗಳಿವೆ ಎಂದೂ ಹೇಳಿದರು.

ಜಮ್ಮು: ಮೂವರು ಉಗ್ರರ ಬಂಧನ

ಜಮ್ಮು (ಪಿಟಿಐ): ಇಲ್ಲಿನ ಪೂಂಛ್ ಜಿಲ್ಲೆಯ ಗಡಿ ನಿಯಂತ್ರಣ ರೇಖೆ ಬಳಿ ಮೂವರು ಭಯೋತ್ಪಾದಕರನ್ನು ಸೇನೆ ಬುಧವಾರ ಬಂಧಿಸಿದೆ. ಉಗ್ರರಿಂದ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮಾದಕ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ.

ಬಂಧಿತರನ್ನು ಮೊಹಮ್ಮದ್ ಫಾರೂಕ್ (26), ಮೊಹಮ್ಮದ್ ರಿಯಾಜ್(23) ಮತ್ತು ಮೊಹಮ್ಮದ್ ಜುಬೈರ್ ಎಂದು ಗುರುತಿಸಲಾಗಿದೆ.

‘10 ಕೆ.ಜಿ ಸುಧಾರಿತ ಸ್ಫೋಟಕವನ್ನು ಸಾಗಿಸುತ್ತಿದ್ದ ಉಗ್ರರನ್ನು ಬಂಧಿಸಲಾಗಿದೆ. ಸೇನೆ ಮತ್ತು ಉಗ್ರರ ನಡುವೆ ನಡೆದ ಗುಂಡಿನ ಕಾಳಗದಲ್ಲಿ ಸೇನಾ ಸಿಬ್ಬಂದಿ ಒಬ್ಬರು ಮತ್ತು ಒಬ್ಬ ಉಗ್ರ ಗಾಯಗೊಂಡಿದ್ದಾರೆ’ ಎಂದು ರಕ್ಷಣಾ ವಕ್ತಾರರೊಬ್ಬರು ತಿಳಿಸಿದ್ದಾರೆ.

ಅಮೆರಿಕದಲ್ಲಿ ರಾಹುಲ್ ಗಾಂಧಿ ವ್ಯಂಗ್ಯ • ವಿದೇಶದಲ್ಲಿ ದೇಶದ ಮಾನ ಕಳೆಯುತ್ತಾರೆ: ಬಿಜೆಪಿ

ಮೋದಿಗೆ ದೇವರಿಗಿಂತ ಹೆಚ್ಚು ತಿಳಿವಳಿಕೆ!

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ/ಸಾಂತಕ್ಲಾರ (ಅಮೆರಿಕ): ‘ಭಾರತದಲ್ಲಿನ ಒಂದು ಗುಂಪಿನ ಜನರು ಜಗತ್ತಿನಲ್ಲಿ ಎಲ್ಲವೂ ತಮಗೇ ತಿಳಿದಿದೆ. ದೇವರಿಗಿಂತಲೂ ಹೆಚ್ಚು ತಿಳಿವಳಿಕೆ ಇದೆ ಎಂದುಕೊಂಡಿದ್ದಾರೆ. ಇದೊಂದು ಕಾಯಿಲೆ. ನಮ್ಮ ಪ್ರಧಾನಿಯೂ ಇಂಥ ಪ್ರಭೇದದ ಜನರಲ್ಲಿ ಒಬ್ಬರು’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವ್ಯಂಗ್ಯವಾಡಿದರು.

ಅಮೆರಿಕದ ಕ್ಯಾಲಿಫೋರ್ನಿಯಾ ವಿ.ವಿಯಲ್ಲಿ ಸಾಗರೋತ್ತರ ಭಾರತೀಯ ಕಾಂಗ್ರೆಸ್ ಮಂಗಳವಾರ ಆಯೋಜಿಸಿದ್ದ ‘ಪ್ರೀತಿಯ ಅಂಗಡಿ’ (ಮೊಹಬ್ಬತ್ ಕಿ ದುಕಾನ್) ಕಾರ್ಯಕ್ರಮದಲ್ಲಿ ಮಾತನಾಡಿದರು. ‘ಈ ಜಗತ್ತಿನ ಬಗ್ಗೆ ಒಬ್ಬ ವ್ಯಕ್ತಿ ತಿಳಿಯುವುದು ಎಂದರೆ ಅದು ಬಹಳ ಕಷ್ಟದ ಕೆಲಸ. ಆದರೆ, ಆ ಗುಂಪಿನ ಜನರು ಮಾತ್ರ ದೇವರಿಗಿಂತ ಹೆಚ್ಚಿನ ತಿಳಿವಳಿಕೆ ನಮಗೆ ಇದೆ ಅಂದುಕೊಂಡಿದ್ದಾರೆ. ದೇವರೊಂದಿಗೆ ಕುಳಿತು, ಜಗತ್ತಿನಲ್ಲಿ ಏನಾಗುತ್ತಿದೆ ಎಂಬುದನ್ನು ವಿವರಿಸುತ್ತಾರೆ’ ಎಂದರು.

‘ಈಗ ನೀವು ಮೋದಿಯನ್ನು ದೇವರೊಂದಿಗೆ ಕುಳ್ಳಿರಿಸಿ. ಜಗತ್ತು ಹೇಗೆ ಕೆಲಸ ಮಾಡುತ್ತದೆ ಎಂಬ ಕುರಿತು ಬಹುಶಃ ಅವರು ದೇವರಿಗೂ ವಿವರಿಸಬಹುದು. ದೇವರಿಗೇ ಆತನ ಸೃಷ್ಟಿ ಬಗ್ಗೆ ಗೊಂದಲ ಆಗಬಹುದು’ ಎಂದರು. ‘ಇತಿಹಾಸಕಾರರಿಗೆ ಇತಿಹಾಸ, ವಿಜ್ಞಾನಿಗಳಿಗೆ ವಿಜ್ಞಾನ, ಸೇನೆಗೆ ಯುದ್ಧ ಮಾಡುವುದನ್ನು... ಹೀಗೆ ಯಾರಿಗೆ ಏನು ಬೇಕೊ ಎಲ್ಲವನ್ನೂ ಈ ಗುಂಪಿನ ಜನರು ಹೇಳಿಕೊಡುತ್ತಾರೆ. ಆದರೆ, ನಿಜ ಏನೆಂದರೆ ಅವರಿಗೆ ಏನೂ ತಿಳಿದಿರುವುದಿಲ್ಲ. ಯಾಕೆಂದರೆ, ಅವರು ಕೇಳಿಸಿಕೊಳ್ಳಲು ಸಿದ್ಧರಿಲ್ಲ’ ಎಂದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಅಮೆರಿಕದಲ್ಲಿರುವ ಭಾರತೀಯ ಸಮುದಾಯದೊಂದಿಗೆ ಬುಧವಾರ ಚರ್ಚೆ ನಡೆಸಿದರು. ಇದೇ ವೇಳೆ ಮಕ್ಕಳೊಂದಿಗೂ ಪೋಸು ನೀಡಿದರು –ಪಿಟಿಐ ಚಿತ್ರ

ರಾಜಕಾರಣಿಯಾಗಿ ಬಿಜೆಪಿಯ ದೌರ್ಬಲ್ಯಗಳು ನನಗೆ ನಿಚ್ಚಳವಾಗಿ ತೋರುತ್ತಿವೆ. ವಿರೋಧ ಪಕ್ಷಗಳು ಒಂದಾದರೆ, ಬಿಜೆಪಿ ಸೋಲು ಖಚಿತ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ವಿದೇಶಗಳಿಗೆ ಹೋದಾಗೆಲ್ಲ ರಾಹುಲ್ ಭಾರತವನ್ನು ಅವಮಾನಿಸುತ್ತಾರೆ. ವಿದೇಶದಲ್ಲಿ ಮೋದಿಯವರ ಪ್ರಖ್ಯಾತಿಯನ್ನು ಅರಗಿಸಿಕೊಳ್ಳಲು ಅವರಿಗೆ ಆಗುತ್ತಿಲ್ಲ

ಅನುರಾಗ್ ಠಾಕೂರ್, ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ

ಏನೂ ತಿಳಿಯದ ವ್ಯಕ್ತಿ ಒಮ್ಮೆಗೆ ಎಲ್ಲ ವಿಚಾರಗಳ ತಜ್ಞನಾಗಿರುವುದು ಹಾಸ್ಯಾಸ್ಪದ. ತಮ್ಮ ಕುಟುಂಬದ ಆಚೆಗಿನ ಇತಿಹಾಸ ತಿಳಿಯದ ವ್ಯಕ್ತಿ ಇತಿಹಾಸ ಮಾತನಾಡುತ್ತಿದ್ದಾರೆ

ಪ್ರಲ್ಹಾದ್ ಜೋಷಿ, ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ

ರಾಹುಲ್ ಭಾಷಣದ ಪ್ರಮುಖಾಂಶಗಳು

- ಭಾರತದಲ್ಲಿ ಮುಸ್ಲಿಮರಿಗೆ ಹೇಗೆ ಅಭದ್ರತೆ ಇದೆಯೋ, ಹಾಗೆಯೇ ಸಿಖ್ಖರಿಗೆ, ಕ್ರೈಸ್ತರಿಗೆ, ದಲಿತರಿಗೆ ಮತ್ತು ಆದಿವಾಸಿಗಳಿಗೆ ಇದೆ. ಇಂದು ಮುಸ್ಲಿಮರಿಗೆ ಆಗುತ್ತಿರುವುದು 1980ರಲ್ಲಿ ಉತ್ತರ ಪ್ರದೇಶದಲ್ಲಿ ದಲಿತರಿಗೆ ಆಗಿತ್ತು. ಪ್ರೀತಿಯಿಂದ ಈ ಎಲ್ಲ ಯುದ್ಧವನ್ನು ಗೆಲ್ಲುತ್ತೇವೆ
- ಜನಸಂಖ್ಯೆಯ ಸ್ಪಷ್ಟ ಚಿತ್ರಣ ಸಿಗಬೇಕಾದರೆ, ಜಾತಿ ಗಣತಿ ಅತ್ಯಗತ್ಯ. ಯುಪಿಎ ಅವಧಿಯಲ್ಲಿ ನಡೆಸಿದ್ದ ಗಣತಿಯ ವಿವರಗಳನ್ನು ಬಿಡುಗಡೆ ಮಾಡಬೇಕು. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ನಾವು ಈ ಮಾಹಿತಿಯನ್ನು ಬಿಡುಗಡೆ ಮಾಡುತ್ತೇವೆ
- ಮಾಧ್ಯಮಗಳು ಭಾರತವನ್ನು ಯಾವ ರೀತಿಯಲ್ಲಿ ತೋರಿಸುತ್ತಿದೆಯೋ, ಆ ರೀತಿ ವಾಸ್ತವದಲ್ಲಿ ಇಲ್ಲ. ಇದನ್ನು ನಾನು ಭಾರತ ಜೋಡೊ ಯಾತ್ರೆಯಲ್ಲಿ ತಿಳಿದುಕೊಂಡೆ
- ಮಹಿಳೆಯರಿಗೆ ರಾಜಕೀಯಲ್ಲಿ ಪ್ರಾಶಸ್ತ್ಯ ಸಿಗಬೇಕು. ಆದ್ದರಿಂದ ಮಹಿಳಾ ಮೀಸಲಾತಿ ಕಾಯ್ದೆಯನ್ನು ಜಾರಿ ಮಾಡುವ ಬದ್ಧತೆಯನ್ನು ಕಾಂಗ್ರೆಸ್ ಹೊಂದಿದೆ

‘ಸಂಸತ್ ಭವನ ಉದ್ಘಾಟನೆ: ವಿಷಯಾಂತರ ಯತ್ನ’

‘ನೂತನ ಸಂಸತ್ ಭವನದ ಉದ್ಘಾಟನೆಯು ನೈಜ ವಿಷಯಗಳಿಂದ ಜನರನ್ನು ಬೇರೆಡೆ ಸೆಳೆಯುವ ತಂತ್ರವಾಗಿತ್ತು’ ಎಂದು ರಾಹುಲ್ ಗಾಂಧಿ ದೂರಿದರು. ‘ನಿರುದ್ಯೋಗ, ಬೆಲೆ ಏರಿಕೆ, ಸಮಾಜದಲ್ಲಿ ದ್ವೇಷ ಹೆಚ್ಚಾಗಿರುವುದು, ಶಿಕ್ಷಣ ವ್ಯವಸ್ಥೆಯ ಅಧೋಗತಿ, ಶಿಕ್ಷಣ ಹಾಗೂ ಆರೋಗ್ಯದ ವೆಚ್ಚ ಹೆಚ್ಚಿರುವುದು– ಇವು ನೈಜ ವಿಚಾರಗಳು. ಈ ಕುರಿತು ಬಿಜೆಪಿ ಚರ್ಚೆ ನಡೆಸುವುದಿಲ್ಲ. ಇದಕ್ಕಾಗಿಯೇ ‘ಸೆಂಗೋಲ್’ ವಿಚಾರವನ್ನು ಮುನ್ನೆಲೆಗೆ ತಂದಿತು’ ಎಂದರು.

‘ಪ್ರಧಾನಿ ಅವರು ‘ಸೆಂಗೋಲ್’ ಮುಂದೆ ಉದ್ದಂಡ ನಮಸ್ಕಾರ ಮಾಡಿದರು. ನಾನು ಹೀಗೆ ಉದ್ದಂಡ ನಮಸ್ಕಾರ ಮಾಡಿಲ್ಲ ಎಂದು ನಿಮಗೆ ಖುಷಿ ಇದೆ ಅಲ್ಲವಾ?’ ಎಂದು ಸಭಿಕರನ್ನು ಕೇಳಿದರು.

ರಾಹುಲ್ ಕುಟುಂಬದ ವಿರುದ್ಧ ಘೋಷಣೆ

1984ರ ಸಿಖ್ ದಂಗೆಗೆ ಸಂಬಂಧಿಸಿ ಖಾಲಿಸ್ತಾನ ಪರ ಬೆಂಬಲಿಗರ ಗುಂಪೊಂದು ರಾಹುಲ್ ಗಾಂಧಿ ಹಾಗೂ ಅವರ ಕುಟುಂಬದ ವಿರುದ್ಧ ಘೋಷಣೆಗಳನ್ನು ಕೂಗಿದ ಘಟನೆ ಬುಧವಾರ ನಡೆಯಿತು. ರಾಹುಲ್ ಗಾಂಧಿ ಅವರು ಭಾಷಣ ಮಾಡುತ್ತಿದ್ದ ವೇಳೆ ಒಮ್ಮೆಲೆ ಗುಂಪೊಂದು ಕಾರ್ಯಕ್ರಮದ ಒಳಗೆ ನುಗ್ಗಿತು.

ರಾಹುಲ್ ಗಾಂಧಿ ಅವರು ನಗುತ್ತಲೇ ಘೋಷಣೆಗಳನ್ನು ಕೂಗುತ್ತಿದ್ದವರನ್ನು ‘ಸ್ವಾಗತ.. ಸ್ವಾಗತ.. ದ್ವೇಷದ ಮಾರುಕಟ್ಟೆಯಲ್ಲಿ ಪ್ರೀತಿಯ ಅಂಗಡಿಗೆ’ ಎಂದರು. ನಂತರ ಸಭೆಯಲ್ಲಿದ್ದ ರಾಹುಲ್ ಬೆಂಬಲಿಗರು ‘ಜೋಡೊ ಜೋಡೊ ಭಾರತ ಜೋಡೊ’ ಎಂದು ಘೋಷಣೆಗಳನ್ನು ಕೂಗಿದರು. ರಾಹುಲ್ ಅವರೂ ತಮ್ಮ ಬೆಂಬಲಿಗರೊಂದಿಗೆ ಘೋಷಣೆಗಳನ್ನು ಕೂಗಿದರು.

‘ನಮ್ಮ ಪಕ್ಷದ ಆಸಕ್ತಿದಾಯಕ ವಿಷಯವೇನೆಂದರೆ ನಮಗೆ ಎಲ್ಲರ ಬಗ್ಗೆಯೂ ಪ್ರೀತಿ ಇದೆ. ಯಾರು ಏನು ಹೇಳುತ್ತಿದ್ದಾರೆ ಎನ್ನುವುದು ಮುಖ್ಯವಲ್ಲ. ಅವರು ಏನು ಹೇಳಿದರೂ ನಾವು ಕೇಳಿಸಿಕೊಳ್ಳಲು ಸಿದ್ಧರಿದ್ದೇವೆ. ನಾವು ಸಿಟ್ಟಾಗುವುದಿಲ್ಲ’ ಎಂದು ರಾಹುಲ್ ಭಾಷಣವನ್ನು ಮುಂದುವರಿಸಿದರು. ಈ ಘಟನೆಯ ವಿಡಿಯೊ ಹಂಚಿಕೊಂಡಿರುವ ಬಿಜೆಪಿ ಐಟಿ ಸೆಲ್‌ನ ಮುಖ್ಯಸ್ಥ ಅಮಿತ್ ಮಾಳವೀಯ, ‘ಸಿಖ್ ನರಮೇಧ ಕಾರಣಕ್ಕಾಗಿ ಅಮೆರಿಕದಲ್ಲಿ ರಾಹುಲ್ ಗಾಂಧಿ ಅವರ ಭಾಷಣಕ್ಕೆ ಅಡ್ಡಿಪಡಿಸಲಾಯಿತು. ಯಾವ ಥರ ದ್ವೇಷವನ್ನು ಬಿತ್ತಲಾಗಿತ್ತೆಂದರೆ ಇನ್ನುವರೆಗೂ ಅದು ಶಮನವಾಗಿಲ್ಲ’ ಎಂದು ಟ್ವೀಟ್ ಮಾಡಿದ್ದಾರೆ.

‘ಬೇಕು ಪರ್ಯಾಯ ದೃಷ್ಟಿಕೋನ’

‘2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ವಿರೋಧ ಪಕ್ಷಗಳು ಒಂದಾದರೆ ಸಾಲದು. ಬಿಜೆಪಿಗಿಂತ ಭಿನ್ನವಾದ, ಪರ್ಯಾರ್ಯ ದೃಷ್ಟಿಕೋನ ಕಂಡುಕೊಳ್ಳಬೇಕು’ ಎಂದು ರಾಹುಲ್ ಗಾಂಧಿ ಅಭಿಪ್ರಾಯಪಟ್ಟರು. ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಗೆಲುವನ್ನು ಈ ವೇಳೆ ಉಲ್ಲೇಖಿಸಿದರು.

‘ವಿರೋಧ ಪಕ್ಷಗಳನ್ನು ಒಗ್ಗೂಡಿಸುವ ಕೆಲಸವನ್ನು ನಾವು ಮಾಡುತ್ತಿದ್ದೇವೆ. ವಿರೋಧ ಪಕ್ಷಗಳು ಒಂದು ನೆಲೆಯಲ್ಲಿ ಒಗ್ಗೂಡಿದರೆ ಖಂಡಿತವಾಗಿಯೂ ಬಿಜೆಪಿಯನ್ನು ಮಣಿಸಬಹುದು. ಆದರೆ, ಇದು ವಿರೋಧ ಪಕ್ಷಗಳು ಒಗ್ಗೂಡುವಿಕೆಯಿಂದ ಮಾತ್ರ ಸಾಧ್ಯವಿಲ್ಲ. ನಾವು ಪರ್ಯಾಯ ದೃಷ್ಟಿಕೋನವನ್ನು, ಚಿಂತನೆಯನ್ನು ಕಂಡುಕೊಳ್ಳಬೇಕಿದೆ’ ಎಂದರು.

‘ಭಾರತ ಜೋಡೊ ಯಾತ್ರೆಯು ಇಂಥದೊಂದು ದೃಷ್ಟಿಕೋನದ ಹುಡುಕಾಟದ ಮೊದಲ ಹೆಜ್ಜೆ. ಇದೇ ದೃಷ್ಟಿಕೋನದೊಂದಿಗೆ ಎಲ್ಲ ವಿರೋಧ ಪಕ್ಷಗಳು ಒಗ್ಗೂಡಿವೆ. ಭಾರತ ಜೋಡೊ ಯಾತ್ರೆಯ ಪರಿಕಲ್ಪನೆಯನ್ನು ಯಾವ ವಿರೋಧ ಪಕ್ಷವೂ ವಿರೋಧಿಸಿಲ್ಲ’ ಎಂದರು.

‘ಚುನಾವಣೆಯನ್ನು ಎದುರಿಸಲು ಸಂಪೂರ್ಣ ವಿಭಿನ್ನ ಕಾರ್ಯತಂತ್ರವನ್ನು ಕರ್ನಾಟಕ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನದಾಗಿಸಿಕೊಂಡಿತ್ತು. ಹೊಸ ಸಂಕಥನವನ್ನು ಸೃಷ್ಟಿಸಿದ್ದೆವು. ಬಿಜೆಪಿಯು ಕಾಂಗ್ರೆಸ್‌ಗಿಂತ 10 ಪಟ್ಟು ಹೆಚ್ಚಿನ ಹಣವನ್ನು ಚೆಲ್ಲಿತ್ತು. ಆದರೂ ಕಾಂಗ್ರೆಸ್ ಬಹುಮತದೊಂದಿಗೆ ಅಧಿಕಾರಕ್ಕೆ ಬಂತು’ ಎಂದರು.

ಕಾಂಗ್ರೆಸ್ ಗ್ಯಾರಂಟಿ ಕುಟುಕಿದ ಮೋದಿ

ಜೈಪುರ (ಪಿಟಿಐ): ‘50 ವರ್ಷಗಳ ಹಿಂದೆಯೇ ಬಡತನ ನಿರ್ಮೂಲನೆ ಮಾಡುವುದಾಗಿ ಕಾಂಗ್ರೆಸ್ ಗ್ಯಾರಂಟಿ ನೀಡಿತ್ತು. ಆ ಗ್ಯಾರಂಟಿ ಇಂದಿಗೂ ಈಡೇರಿಲ್ಲ. ಬಡವರನ್ನು ಹಾದಿ ತಪ್ಪಿಸುವುದೇ ಕಾಂಗ್ರೆಸ್‌ನ ನೀತಿ’ ಎಂದು ಪ್ರಧಾನಿ ನರೇಂದ್ರ ಮೋದಿ ಕುಟುಕಿದ್ದಾರೆ.

ಕೇಂದ್ರ ಸರ್ಕಾರದ ಒಂಬತ್ತು ವರ್ಷಗಳ ಸಂಭ್ರಮಾಚರಣೆ ಅಂಗವಾಗಿ ರಾಜಸ್ಥಾನದ ಅಜ್ಮೀರ್‌ನಲ್ಲಿ ಹಮ್ಮಿಕೊಂಡಿದ್ದ ರ್‍ಯಾಲಿಯಲ್ಲಿ ಅವರು ಮಾತನಾಡಿದರು.

‘ಕಾಂಗ್ರೆಸ್ ಬಡವರಿಗೆ ದ್ರೋಹ ಬಗೆದಿದೆ. ತನ್ನ ಆಡಳಿತಾವಧಿಯಿಂದಲೂ ಬಡವರನ್ನು ಹಾದಿ ತಪ್ಪಿಸುವ ನೀತಿ ಅಳವಡಿಸಿಕೊಂಡು ಬರುತ್ತಿದೆ. ‘ಕೈ’ ಆಡಳಿತ ಇರುವ ರಾಜಸ್ಥಾನದಲ್ಲಿಯೂ ಜನರು ಸಮಸ್ಯೆಗಳಿಂದ ನರಳುತ್ತಿದ್ದಾರೆ’ ಎಂದು ದೂರಿದರು.

2014ಕ್ಕೂ ಮೊದಲು ರಿಮೋಟ್ ಕಂಟ್ರೋಲ್‌ನಲ್ಲಿ ಕಾಂಗ್ರೆಸ್ ಆಡಳಿತ ನಡೆಸುತ್ತಿತ್ತು. ಆ ವೇಳೆ ದೇಶದ ಜನರು ಭ್ರಷ್ಟಾಚಾರದ ವಿರುದ್ಧ ಬೀದಿಗಿಳಿದು ಹೋರಾಡುತ್ತಿದ್ದರು. ಪ್ರಮುಖ ನಗರಗಳ ಮೇಲೆ ಉಗ್ರರ ದಾಳಿ ನಡೆದಿತ್ತು ಎಂದು ಟೀಕಿಸಿದರು.

ಕಾಂಗ್ರೆಸ್ ತನ್ನ ಅವಧಿಯಲ್ಲಿ ಪೋಷಿಸಿದ ಭ್ರಷ್ಟಾಚಾರವು ದೇಶದ ರಕ್ತವನ್ನು ಹೀರಿದೆ. ಇದರಿಂದ ಅಭಿವೃದ್ಧಿಗೆ ತೀವ್ರ ಹಿನ್ನಡೆಯಾಯಿತು ಎಂದು ದೂರಿದ ಅವರು, ‘ಪ್ರಸ್ತುತ ವಿಶ್ವದಾದ್ಯಂತ ಜನರು ಭಾರತದ ಬಗ್ಗೆ ಮಾತನಾಡುತ್ತಿದ್ದಾರೆ. ದೇಶದಲ್ಲಿ ಬಡತನವು ನಿರ್ಮೂಲನೆಯ ಹಂತದಲ್ಲಿದೆ ಎಂದು ತಜ್ಞರು ಹೇಳುತ್ತಿದ್ದಾರೆ ಎಂದರು.

ಸಾರ್ವಜನಿಕ ಆಸ್ತಿ ಮಾರಿದ್ದೇ ಮೋದಿ ಸಾಧನೆ: ಖರ್ಗೆ ಟೀಕೆ

ನವದೆಹಲಿ (ಪಿಟಿಐ): ‘ದೇಶದಲ್ಲಿನ ಸಾರ್ವಜನಿಕ ಆಸ್ತಿಗಳನ್ನು ತನ್ನ ಬಂಡವಾಳಶಾಹಿ ಸ್ನೇಹಿತರಿಗೆ ಅತಿ ಕಡಿಮೆ ಬೆಲೆಗೆ ಮಾರಾಟ ಮಾಡಿರುವುದೇ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಸಾಧನೆ. ಇದು ಅತಿದೊಡ್ಡ ದೇಶ ವಿರೋಧಿ ಕೃತ್ಯ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಒಂಬತ್ತು ವರ್ಷ ಅಧಿಕಾರ ಪೂರ್ಣಗೊಳಿಸಿರುವುದರ ವಿರುದ್ಧ ಖರ್ಗೆ ವಾಗ್ದಾಳಿ ಮುಂದುವರಿಸಿದ್ದಾರೆ.

ಮೂರನೇ ಸುತ್ತಿಗೆ ಸಿಟ್ಸಿಪಾಸ್

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಗಾರ್ಸಿಯಾಗೆ ನಿರಾಸೆ, ಅಲ್ಕರಾಜ್‌ಗೆ ಜಯ

ಪ್ಯಾರಿಸ್ (ರಾಯಿಟರ್ಸ್/ ಎಎಫ್‌ಪಿ): ಶಿಸ್ತಿನ ಆಟವಾಡಿದ ವಿಶ್ವದ ಐದನೇ ರ‍್ಯಾಂಕ್‌ನ ಆಟಗಾರ ಸ್ಟೆಫಾನೊಸ್ ಸಿಟ್ಸಿಪಾಸ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತು ಪ್ರವೇಶಿಸಿದರು.

ಬುಧವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ ಅವರು 6–3, 7–6, 6–2 ರಲ್ಲಿ ಸ್ಪೇನ್‌ನ ರಾಬರ್ಟೊ ಕಾರ್ಬಲೆಸ್ ಬಯೆನಾ ವಿರುದ್ಧ ಗೆದ್ದರು. ತಮ್ಮ ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ ಗ್ರೀಸ್‌ನ ಆಟಗಾರ ಗೆಲುವಿಗಾಗಿ 2 ಗಂಟೆ 16 ನಿಮಿಷಗಳನ್ನು ತೆಗೆದುಕೊಂಡರು.

ಮೊದಲ ಸುತ್ತಿನಲ್ಲಿ ಗೆಲುವು ಸಾಧಿಸಲು ಕಷ್ಟಪಟ್ಟಿದ್ದ ಸಿಟ್ಸಿಪಾಸ್, ಬುಧವಾರ ಹೆಚ್ಚಿನ ತಪ್ಪುಗಳನ್ನು ಮಾಡದೆ ನೇರ ಸೆಟ್‌ಗಳಿಂದ ಎದುರಾಳಿಯನ್ನು ಮಣಿಸಿದರು.

ಅಲ್ಕರಾಜ್‌ಗೆ ಜಯ: ವಿಶ್ವದ ಅಗ್ರ ರ‍್ಯಾಂಕ್‌ನ ಆಟಗಾರ ಸ್ಪೇನ್‌ನ ಕಾರ್ಲೊಸ್ ಅಲ್ಕರಾಜ್ ಎರಡನೇ ಸುತ್ತಿನಲ್ಲಿ 6-1, 3-6, 6-1, 6-2 ರಿಂದ ಜಪಾನ್‌ನ ತಾರೊ ಡೇನಿಯಲ್ ಅವರನ್ನು ಸೋಲಿಸಿದರು.

ಮತ್ತೊಂದು ಪಂದ್ಯದಲ್ಲಿ ಆಸ್ಟ್ರೇಲಿಯಾದ ಥನಸಿ ಕೊಕಿನಾಕಿಸ್ 3-6, 7-5, 6-3, 6-7, 6-3 ರಿಂದ ಸ್ವಿಟ್ಜರ್‌ಲೆಂಡ್‌ನ ಸ್ಟಾನಿಸ್ಲಾಸ್ ವಾವ್ರಿಂಕಾ ಅವರಿಗೆ ಆಘಾತ ನೀಡಿದರು.

ಸ್ವಿಟೋಲಿನಾ ಮುನ್ನಡೆ: ಉಕ್ರೇನ್‌ನ ಎಲಿನಾ ಸ್ವಿಟೋಲಿನಾ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿಗೆ ಮುನ್ನಡೆದರು.

2022ರ ಆಸ್ಟ್ರೇಲಿಯಾ ಓಪನ್ ಬಳಿಕ ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಆಡುತ್ತಿರುವ ಸ್ವಿಟೋಲಿನಾ 2–6, 6–3, 6–1 ರಲ್ಲಿ ಆಸ್ಟ್ರೇಲಿಯಾದ ಸ್ಟಾರ್ಮ್ ಹಂಟರ್ ಅವರನ್ನು ಮಣಿಸಿದರು. ಮೊದಲ ಸೆಟ್‌ನಲ್ಲಿ ಸೋತಿದ್ದ ಸ್ವಿಟೋಲಿನಾ ಬೇಗನೇ ಲಯ ಕಂಡುಕೊಂಡರಲ್ಲದೆ, ಮುಂದಿನ ಎರಡು ಸೆಟ್‌ಗಳಲ್ಲಿ ಆರು ಸಲ ಎದುರಾಳಿಯ ಸರ್ವ್ ಬ್ರೇಕ್ ಮಾಡಿ ಪಂದ್ಯ ತಮ್ಮದಾಗಿಸಿಕೊಂಡರು.

ಸ್ವಿಟೋಲಿನಾ ಅವರ ಪತಿ, ಫ್ರಾನ್ಸ್‌ನ ಗೇಲ್ ಮೊಂಫಿಲ್ಸ್ ಅವರು ಮಂಗಳವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ 3-6, 6-3, 7-5, 1-6, 7-5 ರಿಂದ ಅರ್ಜೆಂಟೀನಾದ ಸೆಬಾಸ್ಟಿಯನ್ ಬಾಯೆಜ್ ವಿರುದ್ಧ ಪ್ರಯಾಸದ ಗೆಲುವು ಸಾಧಿಸಿದರು.

36 ವರ್ಷದ ಮೊಂಫಿಲ್ಸ್, ತನಗಿಂತ 14 ವರ್ಷಗಳಷ್ಟು ಕಿರಿಯ ಆಟಗಾರನ ವಿರುದ್ಧ ನಿರ್ಣಾಯಕ ಸೆಟ್‌ನಲ್ಲಿ 0-4 ಹಾಗೂ 30-40 ರಿಂದ ಹಿನ್ನಡೆಯಲ್ಲಿದ್ದರು. ಆ ಬಳಿಕ ಅಮೋಘ ರೀತಿಯಲ್ಲಿ ಮರುಹೋರಾಟ ನಡೆಸಿ ಪಂದ್ಯ ಗೆದ್ದರು.

ಗಾರ್ಸಿಯಾಗೆ ಆಘಾತ: ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಆತಿಥೇಯ ದೇಶದ ಭರವಸೆ ಎನಿಸಿದ್ದ 5ನೇ ಶ್ರೇಯಾಂಕದ ಆಟಗಾರ್ತಿ ಕರೊಲಿನಾ ಗಾರ್ಸಿಯಾ ಎರಡನೇ ಸುತ್ತಿನಲ್ಲಿ ಮುಗ್ಗರಿಸಿದರು. ರಷ್ಯಾದ ಅನಾ ಬ್ಲಿಂಕೊವಾ 4-6, 6-3, 7-5 ರಿಂದ ಗಾರ್ಸಿಯಾ ಅವರನ್ನು ಮಣಿಸಿದರು.

ಇಗಾ ಜಯಭೇರಿ: ಮಂಗಳವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಪೋಲೆಂಡ್‌ನ ಇಗಾ ಶ್ವಾಂಟೆಕ್ 6–4, 6–0 ರಲ್ಲಿ ಸ್ಪೇನ್‌ನ ಕ್ರಿಸ್ಟಿನಾ ಬುಸ್ಕಾ ವಿರುದ್ಧ ಗೆದ್ದರು.

18ನೇ ಶ್ರೇಯಾಂಕದ ಆಟಗಾರ್ತಿ ಬೆಲಾರಸ್‌ನ ವಿಕ್ಟೋರಿಯಾ ಅಜರೆಂಕಾ 6–2, 3–6, 4–6 ರಲ್ಲಿ ಕೆನಡಾದ ಬಿಯಾಂಕ ಆಂಡ್ರೀಸ್ಕು ಎದುರು ಪರಾಭವಗೊಂಡರು.

ಅಮೆರಿಕದ ಲಾರೆನ್ ಡೇವಿಸ್ 6–3, 6–3 ರಿಂದ ಚೀನಾದ ಜು ಲಿನ್ ವಿರುದ್ಧ; ಕ್ರೊವೇಷ್ಯಾದ ಪೆಟ್ರಾ ಮಾರ್ಟಿಚ್ 3–6, 6–3, 6–2 ರಿಂದ ಅಮೆರಿಕದ ಶೆಲ್ಬಿ ರೋಜರ್ಸ್ ವಿರುದ್ಧ; ಇಟಲಿಯ ಜಾಸ್ಮಿನ್ ಪಾವೊಲಿನಿ 7-5, 2-6, 6-2 ರಿಂದ ಸೊರಾನಾ ಸಿಸ್ಟಿಯಾ ವಿರುದ್ಧಗೂ ಜಯ ಸಾಧಿಸಿದರು.

ಸ್ಟೆಫಾನೊಸ್ ಸಿಟ್ಸಿಪಾಸ್ ಚೆಂಡನ್ನು ರಿಟರ್ನ್ ಮಾಡಿದ ವೈಖರಿ –ಎಎಫ್‌ಪಿ ಚಿತ್ರ

ಯೂಕಿ–ಸಾಕೇತ್ ಶುಭಾರಂಭ

ಭಾರತದ ಯೂಕಿ ಭಾಂಬ್ರಿ ಮತ್ತು ಸಾಕೇತ್ ಮೈನೇನಿ ಜೋಡಿ ಪುರುಷರ ಡಬಲ್ಸ್ ವಿಭಾಗದಲ್ಲಿ ಶುಭಾರಂಭ ಮಾಡಿತು. ಬುಧವಾರ ನಡೆದ ಮೊದಲ ಸುತ್ತಿನಲ್ಲಿ ಅವರು 6–3, 6–2 ರಲ್ಲಿ ಫ್ರಾನ್ಸ್‌ನ ಎನ್ಜೊ ಕೊಕಾಡ್– ಆರ್ಥರ್ ರಿಂಡರ್‌ನೆಕ್ ವಿರುದ್ಧ ಗೆದ್ದರು.

ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೋಡಿ 5–7, 6–7 ರಲ್ಲಿ ಫ್ರಾನ್ಸ್‌ನ ಸಾದಿಯೊ ದುಂಬಿಯಾ– ಫ್ಯಾಬಿಯೆನ್ ರಿಬೋಲ್ ಕೈಯಲ್ಲಿ ಪರಾಭವಗೊಂಡಿತು.

ಎನ್.ಶ್ರೀರಾಂ ಬಾಲಾಜಿ– ಜೀವನ್ ನೆಡುಂಚೆಳಿಯನ್ ಜೋಡಿ 3–6, 4–6 ರಲ್ಲಿ ಆಸ್ಟ್ರೇಲಿಯಾದ ಅಲೆಕ್ಸಿ ಪೊಪ್ಯೆರಿನ್– ಬೆಲಾರಸ್‌ನ ಇಲ್ಯಾ ಇವಾಶ್ಕ ಎದುರು ಸೋತಿತು.



ಬೆಂಗಳೂರಿನ ಕೆನ್ಸಿಂಗ್ಟನ್ ಈಜುಕೊಳದಲ್ಲಿ ಬುಧವಾರ ನಡೆದ ಎನ್‌ಜೆ.ಆರ್ ರಾಜ್ಯ ಅಕ್ವೆಟಿಕ್ ಚಾಂಪಿಯನ್‌ಷಿಪ್‌ನ ಮಹಿಳೆಯರ ವಿಭಾಗದ ಡೈವಿಂಗ್‌ನಲ್ಲಿ ಪ್ರಥಮ ಸ್ಥಾನ ಗಳಿಸಿದ ಶಕ್ಯನಾ ಜೆ. ರಾವ್ (ಎಡಚಿತ್ರ) ಪುರುಷರ ವಿಭಾಗದಲ್ಲಿ ವರುಣ್ ಸತೀಶ್ ಪೈ ಪ್ರಥಮ ಸ್ಥಾನ ಗಳಿಸಿದರು ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್‌.ಜಿ.

ಎನ್‌ಆರ್‌ಜೆ ರಾಜ್ಯ ಈಜು ಚಾಂಪಿಯನ್‌ಷಿಪ್: ಜಸ್ ಸಿಂಗ್ ಮಿಂಚು

ಅನೀಷ್, ನೀನಾಗೆ ಅಗ್ರಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಬಸವನಗುಡಿ ಈಜು ಕೇಂದ್ರದ ಅನೀಷ್ ಎಸ್ ಗೌಡ ಮತ್ತು ಡಾಲ್ಫಿನ್ ಅಕ್ವೆಟಿಕ್ ಕೇಂದ್ರದ ನೀನಾ ವೆಂಕಟೇಶ್ ಅವರು ಎನ್.ಆರ್.ಜೆ. ರಾಜ್ಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷ ಹಾಗೂ ಮಹಿಳೆಯರ 100 ಮೀ ಫ್ರೀಸ್ಟೈಲ್‌ನಲ್ಲಿ ಪ್ರಥಮ ಸ್ಥಾನ ಗಳಿಸಿದರು.

ಸ್ಪರ್ಧೆಯ ಎರಡನೇ ದಿನವಾದ ಬುಧವಾರ ಪುರುಷರ 100 ಮೀ ಫ್ರೀಸ್ಟೈಲ್‌ನಲ್ಲಿ ಅನೀಷ್ 51.69 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಮಹಿಳೆಯರ ವಿಭಾಗದಲ್ಲಿ ನೀನಾ 59.21 ಸೆಕೆಂಡುಗಳಲ್ಲಿ ಮೊದಲ ಸ್ಥಾನಕ್ಕೆ ಲಗ್ಗೆಯಿಟ್ಟರು.

ಬಾಲಕರ ಮೊದಲ ಗುಂಪಿನ 200 ಮೀ ಮೆಡ್ಲೆ ಹಾಗೂ 50 ಮೀ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಬೆಂಗಳೂರು ಈಜು ಅಕಾಡೆಮಿಯ ಜಸ್ ಸಿಂಗ್ ಮೊದಲ ಸ್ಥಾನ ಗಳಿಸಿದರು.

200 ಮೀ ಮೆಡ್ಲೆಯಲ್ಲಿ ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್‌ನ ಚಕ್ಷು ಗೌಡ ಸಿ.ಎಸ್ (2ನಿ, 48.33ಸೆ) ಎರಡನೇ ಸ್ಥಾನ ಗಳಿಸಿದರು. 50 ಮೀ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿಯೂ ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್‌ನ ಚೇತನ್ ನಾಗರಾಜ ಗಣಪ ಎರಡನೇ ಸ್ಥಾನ ಪಡೆದರು.

ಬಾಲಕಿಯರ 50 ಮೀ ಬ್ರೆಸ್ಟ್‌ಸ್ಟ್ರೋಕ್ ವಿಭಾಗದಲ್ಲಿ ಡಾಲ್ಫಿನ್ ಕ್ಲಬ್‌ನ ವಿಭಾ ರೆಡ್ಡಿ ಮರಮ್ (41.20ಸೆ) ಪ್ರಥಮ ಸ್ಥಾನ ಗಳಿಸಿದರು. ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್ ಹನ್ಸಿಕಾ ರೆಡ್ಡಿ (42.19ಸೆ) ದ್ವಿತೀಯ ಹಾಗೂ ಬೆಳಗಾವಿಯ ಸ್ವಿಮ್ಮರ್ಸ್ ಕ್ಲಬ್‌ನ ಅನಿಕಾ ಹಲಗೇಕರ (43.44ಸೆ) ಮೂರನೇ ಸ್ಥಾನಪಡೆದರು.

ಫಲಿತಾಂಶಗಳು: ಪುರುಷರು:

100 ಮೀ ಫ್ರೀಸ್ಟೈಲ್: ಅನೀಷ್ ಎಸ್ ಗೌಡ (ಬಸವನಗುಡಿ ಈಜುಕೇಂದ್ರ; 51.69ಸೆ)–1, ತನಿಷ್ ಜಾರ್ಜ್ ಮ್ಯಾಥ್ಯೂ (ಬಸವನಗುಡಿ)–2, ಆರ್. ಸಂಭವ್ (ಡಾಲ್ಫಿನ್)–3.

200 ಮೀ ಮೆಡ್ಲೆ: ಶಾನ್ ಗಂಗೂಲಿ (ಕಾಲ: 2ನಿ,09.09ಸೆ) –1, ಎಸ್. ಶಿವಾ –2, ಕಲ್ಪ ಎಸ್ ಬೋರಾ –3 (ಮೂವರೂ- ಬಸವನಗುಡಿ ಈಜುಕೇಂದ್ರ)

50 ಮೀ ಬ್ರೆಸ್ಟ್‌ಸ್ಟ್ರೋಕ್: ಡಿ.ಎಸ್. ಪೃಥ್ವಿಕ್ (ಬಸವನಗುಡಿ; 29.32ಸೆ)–1, ಕಲ್ಪ್ ಎಸ್ ಬೊರಾ(ಬಸವನಗುಡಿ)–2, ಪ್ರಗುನ್ ದೇವ್ (ಡಾಲ್ಫಿನ್)–3

ಬಾಲಕರು: ಗುಂಪು 1: 200 ಮೀ ಮೆಡ್ಲೆ: ನವನೀತ್ ಆರ್ ಗೌಡ (ಡಾಲ್ಫಿನ್; 2ನಿ, 15.89ಸೆ)–1, ವಿದಿತ್ ಎಸ್. ಶಂಕರ್ (ಡಾಲ್ಫಿನ್)–2, ಪವನ್ ಧನಂಜಯ (ಬಸವನಗುಡಿ)–3.

100 ಮೀ ಫ್ರೀಸ್ಟೈಲ್ : ಎಸ್. ವಿಶ್ವನಾಥ (ಪಿ.ಎಂ ಈಜುಕೇಂದ್ರ; 53.49ಸೆ)–1, ಕಾರ್ತಿಕೆಯನ್ ನಾಯರ್ (ಡಾಲ್ಫಿನ್)–2, ರಿಷಭ್ ಸಿಂಗ್ ದದ್ವಾಲ್ (ಡಾಲ್ಫಿನ್)–3.

800 ಮೀ ಫ್ರೀಸ್ಟೈಲ್: ಪೃಥ್ವಿರಾಜ್ ಮೆನನ್ (ಬಸವನಗುಡಿ; 9ನಿ, 08ಸೆ)–1, ಪಿ.ವಿ. ಮೋನಿಷ್ (ಬಸವನಗುಡಿ)–2, ಇದಾಂತ್ ಶಾಶ್ವತ್ ಚತುರ್ವೇದಿ (ಪಿ.ಎಂ. ಈಜುಕೇಂದ್ರ)–3

200 ಮೀ ಮೆಡ್ಲೆ: ಜಸ್ ಸಿಂಗ್ (ಬೆಂಗಳೂರು ಈಜು ಅಕಾಡೆಮಿ; 2ನಿ,42.49ಸೆ)–1, ಚಕ್ಷು ಗೌಡ ಸಿ.ಎಸ್ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–2, ಅರ್ಜುನ್ ರಾಘವನ್ (ಡಾಲ್ಫಿನ್ ಅಕ್ವೆಟಿಕ್ಸ್)–3.

ಗುಂಪು 2: 200 ಮೀ ಮೆಡ್ಲೆ: ಅಕ್ಷಜ್ ಠಾಕೂರಿಯಾ (ಡಾಲ್ಫಿನ್; 2ನಿ,18.51ಸೆ)–1, ದಕ್ಷ ಮಟ್ಟಾ (ಬಸವನಗುಡಿ)–2, ಹರಿಕಾರ್ತಿಕ್ ವೇಲು (ಗೋಲ್ಡನ್ ಫಿನ್ಸ್ ಸ್ಪೋರ್ಟ್ಸ್ ಕ್ಲಬ್)–3.

100 ಮೀ ಫ್ರೀಸ್ಟೈಲ್: ಇಶಾನ್ ಮೆಹ್ರಾ (ಡಾಲ್ಫಿನ್; 54.96ಸೆ)–1, ಪಿ.ವಿ. ಮೋನಿಷ್ (ಬಸವನಗುಡಿ)–2, ಸಾತ್ವಿಕ್ ಸುಜೀರ್ (ಡಾಲ್ಫಿನ್)–3.

ಗುಂಪು 3: 100 ಮೀ ಫ್ರೀಸ್ಟೈಲ್: ಜಸ್ ಸಿಂಗ್ (ಬೆಂಗಳೂರು ಈಜು ಅಕಾಡೆಮಿ; 1ನಿ,04.55ಸೆ)–1, ಎಸ್. ಕ್ರಿಷ್ (ಬಸವನಗುಡಿ)–2, ರೋನಿತ್ ಅರುಣಕುಮಾರ್ (ಡಾಲ್ಫಿನ್)–3.

50 ಮೀ ಬ್ರೆಸ್ಟ್‌ಸ್ಟ್ರೋಕ್: ಜಸ್ ಸಿಂಗ್ (ಬೆಂಗಳೂರು ಅಕಾಡೆಮಿ; 39.22ಸೆ)–1, ಚೇತನ್ ನಾಗರಾಜ ಗಣಪ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–2, ರಾಮಪ್ರಕಾಶ್ (ಗ್ಲೋಬಲ್ ಈಜುಕೇಂದ್ರ)–3.

ಮಹಿಳೆಯರು: 100 ಮೀ ಫ್ರೀಸ್ಟೈಲ್: ನೀನಾ ವೆಂಕಟೇಶ್ (ಡಾಲ್ಫಿನ್; 59.21ಸೆ)–1, ಲತೀಷಾ ಮಂದಣ್ಣ(ರೇ ಅಕ್ವೆಟಿಕ್ಸ್)–2, ಅಷ್ಮಿತಾ ಚಂದ್ರ (ರೇ ಅಕ್ವೆಟಿಕ್ಸ್)–3.

50 ಮೀ ಬ್ರೆಸ್ಟ್‌ಸ್ಟ್ರೋಕ್: ವಿಂಧ್ಯಾ ಜಿ ಭಂಡಾರೆ (ಬಸವನಗುಡಿ; 37.61ಸೆ)–1, ಝೂರಾ ಇವಾ ವಿಲಿಯಮ್ಸ್ (ಡಾಲ್ಫಿನ್)–2, ಪ್ರೀತಿ ಪಾಟೀಲ (ಡಾಲ್ಫಿನ್)–3.

200 ಮೀ ಮೆಡ್ಲೆ: ಜೆದಿದಾ ಎ (ಡಿಕೆವಿ ಅಕ್ವೆಟಿಕ್ಸ್; ಕಾಲ: 2ನಿ, 32.71ಸೆ)–1, ನಿಧಿ ಶಶಿಧರ (ಬಸವನಗುಡಿ)–2.

ಬಾಲಕಿಯರು: ಗುಂಪು 1: 200 ಮೀ ಮೆಡ್ಲೆ: ಹಫಿಕಾ ರಾಮಚಂದ್ರ (ಡಾಲ್ಫಿನ್; 2ನಿ,22.57ಸೆ)–1, ಮಾನವಿ ವರ್ಮಾ (ಡಾಲ್ಫಿನ್)–2, ವಿನೀತಾ ನಯನಾ (ಬಸವನಗುಡಿ)–3.

100 ಮೀ ಫ್ರೀಸ್ಟೈಲ್: ಶಾಲಿನಿ ಆರ್ ದೀಕ್ಷಿತ್ (ಡಾಲ್ಫಿನ್; 59.76ಸೆ)–1, ಎಸ್. ರುಜುಲಾ (ಡಾಲ್ಫಿನ್)–2, ರಿಧಿಮಾ ವೀರೇಂದ್ರಕುಮಾರ್ (ಬಸವನಗುಡಿ)–3.

ಗುಂಪು 2: 800 ಮೀ ಫ್ರೀಸ್ಟೈಲ್: ಮೀನಾಕ್ಷಿ ಮೆನನ್ (ಬಸವನಗುಡಿ; 9ನಿ,41.77ಸೆ)–1, ಶ್ರೀಚರಣಿ ತುಮು (ಗ್ಲೋಬಲ್ ಈಜುಕೇಂದ್ರ)–2, ಸುಹಾಸಿನಿ ಘೋಷ್ (ಡಾಲ್ಫಿನ್)–3.

200ಮೀ ಮೆಡ್ಲೆ: ತನಿಷಿ ಗುಪ್ತಾ (ಡಾಲ್ಫಿನ್ ; 2ನಿ, 25.85ಸೆ)–1, ನೃಷಾ (ಬಸವನಗುಡಿ)–2, ಎಸ್. ತಾನ್ಯಾ (ಡಾಲ್ಫಿನ್)–3.

ಗುಂಪು 3: 100 ಮೀ ಫ್ರೀಸ್ಟೈಲ್: ಧ್ರುತಿ ಕರಿಬಸವೇಶ್ವರ (ಬೆಂಗಳೂರು ಈಜು ಅಕಾಡೆಮಿ; 1ನಿ,10.32ಸೆ)–1, ಆವುನಾ ಆಳ್ವಾ ಪಿ (ಗೋಲ್ಡನ್ ಫಿನ್ಸ್ ಸ್ಪೋರ್ಟ್ಸ್ ಕ್ಲಬ್)–2, ದಿಶಾ ಹೊಂಡಿ (ಅಬ್ಬಾ ಸ್ಪೋರ್ಟ್ಸ್ ಕ್ಲಬ್)–3. 100 ಮೀ ಫ್ರೀಸ್ಟೈಲ್: ಧಿನಿಧಿ ದೇಸಿಂಗು (ಡಾಲ್ಫಿನ್; 58.08ಸೆ)–1, ಶ್ರೀಚರಣಿ ತುಮು (ಗ್ಲೋಬಲ್)–2, ಸುಹಾಸಿನಿ ಘೋಷ್ (ಡಾಲ್ಫಿನ್)–3. 50 ಮೀ ಬ್ರೆಸ್ಟ್‌ಸ್ಟ್ರೋಕ್: ವಿಭಾ ರೆಡ್ಡಿ ಮರಮ್ (ಡಾಲ್ಫಿನ್; 41.20ಸೆ)–1, ಹನ್ಸಿಕಾ ರೆಡ್ಡಿ (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)–2, ಅನಿಕಾ ಹಲಗೇಕರ್ (ಸ್ವಿಮ್ಮರ್ಸ್ ಕ್ಲಬ್, ಬೆಳಗಾವಿ)–3. 200 ಮೀ ಮೆಡ್ಲೆ: ಜನನಿ ವೆಂಕಟೇಶ್ವರ್ ಪೆರುಮಾಳ್ (ಡಾಲ್ಫಿನ್; 2ನಿ,51.05ಸೆ)–1, ವಿ. ಸುಮನ್ವಿ (ಡಿಕೆವಿ ಈಜುಕೇಂದ್ರ)–2, ಧ್ರುತಿ ಕರಿಬಸವೇಶ್ವರ (ಬೆಂಗಳೂರು ಈಜುಕೇಂದ್ರ)–3.

ಅನೀಷ್ ಎಸ್ ಗೌಡ

ಡೈವಿಂಗ್: ವರುಣ್, ಶಕ್ಯನಾಗೆ ಚಿನ್ನ ಡಬಲ್

ಬೆಂಗಳೂರು: ಡಾಲ್ಫಿನ್ ಅಕ್ವೆಟಿಕ್ಸ್ ಕೇಂದ್ರದ ವರುಣ್ ಸತೀಶ್ ಪೈ ಹಾಗೂ ಶಕ್ಯನಾ ಜೆ ರಾವ್ ಅವರು ಎನ್.ಜೆ.ಆರ್. ರಾಜ್ಯ ಸೀನಿಯರ್ ಅಕ್ವೆಟಿಕ್ಸ್ ಚಾಂಪಿಯನ್‌ಷಿಪ್‌ನ ಡೈವಿಂಗ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಚಿನ್ನ ಡಬಲ್ ಸಾಧನೆ ಮಾಡಿದರು.

ಪುರುಷರ ಹಾಗೂ ಮಹಿಳೆಯರ 1 ಮೀಟರ್ ಸ್ಪ್ರಿಂಗ್‌ಬೋರ್ಡ್ ಹಾಗೂ 3 ಮೀಟರ್ ಸ್ಪ್ರಿಂಗ್‌ಬೋರ್ಡ್ ವಿಭಾಗಗಳಲ್ಲಿ ಅವರು ಪ್ರಥಮ ಸ್ಥಾನ ಗಳಿಸಿದರು.

ಫಲಿತಾಂಶಗಳು: ಪುರುಷರು: 1ಮೀ.ಸ್ಪ್ರಿಂಗ್‌ಬೋರ್ಡ್: ವರುಣ್ ಸತೀಶ್ ಪೈ (ಡಾಲ್ಫಿನ್ ಅಕ್ವೆಟಿಕ್ಸ್; 230.30 ಪಾಯಿಂಟ್ಸ್)–1, ಅಶುತೋಷ್ ಬಿಲ್‌ಗೋಜಿ (ಎಬಿಬಿಎ ಸ್ಪೋರ್ಟ್ಸ್ ಕ್ಲಬ್)–2, ಆರ್ಯನ್ ಮೊಸೆಸ್ ವ್ಯಾಸ್ (ಡಾಲ್ಫಿನ್ ಅಕ್ವೆಟಿಕ್ಸ್)–3. 3 ಮೀ ಸ್ಪ್ರಿಂಗ್‌ಬೋರ್ಡ್: ವರುಣ್ ಸತೀಶ್ ಪೈ (ಪಾಯಿಂಟ್ಸ್: 222.25)–1, ಆರ್ಯನ್ ಮೊಸೆಸ್ ವ್ಯಾಸ್ –2, ಎಸ್ ಸೋಹನ್ ಸೂರಿ –3 (ಮೂವರೂ ಡಾಲ್ಫೀನ್ ಅಕ್ವೆಟಿಕ್ಸ್‌ನವರು).

ಮಹಿಳೆಯರು: 1 ಮೀ ಸ್ಪ್ರಿಂಗ್‌ಬೋರ್ಡ್: ಶಕ್ಯನಾ ಜೆ ರಾವ್ (145.20ಪಾಯಿಂಟ್ಸ್)–1, ಚೈತ್ರಾ ಪ್ರಸಾದ್ –2, ಪಿ. ನಯನಾ –3 (ಎಲ್ಲರೂ ಡಾಲ್ಫಿನ್ ಅಕ್ವೆಟಿಕ್ಸ್). 3 ಮೀ ಸ್ಪ್ರಿಂಗ್‌ಬೋರ್ಡ್: ಶಕ್ಯನಾ ಜೆ. ರಾವ್ (152)–1, ಚೈತ್ರಾ ಎಸ್ ಪ್ರಸಾದ್ –2, ಪೂರ್ವಿಕಾ ವೆಂಕಟೇಶ್ –3 (ಎಲ್ಲರೂ ಡಾಲ್ಫಿನ್ ಅಕ್ವೆಟಿಕ್ಸ್)

ಸಂಕ್ಷಿಪ್ತ ಸುದ್ದಿ

ಡಿಪಿಎಸ್ ಈಸ್ಟ್ ತಂಡಕ್ಕೆ ಪ್ರಶಸ್ತಿ

ಬೆಂಗಳೂರು: ಡಿಪಿಎಸ್ ಈಸ್ಟ್ ತಂಡದವರು ಟೈಗರ್ ಕಪ್ ಕ್ರಿಕೆಟ್ ಟೂರ್ನಿಯ 14 ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್ ಆದರು.

ಬುಧವಾರ ನಡೆದ ಫೈನಲ್‌ನಲ್ಲಿ ಡಿಪಿಎಸ್ ತಂಡ 9 ವಿಕೆಟ್‌ಗಳಿಂದ ಸಿಕ್ಸ್ ಕ್ರಿಕೆಟ್ ಅಕಾಡೆಮಿ ತಂಡವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ಸಿಕ್ಸ್ ಕ್ರಿಕೆಟ್ ಅಕಾಡೆಮಿ, ಆರುಷ್ ಜೈನ್ (10ಕ್ಕೆ 4) ಅವರ ಪರಿಣಾಮಕಾರಿ ದಾಳಿಗೆ ನಲುಗಿ 28.2 ಓವರ್‌ಗಳಲ್ಲಿ 123 ರನ್‌ಗಳಿಗೆ ಆಲೌಟಾಯಿತು. ಓಂ ಅಗರವಾಲ್ 38 ಹಾಗೂ ಮನೀಷ್ ವಿ. ಪಾಟೀಲ್ 28 ರನ್ ಕಲೆಹಾಕಿದರು.

ಡಿಪಿಎಸ್ 20.3 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡು ಗೆದ್ದಿತು. ಆರ್. ನಿತಿನ್ ಮತ್ತು ಶಹನ್ ಶಾದಾಬ್ ಅವರು ತಲಾ 50 ರನ್ ಗಳಿಸಿದರು.

‘ಜೊಕೊವಿಚ್ ರಾಜಕೀಯ ಹೇಳಿಕೆ: ನಿಯಮ ಉಲ್ಲಂಘನೆ ಆಗಿಲ್ಲ’

ಪ್ಯಾರಿಸ್ (ರಾಯಿಟರ್ಸ್): ‘ಕೊಸೊವೊ ಸರ್ಬಿಯಾದ ಹೃದಯವಿದ್ದಂತೆ’ ಎಂದು ಸರ್ಬಿಯಾ ಆಟಗಾರ ನೊವಾಕ್ ಜೊಕೊವಿಚ್ ಹೇಳಿಕೆಯಿಂದ ನಿಯಮಗಳ ಉಲ್ಲಂಘನೆಯಾಗಿಲ್ಲ. ಗ್ರ್ಯಾಂಡ್‌ಸ್ಲ್ಯಾಮ್ ನಿಯಮಾವಳಿಗಳು ರಾಜಕೀಯ ಹೇಳಿಕೆಯನ್ನು ನಿರ್ಬಂಧಿಸುವುದಿಲ್ಲ ಎಂದು ಅಂತರರಾಷ್ಟ್ರೀಯ ಟೆನಿಸ್ ಸಂಸ್ಥೆ (ಐಟಿಎಫ್) ಬುಧವಾರ ತಿಳಿಸಿದೆ.

ಸೋಮವಾರ ಮೊದಲ ಸುತ್ತಿನ ಪಂದ್ಯ ಗೆದ್ದ ನಂತರ ವಿಶ್ವದ ಮೂರನೇ ಕ್ರಮಾಂಕದ ಆಟಗಾರ ಜೊಕೊವಿಚ್ ಅವರು ಟಿ.ವಿ ಕ್ಯಾಮೆರಾ ಸ್ಕ್ರೀನ್ ಮೇಲೆ ಈ ಸಂದೇಶ ಬರೆದಿದ್ದರು. ಅದೇ ದಿನ ಕೊಸೊವೊದ ಪಟ್ಟಣ ಜ್ವೆಕಾನ್‌ನಲ್ಲಿ ಸರ್ಬಿಯಾದ ಪ್ರತಿಭಟನಕಾರರ ಜೊತೆ ಘರ್ಷಣೆಯಲ್ಲಿ ನ್ಯಾಟೊ ಶಾಂತಿಪಾಲನಾ ಪಡೆಯ 30 ಯೋಧರು ಗಾಯಗೊಂಡಿದ್ದರು. ಜೊಕೊವಿಚ್ ಅವರ ತಂದೆ ಜ್ವೆಕಾನ್ ಪಟ್ಟಣದಲ್ಲಿ ಬೆಳೆದವರು.

ಉತ್ತರ ಕೊಸೊವೊದಲ್ಲಿ ಸರ್ಬಿಯನ್ನರೇ ಬಹುಸಂಖ್ಯಾತರಾಗಿದ್ದಾರೆ. ಏಪ್ರಿಲ್‌ನಲ್ಲಿ ನಡೆದ ಚುನಾವಣೆ ಬಹಿಷ್ಕರಿಸಿದ್ದ ಈ ಮೂಲನಿವಾಸಿಗಳು ಬೆಲ್‌ಗ್ರೇಡ್ (ಸರ್ಬಿಯಾದ ರಾಜಧಾನಿ) ತಮ್ಮ ರಾಜಧಾನಿಯೆಂದೇ ಭಾವಿಸಿದ್ದಾರೆ. ಕೊಸೊವೊ ಪೊಲೀಸರು ಮತ್ತು ನ್ಯಾಟೊ ಶಾಂತಿಪಾಲನಾ ಪಡೆಯ ಜೊತೆ ಘರ್ಷಣೆಗೂ ಇಳಿದಿದ್ದಾರೆ.

‘ಈಗಾಗಲೇ ಉದ್ವಿಗ್ನಗೊಂಡಿರುವ ಪರಿಸ್ಥಿತಿಯನ್ನು ಜೊಕೊವಿಚ್ ಅವರು ಇನ್ನಷ್ಟು ಹದಗೆಡಿಸುತ್ತಿದ್ದಾರೆ’ ಎಂದು ಕೊಸೊವೊ ಟೆನಿಸ್ ಸಂಸ್ಥೆ ಮಂಗಳವಾರ ಜೊಕೊವಿಚ್ ವಿರುದ್ಧ ಆರೋಪಿಸಿತ್ತು. ಬುಧವಾರ ಅವರ ಹೇಳಿಕೆಯನ್ನು ಕೊಸೊವೊ ಒಲಿಂಪಿಕ್ ಸಮಿತಿ ಪ್ರತಿಧ್ವನಿಸಿದೆ.

ಜೊಕೊವಿಚ್ –ಎಎಫ್‌ಪಿ ಚಿತ್ರ

ಜೂನಿಯರ್ ಏಷ್ಯಾ ಕಪ್ ಹಾಕಿ ಫೈನಲ್‌ಗೆ ಭಾರತ

ಸಲಾಲ, ಒಮನ್ (ಪಿಟಿಐ): ಹೊಂದಾಣಿಕೆಯ ಆಟವಾಡಿದ ಭಾರತ ತಂಡ, ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯ ಸೆಮಿಫೈನಲ್‌ನಲ್ಲಿ 9–1 ಗೋಲುಗಳಿಂದ ದಕ್ಷಿಣ ಕೊರಿಯಾ ತಂಡವನ್ನು ಮಣಿಸಿ ಫೈನಲ್ ಪ್ರವೇಶಿಸಿತು.

ಸಲಾಲ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಮೈದಾನದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಹ್ಯಾಟ್ರಿಕ್ ಗೋಲು ಗಳಿಸಿದ ಧಾಮಿ ಬಾಬಿ ಸಿಂಗ್ (31, 39 ಮತ್ತು 55ನೇ ನಿ.) ಅವರು ಭಾರತದ ಭರ್ಜರಿ ಗೆಲುವಿಗೆ ಕಾರಣರಾದರು.

ಲಾಕ್ರಾ ಸುನಿತ್ (13), ಅರಿಜೀತ್ ಸಿಂಗ್ (19), ಅಂಗದ್ ಬೀರ್ ಸಿಂಗ್ (34), ಉತ್ತಮ್ ಸಿಂಗ್ (38), ವಿಷ್ಣುಕಾಂತ್ ಸಿಂಗ್ (51) ಮತ್ತು ಶಾರದಾನಂದ್ ತಿವಾರಿ (57) ತಲಾ ಒಂದು ಗೋಲು ತಂದಿತ್ತರು.

ಗುರುವಾರ ನಡೆಯುವ ಫೈನಲ್‌ನಲ್ಲಿ ಭಾರತ ತಂಡ ಮಲೇಷ್ಯಾ ಅಥವಾ ಪಾಕಿಸ್ತಾನ ತಂಡವನ್ನು ಎದುರಿಸಲಿದೆ.

ತಜ್ಞ ವೈದ್ಯರ ಸಲಹೆ ಪಡೆಯಲಿರುವ ಧೋನಿ

ನವದೆಹಲಿ (ಪಿಟಿಐ): ಬಾಧಿಸುತ್ತಿರುವ ಎಡ ಮೊಣಕಾಲಿನ ನೋವಿಗೆ ಸಂಬಂಧಿಸಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಅವರು ಮುಂಬೈನಲ್ಲಿ ತಜ್ಞ ಕ್ರೀಡಾ ವೈದ್ಯರಿಂದ (ಸ್ಪೋರ್ಟ್ಸ್ ಆರ್ಥೊಪೆಡಿಕ್ಸ್) ಸಲಹೆ ಪಡೆದುಕೊಳ್ಳಲಿದ್ದಾರೆ ಎಂದು ಫ್ರಾಂಚೈಸಿಯ ಸಿಇಒ ಕಾಶಿ ವಿಶ್ವನಾಥನ್ ಬುಧವಾರ ಇಲ್ಲಿ ತಿಳಿಸಿದ್ದಾರೆ.

ವಿಕೆಟ್ ಕೀಪಿಂಗ್ ಮಾಡುವಾಗ ಅಂಥ ಸಮಸ್ಯೆ ಕಾಣದಿದ್ದರೂ, ಧೋನಿ ಅವರು ಐಪಿಎಲ್ ಋತುವಿನುದ್ದಕ್ಕೂ ಎಡಮೊಣಕಾಲಿಗೆ ಪಟ್ಟಿ ಕಟ್ಟಿಕೊಂಡು ಆಡಿದ್ದರು. ಎಂಟನೇ ಕ್ರಮಾಂಕದಲ್ಲಿ ಆಡಲು ಬರುತ್ತಿದ್ದ ಅವರು ರನ್ ಗಳಿಸುವಾಗ ಎಂದಿನ ವೇಗದಲ್ಲಿ ಓಡುತ್ತಿರಲಿಲ್ಲ.

‘ಧೋನಿ ಅವರು ಮೊಣಕಾಲಿನ ನೋವಿಗಾಗಿ ತಜ್ಞರ ಸಲಹೆ ಪಡೆಯಲು ಮುಂದಾಗಿರುವುದು ನಿಜ. ಅವರ ಸಲಹೆಯಂತೆ ಮುಂದಿನ ನಿರ್ಧಾರ ಕೈಗೊಳ್ಳುವರು’ ಎಂದರು.

ಡಬ್ಲ್ಯುಟಿಸಿ: ಬೌಲರ್‌ಗಳ ಮುಂದಿದೆ ಸವಾಲು

ಪೋರ್ಟ್ಸ್‌ಮೌತ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡಿರುವ ಬೌಲರ್‌ಗಳನ್ನು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಸುವ ಕುರಿತು ಭಾರತ ತಂಡದ ವ್ಯವಸ್ಥಾಪನ ಮಂಡಳಿಯು ಕಾರ್ಯೋತ್ತಡ ನಿರ್ವಹಣೆ ಯೋಜನೆಯನ್ನು ಸಿದ್ಧಪಡಿಸಿದೆ.

ಇದೇ 7ರಿಂದ ಆರಂಭವಾಗಲಿರುವ ಫೈನಲ್‌ನಲ್ಲಿ ಆಡಲಿರುವ ಬೌಲರ್‌ಗಳು ಕಳೆದ ಒಂದೂವರೆ ತಿಂಗಳು ಐಪಿಎಲ್‌ನಲ್ಲಿ ಸಕ್ರಿಯರಾಗಿದ್ದರು. ಅದರಿಂದಾಗಿ ಅವರನ್ನು ದೀರ್ಘ ಮಾದರಿಗೆ ಹೊಂದಿಕೊಳ್ಳಲು ಸಿದ್ಧಗೊಳಿಸುವ ಸವಾಲು ತಂಡಕ್ಕೆ ಇದೆ. ಐಪಿಎಲ್‌ನಿಂದ ಇಲ್ಲಿಗೆ ಬಂದಿರುವ ಆಟಗಾರರ ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯಗಳನ್ನು ಒರೆಗೆ ಹಚ್ಚಿ ಸಿದ್ಧತೆಯ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಆ ಪ್ರಕಾರವೇ ಆಟಗಾರರು ಕೂಡ ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ.

ವೇಗದ ಬೌಲರ್ ಮೊಹಮ್ಮದ್ ಸಿರಾಜ್, ಶಾರ್ದೂಲ್ ಠಾಕೂರ್, ಜಯದೇವ್ ಉನದ್ಕತ್, ಉಮೇಶ್ ಯಾದವ್ ಹಾಗೂ ಸ್ಪಿನ್ನರ್ ಅಕ್ಷರ್ ಪಟೇಲ್ ಅವರು ಐಪಿಎಲ್‌ನಲ್ಲಿ ಬೇರೆ ಬೇರೆ ತಂಡಗಳಲ್ಲಿ ಆಡಿದ್ದರು. ಇವರೆಲ್ಲರೂ ನಾಲ್ಕು ದಿನಗಳ ಹಿಂದೆಯೇ ಇಂಗ್ಲೆಂಡ್ ತಲುಪಿದ ಮೊದಲ ತಂಡದಲ್ಲಿದ್ದರು. ಆದರೆ ಮೊಹಮ್ಮದ್ ಶಮಿ ಅವರು ಸೋಮವಾರ ನಡೆದ ಫೈನಲ್ ನಂತರ ಇಂಗ್ಲೆಂಡ್‌ಗೆ ತೆರಳಿದ್ದರು.

ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರೊಂದಿಗೆ ಮೊದಲ ಬ್ಯಾಚ್‌ನಲ್ಲಿಯೇ ವಿರಾಟ್ ಕೊಹ್ಲಿ ಕೂಡ ತೆರಳಿದ್ದರು. ಚೇತೇಶ್ವರ್ ಪೂಜಾರ ಅವರು ಈ ಮೊದಲೇ ಕೌಂಟಿ ಕ್ರಿಕೆಟ್ ಆಡಲು ಇಂಗ್ಲೆಂಡ್‌ಗೆ ತೆರಳಿದ್ದರು. ಅವರು ಅಲ್ಲಿಯೇ ಸೋಮವಾರ ಭಾರತ ತಂಡವನ್ನು ಸೇರಿಕೊಂಡರು. ಗುರುವಾರ ಪೂರ್ಣ ತಂಡವು ಅಭ್ಯಾಸ ಮಾಡಲು ಕಣಕ್ಕಿಳಿಯುವ ನಿರೀಕ್ಷೆ ಇದೆ.

‘ಇಲ್ಲಿಯವರೆಗೆ ಸಿದ್ಧತೆಗಳು ಉತ್ತಮವಾಗಿ ನಡೆದಿವೆ. ಕಳೆದ ಎರಡು ಅಭ್ಯಾಸ ಅವಧಿಗಳಲ್ಲಿ ಆಟಗಾರರು ಲವಲವಿಕೆಯಿಂದ ಭಾಗವಹಿಸಿದರು. ಅಲ್ಲದೇ ಇಲ್ಲಿಯ ಹವಾಮಾನವೂ ಉತ್ತಮವಾಗಿದೆ. ಎಲ್ಲ ವ್ಯವಸ್ಥೆಗಳೂ ಚೆನ್ನಾಗಿವೆ‘ ಎಂದು ಭಾರತದ ಬೌಲಿಂಗ್ ಕೋಚ್ ಪಾರಸ್ ಮಾಂಬ್ರೆ ಅವರು ಬಿಸಿಸಿಐ ಬಿಡುಗಡೆ ಮಾಡಿರುವ ವಿಡಿಯೊದಲ್ಲಿ ಹೇಳಿದ್ದಾರೆ.

‘ಐಪಿಎಲ್ ಪಂದ್ಯಗಳಲ್ಲಿ ಆಡುವಾಗ ಮೈದಾನದಲ್ಲಿ ಫೀಲ್ಡಿಂಗ್ ಮಾಡಿದ ಬಗೆ, ಅವರು ಓಡಿದ ದೂರ, ಕ್ಯಾಚ್‌ಗಳನ್ನು ನಿರ್ವಹಿಸಿದ ರೀತಿ, ಅದರಲ್ಲೂ ಕ್ಲೋಸ್ ಇನ್ ಕ್ಯಾಚ್‌ಗಳನ್ನು ಪಡೆದ ಕುರಿತು ವಿಶ್ಲೇಷಣೆ ನಡೆಸಲಾಗಿದೆ. ಚುಟುಕು ಮಾದರಿಯ ಸಾಮರ್ಥ್ಯಕ್ಕೂ ಟೆಸ್ಟ್ ಆಟಕ್ಕೂ ಬಹಳ ವ್ಯತ್ಯಾಸವಿದೆ’ ಎಂದು ಫೀಲ್ಡಿಂಗ್ ಕೋಚ್ ಟಿ. ದಿಲೀಪ್ ಹೇಳಿದ್ದಾರೆ.

ಭಾರತ ತಂಡದ ಉಮೇಶ್ ಯಾದವ್ ತಾಲೀಮು ನಡೆಸಿದರು –ಪಿಟಿಐ ಚಿತ್ರ

ಥಾಯ್ಲೆಂಡ್ ಓಪನ್: ಸಿಂಧು, ಶ್ರೀಕಾಂತ್ ನಿರ್ಗಮನ

ಕಿರಣ್‌ಗೆ ಅಚ್ಚರಿಯ ಗೆಲುವು

ಬ್ಯಾಂಕಾಕ್ (ಪಿಟಿಐ): ವಿಶ್ವದ 9ನೇ ಕ್ರಮಾಂಕದ ಆಟಗಾರ ಶಿ ಯುಕಿ (ಚೀನಾ) ಅವರ ಮೇಲೆ ಅಚ್ಚರಿಯ ರೀತಿ ನೇರ ಸೆಟ್‌ಗಳ ಜಯಪಡೆದ ಭಾರತದ ಕಿರಣ್ ಜಾರ್ಜ್ ಥಾಯ್ಲೆಂಡ್ ಓಪನ್ ಸೂಪರ್ 500 ಟೂರ್ನಿಯ ಪುರುಷರ ಸಿಂಗಲ್ಸ್ ಪ್ರಿಕ್ವಾರ್ಟರ್‌ಫೈನಲ್ ತಲುಪಿದರು. ಲಕ್ಷ್ಯ ಸೇನ್, ಅಶ್ಮಿತಾ ಚಲಿಹಾ ಮತ್ತು ಅನುಭವಿ ಸೈನಾ ನೆಹ್ವಾಲ್ ಅವರು ಕೂಡ ಬುಧವಾರ ಗೆಲುವಿನೊಡನೆ ಅಭಿಯಾನ ಆರಂಭಿಸಿದರು.

ಮಾಜಿ ವಿಶ್ವ ಚಾಂಪಿಯನ್ ಪಿ.ವಿ. ಸಿಂಧು, ಪುರುಷರ ವಿಭಾಗದಲ್ಲಿ ಕಿದಂಬಿ ಶ್ರೀಕಾಂತ್ ಮತ್ತು ಬಿ.ಸಾಯಿ ಪ್ರಣೀತ್ ಅವರು ಮೊದಲ ಸುತ್ತನ್ನು ದಾಟಲಾಗಲಿಲ್ಲ. ಕೆನಡಾದ ಮಿಚೆಲ್ ಲಿ 62 ನಿಮಿಷಗಳವರೆಗೆ ನಡೆದ ಪಂದ್ಯದಲ್ಲಿ 21–8, 18–21, 21–18 ರಿಂದ ಸಿಂಧು ಅವರ ಸವಾಲನ್ನು ಬದಿಗೊತ್ತಿದರು.

ಆದರೆ, ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ ತರಬೇತಾಗಿರುವ ಕಿರಣ್ 21–18, 22–20 ರಿಂದ ಮೂರನೇ ಶ್ರೇಯಾಂಕದ ಶಿ ಯುಕಿ ಅವರನ್ನು ಹಿಮ್ಮೆಟ್ಟಿಸಿ ಗಮನ ಸೆಳೆದರು. ಯುಕಿ ಅವರು 2018ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿಯ ಪದಕ ವಿಜೇತ. ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಅವರ ಎದುರಾಳಿ ಚೀನಾದ ವೆಂಗ್ ಹಾಂಗ್ ಯಾಂಗ್.

ಲಕ್ಷ್ಯ ಸೇನ್ ಇನ್ನೊಂದು ಪಂದ್ಯದಲ್ಲಿ 21–23, 21–15, 21–15 ರಿಂದ ಚೀನಾ ತೈಪೆಯ ವಾಂಗ್ ತ್ಸು ವೀ ವಿರುದ್ಧ ಜಯಗಳಿಸಿದರು.

ಮಹಿಳಾ ಸಿಂಗಲ್ಸ್ ಪಂದ್ಯಗಳಲ್ಲಿ, ಅರ್ಹತಾ ಸುತ್ತಿನಿಂದ ಬಂದಿರುವ ಅಶ್ಮಿತಾ 21–17, 21–14 ರಿಂದ ಸ್ವದೇಶದ ಮಾಳವಿಕಾ ಬನ್ಸೋಡ್ ಅವರನ್ನು, ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸೈನಾ 21–13, 21–7 ರಿಂದ ಕೆನಡಾದ ವೆನ್ ಯು ಝೂಂಗ್ ಅವರನ್ನು ಸೋಲಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ಸಾಯಿಪ್ರಣೀತ್ 14–21, 16–21ರಲ್ಲಿ ಫ್ರಾನ್ಸ್‌ನ ಕ್ರಿಸ್ಟೊ ಪೊಪೊವ್ ಅವರಿಗೆ ಮಣಿದರು. ಆರ್ಲಿನ್ಸ್ ಮಾಸ್ಟರ್ಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿದ್ದ ಪ್ರಿಯಾಂಶು ರಾಜಾವತ್ ಕೂಡ ಮೊದಲ ಸುತ್ತು ದಾಟಲಾಗದೇ 19–21, 10–21 ರಿಂದ ಮಲೇಷ್ಯಾದ ಎನ್‌ಜಿ ತ್ಸೆ ಯಾಂಗ್ ಅವರಿಗೆ ಸೋತರು. ಚೀನಾದ ವೆಂಗ್ ಹಾಂಗ್ ಯಾಂಗ್ 21–8, 16–21, 21–14 ರಿಂದ ಕಿದಂಬಿ ಶ್ರೀಕಾಂತ್ ಅವರನ್ನು ಮಣಿಸಿದರು.

ಇತ್ತೀಚೆಗಷ್ಟೇ ಸ್ಲೊವೇನಿಯಾ ಓಪನ್ ಜಯಿಸಿದ್ದ ಭಾರತದ ಇನ್ನೊಬ್ಬ ಆಟಗಾರ ಸಮೀರ್ ವರ್ಮಾ 15–21, 15–21ರಲ್ಲಿ ಡೆನ್ಮಾರ್ಕ್‌ನ ಮ್ಯಾಗ್ನಸ್ ಜೋಹಾನ್ಸೆನ್ ಅವರಿಗೆ ಶರಣಾದರು.

ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಪುರುಷರ ಡಬಲ್ಸ್ ಮೊದಲ ಸುತ್ತಿನಲ್ಲಿ 21–13, 18–21, 21–17 ರಿಂದ ಡೆನ್ಮಾರ್ಕ್‌ನ ರಾಸ್ಮಸ್ ಕ್ಯೆರ್– ಫ್ರೆಡರಿಕ್ ಸೊಗಾರ್ಡ್ ಜೋಡಿಯನ್ನು ಸೋಲಿಸಲು ಹೆಚ್ಚಿನ ಶ್ರಮ ಹಾಕಬೇಕಾಯಿತು.

ಕಿರಣ್ ಜಾರ್ಜ್ –ಬಿಎಐ ಮೀಡಿಯಾ ಟ್ವಿಟರ್ ಚಿತ್ರ

ರಾಷ್ಟ್ರೀಯ ಓಪನ್ ಸರ್ಫಿಂಗ್ ಇಂದಿನಿಂದ

ಸತೀಶ್, ಸಿಂಚನಾ ಆಕರ್ಷಣೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಸುರತ್ಕಲ್‌ನ ಸಸಿಹಿತ್ಲು ಸಮುದ್ರದಲ್ಲಿ ಗುರುವಾರ ಆರಂಭವಾಗಲಿರುವ ಮೂರು ದಿನಗಳ ರಾಷ್ಟ್ರೀಯ ಓಪನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ನ ನಾಲ್ಕು ವಿಭಾಗಗಳಲ್ಲಿ 70 ಸರ್ಫರ್‌ಗಳು ಪಾಲ್ಗೊಳ್ಳಲಿದ್ದಾರೆ.

ಮೂಲ್ಕಿಯ ಮಂತ್ರ ಸರ್ಫಿಂಗ್ ಕ್ಲಬ್ ಆಶ್ರಯದಲ್ಲಿ ಭಾರತ ಸರ್ಫಿಂಗ್ ಫೆಡರೇಷನ್ ಆಯೋಜಿಸಿರುವ ನಾಲ್ಕನೇ ಆವೃತ್ತಿಯ ಚಾಂಪಿಯನ್‌ಷಿಪ್ ಇದಾಗಿದ್ದು ದೇಶದ ಪ್ರಮುಖ 10 ಮಂದಿ ಸರ್ಫರ್‌ಗಳ ಪೈಕಿ ಏಳು ಮಂದಿ ಪಾಲ್ಗೊಳ್ಳುತ್ತಿರುವುದರಿಂದ ತುರುಸಿನ ಪೈಪೋಟಿ ನಿರೀಕ್ಷಿಸಲಾಗಿದೆ.

ಸತೀಶ್ ಸರವಣನ್, ರೂಬನ್ ವಿ., ಶ್ರೀಕಾಂತ್ ಡಿ, ಸೂರ್ಯ ಪಿ., ಸಂಜಯ್ ಕುಮಾರ್ ಎಸ್., ನಿತೀಶ್ ವರುಣ್, ಮಣಿಕಂಠನ್, ಸೃಷ್ಟಿ ಸೆಲ್ವಂ ಅವರೊಂದಿಗೆ ಈಚೆಗೆ ತಣ್ಣೀರುಬಾವಿಯಲ್ಲಿ ನಡೆದ ರಾಷ್ಟ್ರಮಟ್ಟದ ಸರ್ಫಿಂಗ್‌ನಲ್ಲಿ ಗಮನ ಸೆಳೆದಿದ್ದ ಮಂಗಳೂರು ಸರ್ಫ್ ಕ್ಲಬ್‌ನ ಸಿಂಚನಾ ಡಿ.ಗೌಡ, ಗೋವಾದ ಸುಗರ್ ಶಾಂತಿ ಮುಂತಾದವರು ನಿರೀಕ್ಷೆಯಿಂದ ಕಣಕ್ಕೆ ಇಳಿಯಲಿದ್ದಾರೆ. ಅಮೋಘ ಸಾಮರ್ಥ್ಯದ ಮೂಲಕ ಮಿಂಚುತ್ತಿರುವ ಕಿಶೋರ್ ಕುಮಾರ್ ಬಾಲಕರ ವಿಭಾಗದಲ್ಲಿ ಭರವಸೆ ಮೂಡಿಸಿದ್ದಾರೆ.

ಪುರುಷ ಮತ್ತು ಮಹಿಳಾ ವಿಭಾಗ, 16 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ ಎಂದು ಭಾರತ ಸರ್ಫಿಂಗ್ ಫೆಡರೇಷನ್‌ನ ಉಪಾಧ್ಯಕ್ಷ ರಾಮ್ ಮೋಹನ್ ಪರಾಂಜಪೆ ತಿಳಿಸಿದ್ದಾರೆ.

ಸಸಿಹಿತ್ಲು ಕಡಲಿನಲ್ಲಿ ಬುಧವಾರ ಅಭ್ಯಾಸ ಮಾಡಿದ ಮಣಿಕಂಠನ್ ಅಪ್ಪು

ವಾಲಿಬಾಲ್ ಆಟಗಾರ್ತಿ ಹೃದಯಾಘಾತದಿಂದ ನಿಧನ

ಬೆಳ್ತಂಗಡಿ (ದಕ್ಷಿಣ ಕನ್ನಡ): ಮಹಿಳೆಯರ ರಾಜ್ಯ ವಾಲಿಬಾಲ್ ತಂಡದ ಆಟಗಾರ್ತಿ, ಇಲ್ಲಿನ ಪಡಂಗಡಿ ಪೊಯ್ಯೆಗುಡ್ಡೆ ಸಾಲಿಯತ್ (24) ಹೃದಯಾಘಾತದಿಂದ ಬುಧವಾರ ನಿಧನರಾದರು.

ಅವರಿಗೆ ಪತಿ, ತಂದೆ, ತಾಯಿ ಇದ್ದಾರೆ. ಉಜಿರೆ ಎಸ್‌ಡಿಎಂ ಕಾಲೇಜಿನ ಹಳೆ ವಿದ್ಯಾರ್ಥಿನಿಯಾಗಿದ್ದ ಅವರು ಮಂಗಳೂರು ವಿಶ್ವವಿದ್ಯಾಲಯವನ್ನು ಮೂರು ವರ್ಷ ಪ್ರತಿನಿಧಿಸಿದ್ದರು. ಪ್ರಾಥಮಿಕ ಶಾಲಾ ಹಂತದಲ್ಲೇ ಆಟದ ಕಣಕ್ಕೆ ಇಳಿದಿದ್ದ ಅವರು ಹೈಸ್ಕೂಲ್ ಮತ್ತು ಪಿಯು ವಿದ್ಯಾರ್ಥಿಗಳ ರಾಷ್ಟ್ರೀಯ ಟೂರ್ನಿಯಲ್ಲಿ ತಲಾ ಎರಡು ವರ್ಷ ಆಡಿದ್ದರು. ಹೈದರ್ ಪಡಂಗಡಿ, ಗುಣಪಾಲ್ ಎಂ.ಎಸ್ ಮತ್ತು ರಮೇಶ್ ಎಚ್ ಬಳಿ ತರಬೇತಿ ಪಡೆದುಕೊಂಡಿದ್ದರು.

ಆಕ್ರಮಣಕಾರಿ ಆಲ್‌ರೌಂಡರ್ ಆಗಿದ್ದ ಅವರು ಚೆನ್ನೈನಲ್ಲಿ ನಡೆದ ಮಹಿಳೆಯರ ದಕ್ಷಿಣ ವಲಯ ಟೂರ್ನಿಯಲ್ಲಿ ರಾಜ್ಯ ತಂಡ ಚಿನ್ನ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 2018ರಲ್ಲಿ ಉಜಿರೆಯಲ್ಲಿ ನಡೆದ ಪಿಯು ವಿದ್ಯಾರ್ಥಿಗಳ ರಾಷ್ಟ್ರೀಯ ಟೂರ್ನಿಯಲ್ಲಿ ಬೆಳ್ಳಿ ಪದಕ ಗೆದ್ದ ರಾಜ್ಯ ತಂಡದಲ್ಲಿದ್ದರು. ಹೈಸ್ಕೂಲ್ ವಿದ್ಯಾರ್ಥಿನಿಯರ ರಾಷ್ಟ್ರೀಯ ಟೂರ್ನಿಯಲ್ಲೂ ರಾಜ್ಯ ತಂಡಕ್ಕೆ ಬೆಳ್ಳಿ ಪದಕ ಗಳಿಸಿಕೊಟ್ಟಿದ್ದರು. ಉತ್ತರ ಪ್ರದೇಶದ ಅಲಹಾಬಾದ್‌ನಲ್ಲಿ ನಡೆದ ಟೂರ್ನಿಯಲ್ಲಿ ರಾಜ್ಯ ತಂಡ ರನ್ನರ್ ಅಪ್ ಆಗಲು ನೆರವಾಗಿದ್ದರು.

ಎದೆಯಲ್ಲಿ ನೋವು ಕಾಣಿಸಿಕೊಂಡ ಕಾರಣ ಅವರನ್ನು ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕ್ಕಮಗಳೂರು ಜಿಲ್ಲೆಯ ಬಣಕಲ್‌ನ ವಾಲಿಬಾಲ್ ಆಟಗಾರ ಸುಹೇಲ್ ಜೊತೆ ವರ್ಷದ ಹಿಂದೆ ಸಾಲಿಯತ್ ಮದುವೆ ಆಗಿತ್ತು.

ಸಾಲಿಯತ್

ಮೌಂಟ್ಸ್, ಕೆಜಿಎಫ್ ಕ್ಲಬ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೌಂಟ್ಸ್ ಕ್ಲಬ್ ಮತ್ತು ಕೆಜಿಎಫ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡಗಳು ಎಸ್.ರಂಗರಾಜನ್ ಮೆಮೊರಿಯಲ್ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ‘ಸಿ’ ಡಿವಿಷನ್ ಬ್ಯಾಸ್ಕೆಟ್‌ಬಾಲ್ ಲೀಗ್‌ನಲ್ಲಿ ಗೆಲುವು ಸಾಧಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಮೌಂಟ್ಸ್ ಕ್ಲಬ್ 79–57 ರಲ್ಲಿ ಧಾರವಾಡದ ಇನ್‌ಸ್ಪೈರ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವನ್ನು ಮಣಿಸಿತು. ವಿಜಯಿ ತಂಡದ ವಿಘ್ನೇಶ್ ಮತ್ತು ಜೊಯೆಲ್ ಅವರು ತಲಾ 20 ಪಾಯಿಂಟ್ಸ್ ಗಳಿಸಿ ಗಮನ ಸೆಳೆದರು.

ಕೆಜಿಎಫ್ ಕ್ಲಬ್ 57–56 ರಲ್ಲಿ ಕೊಳ್ಳೇಗಾಲದ ನಾಲ್ವಡಿ ಕ್ಲಬ್ ವಿರುದ್ಧ ಗೆದ್ದಿತು. ಹರೀಶ್ (21) ಮತ್ತು ಧನುಷ್ (15) ಅವರು ಕೆಜಿಎಫ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇತರ ಪಂದ್ಯಗಳಲ್ಲಿ ಚಿಕ್ಕಮಗಳೂರಿನ ಡಾಮಿನೇಟ್ ಕ್ಲಬ್ 69–49 ರಲ್ಲಿ ಬಿ.ಸಿ ಬ್ಯಾಸ್ಕೆಟ್‌ಬಾಲ್ ಕ್ಲಬ್ ವಿರುದ್ಧ; ಯಲಹಂಕ ನ್ಯೂ ಟೌನ್ ಕ್ಲಬ್ 83–57 ರಲ್ಲಿ ಮೈಸೂರಿನ ಆಲ್ ಸ್ಟಾರ್ ಅಕಾಡೆಮಿ ವಿರುದ್ಧ; ಎಸ್‌ಬಿಐ 58–31 ರಿಂದ ಕೊಳ್ಳೇಗಾಲ ಕ್ಲಬ್ ವಿರುದ್ಧ; ಸಿಜೆಸಿ 49–18 ರಲ್ಲಿ ಎಸ್‌ಎಐ ಧಾರವಾಡ ವಿರುದ್ಧ ಗೆಲುವು ಸಾಧಿಸಿದವು.